prajavani.net prajavani | ಬುಧವಾರ, ಡಿಸೆಂಬರ್ 17, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 347 | ಪುಟ 16 | www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಸಂಸತ್ತಿಗೆ ಇವಿ ಸವಾರಿ

ವಾಯು ಮಾಲಿನ್ಯದ ಕುರಿತು ಜಾಗೃತಿ ಮೂಡಿಸಲು ಕಾಂಗ್ರೆಸ್ ಸಂಸದ ವಂಶಿ ಕೃಷ್ಣ ಗದ್ದಂ ಎಲೆಕ್ಟ್ರಿಕ್ ಬೈಕ್‌ನಲ್ಲಿ ಮಂಗಳವಾರ ಸಂಸತ್ ಕಲಾಪಕ್ಕೆ ಬಂದರು

ಸೆನ್ಸೆಕ್ಸ್ 84,679 | ನಿಫ್ಟಿ 25,860 | $/₹ 90.93 | ಚಿನ್ನ (Std. 10g) ₹1,37,870 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,02,900 (ಬೆಂಗಳೂರು)



ರಾಯಲ್ ಚಾಲೆಂಜರ್ಸ್ ಬೆಂಗಳೂರಿಗೆ ವೆಂಕಟೇಶ್ ಅಯ್ಯರ್

ಕ್ಯಾಮರಾನ್ ಗ್ರೀನ್‌ಗೆ ಜಾಕ್‌ಪಾಟ್

ಅಬುಧಾಬಿಯಲ್ಲಿ ಮಂಗಳವಾರ ನಡೆದ ಇಂಡಿಯನ್ ಪ್ರೀಮಿಯರ್ ಲೀಗ್ ಮಿನಿ ಹರಾಜಿನಲ್ಲಿ ನಿರೀಕ್ಷೆಯಂತೆ ಆಸ್ಟ್ರೇಲಿಯಾದ ಆಲ್‌ರೌಂಡರ್ ಕ್ಯಾಮರಾನ್ ಗ್ರೀನ್ ಅತ್ಯಧಿಕ ಮೊತ್ತ ಗಳಿಸಿದರು. ಕೋಲ್ಕತ್ತ ನೈಟ್ ರೈಡರ್ಸ್ ತಂಡವು ದುಬಾರಿ ಬೆಲೆಗೆ ಆಟಗಾರರನ್ನು ಸೆಳೆಯುವ ತನ್ನ 'ಪರಂಪರೆ'ಯನ್ನು ಈ ಬಾರಿಯೂ ಮುಂದುವರಿಸಿತು. ಬಿಡ್‌ನಲ್ಲಿ ಎರಡನೇ ಅತ್ಯಧಿಕ ಮೊತ್ತ ಪಡೆದ ಶ್ರೀಲಂಕಾದ ಮಥೀಶ್ ಪಥಿರಾಣ ಅವರನ್ನೂ ಕೋಲ್ಕತ್ತ ಸೆಳೆದುಕೊಂಡಿತು.

ಅಚ್ಚರಿಯ ಬೆಳವಣಿಗೆಯಲ್ಲಿ ಅನ್‌ಕ್ಯಾಪ್ಡ್ ಆಟಗಾರರಾದ ರಾಜಸ್ಥಾನದ ಕಾರ್ತಿಕ್ ಶರ್ಮಾ ಹಾಗೂ ಉತ್ತರ ಪ್ರದೇಶದ ಪ್ರಶಾಂತ್ ವೀರ್ ಅವರು ತಲಾ ₹14.20 ಕೋಟಿ ಪಡೆದು ಚೆನ್ನೈ ಸೂಪರ್ ಕಿಂಗ್ಸ್ ಸೇರ್ಪಡೆಯಾದರು. ಟೂರ್ನಿಯ ಇತಿಹಾಸದಲ್ಲಿ ಅತ್ಯಧಿಕ ಮೊತ್ತ ಪಡೆದ ಅನ್‌ಕ್ಯಾಪ್ಡ್ ಆಟಗಾರರೆಂಬ ಹೆಗ್ಗಳಿಕೆ ಅವರದ್ದಾಯಿತು.

'ಹಾಲಿ ಚಾಂಪಿಯನ್' ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಆಲ್‌ರೌಂಡರ್ ವೆಂಕಟೇಶ್ ಅಯ್ಯರ್ ಅವರನ್ನು ಸೆಳೆದುಕೊಂಡಿತು.

14

₹1,279 ಕೋಟಿ ಅನುದಾನಕ್ಕೆ ಕತ್ತರಿ

ರಾಜ್ಯದಲ್ಲಿ ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಚುನಾವಣೆ ತಡ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ಸರ್ಕಾರವು ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿ ಚುನಾವಣೆಗಳನ್ನು ಸಕಾಲಕ್ಕೆ ನಡೆಸದ ಕಾರಣ ರಾಜ್ಯಕ್ಕೆ ಬರಬೇಕಿದ್ದ 15ನೇ ಹಣಕಾಸು ಆಯೋಗದ ₹1,279 ಕೋಟಿ ಅನುದಾನಕ್ಕೆ ಕತ್ತರಿ ಬಿದ್ದಿದೆ.

ಲೋಕಸಭೆಯಲ್ಲಿ ಬೆಂಗಳೂರು ಗ್ರಾಮಾಂತರ ಸಂಸದ ಡಾ.ಸಿ.ಎನ್. ಮಂಜುನಾಥ್ ಮಂಗಳವಾರ ಕೇಳಿರುವ ಪ್ರಶ್ನೆಗೆ ಕೇಂದ್ರ ಪಂಚಾಯತ್‌ರಾಜ್ ಸಚಿವ ರಾಜೀವ್ ರಂಜನ್ ಸಿಂಗ್ ನೀಡಿರುವ ಲಿಖಿತ ಉತ್ತರದಲ್ಲಿ ಈ ಮಾಹಿತಿ ಇದೆ.

15ನೇ ಹಣಕಾಸು ಆಯೋಗದ ಅನುದಾನಗಳ ಬಳಕೆಗಾಗಿ ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ 2021ರಲ್ಲೇ ಮಾರ್ಗಸೂಚಿ ನೀಡಲಾಗಿತ್ತು. ಪಂಚಾಯತ್ ರಾಜ್ ಸಂಸ್ಥೆಗಳಿಗೆ ಸಕಾಲಿಕ ಚುನಾವಣೆಗಳನ್ನು ನಡೆಸಿದರೆ ಮಾತ್ರ ಅನುದಾನ ಬಿಡುಗಡೆ ಮಾಡಲಾಗುತ್ತದೆ. ಕರ್ನಾಟಕ ಸರ್ಕಾರವು 2020-21ರಿಂದ ತಾಲ್ಲೂಕು ಪಂಚಾಯಿತಿಗಳು ಮತ್ತು ಜಿಲ್ಲಾ ಪಂಚಾಯಿತಿಗಳಿಗೆ ಚುನಾವಣೆಗಳನ್ನು ನಡೆಸದ ಕಾರಣ ಅನುದಾನ ತಡೆ ಹಿಡಿಯಲಾಗಿದೆ ಎಂದಿದ್ದಾರೆ.

'ಸ್ವಾಯತ್ತೆಗೆ ಧಕ್ಕೆ ಆಗಿಲ್ಲ'

'ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ–1993'ಕ್ಕೆ ಇತ್ತೀಚೆಗೆ ಮಾಡಿರುವ ತಿದ್ದುಪಡಿಗಳಿಂದಾಗಿ ರಾಜ್ಯ ಚುನಾವಣಾ ಆಯೋಗದ ಸಾಂವಿಧಾನಿಕ ಅಧಿಕಾರಗಳು ಮತ್ತು ಸ್ವಾಯತ್ತೆಗೆ ಧಕ್ಕೆ ಆಗಿಲ್ಲ ಎಂದು ರಾಜೀವ್ ರಂಜನ್ ಸಿಂಗ್ ತಿಳಿಸಿದ್ದಾರೆ.

7

ಹಣಕಾಸು ಆಯೋಗವು ರಾಜ್ಯದ ಸ್ಥಳೀಯ ಸಂಸ್ಥೆಗಳಿಗೆ ₹13,184 ಕೋಟಿ ಹಂಚಿಕೆ ಮಾಡಿತ್ತು. ಇಲ್ಲಿಯವರೆಗೆ ₹11,905 ಕೋಟಿ ಮಾತ್ರ ಕೊಟ್ಟಿದೆ.

'ಸಂವಿಧಾನದ 243 (ಇ) ವಿಧಿಯ ಪ್ರಕಾರ, ಸ್ಥಳೀಯ ಸಂಸ್ಥೆಗಳಿಗೆ ಸಕಾಲಕ್ಕೆ ಚುನಾವಣೆ ನಡೆಸುವುದು ರಾಜ್ಯಗಳ ಹೊಣೆ. ಚುನಾವಣೆ ನಡೆಸುವಂತೆ ಕರ್ನಾಟಕ ಸರ್ಕಾರಕ್ಕೆ ಹಲವು ಸಲ ಸಲಹೆ ನೀಡಲಾಗಿತ್ತು. ಆದರೂ ಚುನಾವಣೆ ನಡೆಸಿಲ್ಲ. ಉಳಿದ ಸ್ಥಳೀಯ ಸಂಸ್ಥೆಗಳಿಗೆ ಅನುದಾನ ಬಿಡುಗಡೆಗೊಳಿಸಲಾಗಿದೆ' ಎಂದು ಸಚಿವಾಲಯ ಸ್ಪಷ್ಟಪಡಿಸಿದೆ.

ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಸಕಾಲಕ್ಕೆ ಚುನಾವಣೆ ನಡೆಸುವುದು ರಾಜ್ಯ ಸರ್ಕಾರದ ಹೊಣೆ. ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿಗಳಿಗೆ ಚುನಾವಣೆ ನಡೆಸಲು ಎಲ್ಲ ಕ್ರಮಗಳನ್ನು ತೆಗೆದುಕೊಳ್ಳುವಂತೆ ಕರ್ನಾಟಕ ಸರ್ಕಾರಕ್ಕೆ ಸಲಹೆ ನೀಡಲಾಗಿದೆ

ರಾಜೀವ್ ರಂಜನ್ ಸಿಂಗ್, ಪಂಚಾಯತ್‌ರಾಜ್ ಸಚಿವ



ಐದು ವರ್ಷಗಳಿಂದ ಜನಪ್ರತಿನಿಧಿಗಳಿಲ್ಲ

ರಾಜ್ಯದ ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿಗಳಿಗೆ 2016ರ ಏಪ್ರಿಲ್‌ನಲ್ಲಿ ಚುನಾವಣೆ ನಡೆದಿತ್ತು. ಚುನಾಯಿತ ಸದಸ್ಯರ ಅವಧಿ 2021ರ ಏಪ್ರಿಲ್ 27ರಂದು ಮುಕ್ತಾಯವಾಗಿತ್ತು. ಚುನಾವಣೆ ನಡೆಸಲು ಸಿದ್ಧತೆ ಆರಂಭಿಸಿದ್ದ ಚುನಾವಣಾ ಆಯೋಗವು ಕ್ಷೇತ್ರ ಪುನರ್‌ವಿಂಗಡಣೆ ಮಾಡಿ ಮತದಾರರ ಅಂತಿಮ ಪಟ್ಟಿ ಹಾಗೂ ಮೀಸಲಾತಿ ಕರಡನ್ನು ಪ್ರಕಟಿಸಿತ್ತು. ಆದರೆ, ಬಿಜೆಪಿ ನೇತೃತ್ವದ ಹಿಂದಿನ ಸರ್ಕಾರ ಕ್ಷೇತ್ರ ಪುನರ್ ವಿಂಗಡಣೆ ಮತ್ತು ಮೀಸಲಾತಿ ಅಧಿಕಾರವನ್ನು ಆಯೋಗದಿಂದ ಹಿಂಪಡೆದಿತ್ತು.

ಕರ್ನಾಟಕ ಪಂಚಾಯತ್ ರಾಜ್ ಮತ್ತು ಗ್ರಾಮ ಸ್ವರಾಜ್ ಕಾಯ್ದೆಗೆ ತಿದ್ದುಪಡಿ ತಂದು 'ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗ'ಕ್ಕೆ ಆ ಅಧಿಕಾರವನ್ನು ನೀಡಿತ್ತು. ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿಗಳ ಕ್ಷೇತ್ರ ಪುನರ್ ವಿಂಗಡಣೆ ಮತ್ತು ಮೀಸಲಾತಿ ವಿಳಂಬದ ವಿರುದ್ಧ ರಾಜ್ಯ ಚುನಾವಣಾ ಆಯೋಗವು ಹೈಕೋರ್ಟ್ ಮೊರೆ ಹೋಗಿತ್ತು. ಕ್ಷೇತ್ರಗಳ ಪುನರ್ ವಿಂಗಡಣೆ ಮತ್ತು ಮೀಸಲಾತಿ ನಿಗದಿ ಪ್ರಕ್ರಿಯೆಯನ್ನು ಒಂದು ತಿಂಗಳಲ್ಲಿ ಪೂರ್ಣಗೊಳಿಸುವುದಾಗಿ 2023ರ ಡಿಸೆಂಬರ್‌ನಲ್ಲಿ ರಾಜ್ಯ ಸರ್ಕಾರ ಹೈಕೋರ್ಟ್‌ಗೆ ಪ್ರಮಾಣ ಪತ್ರ ಸಲ್ಲಿಸಿತ್ತು.

ನಂತರ ಕ್ಷೇತ್ರಗಳ ಪುನರ್‌ವಿಂಗಡಣೆ ಹಾಗೂ ಸದಸ್ಯರ ಸಂಖ್ಯೆ ನಿಗದಿಪಡಿಸಲು ಸರ್ಕಾರ ರಚಿಸಿದ್ದ ಆಯೋಗದ ಶಿಫಾರಸುಗಳನ್ನು ಅಂಗೀಕರಿಸಿದ್ದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಅಧಿಸೂಚನೆ ಹೊರಡಿಸಿತ್ತು. ಆದರೆ, ಮೀಸಲಾತಿ ನಿಗದಿ ಅಂತಿಮಗೊಳಿಸಿರಲಿಲ್ಲ.

'ಮುಂದೆಯೂ ನಾನೇ ಸಿ.ಎಂ'

ಶಾಸಕ ರಂಗನಾಥ್ ಪ್ರಶ್ನೆಗೆ ಉತ್ತರಿಸುವಾಗ ಪ್ರಾಸಂಗಿಕ ಮಾತು

ಪ್ರಜಾವಾಣಿ ವಾರ್ತೆ

ಸಿದ್ದರಾಮಯ್ಯ

ಸುವರ್ಣ ವಿಧಾನಸೌಧ (ಬೆಳಗಾವಿ): 'ಐದು ವರ್ಷ ನಾನೇ ಮುಖ್ಯಮಂತ್ರಿ ಆಗಿರಬೇಕೆಂದು ಜನ ಆಶೀರ್ವಾದ ಮಾಡಿ ಕಳುಹಿಸಿದ್ದಾರೆ. ಈಗಲೂ ನಾನೇ ಸಿ.ಎಂ, ಮುಂದೆಯೂ ನಾನೇ ಸಿ.ಎಂ' ಎಂದು ಸಿದ್ದರಾಮಯ್ಯ ತುಸು ಏರಿದ ಧ್ವನಿಯಲ್ಲಿಯೇ ಪ್ರತಿಪಾದಿಸಿದರು.

ರಾಜ್ಯದಲ್ಲಿ ನಡೆಯುತ್ತಿರುವ ನಾಯಕತ್ವ ಜಟಾಪಟಿಯ ನಡುವೆಯೇ, ತಾವೇ ಅಧಿಕಾರ ಪೂರ್ಣಗೊಳಿಸುವುದಾಗಿ ವಿಧಾನಸಭೆಯಲ್ಲಿ ಸಿದ್ದರಾಮಯ್ಯ ಪುನರುಚ್ಚರಿಸಿದರು.

ಮಂಗಳವಾರ ನಡೆದ ಪ್ರಶ್ನೋತ್ತರ ವೇಳೆಯಲ್ಲಿ ಅವರು ಉತ್ತರ ನೀಡುವಾಗ ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರು ನಾಯಕತ್ವದ ವಿಷಯ ಪ್ರಸ್ತಾಪಿಸಿದರು.

'ನೀವು ಹುಳಿ ಹಿಂಡುವುದು ಬೇಡ. 140 ಶಾಸಕರು ನಮ್ಮೊಂದಿಗಿದ್ದಾರೆ. ಹೈಕಮಾಂಡ್ ಹೇಳುವ ತನಕ ನಾನೇ ಮುಖ್ಯಮಂತ್ರಿ ಆಗಿ ಮುಂದುವರಿಯುತ್ತೇನೆ' ಎಂದು ಸಿದ್ದರಾಮಯ್ಯ ಹೇಳಿದರು.

ಮತ್ತೆ ದೆಹಲಿಯಾತ್ರೆ ನಡೆಯುತ್ತಿದೆಯಲ್ಲ ಎಂದು ಅಶೋಕ ಹೇಳಿದಾಗ, ಅದಕ್ಕೆ ದನಿಗೂಡಿಸಿದ ಬಿಜೆಪಿಯ ವಿ. ಸುನಿಲ್ ಕುಮಾರ್ 'ಹಾಗಿದ್ದರೆ ಜನವರಿ ಬಳಿಕ ಏನಾಗಲಿದೆ ಸರ್' ಎಂದು ಕೆಣಕಿದರು.

ಕಾಂಗ್ರೆಸ್–ಬಿಜೆಪಿ ಸದಸ್ಯರ ವಾಗ್ಯುದ್ಧದ ಮಧ್ಯೆಯೇ ಮಾತನಾಡಿದ ಸಿದ್ದರಾಮಯ್ಯ, 'ಈಗಲೂ ನಾನೇ, ಮುಂದೆಯೂ ನಾನೇ' ಎಂದು ಅಬ್ಬರಿಸಿದರು.

4

ಹಿಂದಿನ ಸಾಲಿನಲ್ಲಿ ಡಿಕೆಶಿ ಚರ್ಚೆ

ಉತ್ತರ ಕರ್ನಾಟಕದ ಕುರಿತು ಚರ್ಚೆ ನಡೆಯುತ್ತಿದ್ದ ವೇಳೆ ಶಿವಕುಮಾರ್ ಅವರು ವಿಧಾನಸಭೆ ಹಿಂಬದಿಯ ಸಾಲಿನಲ್ಲಿ ಕುಳಿತು ತಮ್ಮ ಆಪ್ತರ ಜೊತೆ ಸಮಾಲೋಚನೆ ನಡೆಸಿದ್ದು ಗಮನ ಸೆಳೆಯಿತು.

ಸಿದ್ದರಾಮಯ್ಯ ಅವರ ಪಕ್ಕದ ಆಸನ ಶಿವಕುಮಾರ್ ಅವರಿಗೆ ಮೀಸಲಾಗಿದ್ದು, ಮಸೂದೆಗಳ ಅಂಗೀಕಾರ ಮುಕ್ತಾಯವಾಗುವವರೆಗೆ ಅಲ್ಲಿ ಕುಳಿತಿದ್ದರು. ಬಳಿಕ ಅಲ್ಲಿಂದ ಎದ್ದು ಕೊನೆಯ ಸಾಲಿಗೆ ತೆರಳಿದರು. ಅಲ್ಲಿದ್ದ ಎಚ್.ಸಿ. ಬಾಲಕೃಷ್ಣ, ಸಿ.ಪಿ.ಯೋಗೀಶ್ವರ್ ಜೊತೆ ಶಿವಕುಮಾರ್ ಮಾತುಕತೆ ಆರಂಭಿಸುತ್ತಿದ್ದಂತೆ, ಅವರ ಜೊತೆ ಅಶೋಕ ಕುಮಾರ್ ರೈ, ಕೆ.ಎಂ. ಉದಯ್ ಕದಲೂರು, ಶ್ರೀನಿವಾಸ ಜತೆ ಸೇರಿದರು. ನಂತರ ಇಕ್ಬಾಲ್ ಹುಸೇನ್ ಅವರನ್ನೂ ಕೈಬೀಸಿ ಕರೆದ ಶಿವಕುಮಾರ್ ಅವರನ್ನೂ ಚರ್ಚೆಯಲ್ಲಿ ತೊಡಗಿಸಿಕೊಂಡರು.

ಆಸ್ಟ್ರೇಲಿಯಾದಲ್ಲಿ ಗುಂಡಿನ ದಾಳಿ ನಡೆಸಿದ್ದು ಭಾರತೀಯ

ಹೈದರಾಬಾದ್ (ಪಿಟಿಐ): ಆಸ್ಟ್ರೇಲಿಯಾದ ಬೋಂಡಿ ಬೀಚ್‌ನಲ್ಲಿ ಭಾನುವಾರ ಗುಂಡಿನ ದಾಳಿ ನಡೆಸಿ 15 ಜನರ ಹತ್ಯೆ ಮಾಡಿದ್ದ ಆರೋಪಿ ಸಾಜಿದ್ ಅಕ್ರಂ (50) ಭಾರತೀಯ ಪ್ರಜೆ, ಹೈದರಾಬಾದ್ ನಗರದವನು ಎಂದು ತೆಲಂಗಾಣ ಪೊಲೀಸರು ಹೇಳಿದ್ದಾರೆ.

ಸಾಜಿದ್ ಅಕ್ರಂ, ಪುತ್ರ ನವೀದ್ (24) ಜತೆ ಸೇರಿ ಡಿ.14ರಂದು 'ಹನುಕ್ಕಾ' ಯಹೂದಿ ಹಬ್ಬದ ಪ್ರಾರಂಭೋತ್ಸವಕ್ಕಾಗಿ ಸೇರಿದ್ದ ಅಪಾರ ಸಂಖ್ಯೆಯ ಜನರ ಮೇಲೆ ಮನಬಂದಂತೆ ಗುಂಡಿನ ದಾಳಿ ನಡೆಸಿದ್ದರು. ಸಾಜಿದ್‌ನನ್ನು ಆಸ್ಟ್ರೇಲಿಯಾ ಪೊಲೀಸರು ಸ್ಥಳದಲ್ಲೇ ಗುಂಡಿಕ್ಕಿ ಹತ್ಯೆ ಮಾಡಿದ್ದರು.

'ಬಿ.ಕಾಂ ಪದವೀಧರನಾದ ಸಾಜಿದ್ ಅಕ್ರಂ, 27 ವರ್ಷಗಳ ಹಿಂದೆ ಉದ್ಯೋಗಕ್ಕಾಗಿ ಆಸ್ಟ್ರೇಲಿಯಾಕ್ಕೆ ಹೋಗಿದ್ದ. ಆಸ್ಟ್ರೇಲಿಯಾದಲ್ಲಿ ಶಾಶ್ವತವಾಗಿ ನೆಲೆಗೊಳ್ಳುವ ಮೊದಲು ಅಲ್ಲಿ ಯೂರೋಪ್‌ನ ಮಹಿಳೆಯೊಬ್ಬರನ್ನು ಮದುವೆಯಾಗಿದ್ದ. ಇವರಿಗೆ ಪುತ್ರ, ಪುತ್ರಿ ಇದ್ದಾರೆ. ಮಕ್ಕಳಿಬ್ಬರು ಆಸ್ಟ್ರೇಲಿಯಾದಲ್ಲೇ ಜನಿಸಿದ್ದು, ಅಲ್ಲಿನ ಪೌರತ್ವ ಹೊಂದಿದ್ದಾರೆ. ಸಾಜಿದ್ ಅಕ್ರಂ ಭಾರತದಲ್ಲಿರುವ ತನ್ನ ಸಂಬಂಧಿಗಳ ಜತೆಗೆ ಸೀಮಿತ ಸಂಪರ್ಕವನ್ನಷ್ಟೇ ಹೊಂದಿದ್ದ' ಎಂದು ತೆಲಂಗಾಣ ಡಿಜಿಪಿ ಕಚೇರಿಯ ಪ್ರಕಟಣೆ ತಿಳಿಸಿದೆ.

'1998ರಲ್ಲಿ ಆಸ್ಟ್ರೇಲಿಯಾಕ್ಕೆ ಹೋದ ನಂತರ ಅಕ್ರಂ, ವಯಸ್ಸಾದ ತಂದೆ–ತಾಯಿಯನ್ನು ಭೇಟಿಯಾಗಲು, ಜಮೀನಿನ ವಿಷಯ ಸೇರಿದಂತೆ ತುರ್ತು ಸಂದರ್ಭದಲ್ಲಿ ಮಾತ್ರ ಕೇವಲ ಆರು ಬಾರಿ ಭಾರತಕ್ಕೆ ಭೇಟಿ ನೀಡಿದ್ದಾನೆ. ತಂದೆ ನಿಧನರಾದ ಸಂದರ್ಭದಲ್ಲೂ ಆತ ಭಾರತಕ್ಕೆ ಬಂದಿಲ್ಲ. ಆಸ್ಟ್ರೇಲಿಯಾದಲ್ಲಿ ಆತನ ಚಟುವಟಿಕೆಯಾಗಲಿ, ಭಯೋತ್ಪಾದಕ ಚಟುವಟಿಕೆಗಳ ಜೊತೆಗಿನ ನಂಟಿನ ಬಗ್ಗೆ ಕುಟುಂಬ ಸದಸ್ಯರಿಗೆ ಯಾವುದೇ ಮಾಹಿತಿ ಇಲ್ಲ' ಎಂದು ಪೊಲೀಸರು ಹೇಳಿದ್ದಾರೆ.

12

ಇ.ಡಿ ಆರೋಪ ಪಟ್ಟಿ ತಿರಸ್ಕಾರ

ನ್ಯಾಷನಲ್ ಹೆರಾಲ್ಡ್ ಪ್ರಕರಣ

ನವದೆಹಲಿ (ಪಿಟಿಐ): ನ್ಯಾಷನಲ್ ಹೆರಾಲ್ಡ್ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಮುಖಂಡರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಹಾಗೂ ಇತರೆ ಐವರು ಆರೋಪಿಗಳ ವಿರುದ್ಧ ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿ (ಪಿಎಂಎಲ್‌ಎ) ಜಾರಿ ನಿರ್ದೇಶನಾಲಯ (ಇ.ಡಿ) ಸಲ್ಲಿಸಿದ್ದ ಆರೋಪ ಪಟ್ಟಿಯನ್ನು ದೆಹಲಿ ಕೋರ್ಟ್ ಮಂಗಳವಾರ ತಿರಸ್ಕರಿಸಿದೆ.

'ಎಫ್‌ಐಆರ್ ಇಲ್ಲದೆ ಖಾಸಗಿ ದೂರಿನ ಆಧಾರದಲ್ಲಿ ಸಲ್ಲಿಸಿರುವ ಆರೋಪ ಪಟ್ಟಿಯನ್ನು ಪರಿಗಣಿಸಲು ಸಾಧ್ಯವಿಲ್ಲ. ಕಾನೂನಿನಡಿ ಇದನ್ನು ಅನುಮತಿಸಲಾಗದು' ಎಂದು ನ್ಯಾಯಾಧೀಶ ವಿಶಾಲ್ ಗೋಗ್ನೆ ಹೇಳಿದರು.

'ಪ್ರಕರಣದಲ್ಲಿ ದೆಹಲಿ ಪೊಲೀಸ್‌ನ ಆರ್ಥಿಕ ಅಪರಾಧಗಳ ತನಿಖಾ ವಿಭಾಗವು ಎಫ್‌ಐಆರ್ ದಾಖಲಿಸಿದೆ. ಹೀಗಿರುವಾಗ ಖಾಸಗಿ ವ್ಯಕ್ತಿಯೊಬ್ಬರ ದೂರಿನ ತನಿಖೆ ಆಧಾರದಲ್ಲಿ ಆರೋಪ ಪಟ್ಟಿ ಪರಿಗಣಿಸುವುದು ಅಪಕ್ವ ಎನಿಸುತ್ತದೆ' ಎಂದಿದ್ದಾರೆ.

7

'ಎಫ್‌ಐಆರ್ ಪ್ರತಿ ಕೊಡಲು ಸಾಧ್ಯವಿಲ್ಲ'

ಗಾಂಧಿ ಕುಟುಂಬಕ್ಕೆ ಪೊಲೀಸ್ ಎಫ್‌ಐಆರ್‌ನ ಪ್ರತಿ ಕೊಡಲು ಸಾಧ್ಯವಿಲ್ಲ ಎಂದು ಕೋರ್ಟ್ ಹೇಳಿದೆ.

ಗಾಂಧಿ ಕುಟುಂಬಕ್ಕೆ ಎಫ್‌ಐಆರ್ ಪ್ರತಿ ಕೊಡುವಂತೆ ಮ್ಯಾಜಿಸ್ಟ್ರೇಟ್ ಕೋರ್ಟ್ ನೀಡಿದ್ದ ಆದೇಶವನ್ನು ದೆಹಲಿ ಪೊಲೀಸರು ವಿಶೇಷ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದರು. ವಿಶೇಷ ನ್ಯಾಯಾಲಯದ ನ್ಯಾಯಾಧೀಶ ವಿಶಾಲ್ ಗೋಗ್ನೆ ಅವರು ಮ್ಯಾಜಿಸ್ಟ್ರೇಟ್ ಕೋರ್ಟ್ ನೀಡಿದ್ದ ಆದೇಶವನ್ನು ರದ್ದುಪಡಿಸಿದ್ದು, 'ಎಫ್‌ಐಆರ್ ಪ್ರತಿ ಕೊಡಲು ಸಾಧ್ಯವಿಲ್ಲ. ಆದರೆ, ಎಫ್‌ಐಆರ್ ದಾಖಲಾಗಿದೆ ಎನ್ನುವುದನ್ನು ಪೊಲೀಸರು ಆರೋಪಿಗಳಿಗೆ ತಿಳಿಸಬಹುದು' ಎಂದು ಸೂಚಿಸಿದ್ದಾರೆ.

7

ಹೊಸ ಆರೋಪ ಪಟ್ಟಿ ಸಲ್ಲಿಸಲಿರುವ ಇ.ಡಿ

ಪ್ರಕರಣದಲ್ಲಿ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಸೇರಿ ಇತರೆ ಆರೋಪಿಗಳ ವಿರುದ್ಧ ಜಾರಿ ನಿರ್ದೇಶನಾಲಯ ಹೊಸ ಆರೋಪ ಪಟ್ಟಿ ಸಲ್ಲಿಸಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಾಲಿಸಿಟರ್ ಜನರಲ್ (ಎಸ್‌ಜಿ) ಮತ್ತು ಹೆಚ್ಚುವರಿ ಸಾಲಿಸಿಟರ್ ಜನರಲ್ (ಎಎಸ್‌ಜಿ) ಅವರಿಂದ ಕಾನೂನು ಸಲಹೆ ಪಡೆದು, ದೆಹಲಿ ಕೋರ್ಟ್ ನೀಡಿರುವ ಆದೇಶದ ವಿರುದ್ಧ ಇ.ಡಿ ಮೇಲ್ಮನವಿ ಸಲ್ಲಿಸಲಿದೆ ಎಂದು ಅಧಿಕಾರಿಗಳು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

7

'ಜಿ ರಾಮ್ ಜಿ' ಮಸೂದೆ ಮಂಡನೆ

ನವದೆಹಲಿ: 'ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ' (ನರೇಗಾ) ಹೆಸರಿನಲ್ಲಿ ಮಹಾತ್ಮ ಗಾಂಧಿ ಹೆಸರು ಕೈಬಿಟ್ಟಿರುವುದು, ರಾಜ್ಯಗಳ ಮೇಲೆ ಶೇ 40ರಷ್ಟು ಹೊರೆ ಹೊರಿಸಿರುವುದು ಸೇರಿ ಇತರೆ ವಿಚಾರಗಳಿಗೆ ಸಂಬಂಧಿಸಿ ವಿರೋಧ ಪಕ್ಷಗಳ ತೀವ್ರ ಆಕ್ಷೇಪದ ಮಧ್ಯೆಯೇ ಕೇಂದ್ರ ಸರ್ಕಾರವು 'ವಿಕಸಿತ ಭಾರತ– ಉದ್ಯೋಗ ಖಾತರಿ ಮತ್ತು ಜೀವನೋಪಾಯ ಮಿಷನ್ (ಗ್ರಾಮೀಣ) (ವಿಬಿ–ಜಿ ರಾಮ್ ಜಿ) ಮಸೂದೆ, 2025' ಅನ್ನು ಮಂಗಳವಾರ ಲೋಕಸಭೆಯಲ್ಲಿ ಮಂಡಿಸಿತು.

ಸುದ್ದಿ 7

ಚಿನಕುರುಳಿ ಪ್ರಕಾಶ್ ಶೆಟ್ಟಿ



'ಪ್ರಜಾವಾಣಿ ಕ್ವಿಜ್' ಚಾಂಪಿಯನ್ನರು

ಪ್ರಜಾವಾಣಿ ಚಿತ್ರ

ಬೆಂಗಳೂರಿನಲ್ಲಿ ನಡೆದ ಪ್ರಜಾವಾಣಿ ರಸಪ್ರಶ್ನೆ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ ಬೆಂಗಳೂರಿನ ಶಿಶುಗೃಹ ಸೀನಿಯರ್ ಸ್ಕೂಲ್‌ನ ತ್ರಿವಿಕ್ರಮ್ ಕೇಶವನ್ ಮತ್ತು ವಿಷ್ಣು ಎಸ್.ಗಣೇಶ್ (ಮಧ್ಯೆ), ದ್ವಿತೀಯ ಸ್ಥಾನ ಪಡೆದ ಬ್ರಹ್ಮಾವರದ ಲಿಟ್ಲ್ ರಾಕ್ ಇಂಡಿಯನ್ ಸ್ಕೂಲ್‌ನ ತಕ್ಷಕ್ ಶೆಟ್ಟಿ, ಸೃಜನ್ ಎನ್.ವೈ, (ಎಡದಿಂದ ಮೊದಲ ಜೋಡಿ) ಹಾಗೂ ತೃತೀಯ ಸ್ಥಾನ ಪಡೆದ ಬಾಗಲಕೋಟೆಯ ಬಸವೇಶ್ವರ ಅಂತರರಾಷ್ಟ್ರೀಯ ಪಬ್ಲಿಕ್ ಶಾಲೆಯ ತೇಜಲ್ ಅಮಾರಿ, ಸ್ತುತಿ ರಾಠಿ ಅವರು ಟ್ರೋಫಿಯೊಂದಿಗೆ ಸಂಭ್ರಮಿಸಿದರು. ದಿ ಪ್ರಿಂಟರ್ಸ್ ಮೈಸೂರು ಪ್ರೈವೇಟ್ ಲಿಮಿಟೆಡ್‌ನ ('ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಪತ್ರಿಕಾ ಸಮೂಹ) ನಿರ್ದೇಶಕಿ ಕೆ.ಟಿ. ಸೌಭಾಗ್ಯಲಕ್ಷ್ಮಿ, '45' ಸಿನಿಮಾದ ನಿರ್ದೇಶಕ ಅರ್ಜುನ್ ಜನ್ಯ ಪಾಲ್ಗೊಂಡಿದ್ದರು

ಒಟ್ಟು ₹6,279.87 ಕೋಟಿ ಮೊತ್ತದ ಎರಡನೇ ಕಂತಿನ ಪೂರಕ ಅಂದಾಜು ಮಂಡನೆ

'ಗ್ಯಾರಂಟಿ' ಸಮಾವೇಶಕ್ಕೆ ₹18.66 ಕೋಟಿ

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): ರಾಜ್ಯ ಸರ್ಕಾರದ ಕಡೆಯಿಂದ ಆಯೋಜಿಸುತ್ತಿರುವ ಪಂಚ 'ಗ್ಯಾರಂಟಿ' ಯೋಜನೆಗಳ ಫಲಾನುಭವಿಗಳ ಸಮಾವೇಶಕ್ಕೆ ₹18.66 ಕೋಟಿಯಷ್ಟು ಹೆಚ್ಚುವರಿ ಮೊತ್ತವನ್ನು ಎರಡನೇ ಪೂರಕ ಅಂದಾಜಿನಲ್ಲಿ ಒದಗಿಸಲಾಗಿದೆ.

ಈ ಆರ್ಥಿಕ ವರ್ಷದಲ್ಲಿ ಬಜೆಟ್ ಹೊರತಾಗಿ ವೆಚ್ಚ ಮಾಡಿರುವ, ಮಾಡಲಾಗುವ ₹6,279.87 ಕೋಟಿ ಮೊತ್ತದ ಎರಡನೇ ಕಂತಿನ ಪೂರಕ ಅಂದಾಜನ್ನು ವಿಧಾನಸಭೆಯಲ್ಲಿ ಮಂಗಳವಾರ ಮಂಡಿಸಲಾಯಿತು.

ಮುಂದಿನ ವರ್ಷ ದಾವೋಸ್‌ನಲ್ಲಿ ನಡೆಯಲಿರುವ ವಿಶ್ವ ಆರ್ಥಿಕ ವೇದಿಕೆಯ ಸಭೆಗೆ ತೆರಳಲಿರುವ ನಿಯೋಗದ ವೆಚ್ಚಕ್ಕೆ ₹10 ಕೋಟಿ ಒದಗಿಸಲಾಗಿದೆ. ಕೇಂದ್ರದ ಸಹಾಯಾನುದಾನ ಹಾಗೂ ಕೇಂದ್ರ ಪ್ರಾಯೋಜಿತ ಕಾರ್ಯಕ್ರಮಗಳ ಹೊಂದಾಣಿಕೆ ಮೊತ್ತವೂ ಇದರಲ್ಲಿ ಸೇರಿದೆ.

ಯಾವುದಕ್ಕೆ ಎಷ್ಟು ಹಣ?

- ಮುಂಗಾರು ಅವಧಿಯಲ್ಲಿ ಅತಿವೃಷ್ಟಿಯಿಂದ ಆಗಿರುವ ಹಾನಿಗೆ ಪರಿಹಾರಧನ ನೀಡಲು ₹1,015.66 ಕೋಟಿ
- ಮುಖ್ಯಮಂತ್ರಿ ಮತ್ತು ರಾಜ್ಯಪಾಲರ ಹೆಲಿಕಾಪ್ಟರ್ ವೆಚ್ಚ ಭರಿಸಲು ಹೆಚ್ಚುವರಿಯಾಗಿ ₹6.37 ಕೋಟಿ
- 68ನೇ ಕಾಮನ್ ವೆಲ್ತ್ ಪಾರ್ಲಿಮೆಂಟ್ ಅಸೋಸಿಯೇಷನ್ ಸಮ್ಮೇಳನದಲ್ಲಿ ಸಭಾಧ್ಯಕ್ಷ ಯು.ಟಿ. ಖಾದರ್, ಸಭಾಪತಿ ಬಸವರಾಜ ಹೊರಟ್ಟಿ ಹಾಗೂ ಎರಡೂ ಸದನಗಳ ಸದಸ್ಯರು ಪಾಲ್ಗೊಂಡಿದ್ದರು. ಪ್ರಯಾಣ ವೆಚ್ಚಕ್ಕೆ ಹೆಚ್ಚುವರಿಯಾಗಿ ಒಟ್ಟು ₹2 ಕೋಟಿ
- 2025–26ನೇ ಸಾಲಿನ ಬೆಳಗಾವಿ ಅಧಿವೇಶನಕ್ಕೆ ಹೆಚ್ಚುವರಿಯಾಗಿ ₹14.50 ಕೋಟಿ
- ಮಾಜಿ ಶಾಸಕರ ರೈಲು, ವಿಮಾನ ಪ್ರಯಾಣ ಭತ್ಯೆಗೆ ₹1.46 ಕೋಟಿ
- ಶಾಸಕರ ಭವನಕ್ಕೆ ಹೊಸ ವಾಹನ ಖರೀದಿಗೆ ಹೆಚ್ಚುವರಿಯಾಗಿ ₹2 ಕೋಟಿ
- ಕಾಮನ್‌ವೆಲ್ತ್ ಸಂಸದೀಯ ಸಂಘದ ಸಿಪಿಎ ಭಾರತ ಸಂಘದ ಸಮ್ಮೇಳನಕ್ಕೆ ಹೆಚ್ಚುವರಿಯಾಗಿ ₹3.60 ಕೋಟಿ
- ವಿಶ್ವ ಮೀನುಗಾರಿಕೆ ದಿನಾಚರಣೆಗಾಗಿ ಮತ್ಸ್ಯ ಮೇಳ ಆಯೋಜಿಸಲು ಹೆಚ್ಚುವರಿ ₹4 ಕೋಟಿ
- ವಿಧ ಬಂದರುಗಳ ಅಭಿವೃದ್ಧಿಗೆ ₹3.89 ಕೋಟಿ

4

ಜಾತಿ ಸಮೀಕ್ಷೆ: ನಿಗಮಗಳಿಗೆ ₹348.36 ಕೋಟಿ ಮರು ಪಾವತಿ

ಹಿಂದುಳಿದ ವರ್ಗಳ ಆಯೋಗದಿಂದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಕೈಗೊಳ್ಳಲು ವಿವಿಧ ನಿಗಮಗಳ ಪಿ.ಡಿ ಖಾತೆಯಿಂದ ಒಟ್ಟು ₹348.36 ಕೋಟಿಯನ್ನು ಪಡೆಯಲಾಗಿತ್ತು. ಅದನ್ನು ಆಯಾ ನಿಗಮಗಳಿಗೆ ಮರು ಭರಿಸಲು ಪೂರಕ ಅಂದಾಜಿನಲ್ಲಿ ಅನುದಾನ ನೀಡಲಾಗಿದೆ.

4

ಕೈಲಾಸ ಜೀವನ

ಮಲ್ಟಿಪರ್ಪಸ್ ಆಯುರ್ವೇದಿಕ್ ಕ್ರೀಮ್

ಕಾಲಿನ ಬಿರುಕುಗಳು

ಕಾಲುಗಳನ್ನು ಸ್ವಚ್ಛವಾಗಿ ತೊಳೆದು, ತುಸು ಹೊತ್ತು ಬೆಚ್ಚನೆ ನೀರಲ್ಲಿ ಅದ್ದಿಟ್ಟು, ಮೆತ್ತಗೆ ಮಾಡಿ. ಮೆತ್ತನೆ ಬಟ್ಟೆಯಿಂದ ಒರೆಸಿ. ಕೈಲಾಸ ಜೀವನವನ್ನು ನಿಧಾನವಾಗಿ ಚರ್ಮದಲ್ಲಿ ಇಂಗಿಸಿ. ಉಜ್ಜಬೇಡಿ. ಕಾಲಿನ ಬಿರುಕುಗಳು ತುಂಬಿ ಬರಲು ನೆರವಾಗುವುದು. ಕಾಲುಗಳ ಚರ್ಮ ನವುರು ಹಾಗೂ ಮೃದುವಾಗುವುದು.

ಗುಳ್ಳೆಗಳು, ಮೊಡವೆ

ಬೆಚ್ಚನೆ ನೀರಿನಿಂದ ಮುಖಕ್ಕೆ ಶಾಖ ಕೊಟ್ಟು, ಮೆತ್ತನೆಯ ಬಟ್ಟೆಯಿಂದ ಒರೆಸಿ. ಕೈಲಾಸ ಜೀವನವನ್ನು ನಿಧಾನವಾಗಿ ಚರ್ಮದಲ್ಲಿ ಇಂಗಿಸಿ. (ಉಜ್ಜಬೇಡಿ.) ಮೊಡವೆ, ಗುಳ್ಳೆಗಳಿಂದ ಶೀಘ್ರ ಆರಾಮ ಲಭಿಸಲು ನೆರವಾಗುತ್ತದೆ. ಮುಖ ತೇಜಸ್ವಿ, ಆಕರ್ಷಕ, ತಿಳಿಯಾಗಲು ನೆರವಾಗುವುದು.

ಕಣ್ಣುಗಳ ಉರಿತ

ಬೆಚ್ಚನೆ ನೀರಿನಿಂದ ಮುಖ ಮತ್ತು ಕಣ್ಣುಗಳನ್ನು ಸ್ವಚ್ಛ ಮಾಡಿ. ರಾತ್ರಿ ಮಲಗುವಾಗ ಕೈಲಾಸ ಜೀವನವನ್ನು ಲೇಪಿಸಿ ಮೇಲೆ ಹತ್ತಿಯ ಮಡಿಕೆಯನ್ನಿರಿಸಿ. ತಂಪು ಉಂಟಾಗಿ ಕಣ್ಣುಗಳ ಉರಿತ ಮತ್ತು ಕೆಂಪು ಕಡಿಮೆಯಾಗಲು ನೆರವಾಗುವುದು.

ಮೂಲವ್ಯಾಧಿ / ಫಿಶೂರ್

ಒಂದು ಚಮಚೆ ಕೈಲಾಸ ಜೀವನವನ್ನು ಅಷ್ಟೇ ಸಕ್ಕರೆಯೊಂದಿಗೆ ರಾತ್ರಿ 21 ದಿನಗಳ ಕಾಲ ಸೇವಿಸಿ. ಕೆಜೆ ಕ್ರೀಮ್ ಅನ್ನು ಪೀಡಿತ ಪ್ರದೇಶಕ್ಕೆ ದಿನಕ್ಕೆ 2/3 ಬಾರಿ ಅನ್ವಯಿಸಿ. ಇದು ಬಿರುಕುಗಳಿಂದ ಪರಿಹಾರವನ್ನು ತರುತ್ತದೆ. ಎಣ್ಣೆ, ಮಾಂಸ ಮತ್ತು ಮದ್ಯವನ್ನು ತಪ್ಪಿಸಿ.

ಕಾಲಿನ ಬಿರುಕುಗಳು, ಮೊಡವೆ, ಗುಳ್ಳೆಗಳು, ಕಣ್ಣುಗಳ ಉರಿತ, ಸುಡುವಿಕೆ, ಗಾಯ ಮತ್ತು ಕೊಯ್ತಗಳು, ಬಿರುಕುಗಳು... ಇತ್ಯಾದಿಗಳಿಗೆ ಪರಿಣಾಮಕಾರಿ!

ರೋಗ ಹಲವು, ಪರಿಹಾರ ಒಂದು... ಹೀಗಾಗಿ ಮಲ್ಟಿಪರ್ಪಸ್ ! ಇಂದೇ ಖರೀದಿಸಿ !

Also available on amazon netmeds.com India Ki Pharmacy

Available in: 12g & 20g Tube, 30g, 60g, 120g, 230g Bottle

Manufacturer: ASUM, Pune: 020-24486865 I Customer Care: Prashant: 91300 26070 I asumkj@gmail.com I www.asum.com I

Kan-W25 anunaad.com

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ

ವಿಮಾನ ನಿಲ್ದಾಣ: ಹೊಸ ಪಿಕ್‌ಅಪ್ ನಿಯಮ ಕೈಬಿಡಲು ಆಗ್ರಹ

ಟ್ಯಾಕ್ಸಿ ಚಾಲಕರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕ್ಯಾಬ್ ಚಾಲಕರಿಗೆ ಇತ್ತೀಚೆಗೆ ಜಾರಿಗೊಳಿಸಿದ ಹೊಸ ಪಿಕ್-ಅಪ್ ನಿರ್ಬಂಧಗಳ ವಿರುದ್ಧ ಕರ್ನಾಟಕ ಚಾಲಕರ ಒಕ್ಕೂಟದ ನೇತೃತ್ವದಲ್ಲಿ ಟ್ಯಾಕ್ಸಿ ಚಾಲಕರು ಹಾಗೂ ವಿವಿಧ ಚಾಲಕರ ಸಂಘಗಳ ಸದಸ್ಯರು ಮಂಗಳವಾರ ಸಾದಹಳ್ಳಿ ಟೋಲ್ ಪ್ಲಾಜಾ ಬಳಿ ಪ್ರತಿಭಟನೆ ನಡೆಸಿದರು.

ಕರ್ನಾಟಕ ಚಾಲಕರ ಒಕ್ಕೂಟ, ಪೀಸ್ ಆಟೊ ಯೂನಿಯನ್, ಬೃಹತ್ ಬೆಂಗಳೂರು ಆಟೊ ಮತ್ತು ಟ್ಯಾಕ್ಸಿ ಚಾಲಕರ ಸಂಘ ಸೇರಿದಂತೆ ವಿವಿಧ ಟ್ಯಾಕ್ಸಿ ಚಾಲಕರ ಸಂಘದ ಸುಮಾರು 400 ಕ್ಯಾಬ್ ಚಾಲಕರು ಬೆಳಗ್ಗೆ 9ಕ್ಕೆ ಟೋಲ್ ಪ್ಲಾಜಾ ಬಳಿ ವಾಹನ ತಡೆದು ಪ್ರತಿಭಟನೆ ನಡೆಸಿದರು. ಇದರಿಂದಾಗಿ ಟೋಲ್ ಪ್ಲಾಜಾ ಸುತ್ತಮುತ್ತ ಸಂಚಾರ ದಟ್ಟಣೆ ಉಂಟಾಯಿತು.

ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಲಿಮಿಟೆಡ್ (ಬಿಐಎಎಲ್) ಘೋಷಿಸಿರುವ ಹೊಸ ಪಿಕ್-ಅಪ್ ನಿಯಮ ಹಿಂಪಡೆಯಬೇಕೆಂದು ಆಗ್ರಹಿಸಿದರು.

ನಿಯಮಗಳ ಪ್ರಕಾರ ಖಾಸಗಿ ವಾಹನ, ಟ್ಯಾಕ್ಸಿಗಳಿಗೆ ಎಂಟು ನಿಮಿಷ ಉಚಿತ ನಿಲುಗಡೆ ಸಿಗಲಿದೆ. ಎಂಟು ನಿಮಿಷದ ನಂತರ 13 ನಿಮಿಷಗಳವರೆಗೆ ನಿಲುಗಡೆಗೆ ₹150 ಶುಲ್ಕ ವಿಧಿಸಲಾಗುತ್ತದೆ. 13-18 ನಿಮಿಷಗಳ ನಿಲುಗಡೆಗೆ ₹300 ಶುಲ್ಕ ವಿಧಿಸಲಾಗುತ್ತದೆ. 18 ನಿಮಿಷ ಮೀರಿದ ವಾಹನಗಳನ್ನು ಪೊಲೀಸ್ ಠಾಣೆಗೆ ಕೊಂಡೊಯ್ಯುವ ಜೊತೆಗೆ ಹೆಚ್ಚುವರಿ ದಂಡ ವಿಧಿಸಲಾಗುತ್ತದೆ. ಇದು ಚಾಲಕರಿಗೆ ಹೊರೆಯಾಗಿದೆ ಎಂದು ಪ್ರತಿಭಟನ ನಿರತರು ಆಕ್ರೋಶ ಹೊರಹಾಕಿದರು.

ವಾಣಿಜ್ಯ ವಾಹನಗಳು ನಿಗದಿತ ಪಾರ್ಕಿಂಗ್ ಪ್ರದೇಶಗಳಲ್ಲಿ ಕಾಯಬೇಕಿದ್ದು ಅಲ್ಲಿ 10 ನಿಮಿಷ ಉಚಿತ ಪಾರ್ಕಿಂಗ್ ಸಿಗಲಿದೆ. ಅದರ ನಂತರ ಅರ್ಧ ಗಂಟೆಗೆ ₹100 ಮತ್ತು ಪ್ರತಿ ಹೆಚ್ಚುವರಿ ಗಂಟೆಗೆ ₹50 ಶುಲ್ಕ ಪಾವತಿಸಬೇಕಾಗುತ್ತದೆ ಇದು ಕಾರು ಚಾಲಕರನ್ನೇ ಗುರಿಯಾಗಿಸಿಕೊಂಡು ಮಾಡಲಾಗಿರುವ ನಿಯಮವಾಗಿದೆ ಎಂದು ಘೋಷಣೆ ಕೂಗಿದರು.

ಕರ್ನಾಟಕ ಚಾಲಕರ ಒಕ್ಕೂಟದ ಅಧ್ಯಕ್ಷ ಜಿ. ನಾರಾಯಣಸ್ವಾಮಿ ಮಾತನಾಡಿ, 'ನಮ್ಮೊಂದಿಗೆ ಯಾವುದೇ ಸಮಾಲೋಚನೆ ಇಲ್ಲದೆ ಈ ನಿಯಮ ತಂದಿದ್ದಾರೆ. 10 ನಿಮಿಷ ಕಾಯುವ ಸಮಯ ಸಾಕಾಗುವುದಿಲ್ಲ ಎಂಬುದು ವಿಮಾನ ನಿಲ್ದಾಣ ಅಧಿಕಾರಿಗಳಿಗೆ ತಿಳಿದಿದೆ. ಅವರು ಕಾಯುವ ಸಮಯ ಹೆಚ್ಚಿಸಬೇಕು ಅಥವಾ ಈ ನಿಯಮ ಹಿಂಪಡೆಯಬೇಕು' ಎಂದು ಒತ್ತಾಯಿಸಿದರು.

ಪೂರ್ವ ವಿಭಾಗದ ಜಂಟಿ ಪೊಲೀಸ್ ಆಯುಕ್ತರೊಂದಿಗೆ ಚರ್ಚೆ ನಡೆಸಲಾಗಿದೆ. ನಾಲ್ಕು ದಿನಗಳಲ್ಲಿ ಸಮಸ್ಯೆ ಬಗೆಹರಿಸಲು ಪ್ರಯತ್ನಿಸುವುದಾಗಿ ಅವರು ಭರವಸೆ ನೀಡಿದ್ದಾರೆ. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಟರ್ಮಿನಲ್ 1ರಲ್ಲಿ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಕೆ ನೀಡಿದರು.

ವಿಮಾನ ನಿಲ್ದಾಣದಲ್ಲಿ ಜಾರಿಗೆ ತಂದಿರುವ ನೂತನ ಪಿಕ್ ಅಪ್ ನೀತಿ ವಿರೋಧಿಸಿ ದೇವನಹಳ್ಳಿ ಸಮೀಪದ ಸಾದಹಳ್ಳಿ ಟೋಲ್ ಬಳಿ ಟ್ಯಾಕ್ಸಿ ಚಾಲಕರು ಹಾಗೂ ವಿವಿಧ ಸಂಘಟನೆಗಳ ಸದಸ್ಯರು ಪ್ರತಿಭಟನೆ ನಡೆಸಿದರು

ಪಿಕ್ ಅಪ್ ವ್ಯವಸ್ಥೆ ಬಳಸಿ: ಬಿಐಎಎಲ್

ಬೆಂಗಳೂರು: ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಟರ್ಮಿನಲ್‌ಗಳಲ್ಲಿ ಜಾರಿ ಮಾಡಿರುವ ನೂತನ ಪಿಕ್ ಅಪ್ ವ್ಯವಸ್ಥೆ ಕುರಿತ ದೂರುಗಳನ್ನು ಪರಿಶೀಲಿಸಿ ಪ್ರಯಾಣಿಕರಿಗೆ ಅನುಕೂಲಕರ ವಾತಾವರಣ ನಿರ್ಮಿಸಲಾಗುತ್ತಿದೆ ಎಂದು ಬಿಐಎಎಲ್ ತಿಳಿಸಿದೆ.

ಎಲ್ಲ ಅಂತರರಾಷ್ಟ್ರಿಯ ವಿಮಾನ ನಿಲ್ದಾಣಗಳಲ್ಲಿ ಇರುವ ಪದ್ಧತಿಯನ್ನೇ ನಮ್ಮಲ್ಲೂ ಅನುಷ್ಠಾನಗೊಳಿಸಲಾಗಿದೆ. ಹೊಸ ನಿಯಮ ಜಾರಿಯಾದಾಗ ಪ್ರತಿರೋಧ ಎದುರಾದರೂ, ಶೇ 95 ರಷ್ಟು ಪ್ರಯಾಣಿಕರಿಗೆ ಈ ನಿಯಮ ಅನುಕೂಲಕರವಾಗಿದೆ. ಅಂಗವಿಕಲರು, ಮಕ್ಕಳು, ಹಿರಿಯ ನಾಗರಿಕರ ಸಹಿತ ನಡಿಗೆಗೆ ಕಷ್ಟವಾಗುವ ಪ್ರಯಾಣಿಕರಿಗೆ ಶಟಲ್ ಸೇವೆಗಳನ್ನು ಒದಗಿಸಲಾಗುತ್ತಿದೆ ಎಂದು ತಿಳಿಸಿದೆ.

ಕೆಲವು ಅನಧಿಕೃತ ಟ್ಯಾಕ್ಸಿ ಚಾಲಕರು ವಿಮಾನ ನಿಲ್ದಾಣದಿಂದ ಪ್ರಯಾಣಿಕರನ್ನು ಹತ್ತಿಸಿಕೊಂಡ ಬಳಿಕ, ಮಾರ್ಗಮಧ್ಯದಲ್ಲಿ ನಿಗದಿಪಡಿಸಿದ್ದಕ್ಕಿಂತ ಹೆಚ್ಚು ಹಣಕ್ಕೆ ಒತ್ತಾಯಿಸುತ್ತಿರುವುದು, ಒಪ್ಪದಿದ್ದರೆ ಮಾರ್ಗಮಧ್ಯೆ ಇಳಿಸಿರುವ ಕುರಿತು ಮಹಿಳಾ ಪ್ರಯಾಣಿಕರು ದೂರಿದ್ದಾರೆ. ಸಮಸ್ಯೆ ಎದುರಿಸುವ ಬದಲು, ನಿಗದಿತ ಸ್ಥಳದಿಂದಲೇ ಅಧಿಕೃತ ಟ್ಯಾಕ್ಸಿ ಸೇವೆ ಪಡೆಯಿರಿ ಎಂದು ಬಿಐಎಎಲ್ ವಕ್ತಾರರು ಮನವಿ ಮಾಡಿದ್ದಾರೆ.

ಸಾದಹಳ್ಳಿ ಟೋಲ್ ಬಳಿ ದಟ್ಟಣೆ

3,974 ಜನರಿಗೆ ದಂಡ

ಬೆಂಗಳೂರು: ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ನವೆಂಬರ್‌ನಲ್ಲಿ ಟಿಕೆಟ್ ಪಡೆಯದೇ ಪ್ರಯಾಣಿಸುತ್ತಿದ್ದ 3,974 ಪ್ರಯಾಣಿಕರಿಂದ ₹ 7.61 ಲಕ್ಷ ದಂಡ ವಸೂಲಿ ಮಾಡಲಾಗಿದೆ. ನಿಗಮದ ಆದಾಯದಲ್ಲಿ ₹99,143 ಸೋರಿಕೆಯನ್ನು ಅಧಿಕಾರಿಗಳು ಪತ್ತೆಹಚ್ಚಿದ್ದಾರೆ.

ಅಕ್ರಮವಾಗಿ ಸಂಗ್ರಹಿಸಿಟ್ಟಿದ್ದ ಯೂರಿಯಾ

ಯೂರಿಯಾ ಅಕ್ರಮ ದಾಸ್ತಾನು

ನೆಲಮಂಗಲ: ರೈತರಿಗೆ ಹಂಚಿಕೆಯಾಗಬೇಕಾಗಿದ್ದ ಯೂರಿಯಾವನ್ನು ಅಕ್ರಮವಾಗಿ ಸಂಗ್ರಹಿಸಿಟ್ಟಿದ್ದ ಗೋದಾಮಿಗೆ ಕೇಂದ್ರ ಕಂದಾಯ ಗುಪ್ತಚರ ನಿರ್ದೇಶನಲಯದ (ಡಿಆರ್‌ಐ) ಅಧಿಕಾರಿಗಳು ದಾಳಿ ಮಾಡಿ, 1,90,125 ಕೆ.ಜಿ ಯೂರಿಯಾವನ್ನು ವಶಪಡಿಸಿಕೊಂಡಿದ್ದಾರೆ.

ಬೆಂಗಳೂರು ಉತ್ತರ ತಾಲೂಕು ದಾಸನಪುರ ಹೋಬಳಿ ಗೆಜ್ಜಗದಹಳ್ಳಿ ಶಿವನಪುರದಲ್ಲಿ ಸಲೀಂ ಖಾನ್ ಎಂಬುವವರಿಗೆ ಸೇರಿದ ಗೋದಾಮನ್ನು, ಕೇರಳ ಮೂಲದ ತಜೀರ್ ಖಾನ್ ₹ 40 ಸಾವಿರ ಬಾಡಿಗೆಗೆ ಪಡೆದಿದ್ದರು. ಕೇರಳದಿಂದ ಯೂರಿಯಾವನ್ನು ಅಕ್ರಮವಾಗಿ ಇಲ್ಲಿಗೆ ಸಾಗಿಸಲಾಗುತ್ತಿತ್ತು ಎನ್ನಲಾಗಿದೆ.

ಕೇಂದ್ರ ಸರ್ಕಾರದಿಂದ ಸಬ್ಸಿಡಿ ದರದಲ್ಲಿ ವಿತರಣೆಯಾಗುತ್ತಿದ್ದ 45 ಕೆ.ಜಿ ತೂಕದ ಹಳದಿಬಣ್ಣದ ಚೀಲವನ್ನು ಬಿಚ್ಚಿ, 50 ಕೆಜಿ. ಬಿಳಿ ಬಣ್ಣದ ಚೀಲಗಳಿಗೆ ತುಂಬಿ ತಮಿಳುನಾಡಿಗೆ ಅಕ್ರಮವಾಗಿ ರವಾನಿಸಲಾಗುತ್ತಿತ್ತು. ತಮಿಳುನಾಡಿನಲ್ಲಿ ಡಿಆರ್‌ಐ ಅಧಿಕಾರಿಗಳು ದಾಳಿ ನಡೆಸಿದ ವೇಳೆ ಇಲ್ಲಿಂದ ರವಾನಿಯಾಗುತ್ತಿದೆ ಎಂಬ ಮಾಹಿತಿ ದೊರೆತಿತ್ತು. ಕೇಂದ್ರ ಸರ್ಕಾರವು ₹2,321 ಮುಖ ಬೆಲೆಯ ಯೂರಿಯಾಗೆ ₹2,054 ಸಬ್ಸಿಡಿ ನೀಡಿ, ₹267ಗೆ ರೈತರಿಗೆ ನೀಡಲಾಗುತ್ತಿದೆ.

ಅಕ್ರಮ ದಾಸ್ತಾನು ಮೂಲಕ ₹2,500ಗೆ ಕಾಳಸಂತೆಯಲ್ಲಿ ಮಾರಾಟ ಮಾಡಲಾಗುತ್ತಿತ್ತು ಎಂದು ತಿಳಿದುಬಂದಿದೆ.

ನೇತ್ರ ತಪಾಸಣೆ ಶಿಬಿರ

ಬೆಂಗಳೂರು: ಸರ್ಜಾಪುರದ ಸ್ನೇಹಸಮ್ಮಿಲನ ಫೌಂಡೇಷನ್ ಬೊಮ್ಮಸಂದ್ರ ನಾರಾಯಣ ನೇತ್ರಾಲಯ ಸಹಯೋಗದಲ್ಲಿ ಉಚಿತ ನೇತ್ರ ತಪಾಸಣೆ, ಶಸ್ತ್ರ ಚಿಕಿತ್ಸೆ ಹಾಗೂ ಕನ್ನಡ ವಿತರಣಾ ಶಿಬಿರವನ್ನು ಡಿ.21ರಂದು ಆಯೋಜಿಸಿದೆ.

ಸರ್ಜಾಪುರದ ಶ್ರೀರಾಮ್ ಪಬ್ಲಿಕ್ ಶಾಲೆಯಲ್ಲಿ ನಡೆಯುವ ಶಿಬಿರದಲ್ಲಿ ಭಾಗವಹಿಸುವವರು ದೂರವಾಣಿ 9742363334 ಸಂಪರ್ಕಿಸುವಂತೆ ಕೋರಲಾಗಿದೆ.

ಬೆಂಗಳೂರು ದಕ್ಷಿಣ ನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರು (ಬಿಟಿಎಂ ಲೇಔಟ್ ವಿಭಾಗ) ರವರ ಕಚೇರಿ, ಜಿ.ಬಿ.ಎ.
ವಾಣಿಜ್ಯ ಸಂಕೀರ್ಣ ಕಟ್ಟಡ, 2ನೇ ಮಹಡಿ, ಲಷ್ಕರ್ ಹೊಸೂರು ರಸ್ತೆ, ಆಡುಗೋಡಿ, ಬೆಂಗಳೂರು-560 030.

ಸಂಖ್ಯೆ: ಕಾಪಾಅ(ಬಿಟಿಎಂ)/ಪಿ.ಆರ್/350/2025-26 ದಿನಾಂಕ: 16-12-2025

ಅಲ್ಪಾವಧಿ ಕೊಟೇಷನ್ ಆಹ್ವಾನ

ವಿಷಯ: 2025-26 ನೇ ಸಾಲಿನ ಹೊಸ ವರ್ಷಾಚರಣೆ ಸಂಬಂಧ ಉಪಯೋಗಕ್ಕೆ ಬೇಕಾಗಿರುವ ವಸ್ತುಗಳ ದರಪಟ್ಟಿಗಳನ್ನು ಸಲ್ಲಿಸುವ ಬಗ್ಗೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸಾರ್ವಜನಿಕರ ಸುರಕ್ಷತೆಯ ವ್ಯವಸ್ಥೆಯ ಸಲುವಾಗಿ ಈ ಕೆಳಕಂಡ ವಸ್ತುಗಳ ಅವಶ್ಯಕತೆ ಇದ್ದು, ಸದರಿ ವಸ್ತುಗಳನ್ನು ಸರಬರಾಜು ಮಾಡಲು ಅರ್ಹ ಸಂಸ್ಥೆ /ಏಜೆನ್ಸಿ ಸರಬರಾಜುದಾರರು ಅಥವಾ ವ್ಯಕ್ತಿಗಳಿಂದ ದರಪಟ್ಟಿ (ಕೊಟೇಷನ್) ಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳವರು ಮೊಹರು ಮಾಡಿದ ದರಪಟ್ಟಿಗಳು ದಿನಾಂಕ: 22-12-2025 ರ ಸಂಜೆ 4.00 ಗಂಟೆಯೊಳಗಾಗಿ ಈ ಕಚೇರಿಗೆ ಸಲ್ಲಿಸಲು ಕೋರಿದೆ.

SL. No.	Particulars	Size	Qty	On Rent basis rate / unit per/day
1	Barricade	(5 Ft, 4 Ft) height	1	Running Ft
2	German Pagoda	1. 20X20X15 Ft 2.10x10Ft All round cover	1	Sq Ft
3	Watch tower	-	1	Nos
4	Table with frills	5 Ft, 4 Ft	1	Nos
5	Cots & Beds Set	Single	1	Nos

ಸದರಿ ವಿಷಯದಲ್ಲಿ ಹೆಚ್ಚಿನ ಮಾಹಿತಿಗೆ ಈ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ.

ಸಹಿ/-
ಕಾರ್ಯಪಾಲಕ ಅಭಿಯಂತರರು (ಬಿಟಿಎಂ ಲೇಔಟ್ ವಿಭಾಗ)
ಬೆಂಗಳೂರು ದಕ್ಷಿಣ ನಗರ ಪಾಲಿಕೆ

ಕರ್ನಾಟಕ ಸರ್ಕಾರ

ಹೆನ್ನಾಗರ ಗ್ರಾಮ ಪಂಚಾಯತ್ ಕಾರ್ಯಾಲಯ

ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ.

ಸಂಖ್ಯೆ: ಹೆ.ಗ್ರಾ.ಪಂ/104/2025-26 ದಿನಾಂಕ: 15.12.2025

ಇ-ಟೆಂಡರ್ ಪ್ರಕಟಣೆ

ಅಧ್ಯಕ್ಷರು ಹಾಗೂ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಹೆನ್ನಾಗರ ಗ್ರಾಮ ಪಂಚಾಯಿತಿಯಲ್ಲಿ 2025-26ನೇ ಸಾಲಿನ ವರ್ಗ-1 ಹಣಕಾಸು ಯೋಜನೆಯಾಡಿ ವಿವಿಧ ಕಾಮಗಾರಿಗಳಿಗೆ ಇ-ಟೆಂಡರ್ ಆಹ್ವಾನಿಸಲಾಗಿದೆ, ವಿವರ ಕೆಳಗಿನಂತಿದೆ. (1) ಆನೇಕಲ್ ತಾಲ್ಲೂಕು ಜಿಗಣಿ ಹೋಬಳಿ ಹೆನ್ನಾಗರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಯಾರಂಡಹಳ್ಳಿ ಗ್ರಾಮದ ಜಿ.ಎಲ್.ಎಸ್.ಆರ್. ಟ್ಯಾಂಕಿನಿಂದ ಹರೀಶ್ ರೆಡ್ಡಿ ಜಮೀನಿನವರೆಗೆ ಕಾವೇರಿ ನೀರು ಸರಬರಾಜು ಮಾಡುವ ಪೈಪ್‌ಲೈನ್ ಅಳವಡಿಸುವ ಕಾಮಗಾರಿ – RDPR/2025-26/WS/WORK_INDENT21581 (2) ಆನೇಕಲ್ ತಾಲ್ಲೂಕು ಜಿಗಣಿ ಹೋಬಳಿ ಹೆನ್ನಾಗರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಯಾರಂಡಹಳ್ಳಿ ಗ್ರಾಮದ ಜಿ.ಎಲ್.ಎಸ್.ಆರ್. ಟ್ಯಾಂಕಿನಿಂದ ಕಾಚನಾಯಕನಹಳ್ಳಿ ಗ್ರಾಮದ ಜಿ.ಎಲ್.ಎಸ್.ಆರ್. ಟ್ಯಾಂಕ್ ವರೆಗೆ ಕಾವೇರಿ ನೀರು ಸರಬರಾಜು ಮಾಡುವ ಪೈಪ್ ಲೈನ್ ಅಳವಡಿಸುವ ಕಾಮಗಾರಿ.RDPR/2025-26/WS/WORK_INDENT21583 (3) ಆನೇಕಲ್ ತಾಲ್ಲೂಕು ಜಿಗಣಿ ಹೋಬಳಿ ಹೆನ್ನಾಗರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೊಂಡಾರೆಡ್ಡಿ ಕೆರೆಯಿಂದ ಹೊಸಹಳ್ಳಿ ಸಮುದಾಯ ಭವನದ ಮಾರ್ಗದ ಮೂಲಕ ಹೆನ್ನಾಗರ ಗ್ರಾಮದ ಜಿ.ಎಲ್.ಎಸ್.ಆರ್. ಟ್ಯಾಂಕ್‌ವರೆಗೆ ಕಾವೇರಿ ನೀರು ಸರಬರಾಜು ಮಾಡುವ ಪೈಪ್ ಲೈನ್ ಅಳವಡಿಸುವ ಕಾಮಗಾರಿ. RDPR/2025-26/WS/WORK_INDENT21579 (4) ಆನೇಕಲ್ ತಾಲ್ಲೂಕು ಜಿಗಣಿ ಹೋಬಳಿ ಹೆನ್ನಾಗರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹೆನ್ನಾಗರ ಗ್ರಾಮದ ಜಿ.ಎಲ್.ಎಸ್.ಆರ್. ಟ್ಯಾಂಕಿನಿಂದ ಮಾಸ್ತೇನಹಳ್ಳಿ ಗ್ರಾಮದ ಜಿ.ಎಲ್.ಎಸ್.ಆರ್. ಟ್ಯಾಂಕ್ ವರೆಗೆ ಕಾವೇರಿ ನೀರು ಸರಬರಾಜು ಮಾಡುವ ಪೈಪ್‌ಲೈನ್ ಅಳವಡಿಸುವ ಕಾಮಗಾರಿ. RDPR/2025-26/WS/WORK_INDENT21582 (5) ಕಾಚನಾಯಕನಹಳ್ಳಿ ಗ್ರಾಮದ ಸ್ಮಶಾನದಿಂದ ಮಾರುತಿ ಜಮೀನಿನವರೆಗೂ ಒಳಚರಂಡಿ ನಿರ್ಮಾಣ ಕಾಮಗಾರಿ–RDPR/2025-26/WS/WORK_INDENT21576

(1) ಟೆಂಡರ್ ದಾಖಲಾತಿಗಳನ್ನು ಇ-ಪ್ರಕ್ಯೂರ್‌ಮೆಂಟ್‌ನಿಂದ ಡೌನ್‌ಲೋಡ್ ಮಾಡಿಕೊಂಡು **ದಿನಾಂಕ: 15.12.2025 ರಿಂದ 22.12.2025 ಸಂಜೆ 16.00 ಗಂಟೆಯವರೆಗೆ** ಸಲ್ಲಿಸಬಹುದು. (2)ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್‌ಗಳ ಆರ್ಥಿಕ ಬಿಡ್ ತೆರೆಯುವ ದಿನಾಂಕವನ್ನು ತಾಂತ್ರಿಕ ಬಿಡ್‌ನ ದಾಖಲೆಗಳನ್ನು ಪರಿಶೀಲನೆ ಮಾಡಿದ ನಂತರ ತೆರೆಯಲಾಗುವುದು. (3)ಕೆಲಸದ ಹೆಸರು/ಪೂರೈಕೆದಾರರ ಅರ್ಹತೆ/ ಟೆಂಡರ್ ನಿಯಮಗಳು/ಟೆಂಡರ್ ಪ್ರೋಸೆಸ್ಸಿಂಗ್ ಫೀ ಇತ್ಯಾದಿ ವಿವರಗಳಿಗೆ **www.KPPP.karnataka.gov.in** ಮೂಲಕ ಪಡೆಯಬಹುದು.

ಸಹಿ/-
ಪಂಚಾಯತ್ ಅಭಿವೃದ್ಧಿ ಅಧಿಕಾರಿ
ಹೆನ್ನಾಗರ ಗ್ರಾಮ ಪಂಚಾಯತ್

ಸಹಿ/
ಅಧ್ಯಕ್ಷರು
ಹೆನ್ನಾಗರ ಗ್ರಾಮ ಪಂಚಾಯತ್

ವಾಸಾಸಂಇ/ವಾಪ್ರ/4470/ಶಿರಡಿ ಸಾಯಿ/2025-26

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸೂಚಿಸುವುದೇನೆಂದರೆ ನನ್ನ ಕಕ್ಷಿದಾರರು ಮೈಸೂರು 570004, ಎನ್ ಆರ್ ಮೋಹಲ್ಲ, ನಂ. 374/1, ನ್ಯೂ ಬಡೆ ಮಾರ್ಕೆಟ್ ಹಿಂದೆ ವಾಸಿಸುತ್ತಿರುವ ಸುಮಾರು 61 ವರ್ಷ ವಯಸ್ಸುಳ್ಳ ಶ್ರೀ ಫಿರೋಜ್ ಅಹ್ಮದ್ ಸಿದ್ದೀಕಿ ರವರ ಮಗನಾದ ಶ್ರೀ ಇಜಾಜ್ ಅಹಮದ್ ಸಿದ್ದೀಕಿ (ಮಾಲೀಕರು) ಮತ್ತು ಚಾಮರಾಜನಗರ - 571440, ಕೊಳ್ಳೇಗಾಲ ಪಟ್ಟಣ, ಕಬಿನಿ ಕಾಲೇಜು ಬಳಿ, ಕಂಪನ ಪಾಳ್ಯ ರಸ್ತೆ, ನಂ.7/3009 ರಲ್ಲಿ ವಾಸಿಸುತ್ತಿರುವ ಸುಮಾರು 68 ವರ್ಷ ವಯಸ್ಸಿನ ಶ್ರೀ ಯೂಸುಫ್ ಖಾನ್ ರವರ ಮಗನಾದ ಶ್ರೀ ಡಿ ವೈ ಫಿರೋಜ್ ಖಾನ್ (ಒಡಂಬಡಿಕೆದಾರರು) ರವರೊಂದಿಗೆ ಈ ಕೆಳಗಿನ ವಿವರ ಪಟ್ಟಿಯ ಸ್ವತ್ತಿನ ಮಾರಾಟ ಪ್ರಕ್ರಿಯೆಯನ್ನು ಮುಂದುವರಿಸಲು ನಿಶ್ಚಯಿಸಿರುತ್ತಾರೆ.

ಯಾವುದೇ ವ್ಯಕ್ತಿ/ಗಳು, ಘಟಕ, ಸಂಸ್ಥೆ, ಸಂಸ್ಥೆ (ಕಾರ್ಪೊರೇಟ್ ಅಥವಾ ಇತರ) ಮಾಲೀಕರು ಅಥವಾ ಅವರ ಪೂರ್ವವರ್ತಿಗಳು ಅವರ ಯಾವುದೇ ಹಕ್ಕು, ಶೀರ್ಷಿಕೆ, ಆಸಕ್ತಿ, ಹಕ್ಕು, ಬಾಕಿ ಇರುವ ಮೊಕದ್ದಮೆ ಅಥವಾ ಬೇಡಿಕೆಯ ಹಕ್ಕು ಇದ್ದರೆ ಮಾರಾಟ, ಉಡುಗೊರೆ, ಗುತ್ತಿಗೆ, ಉಪ-ಗುತ್ತಿಗೆ, ವರ್ಗಾವಣೆ ಪತ್ರ, ಉತ್ತರಾಧಿಕಾರ, ಒಪ್ಪಂದಗಳು, ತಿಳುವಳಿಕೆ ಪತ್ರ, ಬಾಕಿ ಇರುವ ಮೊಕದ್ದಮೆ, ವಿನಿಮಯ, ಅಡಮಾನ, ಶುಲ್ಕ, ಹಕ್ಕುದಾರಿಕೆ, ಟ್ರಸ್ಟ್, ಭದ್ರತೆ, ಸ್ವಾಧೀನ, ಸುಲಭಗೊಳಿಸುವಿಕೆ, ಲಗತ್ತಿಸುವಿಕೆ, ಸ್ವಾಧೀನ ಅಥವಾ ಇತರ ಯಾವುದೇ ರೀತಿಯಲ್ಲಿ ಮತ್ತು/ಅಥವಾ ಸದರಿ ಆಸ್ತಿ ಅಥವಾ ಅದರ ಯಾವುದೇ ಭಾಗದ ಮೇಲೆ, ಈ ಸೂಚನೆಯ ದಿನಾಂಕದಿಂದ ಏಳು (7) ದಿನಗಳ ಒಳಗೆ ಸದರಿ ಆಸ್ತಿಗೆ ಸಂಬಂಧಿಸಿದಂತೆ ಅವರ ಹಕ್ಕು, ಶೀರ್ಷಿಕೆ, ಆಸಕ್ತಿ, ಹಕ್ಕು, ಬಾಕಿ ಇರುವ ಮೊಕದ್ದಮೆ ಅಥವಾ ಬೇಡಿಕೆಯನ್ನು ಸಾಬೀತುಪಡಿಸುವ ಸಂಬಂಧಿತ ಲಿಕಿತ ದಾಖಲೆಯೊಂದಿಗೆ ಕೆಳಗೆ ಸಹಿ ಮಾಡಿದವರ ಗಮನಕ್ಕೆ ತರಬಹುದು, ವಿಫಲವಾದರೆ ಅಂತಹ ಹಕ್ಕನ್ನು ಮನ್ನಾ ಮಾಡಲಾಗಿದೆ ಮತ್ತು / ಅಥವಾ ಬಿಟ್ಟುಕೊಡಲಾಗಿದೆ ಎಂದು ಪರಿಗಣಿಸಲಾಗುತ್ತದೆ. ಮೇಲೆ ನಿಗದಿಪಡಿಸಿದ ಅವಧಿ ಮುಗಿದ ನಂತರ ಸ್ವೀಕರಿಸಿದ ಆಕ್ಷೇಪಣೆಗಳು ಮತ್ತು / ಅಥವಾ ಹಕ್ಕುಗಳನ್ನು ಪರಿಗಣಿಸಲಾಗುವುದಿಲ್ಲ ಅಥವಾ ನಮ್ಮ ಕಕ್ಷಿದಾರರಿಗೆ ಬದ್ಧವಾಗಿರುವುದಿಲ್ಲ ಮತ್ತು ಅವುಗಳನ್ನು ಅಸ್ತಿತ್ವದಲ್ಲಿಲ್ಲ ಮತ್ತು/ಅಥವಾ ಮನ್ನಾ ಮಾಡಲಾಗಿದೆ ಎಂದು ಪರಿಗಣಿಸಲಾಗುತ್ತದೆ.

ಷೆಡ್ಯೂಲ್ 'ಎ'

(1) ಈ ಎಲ್ಲಾ ಸಮಗ್ರ ಕೃಷಿ ಜಮೀನು ಮತ್ತು ಇದರ ಭಾಗಗಳು ಎರಡು (2) ಎಕರೆ ಇದ್ದು, ಇದು ಚಾಮರಾಜನಗರದ ಗುಂಡ್ಲುಪೇಟೆ ತಾಲ್ಲೂಕಿನ ಹಂಗಳ ಹೋಬಳಿಯ ಜಕ್ಕಹಳ್ಳಿ ಗ್ರಾಮದಲ್ಲಿದ್ದು ಇದರ ಸ ನಂ. 1/2 ಆಗಿರುತ್ತದೆ.

(2) ಈ ಎಲ್ಲಾ ಸಮಗ್ರ ಕೃಷಿ ಜಮೀನು ಮತ್ತು ಇದರ ಭಾಗಗಳು ಒಂದು (1) ಎಕರೆ ಮತ್ತು ಇಪ್ಪತ್ತು (20) ಗುಂಟೆಗಳು ಇದ್ದು, ಇದು ಚಾಮರಾಜನಗರದ ಗುಂಡ್ಲುಪೇಟೆ ತಾಲ್ಲೂಕಿನ ಹಂಗಳ ಹೋಬಳಿಯ ಜಕ್ಕಹಳ್ಳಿ ಗ್ರಾಮದಲ್ಲಿದ್ದು ಇದರ ಸ ನಂ. 58/1 ಆಗಿರುತ್ತದೆ.

(3) ಈ ಎಲ್ಲಾ ಸಮಗ್ರ ಕೃಷಿ ಜಮೀನು ಮತ್ತು ಇದರ ಭಾಗಗಳು ಒಂದು (1) ಎಕರೆ ಮತ್ತು ಇಪ್ಪತ್ತಾರು (26) ಗುಂಟೆಗಳು ಇದ್ದು, ಇದು ಚಾಮರಾಜನಗರದ ಗುಂಡ್ಲುಪೇಟೆ ತಾಲ್ಲೂಕಿನ ಹಂಗಳ ಹೋಬಳಿಯ ಜಕ್ಕಹಳ್ಳಿ ಗ್ರಾಮದಲ್ಲಿದ್ದು ಇದರ ಸ ನಂ. 59/3 ಆಗಿರುತ್ತದೆ.

ಮೇಲೆ ತಿಳಿಸಿರುವ ಎಲ್ಲಾ ಜಮೀನುಗಳಿಗೆ ಅಕ್ಕಪಕ್ಕದ ಜಮೀನುಗಳ ಚಕ್ಕುಬಂದಿ ಈ ಕೆಳಗಿನಂತಿದೆ.

ಪೂರ್ವಕ್ಕೆ : ಸರ್ಕಾರಿ ರಸ್ತೆ ;
ಪಶ್ಚಿಮಕ್ಕೆ : ಸ ನಂ. 1/1, 59/1 & 58/2 ರಲ್ಲಿನ ಜಮೀನು ;
ಉತ್ತರಕ್ಕೆ : ಶ್ರೀ ಇಜಾಜ್ ಅಹಮದ್ ಸಿದ್ದೀಕಿ ಅವರಿಗೆ ಸೇರಿದ ಸ ನಂ. 16/6 ಮತ್ತು 17/3, ಸ ನಂ. 16/3 ರ ಖಾಸಗಿ ಜಮೀನು ಮತ್ತು ರಸ್ತೆ ;
ದಕ್ಷಿಣಕ್ಕೆ : ಸ ನಂ. 57/1, 59/1 & 59/2.

ಇದರೊಂದಿಗೆ ಎಲ್ಲಾ ಹಕ್ಕುಗಳು, ಅದಕ್ಕೆ ಹೊಂದಿದ ಸವಲತ್ತುಗಳು ಮತ್ತು ಎಲ್ಲಾ ಸವಲತ್ತು ಹಕ್ಕುಗಳು, ನೀರಿನ ಮಾರ್ಗಗಳು ಮತ್ತು ಪ್ರವೇಶದ ಹಕ್ಕು.

ಷೆಡ್ಯೂಲ್ 'ಬಿ'

ಈ ಎಲ್ಲಾ ಸಮಗ್ರ ಕೃಷಿ ಜಮೀನು ಮತ್ತು ಇದರ ಭಾಗಗಳು ಇಪ್ಪತ್ತು (20) ಗುಂಟೆಗಳು ಇದ್ದು, ಇದು ಚಾಮರಾಜನಗರದ ಗುಂಡ್ಲುಪೇಟೆ ತಾಲ್ಲೂಕಿನ ಹಂಗಳ ಹೋಬಳಿಯ ಜಕ್ಕಹಳ್ಳಿ ಗ್ರಾಮದಲ್ಲಿದ್ದು, ಇದರ ಸ ನಂ. 17/3 ಆಗಿರುತ್ತದೆ.

ಮೇಲೆ ತಿಳಿಸಿರುವ ಎಲ್ಲಾ ಜಮೀನುಗಳಿಗೆ ಅಕ್ಕಪಕ್ಕದ ಜಮೀನುಗಳ ಚಕ್ಕುಬಂದಿ ಈ ಕೆಳಗಿನಂತಿದೆ.

ಪೂರ್ವಕ್ಕೆ : ಪುಟ್ಟಮಾದಪ್ಪ ಅವರಿಗೆ ಸೇರಿದ ಸ ನಂ. 17/2 ರ ಜಮೀನು ;
ಪಶ್ಚಿಮಕ್ಕೆ : ಯತೀಶ್ ಕುಮಾರ್ ಅವರಿಗೆ ಸೇರಿದ ಸ ನಂ. 16/3 ರ ಜಮೀನು ;
ಉತ್ತರಕ್ಕೆ : ಬಂಡಿಪುರ ಮತ್ತು ಜಕ್ಕಹಳ್ಳಿ ಸರ್ಕಾರಿ ರಸ್ತೆ ;
ದಕ್ಷಿಣಕ್ಕೆ : ಶ್ರೀ ಇಜಾಜ್ ಅಹಮದ್ ಸಿದ್ದೀಕಿ ಅವರಿಗೆ ಸೇರಿದ ಸ ನಂ. 1/2, ಸ ನಂ. 1/1 ರ ಖಾಸಗಿ ಜಮೀನು ಮತ್ತು ರಸ್ತೆ ;

ಇದರೊಂದಿಗೆ ಅದಕ್ಕೆ ಹೊಂದಿದ ಎಲ್ಲಾ ಹಕ್ಕುಗಳು, ಸವಲತ್ತುಗಳು ಮತ್ತು ಎಲ್ಲಾ ಸವಲತ್ತು ಹಕ್ಕುಗಳು, ನೀರಿನ ಮಾರ್ಗಗಳು ಮತ್ತು ಪ್ರವೇಶದ ಹಕ್ಕು.

ಷೆಡ್ಯೂಲ್ 'ಸಿ'

ಈ ಎಲ್ಲಾ ಸಮಗ್ರ ಕೃಷಿ ಜಮೀನು ಮತ್ತು ಇದರ ಭಾಗಗಳು ಇಪ್ಪತ್ತುವರೆ (20½) ಗುಂಟೆಗಳಾಗಿದ್ದು, ಇದು ಚಾಮರಾಜನಗರದ ಗುಂಡ್ಲುಪೇಟೆ ತಾಲ್ಲೂಕಿನ ಹಂಗಳ ಹೋಬಳಿಯ ಜಕ್ಕಹಳ್ಳಿ ಗ್ರಾಮದಲ್ಲಿದ್ದು, ಇದರ ಸ ನಂ. 16/4 ಆಗಿರುತ್ತದೆ.

ಈ ಎಲ್ಲಾ ಸಮಗ್ರ ಕೃಷಿ ಜಮೀನು ಮತ್ತು ಇದರ ಭಾಗಗಳು ಇಪ್ಪತ್ತುವರೆ (20½) ಗುಂಟೆಗಳಾಗಿದ್ದು, ಇದು ಚಾಮರಾಜನಗರದ ಗುಂಡ್ಲುಪೇಟೆ ತಾಲ್ಲೂಕಿನ ಹಂಗಳ ಹೋಬಳಿಯ ಜಕ್ಕಹಳ್ಳಿ ಗ್ರಾಮದಲ್ಲಿದ್ದು, ಇದರ ಸ ನಂ. 16/5 ಆಗಿರುತ್ತದೆ.

ಈ ಎಲ್ಲಾ ಸಮಗ್ರ ಕೃಷಿ ಜಮೀನು ಮತ್ತು ಇದರ ಭಾಗಗಳು ಇಪ್ಪತ್ತುವರೆ (20½) ಗುಂಟೆಗಳಾಗಿದ್ದು, ಇದು ಚಾಮರಾಜನಗರದ ಗುಂಡ್ಲುಪೇಟೆ ತಾಲ್ಲೂಕಿನ ಹಂಗಳ ಹೋಬಳಿಯ ಜಕ್ಕಹಳ್ಳಿ ಗ್ರಾಮದಲ್ಲಿದ್ದು, ಇದರ ಸ ನಂ. 16/6 ಆಗಿರುತ್ತದೆ.

ಮೇಲೆ ತಿಳಿಸಿರುವ ಎಲ್ಲಾ ಜಮೀನುಗಳಿಗೆ ಅಕ್ಕಪಕ್ಕದ ಜಮೀನುಗಳ ಚಕ್ಕುಬಂದಿ ಈ ಕೆಳಗಿನಂತಿದೆ.

ಪೂರ್ವಕ್ಕೆ : ಯತೀಶ್ ಕುಮಾರ್ ಅವರಿಗೆ ಸೇರಿದ ಜಮೀನು ಇದು ಸ ಸಂ. 16/3 ರಲ್ಲಿದೆ ;
ಪಶ್ಚಿಮಕ್ಕೆ : ಸ ನಂ. 15/2 & 15/3 ರಲ್ಲಿ ಖಾಸಗಿ ಜಮೀನು ;
ಉತ್ತರಕ್ಕೆ : ಬಂಡೀಪುರ ಮತ್ತು ಜಕ್ಕಹಳ್ಳಿಯ ಸರ್ಕಾರಿ ರಸ್ತೆ ;
ದಕ್ಷಿಣಕ್ಕೆ : ಶ್ರೀ ಇಜಾಜ್ ಅಹಮದ್ ಸಿದ್ದೀಕಿ ಅವರಿಗೆ ಸೇರಿದ ಸ ನಂ. 1/2 ರ ಜಮೀನು ಮತ್ತು ರಸ್ತೆ.

ಇದರೊಂದಿಗೆ ಅದಕ್ಕೆ ಹೊಂದಿದ ಎಲ್ಲಾ ಹಕ್ಕುಗಳು, ಸವಲತ್ತುಗಳು ಮತ್ತು ಎಲ್ಲಾ ಸವಲತ್ತು ಹಕ್ಕುಗಳು, ನೀರಿನ ಮಾರ್ಗಗಳು ಮತ್ತು ಪ್ರವೇಶದ ಹಕ್ಕು.

ದಿನಾಂಕ : 17.12.2025

ಮೀನಾ ವೇಣುಗೋಪಾಲ್, ಪಾರ್ಟ್ನರ್,
ಕೊಚ್ಚರ್ ಮತ್ತು ಕಂಪನಿ, ವಕೀಲರು ಮತ್ತು ಕಾನೂನು ಸಲಹೆಗಾರರು,
201, ಪ್ರೆಸ್ಟೀಜ್ ಸಿಗ್ಮಾ, ಸಂಖ್ಯೆ. 3, ವಿಠಲ್ ಮಲ್ಯ ರಸ್ತೆ, ಬೆಂಗಳೂರು 560001.
ದೂರವಾಣಿ: (080)4030 8000 ಇಮೇಲ್: meena.venugopal@bgl.kochhar.com

---

ನೈಋತ್ಯ ರೈಲ್ವೆ

ಪ್ರಕಟಣೆ
ಹುಬ್ಬಳ್ಳಿ, 21ನೇ ನವೆಂಬರ್, 2025

S. O. 5324(E) – ರೈಲ್ವೆ ಕಾಯ್ದೆ, 1989 (1989 ರ 24) ರ ಸೆಕ್ಷನ್ 20F ನ ಷರತ್ತು (6) ಮತ್ತು ಸೆಕ್ಷನ್ 2 ರ ಷರತ್ತು 7A ಯಿಂದ ನೀಡಲಾದ ಅಧಿಕಾರಗಳನ್ನು ಚಲಾಯಿಸುವಾಗ, ರೈಲ್ವೆ ಸಚಿವಾಲಯ (ನೈಋತ್ಯ ರೈಲ್ವೆ, ರಸ್ತೆ ಸುರಕ್ಷತಾ ಯೋಜನೆಗಳು, ಹುಬ್ಬಳ್ಳಿ) ಕೆಳಗಿನ ಕೋಷ್ಟಕದ ಕಾಲಮ್ (4) ರಲ್ಲಿ ಉಲ್ಲೇಖಿಸಲಾದ ಅಧಿಕಾರಿಗಳಿಗೆ 'ಸಮರ್ಥ ಪ್ರಾಧಿಕಾರ' ಎಂದು ಮತ್ತು ಕೆಳಗಿನ ಕೋಷ್ಟಕದ ಕಾಲಮ್ (5) ರಲ್ಲಿ ಉಲ್ಲೇಖಿಸಲಾದ ಅಧಿಕಾರಿಗಳಿಗೆ 'ಮಧ್ಯಸ್ಥಿಕೆದಾರರು' ಎಂದು ಅಧಿಕಾರ ನೀಡುತ್ತದೆ, ಈ ಅಧಿಸೂಚನೆಯನ್ನು ಅಧಿಕೃತ ಗೆಜೆಟ್‌ನಲ್ಲಿ ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ಭೂಸ್ವಾಧೀನಕ್ಕಾಗಿ ಸಾರ್ವಜನಿಕ ಉದ್ದೇಶಕ್ಕಾಗಿ ಕೆಳಗಿನ ಕೋಷ್ಟಕದ ಕಾಲಮ್ (3) ರಲ್ಲಿ ಉಲ್ಲೇಖಿಸಲಾದ ಜಿಲ್ಲೆಗಳಿಗೆ ಸಂಬಂಧಿಸಿದಂತೆ.

ಕ್ರ. ಸಂ.	ಯೋಜನೆಯ ಹೆಸರು	ಜಿಲ್ಲೆ	ಸಕ್ಷಮ ಪ್ರಾಧಿಕಾರ	ಮಧ್ಯಸ್ಥಗಾರರು
1	ಬೆಂಗಳೂರು ನಗರ – ಸಂಪಿಗೆ ರೋಡ್ ಸೆಕ್ಷನ್‌ನ ಚಿಕ್ಕಬಾಣಾವರ ಮತ್ತು ಗೊಲ್ಲಹಳ್ಳಿ ನಡುವೆ ಸೀಮಿತ ಎತ್ತರದ ಸಬ್‌ವೇ ಜೊತೆಗೆ ಕಿಮೀ. 16/100–200 ನಲ್ಲಿ ಎಲ್‌ಸಿ ಸಂ.10ರ ಬದಲಿಗೆ ರಸ್ತೆ ಮೇಲ್ಸೇತುವೆಯ (ಆರ್‌ಓಬಿ) ನಿರ್ಮಾಣ	ಬೆಂಗಳೂರು ನಗರ	ವಿಶೇಷ ಭೂಸ್ವಾಧೀನಾಧಿಕಾರಿ, ಬೆಂಗಳೂರು	ಪ್ರಾದೇಶಿಕ ಆಯುಕ್ತರು, ಬೆಂಗಳೂರು
2	ಬೆಂಗಳೂರು ನಗರ – ಸಂಪಿಗೆ ರೋಡ್ ಸೆಕ್ಷನ್‌ನ ಚಿಕ್ಕಬಾಣಾವರ ಮತ್ತು ಗೊಲ್ಲಹಳ್ಳಿ ನಡುವೆ ಸೀಮಿತ ಎತ್ತರದ ಸಬ್‌ವೇ ಜೊತೆಗೆ ಕಿಮೀ. 17/439 ನಲ್ಲಿ ಎಲ್‌ಸಿ ಸಂ.11ರ ಬದಲಿಗೆ ರಸ್ತೆ ಮೇಲ್ಸೇತುವೆಯ (ಆರ್‌ಓಬಿ) ನಿರ್ಮಾಣ			
3	ಮಂಡ್ಯ – ಎಲಿಯೂರು ನಿಲ್ದಾಣಗಳ ನಡುವೆ ಕಿಮೀ.96/600–700 ನಲ್ಲಿ ಎಲ್‌ಸಿ ಸಂ.76ರ ಬದಲಿಗೆ ಉದ್ದೇಶಿತ ರಸ್ತೆ ಮೇಲ್ಸೇತುವೆ	ಮಂಡ್ಯ	ಸಹಾಯಕ ಆಯುಕ್ತರು, ಪಾಂಡವಪುರ	ಪ್ರಾದೇಶಿಕ ಆಯುಕ್ತರು, ಮೈಸೂರು
4	ಬ್ಯಾಡರಹಳ್ಳಿ ಪಾಂಡವಪುರ ನಡುವೆ ಕಿಮೀ.116/500–600 ನಲ್ಲಿ ಎಲ್‌ಸಿ ಸಂ.94ರ ಬದಲಿಗೆ ರಸ್ತೆ ಮೇಲ್ಸೇತುವೆಯ (ಆರ್‌ಓಬಿ) ನಿರ್ಮಾಣ			
5	ಅಮೃತಾಪುರ – ಚಿತ್ರದುರ್ಗ ನಿಲ್ದಾಣಗಳ ನಡುವೆ ಕಿಮೀ.25/400–500ನಲ್ಲಿ ಎಲ್‌ಸಿ ಸಂ.15ರ ಬದಲಿಗೆ ಸಬ್‌ವೇ ಜೊತೆಗೆ ರಸ್ತೆ ಮೇಲ್ಸೇತುವೆಯ ನಿರ್ಮಾಣ	ಚಿತ್ರದುರ್ಗ	ಸಹಾಯಕ ಆಯುಕ್ತರು, ಚಿತ್ರದುರ್ಗ	ಪ್ರಾದೇಶಿಕ ಆಯುಕ್ತರು, ಬೆಂಗಳೂರು

[F.No. SWR/W.352/ROBs-RSP/Land/2025-26]

ಹೆಚ್ಚಿನ ವಿವರಗಳಿಗೆ **https://egazette.gov.in** ಗೆ ಲಾಗ್‌ಆನ್ ಮಾಡಿ.

ನಿಂಗಪ್ಪ ಚಂದಪ್ಪ ಚಲುವಾಡಿ, ಉಪ ಮುಖ್ಯ ಇಂಜಿನಿಯರ್ / ರಸ್ತೆ ಮೇಲ್ಸೇತುವೆಗಳು / ರಸ್ತೆ ಸುರಕ್ಷತಾ ಯೋಜನೆಗಳು, ಹುಬ್ಬಳ್ಳಿ

ಪಿಯುಬಿ/725/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2025-26

ಕಾಯ್ದಿರಿಸಲ್ಲದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆಪ್‌ನ್ನು ಡೌನ್‌ಲೋಡ್ ಮಾಡಿ

South Western Railway-SWR | SWRRLY | @SWRAILWAYHQ | @sw_railways

---

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರಪಾರ್ಕ್ ಪಶ್ಚಿಮ, ಬೆಂಗಳೂರು-560 020

ಸಂ.: ಬೆಂಅಪ್ರಾ/ನಯೋಸ/CLU-45/3459/2025-26 ದಿನಾಂಕ: 16.12.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14-A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **ವ್ಯವಸಾಯ** ವಲಯದಿಂದ **ವಸತಿ** ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಚೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ/ಗು	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
ಶ್ರೀ ಎಂ.ಜಿ. ವಿನೋದ್ ಮತ್ತು ಶ್ರೀಮತಿ ನಿರ್ಮಲ ಜಾರ್ಜ್	ಬೆಂಗಳೂರು ಪೂರ್ವ	ಬಿದರಹಳ್ಳಿ	ನಿಂಬೇಕಾಯಿ ಪುರ	77/1	0–11	ವ್ಯವಸಾಯ ವಲಯ	ವಸತಿ
				77/2	1–34		
				78/3	0–6.04		
				78/4	0–37.04		
				79	2–14		
				ಒಟ್ಟು	5–22.08		

ಷರಾ: ಅರ್ಜಿದಾರರು ಈ ಜಮೀನಿನಲ್ಲಿ ವಸತಿ ಕಟ್ಟಡ ಅಭಿವೃದ್ಧಿಪಡಿಸುವುದರಿಂದ ಸಾರ್ವಜನಿಕರಿಗೆ ಯೋಗ್ಯ ಬೆಲೆಯಲ್ಲಿ ಮನೆಗಳು ಲಭ್ಯವಾಗುತ್ತವೆ. ವಸತಿ ಕಟ್ಟಡದ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಸತಿ ಕಟ್ಟಡ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಪ್ರಶ್ನಿತ ಜಮೀನುಗಳನ್ನು **'ವ್ಯವಸಾಯ ವಲಯ'** ದಿಂದ **'ವಸತಿ ಉಪಯೋಗಕ್ಕೆ'** ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/- ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.

ಶ್ರೀ ದೇವರಾಜ್ ಅರಸ್ ಶಿಕ್ಷಣ ಸಂಸ್ಥೆ (ರಿ.), ಟಮಕ, ಕೋಲಾರ
ಶ್ರೀ ದೇವರಾಜ್ ಅರಸ್ ಉನ್ನತ ಶಿಕ್ಷಣ ಸಂಸ್ಥೆ ಮತ್ತು ಸಂಶೋಧನಾ ಕೇಂದ್ರ, ಕೋಲಾರ
4ನೇ ವರ್ಷದ ಪುಣ್ಯಸ್ಮರಣೆ

ಶ್ರೀ ಆರ್.ಎಲ್.ಜಾಲಪ್ಪ
ಜನನ: 19-10-1925 ನಿಧನ: 17-12-2021

ನಾಡು ಕಂಡ ಮುತ್ಸದ್ದಿ ರಾಜಕಾರಣಿ, ಶ್ರೀ ದೇವರಾಜ ಅರಸ್ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರು ಹಾಗೂ ಮಾಜಿ ಕೇಂದ್ರ ಸಚಿವರಾದ ಶ್ರೀ ಆರ್.ಎಲ್.ಜಾಲಪ್ಪ ಅವರ ಪುಣ್ಯಸ್ಮರಣೆಯ ದಿನದಂದು ಅವರಿಗೆ ನಮ್ಮ ಗೌರವ ನಮನ.
ನಿಮ್ಮ ವಸ್ತುನಿಷ್ಠ ಆಲೋಚನೆ, ಸಾಮಾಜಿಕ ಕಾಳಜಿ, ಮಾನವೀಯ ಅಂತಃಕರಣ ಹಾಗೂ ಅನನ್ಯ ಮಾರ್ಗದರ್ಶನಗಳೇ ನಮಗೆ ಸ್ಫೂರ್ತಿ. ನಿಮ್ಮ ಗುಣಾತ್ಮಕ ಚಿಂತನೆಗಳ ಸಾಕಾರ ನಮ್ಮ ಗುರಿ.

ನೆನಪಿನ ನುಡಿನಮನ:

ಜಿ ಹೆಚ್ ನಾಗರಾಜ
ಅಧ್ಯಕ್ಷರು

ಜೆ ರಾಜೇಂದ್ರ
ಉಪಾಧ್ಯಕ್ಷರು

ಕೆ ಜಿ ಹನುಮಂತರಾಜು
ಕಾರ್ಯದರ್ಶಿ

ಹಾಗೂ ಎಲ್ಲಾ ಟ್ರಸ್ಟಿಗಳು, ಶ್ರೀ ದೇವರಾಜ ಅರಸ್ ಶಿಕ್ಷಣ ಸಂಸ್ಥೆ(ರಿ.), ಟಮಕ, ಕೋಲಾರ

ಕೋಲಾರದಲ್ಲಿರುವ ಶೈಕ್ಷಣಿಕ ಘಟಕಗಳು:
ಶ್ರೀ ದೇವರಾಜ ಅರಸ್ ಉನ್ನತ ಶಿಕ್ಷಣ ಸಂಸ್ಥೆ ಮತ್ತು ಸಂಶೋಧನಾ ಕೇಂದ್ರ
ಶ್ರೀ ದೇವರಾಜ ಆರಸ್ ವೈದ್ಯಕೀಯ ಕಾಲೇಜು
ಆರ್.ಎಲ್.ಜಾಲಪ್ಪ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ
ಶ್ರೀ ದೇವರಾಜ ಅರಸ್ ಕಾಲೇಜ್ ಆಫ್ ನರ್ಸಿಂಗ್
ಸ್ಕೂಲ್ ಆಫ್ ಅಲೈಡ್ ಹೆಲ್ತ್ ಸೈನ್ಸಸ್
ಆರ್.ಎಲ್.ಜಾಲಪ್ಪ ಕಾಲೇಜ್ ಆಫ್ ಫಿಸಿಯೋಥೆರಪಿ
ಆರ್.ಎಲ್.ಜಾಲಪ್ಪ ಕಾಲೇಜ್ ಆಫ್ ಫಾರ್ಮಸಿ
ಸ್ಕೂಲ್ ಆಫ್ ಲಾ
ಆರ್.ಎಲ್.ಜಾಲಪ್ಪ ಕೇಂದ್ರೀಯ ಶಾಲೆ

ದೊಡ್ಡಬಳ್ಳಾಪುರದಲ್ಲಿರುವ ಶೈಕ್ಷಣಿಕ ಘಟಕಗಳು:
ಆರ್.ಎಲ್.ಜಾಲಪ್ಪ ಕೈಗಾರಿಕಾ ತರಬೇತಿ ಸಂಸ್ಥೆ
ಆರ್.ಎಲ್.ಜಾಲಪ್ಪ ತಾಂತ್ರಿಕ ಮಹಾವಿದ್ಯಾಲಯ
ಶ್ರೀ ದೇವರಾಜ ಅರಸ್ ಅಂ.ರಾ. ವಸತಿ ಶಾಲೆ
ಶ್ರೀ ದೇವರಾಜ ಅರಸ್ ಪ್ರೌಢಶಾಲೆ(ರಾಜ್ಯ ಪಠ್ಯಕ್ರಮ)
ಶ್ರೀ ದೇವರಾಜ ಅರಸ್ ಪಿ.ಯು ಕಾಲೇಜು
ಶ್ರೀ ದೇವರಾಜ ಅರಸ್ ವ್ಯವಹಾರ ನಿರ್ವಹಣಾ ಮಹಾವಿದ್ಯಾಲಯ
ಆರ್.ಎಲ್.ಜಾಲಪ್ಪ ಪಾಲಿಟೆಕ್ನಿಕ್
ಶ್ರೀ ದೇವರಾಜ ಅರಸ್ ಸಂಜೆ ಕಾಲೇಜು
ಜಾಲಪ್ಪ ಕಾನೂನು ಮಹಾವಿದ್ಯಾಲಯ

ಆರ್.ಎಲ್.ಜಾಲಪ್ಪನವರ ಕುಟುಂಬ ವರ್ಗ, ಅಭಿಮಾನಿಗಳು,
ಹಿತೈಷಿಗಳು, ಶೈಕ್ಷಣಿಕ ಘಟಕಗಳ ಮುಖ್ಯಸ್ಥರು, ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳು.

ನೈಋತ್ಯ ರೈಲ್ವೆ

ಅರ್ಜಿ ಅಧಿಸೂಚನೆ ಸಂ.: 565/STBA/12/2025

ಭಾರತದ ರಾಷ್ಟ್ರಪತಿಗಳ ಪರವಾಗಿ ಈ ಕೆಳ ಸಹಿದಾರರು, ನೈಋತ್ಯ ರೈಲ್ವೆಯ ಬೆಂಗಳೂರು ವಿಭಾಗದ ಈ ಕೆಳಗಿನ ರೈಲು ನಿಲ್ದಾಣದಲ್ಲಿ, ಸ್ಟೇಷನ್ ಟಿಕೇಟು ಬುಕ್ಕಿಂಗ್ ಏಜೆಂಟುಗಳಾಗಿ (ಎಸ್‌ಟಿಬಿಎ) ಕಮೀಷನ್ ಆಧಾರದ ಮೇರೆಗೆ ಪ್ರತೀ ನಿಲ್ದಾಣಗಳ ಎದುರು ಸೂಚಿಸಿರುವ ಅವಧಿಯವರೆಗೆ ಕಾಯ್ದಿರಿಸದ / ಸಾಮಾನ್ಯ ಟಿಕೇಟುಗಳನ್ನು ಅನ್‌ರಿಜರ್ವ್‌ಡ್ ಟಿಕೆಟ್ ಸಿಸ್ಟಮ್ (ಯುಟಿಎಸ್) ಮೂಲಕ ವಿತರಿಸುವ ಸಲುವಾಗಿ ತಮ್ಮನ್ನು ತೊಡಗಿಸಿಕೊಳ್ಳಲು ಮೊಹರು ಬಂದ್ ಮಾಡಲಾದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ನಿಲ್ದಾಣದ ಹೆಸರು	ಸ್ಟೇಷನ್ ಕೋಡ್	ಸ್ಟೇಷನ್ ವರ್ಗ	ಗುತ್ತಿಗೆಯ ಅವಧಿ
1.	ಹೀಲಲಿಗೆ	ಹೆಚ್‌ಎಲ್‌ಇ	ಎನ್‌ಎಸ್‌ಜಿ-6	03 ವರ್ಷಗಳು
2.	ಬೆಳಂದೂರು ರೋಡ್	ಬಿಎಲ್‌ಆರ್‌ಆರ್		

ಅರ್ಜಿಗಳನ್ನು ಸಲ್ಲಿಸಬೇಕಾದ ಕೊನೆಯ ದಿನಾಂಕ: 16.01.2026 ರಂದು 10:00 ಗಂಟೆಯಿಂದ 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ **www.swr.indianrailways.gov.in** ಗೆ ಲಾಗ್ ಆನ್ ಆಗಿ

PUB/741/AAMO/PRB/SWR/2025-26 ವರಿಷ್ಠ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು/ಬೆಂಗಳೂರು

ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ

South Western Railway - SWR | SWRRLY | SWRAILWAYHQ | sw_railways

---

ನಗರಸಭಾ ಕಾರ್ಯಾಲಯ, ಚಿಂತಾಮಣಿ
ಚಿಕ್ಕಬಳ್ಳಾಪುರ ಜಿಲ್ಲೆ

ಕಛೇರಿ ವಿಳಾಸ: ಬೆಂಗಳೂರು ರಸ್ತೆ, ವಾರ್ಡ್ 10, ಎನ್ ಆರ್ ಬಡಾವಣೆ ಚಿಂತಾಮಣಿ-563 125, ದೂರವಾಣಿ: 08154-252056/ ಸಹಾಯವಾಣಿ: 08154-252117, ಇ-ಮೇಲ್:itstaff_ulb_chintamanicity@yahoo.in, cmc.chintamani@gmail.com, ವೆಬ್‌ಸೈಟ್:www.chintamanicity.gov.in

ಸಂಖ್ಯೆ: ನಸಚಿ/ತಾಂಶಾ/ಸಿ.ಆರ್/112/2025-26 ದಿನಾಂಕ: 15.12.2025

ಇ-ಪ್ರಕ್ಯೂರ್‌ಮೆಂಟ್ ಮೂಲಕ ಕೆಜಿ, ದಸ್ತಾವೇಜಿನಲ್ಲಿ ಟೆಂಡರ್ ಅಧಿಸೂಚನೆ ಸಂಖ್ಯೆ: ನಸಚಿ/ತಾಶಾ/ಸಿಆರ್/112/2025-26 ದಿನಾಂಕ: 15.12.2025

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಪೌರಾಯುಕ್ತರು ನಗರಸಭೆ ಚಿಂತಾಮಣಿ ಚಿಕ್ಕಬಳ್ಳಾಪುರ ಜಿಲ್ಲೆ ಇವರು ಇ-ಪ್ರಕ್ಯೂರ್‌ಮೆಂಟ್ ಮೂಲಕ ಕೆಟಿಪಿಪಿ 2000 ಅಡಿಯಲ್ಲಿ ಕರ್ನಾಟಕ ರಾಜ್ಯದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೊಂದಾಯಿಸಿರುವ ಅರ್ಹ ಗುತ್ತಿಗೆದಾರರಿಂದ ಇಂಡೆಂಟ್ ಸಂಖ್ಯೆ: **(1)** DMA/2025-26/OW/WORK_INDENT52654, **(2)** DMA/2025-26/OW/WORK_INDENT52655, **(3)** DMA/2025-26/OW/WORK_INDENT52656 ಟೆಂಡರ್‌ನಲ್ಲಿ ಭಾಗವಹಿಸಲು ಷರತ್ತುಗಳಿಗೆ ಒಳಪಟ್ಟು ಆಹ್ವಾನಿಸಿರುತ್ತಾರೆ ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್‌ನಲ್ಲಿ ಸಂಪರ್ಕಿಸಬಹುದು. ಸೂಚನೆಗಳು ಕ್ರಮ ಸಂಖ್ಯೆ ಇ-ಪ್ರಕ್ಯೂರ್‌ಮೆಂಟ್‌ನಲ್ಲಿ **ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 30.12.2025** ರಂದು ಸಮಯ **ಸಂಜೆ 17:30 ಗಂಟೆಯವರೆಗೆ** ತಾಂತ್ರಿಕ ಬಿಡ್ ಇ-ಪ್ರಕ್ಯೂರ್‌ಮೆಂಟ್‌ನಲ್ಲಿ **ಟೆಂಡರ್ ತೆರೆಯುವ ದಿನಾಂಕ: 01.01.2026** ರಂದು ಸಮಯ ಬೆಳಗ್ಗೆ **11:30 ಗಂಟೆಗೆ** ತೆರೆಯಲಾಗುವುದು.

ಸಹಿ/- ಪೌರಾಯುಕ್ತರು, ನಗರಸಭೆ, ಚಿಂತಾಮಣಿ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:308/ಕೆಎಸ್‌ಎಂಸಿಎ/2025-26

ತರಬೇತಿ ನಿಲ್ಲಿಸಲಿದೆ ಜಕ್ಕೂರು ಏರೊಡ್ರಮ್!

ಮೂಲಸೌಕರ್ಯ ಕಲ್ಪಿಸದ ಸರ್ಕಾರ • ಮೈಸೂರಿಗೆ ಶಾಲೆ ಸ್ಥಳಾಂತರಿಸಲು ಚಿಂತನೆ

• ಆರ್.ಮಂಜುನಾಥ್

ಬೆಂಗಳೂರು: ವಿಮಾನ ಹಾರಾಟದ ತರಬೇತಿ ಪಡೆಯುವ ಉತ್ಸಾಹ ಸಾವಿರಾರು ಯುವಕರಲ್ಲಿ ಇದೆ. ಆದರೆ, ಇದನ್ನು ಪರಿಗಣಿಸಿ ಸೌಲಭ್ಯ ಕಲ್ಪಿಸಲು ಮುಂದಾಗದ ಸರ್ಕಾರ, ಜಕ್ಕೂರಿನಲ್ಲಿ ಇರುವ ವೈಮಾನಿಕ ತರಬೇತಿ ಶಾಲೆಯನ್ನೇ ಬೇರೆಡೆಗೆ ಸ್ಥಳಾಂತರಿಸಲು ಮುಂದಾಗಿದೆ.

'ವೈಮಾನಿಕ ತರಬೇತಿ ಶಾಲೆ ಮಾತ್ರ ಆರಂಭಿಸಬೇಕು' ಎಂಬ ಷರತ್ತಿನೊಂದಿಗೆ ಮೈಸೂರು ಮಹಾರಾಜರು, ರಾಜ್ಯ ಸರ್ಕಾರಕ್ಕೆ ಹಸ್ತಾಂತರ ಮಾಡಿದ್ದ ಈ ಜಾಗವನ್ನು ಬೇರೆ ಉದ್ದೇಶಕ್ಕೆ ನೀಡುವ ಪ್ರಯತ್ನ ನಡೆದಿದೆ. ರಿಯಲ್ ಎಸ್ಟೇಟ್ ಲಾಬಿಗೆ ಮಣಿದು, ತರಬೇತಿ ಶಾಲೆಯನ್ನು ಮೈಸೂರಿಗೆ ಸ್ಥಳಾಂತರಿಸುವ ಪ್ರಕ್ರಿಯೆ ಆರಂಭವಾಗಿದೆ. ಇದರಿಂದ ಮಹಾರಾಜರ ಆಶಯಕ್ಕೆ ಧಕ್ಕೆಯಾಗಲಿದೆ ಎಂಬ ಆತಂಕ ವ್ಯಕ್ತವಾಗಿದೆ.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ನಾಗರಿಕ ವಿಮಾನಯಾನದ ಪ್ರಧಾನ ನಿರ್ದೇಶಕರಿಗೆ 2025ರ ನವೆಂಬರ್ 29ರಂದು ಪತ್ರ ಬರೆದು, ಜಕ್ಕೂರಿನಲ್ಲಿರುವ ವೈಮಾನಿಕ ತರಬೇತಿ ಶಾಲೆಯನ್ನು ಮೈಸೂರಿಗೆ ಸ್ಥಳಾಂತರಿಸಲು ಅನುಮತಿ ಕೋರಲಾಗಿದೆ.

1948ರಲ್ಲಿ ಜಕ್ಕೂರಿನ 218 ಎಕರೆ ಪ್ರದೇಶವನ್ನು ಸ್ವಾಧೀನ ಪಡಿಸಿಕೊಂಡ ಅಂದಿನ ಮೈಸೂರು ಮಹಾರಾಜರು, ಅಲ್ಲಿ ಏರೊಡ್ರಮ್ ನಿರ್ಮಿಸಿದ್ದರು.

ಮುಖ್ಯಾಂಶಗಳು

- ತರಬೇತಿ ಶಾಲೆಗೆ ಬಳಸಲು ಷರತ್ತು ಹಾಕಿದ್ದ ಮಹಾರಾಜರು
- ಲಾಬಿಗೆ ಮಣಿದು ವಾಯುನೆಲೆಯನ್ನೇ ಮುಚ್ಚುವ ಹುನ್ನಾರ
- ಮಾದರಿ ಶಾಲೆಯಾಗಿಸಲು ಆಗ್ರಹ

1948ರ ಡಿಸೆಂಬರ್‌ನಲ್ಲಿ ಆಗಿನ ಪ್ರಧಾನಿ ಜವಾಹರಲಾಲ್ ನೆಹರು ಅವರು ಈ ವೈಮಾನಿಕ ತಾಣವನ್ನು ಉದ್ಘಾಟಿಸಿದ್ದರು. ಬಳಿಕ ವೈಮಾನಿಕ ತರಬೇತಿ ಶಾಲೆ ಆರಂಭಿಸಬೇಕು ಎಂಬ ಷರತ್ತಿನೊಂದಿಗೆ ಈ ಪ್ರದೇಶವನ್ನು ಮೈಸೂರು ಮಹಾರಾಜರು ರಾಜ್ಯ ಸರ್ಕಾರಕ್ಕೆ ಹಸ್ತಾಂತರ ಮಾಡಿದ್ದರು.

1949ರ ಮಾರ್ಚ್ 26ರಂದು ಸರ್ಕಾರಿ ವೈಮಾನಿಕ ತರಬೇತಿ ಶಾಲೆ (ಜಿಎಫ್‌ಟಿಎಸ್) ಆರಂಭವಾಗಿದ್ದು, ಇಲ್ಲಿ ತರಬೇತಿ ಪಡೆದ ನೂರಾರು ವಿದ್ಯಾರ್ಥಿಗಳು ಪೈಲಟ್‌ಗಳಾಗಿದ್ದಾರೆ. 1997ರ ನಂತರ ಇದರ ನಿರ್ವಹಣೆ, ಎಂಜಿನಿಯರ್‌ಗಳು, ಬೋಧಕರು, ವಿಮಾನಗಳು, ಇಂಧನ ಸೇರಿ ಒಂದೊಂದೇ ಸೌಲಭ್ಯಗಳು ಉಡುಗಿದವು. ಅಂದಿನಿಂದಲೂ ಇವುಗಳನ್ನು ಬಗೆಹರಿಸುವುದಾಗಿ ಸರ್ಕಾರ ಭರವಸೆ ನೀಡುತ್ತಲೇ ಇದೆ. ಆದರೆ, ಇದುವರೆಗೂ ಕಾರ್ಯಗತವಾಗಿಲ್ಲ. ಈಗ ಅದು ಮುಚ್ಚುವ ಹಂತಕ್ಕೆ ಬಂದಿದೆ.

'ಬೆಂಗಳೂರಿನಲ್ಲಿ ಎಲ್ಲ ರೀತಿಯ ಅವಕಾಶಗಳು ಇವೆ. ರನ್‌ವೇ ಅನ್ನು 3000 ಅಡಿಯವರೆಗೆ ನಿರ್ಮಿಸಲು ಅವಕಾಶವಿದ್ದರೂ ಸರ್ಕಾರ, ಜಿಎಫ್‌ಟಿಎಸ್ ಅನ್ನು ಏಕೆ ಸ್ಥಳಾಂತರಿಸುತ್ತಿದೆಯೋ ಗೊತ್ತಿಲ್ಲ. ಪೈಲಟ್‌ಗಳಾಗಬೇಕೆಂಬ ಕನಸು ಹೊತ್ತವರಿಗೆ ಸರ್ಕಾರ ಆಸರೆಯಾಗಬೇಕಿದೆ. ನೂರಾರು ಪೈಲಟ್‌ಗಳು ಇಲ್ಲಿಂದ ಹೊರಬಂದಿದ್ದಾರೆ' ಎಂದು ಕ್ಯಾಪ್ಟನ್ ಮುರಳಿ ರಾಮಕೃಷ್ಣ ಹೇಳಿದರು.

ಮುರಳಿಯವರು ಜಿಎಫ್‌ಟಿಎಸ್‌ನಲ್ಲೇ ಕಲಿತು, ಪೈಲಟ್ ಆಗಿ ಇದೀಗ ಅವರದ್ದೇ ಮೂರು ವಿಮಾನಗಳನ್ನು ಜಕ್ಕೂರು ವೈಮಾನಿಕ ಪ್ರದೇಶದಿಂದಲೇ ಕಾರ್ಯಾಚರಣೆ ನಡೆಸುತ್ತಿದ್ದಾರೆ. 'ಜಿಎಫ್‌ಟಿಎಸ್‌ನಲ್ಲಿ ಎಲ್ಲ ರೀತಿಯ ಅವಕಾಶಗಳಿವೆ. ಮೂಲಸೌಕರ್ಯವನ್ನು ನೀಡಿದರೆ, ದೇಶದಲ್ಲೇ ಅತ್ಯುತ್ತಮ ವೈಮಾನಿಕ ತರಬೇತಿ ಕೇಂದ್ರವಾಗುವುದರಲ್ಲಿ ಸಂಶಯವಿಲ್ಲ' ಎಂದರು.

'ಮೈಸೂರಿನಲ್ಲಿ ಎಲ್ಲವನ್ನೂ ಹೊಸದಾಗಿ ಮಾಡುವ ಬದಲು ಜಕ್ಕೂರಿನಲ್ಲೇ ಎಲ್ಲ ರೀತಿಯ ಸೌಲಭ್ಯ ಕಲ್ಪಿಸಿದರೆ ಹೆಚ್ಚು ಅನುಕೂಲವಾಗುತ್ತದೆ' ಎಂದು ಅಭಿಪ್ರಾಯಪಟ್ಟರು.

ಜಕ್ಕೂರು ವೈಮಾನಿಕ ತರಬೇತಿ ಶಾಲೆ

ಹೆಲಿಕಾಪ್ಟರ್‌ಗಳ ತಾಣ

ಜಕ್ಕೂರು ವೈಮಾನಿಕ ಪ್ರದೇಶದಿಂದ ಮುಖ್ಯಮಂತ್ರಿ ಸೇರಿದಂತೆ ರಾಜ್ಯದ ಪ್ರಮುಖರು ಹೆಲಿಕಾಪ್ಟರ್‌ನಲ್ಲಿ ವಿವಿಧ ಭಾಗಗಳಿಗೆ ಪ್ರಯಾಣಿಸುತ್ತಾರೆ. ಕೆಲವು ಖಾಸಗಿ ಸಂಸ್ಥೆಗಳು ಏಳು ಆಸನ ವ್ಯವಸ್ಥೆಯುಳ್ಳ ವಿಮಾನವನ್ನು ಇಲ್ಲಿಂದಲೇ ಕಾರ್ಯಾಚರಣೆ ಮಾಡುತ್ತಿದ್ದಾರೆ. ಜಿಎಫ್‌ಟಿಎಸ್ ಮುಚ್ಚುವ ಜೊತೆಗೆ, ವಿಮಾನ, ಹೆಲಿಕಾಪ್ಟರ್‌ಗಳ ಹಾರಾಟವನ್ನೂ ಇಲ್ಲಿಂದ ಮುಕ್ತಗೊಳಿಸುವ ಹುನ್ನಾರ ನಡೆಸಲಾಗಿದೆ ಎನ್ನಲಾಗಿದೆ.

ಜಕ್ಕೂರು ವೈಮಾನಿಕ ಪ್ರದೇಶದ ಸುತ್ತಮುತ್ತ ಬೃಹತ್ ಕಟ್ಟಡಗಳ ನಿರ್ಮಾಣಕ್ಕೆ ಅವಕಾಶ ಇಲ್ಲ. ಅಲ್ಲದೆ, ಈಗಿರುವ ಕೆಲವು ಬೃಹತ್ ಕಟ್ಟಡಗಳನ್ನು ತೆರವುಗೊಳಿಸಲು ಸೂಚಿಸಲಾಗಿದೆ. ಹೀಗಾಗಿ, ಜಿಎಫ್‌ಟಿಎಸ್‌ನೊಂದಿಗೆ ಜಕ್ಕೂರು ವೈಮಾನಿಕ ಪ್ರದೇಶವನ್ನೇ ಮುಚ್ಚಲು ಯೋಜಿಸಲಾಗಿದೆ. ಖಾಸಗಿ ಬಿಲ್ಡರ್‌ಗಳ ಒತ್ತಾಸೆ ಹಾಗೂ ಐಎಎಸ್ ಅಧಿಕಾರಿಗಳ ಲಾಬಿಯೂ ಇದಕ್ಕೆ ಕಾರಣ. ಜಕ್ಕೂರು ವೈಮಾನಿಕ ಪ್ರದೇಶದಲ್ಲಿ ಕ್ರೀಡಾ ಸಂಕೀರ್ಣ, ಗಾಲ್ಫ್ ಕೋರ್ಸ್ ಸೇರಿದಂತೆ ಮನರಂಜನೆ ತಾಣ ನಿರ್ಮಿಸುವ ಯೋಜನೆ ಹೊಂದಲಾಗಿದೆ ಎನ್ನಲಾಗಿದೆ.

ವಿದ್ಯಾರ್ಥಿಗಳಿಗೆ ಅನುಕೂಲ

'ಸಮಾಜ ಕಲ್ಯಾಣ ಇಲಾಖೆಯಲ್ಲಿರುವ ಶಿಕ್ಷಣ ಯೋಜನೆಯಡಿ ಪೈಲಟ್ ಶಿಕ್ಷಣವನ್ನು ಪರಿಶಿಷ್ಟ ಜಾತಿ ಮತ್ತು ಪಂಗಡದ ವಿದ್ಯಾರ್ಥಿಗಳಿಗೆ ಜಿಎಫ್‌ಟಿಎಸ್‌ನಲ್ಲಿ ನೀಡಬಹುದು. ಅಲ್ಲದೆ, ಪೈಲಟ್ ಕೋರ್ಸ್‌ಗೆ ಸಾಕಷ್ಟು ಬೇಡಿಕೆ ಇರುವುದರಿಂದ ಸರ್ಕಾರ ಲಾಭವನ್ನೂ ಗಳಿಸಬಹುದು' ಎಂದು ತಜ್ಞರು ಅಭಿಪ್ರಾಯಪಟ್ಟರು.

'ಜಿಎಫ್‌ಟಿಎಸ್‌ನಲ್ಲಿ ಮೂಲ ಸೌಕರ್ಯಗಳ ಕೊರತೆ ಇದೆ ಎಂದು ಐದಾರು ವರ್ಷಗಳಿಂದ, ಇಲ್ಲಿರುವ ಸುಮಾರು 75 ವಿದ್ಯಾರ್ಥಿಗಳಿಗೆ ತರಬೇತಿಯನ್ನೇ ನೀಡುತ್ತಿಲ್ಲ. ಎರಡು ವರ್ಷದ ಕೋರ್ಸ್‌ನಲ್ಲಿ ಮೂರು ತಿಂಗಳು ಸತತವಾಗಿ ಶಿಕ್ಷಣ ನೀಡುವ ವ್ಯವಸ್ಥೆ ಇಲ್ಲ. ಇದನ್ನು ಸರ್ಕಾರ ಪರಿಗಣಿಸಿ, ಎಲ್ಲ ರೀತಿಯ ವ್ಯವಸ್ಥೆ ಕಲ್ಪಿಸಬೇಕು' ಎಂದಿದ್ದಾರೆ.

ಜ.10ಕ್ಕೆ 'ಮ್ಯೂಸಿಕ್ ಫಾರ್ ಮೀಲ್ಸ್'

ಬೆಂಗಳೂರು: ಇಳಯರಾಜ ಅವರ ಸಂಗೀತ ಪಯಣ ಆರಂಭವಾಗಿ 50 ವರ್ಷ, 'ಇಸ್ಕಾನ್' ಸಂಸ್ಥೆಯ ಅಕ್ಷಯ ಪಾತ್ರ ಫೌಂಡೇಷನ್ ಚಟುವಟಿಕೆಗಳು ಆರಂಭವಾಗಿ 25 ವರ್ಷವಾದ ನೆನಪಿನಲ್ಲಿ 'ಮ್ಯೂಸಿಕ್ ಫಾರ್ ಮೀಲ್ಸ್' ಸಂಗೀತ ಸಂಜೆಯನ್ನು ನಗರದಲ್ಲಿ ಜನವರಿ 10ರಂದು ಹಮ್ಮಿಕೊಳ್ಳಲಾಗಿದೆ.

ಕರ್ನಾಟಕದಲ್ಲಿ ಮಾತ್ರವಲ್ಲದೇ ದೇಶದ ನಾನಾ ಭಾಗಗಳಲ್ಲಿ ಶಾಲಾ ಮಕ್ಕಳಿಗೆ ಬಿಸಿಯೂಟ ನೀಡುವ ಅಕ್ಷಯಪಾತ್ರ ಚಟುವಟಿಕೆಗೆ ಆರ್ಥಿಕ ಬಲ ತುಂಬುವ ಭಾಗವಾಗಿ ಅಂದು ಸಂಜೆ 7ರಿಂದ 9ರವರೆಗೆ ನಗರದ ತುಮಕೂರು ರಸ್ತೆಯಲ್ಲಿರುವ ಬೆಂಗಳೂರು ಅಂತಾರಾಷ್ಟ್ರೀಯ ಪ್ರದರ್ಶನ ಕೇಂದ್ರದಲ್ಲಿ (ಬಿಐಇಸಿ) ಇಳಯರಾಜ ಹಾಗೂ ಅವರ ತಂಡ ಕಾರ್ಯಕ್ರಮ ನಡೆಸಿಕೊಡಲಿದೆ.

'ಮಕ್ಕಳಿಗೆ ಪೌಷ್ಟಿಕ ಆಹಾರ ನೀಡುವ ಇಸ್ಕಾನ್, ಮಕ್ಕಳು ಶಿಕ್ಷಣ ಪಡೆಯಲು ಪ್ರೇರೇಪಿಸುತ್ತಿದೆ. ಈ ಬಗ್ಗೆ ನನಗೂ ಅಭಿಮಾನವಿದೆ. ಮ್ಯೂಸಿಕ್ ಫಾರ್ ಮೀಲ್ಸ್ ಎನ್ನುವ ಕಾರ್ಯಕ್ರಮದ ಪ್ರಸ್ತಾವನೆ ಇಟ್ಟಾಗ ತಕ್ಷಣವೇ ಒಪ್ಪಿಗೆ ನೀಡಿದೆ' ಎಂದು ಇಲ್ಲಿನ ಇಸ್ಕಾನ್‌ನಲ್ಲಿ ಸೋಮವಾರ ನಡೆದ ಮಾಧ್ಯಮ ಸಂವಾದದಲ್ಲಿ ಇಳಯರಾಜ ಹೇಳಿದರು.

ಫೌಂಡೇಷನ್ ಉಪಾಧ್ಯಕ್ಷ ಚಂಚಲಪತಿದಾಸ, 2000ದಲ್ಲಿ ಆರಂಭವಾದ ಈ ಕಾರ್ಯಕ್ರಮದಡಿ ಈಗ ನಿತ್ಯ 23.5 ಲಕ್ಷ ಮಕ್ಕಳಿಗೆ ಪೌಷ್ಟಿಕ ಆಹಾರ ನೀಡಲಾಗುತ್ತಿದೆ. ಪ್ರಧಾನ ಮಂತ್ರಿ ಪೋಷಣ್ ಯೋಜನೆಯ ಭಾಗವಾಗಿ ಕೆಲಸ ಮಾಡುತ್ತಿರುವ ಹೆಮ್ಮೆಯಿದೆ. ಈಗ ಈ ಕಾರ್ಯಕ್ರಮ ಆಯೋಜಿಸುತ್ತಿರುವುದರಿಂದ ಈ ಅಭಿಯಾನಕ್ಕೆ ಬಲ ಬರಲಿದೆ' ಎಂದರು.

ಎಐಟಿಯುಸಿ: ಬಾಬು ಮ್ಯಾಥ್ಯೂ ಆಯ್ಕೆ

ಬೆಂಗಳೂರು: ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್‌ನ (ಎಐಟಿಯುಸಿ) ರಾಜ್ಯ ಘಟಕದ ಅಧ್ಯಕ್ಷರಾಗಿ ಬಾಬು ಮ್ಯಾಥ್ಯೂ ಅವರು ಆಯ್ಕೆಯಾಗಿದ್ದಾರೆ.

ಬೆಂಗಳೂರಿನಲ್ಲಿ ಮಂಗಳವಾರ ನಡೆದ ಎಐಟಿಯುಸಿ ರಾಜ್ಯ ಸಮಿತಿ ಸಭೆಯಲ್ಲಿ ಬಾಬು ಮ್ಯಾಥ್ಯೂ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ ಎಂದು ಎಐಟಿಯುಸಿ ಪ್ರಧಾನ ಕಾರ್ಯದರ್ಶಿ ವಿಜಯಭಾಸ್ಕರ್ ಡಿ.ಎ. ತಿಳಿಸಿದ್ದಾರೆ.

Prestige GROUP
Add Prestige to your life

PUBLIC NOTICE
(Splitting of Environmental Clearance)

This is to inform the general public that the Environmental Clearance (EC) granted by the State Environment Impact Assessment Authority (SEIAA), Karnataka to M/s Prestige Realty Ventures for the Prestige Tech Cloud Project located at Sy. No. 13, Navarathna Agrahara Village, Sadahalli Gate, Devanahalli Taluk, Bengaluru Rural District, vide File No. SEIAA 06 CON 2015 dated 17.12.2015 and its corrigendum dated 18.05.2022, has been formally split by SEIAA.

Based on the proposal submitted through Proposal No. SIA/KA/INFRA2/471982/2025 , SEIAA in its meeting held on 04.11.2025 has approved the splitting of the EC as under:

- M/s Prestige Realty Ventures Retains 24 Acres 18.15 Guntas along with the corresponding built-up area and associated environmental components as per revised details.
- M/s NTT Global Data Centers BLR4 Private Limited Allotted 8 Acres 21.85 Guntas, and all applicable EC conditions issued earlier shall also apply to the transferee entity along with additional environmental safeguards stipulated by SEIAA.

All other terms and conditions of the EC issued on 17.12.2015 and corrigendum dated 18.05.2022 remain unchanged.

Prestige Realty Ventures
Prestige Falcon Towers, No.19, Brunton Road,
Bangalore -560025

CREDAI BENGALURU

ನಡುರಸ್ತೆಯಲ್ಲೇ ವ್ಯಕ್ತಿಗೆ ಹೃದಯಾಘಾತ ಬೇಡಿದರೂ ನೆರವಿಗೆ ಬಾರದ ಜನರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬನಶಂಕರಿಯ ಇಟ್ಟುಮಡು ಬಳಿ ಬೈಕ್ ಚಲಾಯಿಸಿಕೊಂಡು ತೆರಳುತ್ತಿದ್ದ ವ್ಯಕ್ತಿಗೆ ಮಾರ್ಗಮಧ್ಯೆಯೇ ಹೃದಯಾಘಾತವಾಗಿ ಸ್ಥಳದಲ್ಲೇ ಮಂಗಳವಾರ ಮುಂಜಾನೆ ಮೃತಪಟ್ಟಿದ್ದಾರೆ.

ಇಟ್ಟುಮಡುವಿನ ವೆಂಕಟರಮಣನ್ (34) ಮೃತಪಟ್ಟವರು.

ವೆಂಕಟರಮಣನ್ ಅವರ ಪತ್ನಿ ಸಹಾಯಕ್ಕಾಗಿ ಸಿಕ್ಕ ಸಿಕ್ಕ ವಾಹನಗಳನ್ನು ಅಡ್ಡ ಹಾಕಿದ್ದರು. ಆದರೆ, ಯಾರೂ ವಾಹನ ನಿಲುಗಡೆ ಮಾಡಿ ನೆರವಿಗೆ ಬರಲಿಲ್ಲ ಎಂಬ ಆರೋಪವಿದೆ.

ಮಂಗಳವಾರ ಮುಂಜಾನೆ ವೆಂಕಟರಮಣನ್ ಅವರಿಗೆ ಎದೆನೋವು ಕಾಣಿಸಿಕೊಂಡಿತ್ತು. ಆತಂಕಗೊಂಡಿದ್ದ ಅವರ ಪತ್ನಿ ರೂಪಾ ಅವರು ಆಸ್ಪತ್ರೆಗೆ ಹೋಗುವುದು ಸೂಕ್ತವೆಂದು ಹೇಳಿದ್ದರು. ಪತ್ನಿಯೊಂದಿಗೆ ದ್ವಿಚಕ್ರ ವಾಹನದಲ್ಲೇ ಕತ್ರಿಗುಪ್ಪೆ ಜನತಾ ಬಜಾರ್ ಸಮೀಪದ ಆಸ್ಪತ್ರೆಗೆ ತೆರಳಿದ್ದರು. ಮನೆಯಿಂದ ಸ್ವಲ್ಪ ದೂರು ಕ್ರಮಿಸಿದಾಗಲೇ ವೆಂಕಟರಮಣನ್ ಅವರಿಗೆ ಲಘು ಹೃದಯಾಘಾತವಾಗಿತ್ತು. ಆ ಆಸ್ಪತ್ರೆಯಲ್ಲಿ ವೈದ್ಯರಿಲ್ಲದ ಕಾರಣಕ್ಕೆ ಬೇರೊಂದು ಆಸ್ಪತ್ರೆಗೆ ದಂಪತಿ ಹೊರಟಿದ್ದರು. ಅಲ್ಲಿಯೂ ಆಂಬುಲೆನ್ಸ್ ಸಿಗದ ಕಾರಣಕ್ಕೆ ಬೈಕ್‌ನಲ್ಲೇ ಆಸ್ಪತ್ರೆಗೆ ತೆರಳುತ್ತಿದ್ದರು. ಕದಿರೇನಹಳ್ಳಿ ಸಮೀಪ ಬೈಕ್‌ನಲ್ಲಿ ತೆರಳುತ್ತಿದ್ದ ವೇಳೆ, ಮತ್ತೆ ತೀವ್ರ ಹೃದಯಾಘಾತವಾದ ಕಾರಣ, ವೆಂಕಟರಮಣನ್ ರಸ್ತೆ ಮಧ್ಯೆ ಕುಸಿದು ಬಿದ್ದಿದ್ದರು. ನೋವಿನಿಂದ ಒದ್ದಾಡುತ್ತಿದ್ದರೂ, ಸುತ್ತಮುತ್ತಲಿದ್ದ ಜನರು ನೆರವಿಗೆ ಬರಲಿಲ್ಲ ಎನ್ನಲಾಗಿದೆ.

ಪತ್ನಿ ರೂಪಾ ಅವರು ರಸ್ತೆಯಲ್ಲಿ ಹೋಗುತ್ತಿದ್ದ ವಾಹನ ಸವಾರರಿಗೆ ಕೈ ಮುಗಿದು ಬೇಡಿದರೂ ಸಹಾಯಕ್ಕೆ ಯಾರೂ ಬಂದಿಲ್ಲ ಎಂದು ಕುಟುಂಬಸ್ಥರು ನೋವು ತೋಡಿಕೊಂಡಿದ್ದಾರೆ.

ವೆಂಕಟರಮಣನ್ ಅವರ ಎರಡೂ ಕಣ್ಣುಗಳನ್ನು ದಾನ ಮಾಡಲಾಗಿದೆ.

ವೆಂಕಟರಮಣನ್

ಇಂದು ನೀರು ಸರಬರಾಜಿನಲ್ಲಿ ವ್ಯತ್ಯಯ

ಬೆಂಗಳೂರು: ಕಾವೇರಿ 5ನೇ ಹಂತದ ನೀರು ಸರಬರಾಜು ಯೋಜನೆಯಲ್ಲಿ ಸೋರಿಕೆ ಕಂಡುಬಂದಿರುವ ಕಾರಣ ತುರ್ತು ದುರಸ್ತಿಗೆ ಬೆಂಗಳೂರು ಜಲಮಂಡಳಿ ಮುಂದಾಗಿದೆ. ಇದರಿಂದ ಬುಧವಾರ(ಡಿ.17) ನಗರದ ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ಜಲಮಂಡಳಿ ಅಧ್ಯಕ್ಷ ಡಾ.ವಿ. ರಾಮ್ ಪ್ರಸಾತ್ ಮನೋಹರ್ ತಿಳಿಸಿದ್ದಾರೆ.

ಕಾವೇರಿ 5ನೇ ಹಂತದ 3 ಸಾವಿರ ಎಂಎಂ ವ್ಯಾಸದ ಪೈಪ್‌ಲೈನ್‌ಗೆ ಹಾನಿಯಾಗಿ ಸೋರಿಕೆಯಾಗುತ್ತಿದೆ. ದುರಸ್ಥಿ ಕಾಮಗಾರಿ ಕೈಗೊಂಡಿರುವ ಕಾರಣ ಬೆಳಿಗ್ಗೆ 7ರಿಂದ ರಾತ್ರಿ 10ರವರೆಗೆ ನೀರು ಸರಬರಾಜು ಇಲ್ಲ ಎಂದು ತಿಳಿಸಿದ್ಧಾರೆ.

ಅನಂತಪುರ, ದೊಡ್ಡಬೆಟ್ಟಹಳ್ಳಿ, ಚಿಕ್ಕಬೆಟ್ಟಹಳ್ಳಿ ಹಾರೋಹಳ್ಳಿ, ಕೆಂಚನಹಳ್ಳಿ, ಗೋವಿಂದಪುರ, ವಾಸುದೇವಪುರ, ಮಂಚೇನಹಳ್ಳಿ, ಕಟ್ಟಿಗೇನಹಳ್ಳಿ, ಶ್ರೀನಿವಾಸಪುರ, ಬೆಳ್ಳಳ್ಳಿ, ತಿರುಮೇನಹಳ್ಳಿ, ಚೊಕ್ಕನಹಳ್ಳಿ, ದಾಸರಹಳ್ಳಿ, ರಾಚೇನಹಳ್ಳಿ, ಥಣಿಸಂದ್ರ, ಹೊರಮಾವು, ಅಗರ, ಅಮಾನಿ ಭೈರತಿ ಖಾನೆ, ಗೆದ್ದಲಹಳ್ಳಿ, ಕೊತ್ತನೂರು, ಕೊತ್ತನೂರು ನಾರಾಯಣಪುರ, ಎನ್ ನಾಗೇನಹಳ್ಳಿ, ಕೈಲಾಸನಹಳ್ಳಿ, ಬೈರತಿ, ಬಿಳಿಶಿವಹಳ್ಳಿ, ಬೆಳ್ಳಂದೂರು ಅಮಾನಿ ಕೆರೆ, ಬೆಳತ್ತೂರು, ಚನ್ನಸಂದ್ರ, ದೇವರ ಬೀಸನಹಳ್ಳಿಯಲ್ಲಿ ವ್ಯತ್ಯಯವಾಗಲಿದೆ.

ಗುಂಜೂರು, ಅಗದೂರು, ಕಾಡ ಬೀಸನಹಳ್ಳಿ, ಕಾಯಮ್ಮನ ಅಗ್ರಹಾರ, ಕುಂಬೇನ ಅಗ್ರಹಾರ, ನಾಗೋಂಡಹಳ್ಳಿ, ಪಣತ್ತೂರು, ರಾಮಗೊಂಡನಹಳ್ಳಿ, ಸಿದ್ದಾಪುರ, ಸೋರಹುಣಸೆ, ತುಬರಹಳ್ಳಿ, ವರ್ತೂರು, ಕಲ್ಕರೆ, ಹೊರಮಾವು. ಕೆ. ಚನ್ನಸಂದ್ರ, ವಾರಣಾಸಿ, ವಸಂತಪುರ, ಉಲ್ಲಾಳ ಸೋಣ್ಣೆನಹಳ್ಳಿ, ಗಾಣಾಕಲ್ಲು, ಹೆಮ್ಮಿಗೆಪುರ, ಸೋಮಪುರ, ವಾರಸಂದ್ರ, ಲಿಂಗದೀರನಹಳ್ಳಿ, ಹೊಸಹಳ್ಳಿ, ಅರೇಹಳ್ಳಿ, ವಡ್ಡರಪಾಳ್ಯ ಉತ್ತರಹಳ್ಳಿ, ಸುಬ್ರಮಣ್ಯಪುರದಲ್ಲಿ ನೀರಿನ ಪೂರೈಕೆ ಇರುವುದಿಲ್ಲ.

ಗುಬ್ಬಲಾಳ, ಗಿಡದಕೋನೆನಹಳ್ಳಿ, ತುರಹಳ್ಳಿ, ಆಲಹಳ್ಳಿ, ಅಂಬಲಿಪುರ, ಅಂಜನಾಪುರ, ಬಸಪುರ, ಬಸವನಪುರ, ಬೇಗೂರು, ಬೆಳ್ಳಂದೂರು, ಚಂದ್ರಶೇಖರ ಪುರ, ದೊಡ್ಡಕಲ್ಲಸಂದ್ರ, ಗೊಲ್ಲಹಳ್ಳಿ, ಗೊಟ್ಟಿಗೆರೆ, ಅರಳೂರು ಜುನಸಂದ್ರ, ಕೈಕೊಂಡನಹಳ್ಳಿ, ಕಾಳೇನ ಅಗ್ರಹಾರ, ಕಂಬತ್ತಹಳ್ಳಿ, ಕಮ್ಮನಹಳ್ಳಿ, ಕಸವನಹಳ್ಳಿ, ಕೂಡಲು, ಪರಪ್ಪನ ಅಗ್ರಹಾರ, ಪಿಳ್ಳಗಾನ ಹಳ್ಳಿ, ರಘುವನಹಳ್ಳಿ, ತಲಘಟ್ಟಪುರ, ತಿಪ್ಪಸಂದ್ರ, ವಾಜರಹಳ್ಳಿ, ಯಲೇನಹಳ್ಳಿ, ಭರತೇನ ಅಗ್ರಹಾರ, ಬೋಗನಹಳ್ಳಿ, ಚಿಕ್ಕಬೆಳ್ಳಂದೂರು, ಚಿಕ್ಕತೇಗೂರು, ದೊಡ್ಡಕನ್ನಹಳ್ಳಿ, ದೊಡ್ಡತೆಗೂರು, ನಾಗನಾಥಪುರ, ಅಬ್ಬಿಗೆರೆ, ಚಿಕ್ಕಸಂದ್ರ, ಶೆಟ್ಟಹಳ್ಳಿ, ಕರಿಹೋಬನ ಹಳ್ಳಿ, ಅಂಧರಹಳ್ಳಿ, ಮ್ಯಾಡರಹಳ್ಳಿ, ದೊಡ್ಡಬಿದರಕಲ್ಲು, ಲಿಂಗಧೀರನಹಳ್ಳಿ ಬಿ, ಹೇರೋಹಳ್ಳಿ, ಹೊಸಹಳ್ಳಿಯಲ್ಲಿ ನೀರಿನ ವ್ಯತ್ಯಯ ಉಂಟಾಗಲಿದೆ.

ನಗರದಲ್ಲಿ ಇಂದು

ಟಿ.ಕೆ. ಅನಂತನಾರಾಯಣ ಅವರ 'ಕನ್ನಡ ಶಬ್ದಾರ್ಥ ಕೋಶ' ಪುಸ್ತಕ ಬಿಡುಗಡೆ: ಅತಿಥಿಗಳು: ಗೊ.ರು. ಚನ್ನಬಸಪ್ಪ, ವಿಶ್ವೇಶ್ವರ ಭಟ್, ಡಾ.ನಾ. ಸೋಮೇಶ್ವರ, ಆರತಿ ಎಚ್.ಎನ್., ಸ್ಥಳ: ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 10

ಎಸ್.ಎನ್. ಪ್ರಶಾಂತ್ ಚಂದ್ರ ಅವರ 'ಕಂಪೆಡಿಯಮ್ ಆನ್ ಕಮರ್ಷಿಯಲ್ ಕೋರ್ಟ್ಸ್ ಆ್ಯಕ್ಟ್-2015' ಪುಸ್ತಕ ಬಿಡುಗಡೆ: ಅತಿಥಿಗಳು: ಕೆ. ಶಶಿಕಿರಣ್ ಶೆಟ್ಟಿ, ಡಿ.ಎಂ. ಹೆಗಡೆ, ವಿವೇಕ್ ಸುಬ್ಬಾರೆಡ್ಡಿ, ಆಯೋಜನೆ: ಬೆಂಗಳೂರು ವಕೀಲರ ಸಂಘ, ಸ್ಥಳ: ಹೈಕೋರ್ಟ್ ಯೂನಿಟ್, ಹಾಲ್ ನಂ. 1, ಮಧ್ಯಾಹ್ನ 1.45

ನಾಟಕೋತ್ಸವ: ಉದ್ಘಾಟನೆ: ಶ್ರೀನಿವಾಸ್, 'ನನ್ನವಳ ಕಾಗದ' ನಾಟಕ ಪ್ರದರ್ಶನ: ನಿರ್ದೇಶನ: ರತ್ನಮ್ಮ ಆರ್., 'ಕನಸಿನ ರಾಣಿ' ನಾಟಕ ಪ್ರದರ್ಶನ: ನಿರ್ದೇಶನ: ಆರ್. ಸುಹಾಸ್, ಆಯೋಜನೆ: ಸಿಂಧು ಭೈರವಿ ಕಲಾ ತಂಡ ಟ್ರಸ್ಟ್, ಸ್ಥಳ: ನಿರಾಶ್ರಿತರ ಪರಿಹಾರ ಕೇಂದ್ರ, ಮಾಗಡಿ ರಸ್ತೆ, ಮಧ್ಯಾಹ್ನ 2ರಿಂದ

ಪ್ರಾರಂಭೋತ್ಸವ: ಉದ್ಘಾಟನೆ: ಬರಗೂರು ರಾಮಚಂದ್ರಪ್ಪ, ಉಪಸ್ಥಿತಿ: ಗಾಯಿತ್ರಿ, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಅತಿಥಿಗಳು: ಬಲವಂತರಾವ್ ಪಾಟೀಲ್, ಬನಶಂಕರಿ ವಿ. ಅಂಗಡಿ, ಶ್ರೀನಿವಾಸ್ ಜಿ. ಕಪ್ಪಣ್ಣ, ಎಲ್.ಬಿ. ಶೇಖ್ ಮಾಸ್ತರ, ಬಿ. ನೀಲಮ್ಮ, ಆರ್. ಚಂದ್ರಶೇಖರ್, ಆಯೋಜನೆ: ಅಖಿಲ ಕರ್ನಾಟಕ ವೃತ್ತಿ ನಾಟಕ ಕಂಪನಿ ಸಮಗ್ರ ಕಲಾವಿದರ ಒಕ್ಕೂಟ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಮಧ್ಯಾಹ್ನ 2.30

ಮಾರ್ಗಶೀರ್ಷೋತ್ಸವ-2025: ನಾಮಸಂಕೀರ್ತನೆ: ಮೋಹನೂರ್ ಶ್ರೀಕಾಂತ್ ಕೌಂಡಿನ್ಯ, ಜ್ಞಾನೇಶ್ವರ್ ರಾಮಕೃಷ್ಣನ್ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ಸುರಭಾರತೀ, ಎಚ್‌ಆರ್‌ಬಿಆರ್ ಲೇಔಟ್, ಸಂಜೆ 6.30ರಿಂದ

National Dairy Development Board
PB No. 40, Anand, Gujarat-388001, Tel: 02692-260 148/149/160 Fax: 02692-260 159
Website: http://www.nddb.coop, Email: purchase@nddb.coop
INVITATION FOR BIDS (IFB) / LOCAL COMPETITIVE BIDDING (LCB)

Bids are invited on behalf of Service Recipients/ NDDB from eligible bidders for the works listed below:

Sl. No.	Description of Works/ Bid Reference	Estd.Cost (₹) incl GST /Duration	Event Start / Close Date	Bid Submission / Opening Date & Time
A	Civil, Structural, Water Supply, Sanitary & Other Misc. works including Internal Electrification works for:			
I	5 LLPD LMP Dairy Plant at Davanagere, Karnataka. NDDB/HO/Purchase/85/25-26/ET/85 [Civil-DAVANAGERE-2]	7000 Lakh / 12 Months	20.12.25 12.01.26	12.01.26 15:00 hrs. 12.01.26 15:30 hrs.
II	Boundary wall & other miscellaneous works for Dairy Plant and CFP at Kuppam, Andhra Pradesh. NDDB/HO/Purchase/86/25-26/ET/86 [Civil-KUPPAM]	297 Lakh / 08 Months	19.12.25 09.01.26	09.01.26 15:00 hrs. 09.01.26 15:30 hrs.
III	Specialized TPO Membrane Waterproofing on Shell Roof and Associated Civil Works at NDDB, Mumbai. NDDB/HO/Purchase/87/25-26/ET/87 [Waterproof-MUMBAI]	100 Lakh/ 04 Months	18.12.25 08.01.26	08.01.26 15:00 hrs. 08.01.26 15:30 hrs.
B	Design, Supply, Installation, Testing and Commissioning of the following:			
I	5 LLPD LMP Dairy Plant at Davanagere, Karnataka. NDDB/HO/Purchase/88/25-26/ET/88 [LMP-DAVANAGERE]	7500 Lakh/ 12 Months	20.12.25 12.01.26	12.01.26 15:00 hrs. 12.01.26 15:30 hrs.
II	Refrigeration system for cold stores incl. PUF Insulation works for Cold stores at FPP, Amritsar NDDB/HO/Purchase/89/25-26/ET/89 [Refri-AMRITSAR]	1395 Lakh / 10 Months	18.12.25 08.01.26	08.01.26 15:00 hrs. 08.01.26 15:30 hrs.
III	HVAC Works at FES, Anand. NDDB/HO/Purchase/90/25-26/ET/90 [HVAC-ANAND]	66 Lakh/ 04 Months	18.12.25 08.01.26	08.01.26 15:00 hrs. 08.01.26 15:30 hrs.
C	Providing Security Services at NDDB Anand NDDB/HO/Purchase/91/25-26/ET/91 [Security-ANAND]	212 Lakh/ 12 Months	17.12.25 07.01.26	07.01.26 15:00 hrs. 07.01.26 15:30 hrs.
D	Facility Management Services at NDDB Kolkata & RDTC Siliguri NDDB/HO/Purchase/92/25-26/ET/92 [FMS–KOL-SILIGURI]	81 Lakh/ 12 Months	17.12.25 07.01.26	07.01.26 15:00 hrs. 07.01.26 15:30 hrs.

For further details pertaining to IFB and for downloading the bid document, please visit these websites : www.nddb.coop, and www.mstcecommerce.com/eprocn For any clarification please contact Group Head (Purchase), NDDB, Anand 388001
NB: Any corrigendum/modification etc. will be posted only on these websites.

GRB Sign of purity presents
51st ANNUAL
CAKE SHOW
12th Dec to 4th Jan 2026 | Tripura Vasini, Palace Grounds, Bengaluru

On the occasion of CHRISTMAS Presenting
ಸಿಲ್ಕ್ ಇಂಡಿಯಾ
New Crafts Silk India® 2025
Exhibition & Sale
12 Days Only
Opening Today
Pure Silk Products directly Purchase by Weavers from Across India
SINDHOOR CONVENTION CENTER
15th Cross, Sarakki, 1st Phase, J.P. Nagar Ring Road, Bengaluru
From : 17th to 28th Dec. 2025
Products on Display - Orissa : Sambhalpuri Ikkat Silk Saree, Bihar : Oragnic Tassar Silk Sarees, Suit & Stoles, Assam : Muga & Eri Silk Sarees, Karnataka : Creap Silk, Georgette Silk, Arini Silk & Printed Sarees, Tamilnadu : Kanjeevaram Silk Sarees & Designer Fancy Sarees, Andra Pradesh : Dharmavara, Uppada, Gadwal, Mangalagiri & Pochampalli Sarees, Uttar Pradesh : Mulbari Silk, Jamdani, Jamawar Silk Sarees & Chiffon Silk, Maharashtra : Designer Dress materials, Chhattisgarh : Exclusive Raw Silk Sarees, Kosa Silk, Tassar Suit & Duppatta, Madhya Pradesh : Maheswari, Chanderi Silk Sarees & Suit, West Bengal : Baluchari, Dhaka Masli, Gicha Sarees, Boutique Sarees, Kantha Sarees, Zordoshi, Jammu & Kashmir : Chinon Silk, Tady Silk Printed Sarees, Pashmina Shawls & Suit, Rajasthan : Kota Silk, Hand Block Print Dress & Sarees, Punjab : Fulkari Dress and many more...
All Credit & Debit Cards Accepted Call: 08850902824
Time : 10.30 am - 8.30 pm
Entry & Parking Free
Org. by : O.A & C.

ಪ್ರಜಾವಾಣಿ DH DECCAN HERALD
Freedom Healthy Cooking Oils
Presents
ಭೂಮಿಕಾ ಕ್ಲಬ್
Powered by manipalhospitals
#NanuBhumika
ಕ್ರಿಸ್ಮಸ್ ಸ್ಪೆಷಲ್
ಈವೆಂಟ್ ಹೈಲೈಟ್ಸ್
ಜುಂಬಾ ಸೆಷನ್ ಚಂದನಾ ಲಕ್ಷ್ಮಿಕಾಂತ್ ಜೊತೆ ಕೈ-ಕಾಲು ಒದರಿ
ಲೈವ್ ಗೇಮ್ಸ್ ಮತ್ತು ಇಂಟರಾಕ್ಷನ್ RJ ಅಕ್ಷಯ ಜೊತೆ
ಲೈವ್ ಮ್ಯೂಸಿಕ್ ಅನಘಾ ಅವರ ಸಿರಿಕಂಠಕ್ಕೆ ವೈಬ್ ಮಾಡಿ
ಸ್ಟ್ಯಾಂಡ್-ಅಪ್ ಕಾಮಿಡಿ ವರ್ಷಿಣಿ ಜೊತೆ ಮನಸ್ಸುಬಿಚ್ಚಿ ನಕ್ಕುಬಿಡಿ
ಹೆಲ್ತ್ & ವೆಲ್ನೆಸ್ ಡಾ. ಪೂನಂ ಪಾಟೀಲ್ ಕನ್ಸಲ್ಟೆಂಟ್ ಮೆಡಿಕಲ್ ಆಂಕೊಲಾಜಿ, ಇಮ್ಯುನೊಥೆರಪಿ & ಪ್ರಿಸಿಷನ್ ಮೆಡಿಸಿನ್, ಮಣಿಪಾಲ್ ಹಾಸ್ಪಿಟಲ್ಸ್
ಕುಕರಿ ಸ್ಪರ್ಧೆ
ಹೈ-ಟೀ ಮತ್ತು ನೆಟ್‌ವರ್ಕಿಂಗ್
ಭೂಮಿಕಾ ಕ್ಲಬ್
ಮತ್ತೆ ಬಂದಿದೆ, ನಮ್ಮ ಬೆಂಗಳೂರಿಗೆ
ಬೆಂಗಳೂರಿನ ಗೆಳತಿಯರೆ, ಇದು ನಿಮಗಾಗಿ! ಭೂಮಿಕಾ ಕ್ಲಬ್‌ನ ಬೆಂಗಳೂರಿನ 14ನೇ ಆವೃತ್ತಿ ಮರಳಿದೆ. ಬನ್ನಿ, ಈ ಕ್ರಿಸ್‌ಮಸ್ ಸೀಸನ್‌ನಲ್ಲಿ, ಲೈವ್ ಮ್ಯೂಸಿಕ್, ಗೇಮ್ಸ್, ಮತ್ತೆ ಸಖತ್ ಕಾಂಟೆಸ್ಟ್‌ಗಳನ್ನ ಆಡಿ ಬೊಂಬಾಟ್ ಪ್ರೈಜ್‌ಗಳನ್ನ ಗೆಲ್ಲೊ ಚಾನ್ಸ್ ಮಿಸ್ ಮಾಡ್ಕೋಬೇಡಿ. ಹೊಸ ಫ್ರೆಂಡ್ಸ್ ಮಾಡ್ಕೊಳ್ಳಿ, ಲೈವ್ ಪರ್ಫಾರ್ಮೆನ್ಸ್ ನ ಥ್ರಿಲ್ ಪಡೆಯಿರಿ ಮತ್ತು ಒಂದು ಸ್ಪೆಷಲ್ ಸಂಜೆನ ಎಂಜಾಯ್ ಮಾಡಿ. ನಿಮ್ಮ ಫ್ರೆಂಡ್ಸ್ ಮತ್ತೆ ಫ್ಯಾಮಿಲಿ ನೂ ಜೊತೆ ಕರ್ಕೊಂಡು ಬನ್ನಿ!
Scan here to Register!
For more details call: 9035036186
ಡಿಸೆಂಬರ್ 20, ಶನಿವಾರ
ಸಂಜೆ 4 ರಿಂದ
ಇಂದಿರಾನಗರ ಕ್ಲಬ್, 4ನೇ ಕ್ರಾಸ್, 8ನೇ ಮುಖ್ಯ ರಸ್ತೆ, HAL 2ನೇ ಹಂತ, ಇಂದಿರಾನಗರ, ಬೆಂಗಳೂರು.
ಪ್ರವೇಶ ಉಚಿತ
ಲಕ್ಕಿ ಡ್ರಾ ಮೂಲಕ ವಿಶೇಷ ಬಹುಮಾನಗಳನ್ನು ಗೆಲ್ಲಿರಿ
₹15000 ಮೌಲ್ಯದ 1 ವಾಟರ್ ಪ್ಯೂರಿಫೈಯರ್
ಪ್ರಜಾವಾಣಿ ಸಿನಿ ಸಮ್ಮಾನ 2026 ಕಾರ್ಯಕ್ರಮಕ್ಕೆ 2 VVIP ಪಾಸ್
ಬ್ಲಾಕ್‌ಬಸ್ಟರ್ ಸಿನಿಮಾ ನೋಡಲು ಮಲ್ಟಿಪ್ಲೆಕ್ಸ್‌ನಲ್ಲಿ 10 ಕಪಲ್ ಟಿಕೆಟ್‌ಗಳು

ಸಾರ್ವಜನಿಕ ಸೂಚನೆ

ಬೆಂಗಳೂರಿಗೆ ಸೇರಿದ ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಕಾಟನ್ನಲ್ಲೂರು ಗ್ರಾಮ ಮತ್ತು ಬೆಂಗಳೂರಿನ ಹೊಸಕೋಟೆ ತಾಲ್ಲೂಕಿನ ಕಸಬಾ ಹೋಬಳಿಯ ಅಮಾನಿ ದೊಡ್ಡಕೆರೆ ಗ್ರಾಮದಲ್ಲಿರುವ ಕೃಷಿ/ಪರಿವರ್ತಿತ ಭೂ ಭಾಗಗಳಿಗೆ ಸಂಬಂಧಿಸಿದಂತೆ ಕೆಳಗಿನ ಕೋಷ್ಟಕದಲ್ಲಿ ವಿವರಿಸಿರುವಂತೆ ನಾವು ಭೂಮಾಲೀಕರ ಶೀರ್ಷಿಕೆಯನ್ನು (ಒಟ್ಟಾರೆಯಾಗಿ ಮಾಲೀಕರು) ಪರಿಶೀಲಿಸುತ್ತಿದ್ದು ಇದನ್ನು ಈ ಕೆಳಗಿನ ವಿವರಪಟ್ಟಿಯಲ್ಲಿ ವಿವರಿಸಲಾಗಿದೆ ಮತ್ತು ಇನ್ನು ಮುಂದೆ ಇದನ್ನು ಅನುಸೂಚಿ ಆಸ್ತಿ (ಷೆಡ್ಯೂಲ್ ಪ್ರಾಪರ್ಟಿ) ಎಂದು ಕರೆಯಲಾಗುತ್ತದೆ.

ಅನುಸೂಚಿ ಆಸ್ತಿಯಲ್ಲಿ ಯಾವುದೇ ಹಕ್ಕು, ಶೀರ್ಷಿಕೆ, ಕ್ಲೈಮ್ ಅಥವಾ ಆಸಕ್ತಿಯನ್ನು ಹೊಂದಿರುವ ಯಾವುದೇ ವ್ಯಕ್ತಿಯು ಈ ಪ್ರಕಟಣೆಯ ಏಳು (07) ದಿನಗಳಲ್ಲಿ ಅದರ ದಾಖಲೆ ಪುರಾವೆಯೊಂದಿಗೆ ಈ ಕೆಳಗೆ ಸಹಿ ಮಾಡಿದವರಿಗೆ ತಿಳಿಸಬೇಕು. ಈ ಸೂಚನೆಯನ್ನು ಪ್ರಕಟಿಸಿದ ದಿನಾಂಕದಿಂದ ಏಳು (07) ದಿನಗಳಲ್ಲಿ ನಮಗೆ ಅಂತಹ ಸೂಚನೆ ಸಿಗದಿದ್ದರೆ, ಅನುಸೂಚಿ ಆಸ್ತಿಗೆ ಸಂಬಂಧಿಸಿದಂತೆ ಮಾಲೀಕರ ಶೀರ್ಷಿಕೆಯು ಸ್ಪಷ್ಟವಾಗಿದೆ, ಮಾರಾಟ ಮಾಡಬಹುದಾಗಿದೆ ಮತ್ತು ಯಾವುದೇ ಹೊರೆಯಿಂದ ಮುಕ್ತವಾಗಿದೆ ಮತ್ತು ಯಾವುದೇ ವ್ಯಕ್ತಿಯು ಅನುಸೂಚಿ ಆಸ್ತಿ ಅಥವಾ ಅದರ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ ಯಾವುದೇ ರೀತಿಯ ಕ್ಲೈಮ್, ಹಕ್ಕು, ಶೀರ್ಷಿಕೆ ಅಥವಾ ಆಸಕ್ತಿಯನ್ನು ಹೊಂದಿಲ್ಲ ಎಂದು ಭಾವಿಸಲಾಗುತ್ತದೆ. ಈ ಸೂಚನೆ ಪ್ರಕಟವಾದ ದಿನಾಂಕದಿಂದ ಏಳು (07) ದಿನಗಳ ಒಳಗೆ ಸ್ವೀಕರಿಸದ ಯಾವುದೇ ಕ್ಲೈಮ್‌ಗಳು ಅಥವಾ ಆಪಾದಿತ ಆಸಕ್ತಿ ಏನಾದರೂ ಇದ್ದರೆ, ಅದನ್ನು ಎಲ್ಲಾ ಉದ್ದೇಶಗಳು ಮತ್ತು ಉದ್ದೇಶಗಳಿಗಾಗಿ ಮನ್ನಾ ಮಾಡಲಾಗಿದೆ ಮತ್ತು ನಿರ್ಲಕ್ಷಿಸಲಾಗಿದೆ ಎಂದು ಪರಿಗಣಿಸಲಾಗುತ್ತದೆ ಮತ್ತು ನಮ್ಮ ಕಕ್ಷಿದಾರರಿಗೆ ಬದ್ಧವಾಗಿರುವುದಿಲ್ಲ.

ಅನುಸೂಚಿ ಆಸ್ತಿ (ಷೆಡ್ಯೂಲ್ ಪ್ರಾಪರ್ಟಿ)

ಬೆಂಗಳೂರು ಪೂರ್ವ ತಾಲ್ಲೂಕಿನ ಬಿದರಹಳ್ಳಿ ಹೋಬಳಿಯ ಕಾಟನ್ನಲ್ಲೂರು ಗ್ರಾಮದಲ್ಲಿ ಮತ್ತು ಬೆಂಗಳೂರಿನ ಹೊಸಕೋಟೆ ತಾಲ್ಲೂಕಿನ ಕಸಬಾ ಹೋಬಳಿಯ ಅಮಾನಿ ದೊಡ್ಡಕೆರೆ ಗ್ರಾಮದಲ್ಲಿ ಇರುವ ಎಲ್ಲಾ ತುಂಡು ಜಮೀನುಗಳು, 05 ಗುಂಟೆ ಖರಾಬ್ ಅನ್ನು ಹೊರತುಪಡಿಸಿ, ಒಟ್ಟು 12 ಎಕರೆ 36½ ಗುಂಟೆ ವಿಸ್ತೀರ್ಣವನ್ನು ಹೊಂದಿದ್ದು, ಇದನ್ನು ಈ ಕೆಳಗಿನ ಕೋಷ್ಟಕದಲ್ಲಿ ಹೆಚ್ಚು ವಿವರವಾಗಿ ವಿವರಿಸಲಾಗಿದೆ:

ಗಡಿರೇಖೆಗಳು

ಕ್ರ. ಸಂ.	ಸರ್ವೆ ಸಂಖ್ಯೆ	A	G	ಖರಾಬ್ (ಹೊರಗಿಡಲಾಗಿದೆ)	ಮಾಲೀಕರು	ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
ಕಾಟನ್ನಲ್ಲೂರು ಗ್ರಾಮ									
1.	19/1 ಕೃಷಿ ಭೂಮಿ	0	9	2	ಕೃಷ್ಣಪ್ಪ	ಸರ್ವೆ ಸಂಖ್ಯೆ. 22/1 ಮತ್ತು 22/2 ಅನ್ನು ಹೊಂದಿರುವ ಭೂಮಿ	ರಸ್ತೆ	ಸರ್ವೆ ಸಂಖ್ಯೆ. 19/2 ಅನ್ನು ಹೊಂದಿರುವ ಭೂಮಿ	ಸರ್ವೆ ಸಂಖ್ಯೆ. 20 ಅನ್ನು ಹೊಂದಿರುವ ಭೂಮಿ
2.	19/2 ಕೃಷಿ ಭೂಮಿ	0	20	2	ಶ್ರೀನಿವಾಸ್ ಹೆಚ್. ಎಸ್	ಸರ್ವೆ ಸಂಖ್ಯೆ. 22/1 ಅನ್ನು ಹೊಂದಿರುವ ಭೂಮಿ	ರಸ್ತೆ	ಗೋಪಾಲ್ ಮತ್ತು ರತ್ನಮ್ಮ ಅವರ ಜಮೀನು	ಸರ್ವೆ ಸಂಖ್ಯೆ. 19/1 ಅನ್ನು ಹೊಂದಿರುವ ಭೂಮಿ
3.	22/1 ಕೃಷಿ ಭೂಮಿ	0	29½	0	ಚಿಕ್ಕರಾಜು ಮತ್ತು ಮುನಿರಾಜು	ಭೂಮಿ ಶಶಿಧರ್ ಅವರಿಗೆ ಸೇರಿದೆ	ಸರ್ವೆ ಸಂಖ್ಯೆ 19/1 19/2 ಅನ್ನು ಹೊಂದಿರುವ ಭೂಮಿ	ಭೂಮಿ ಚಿಕ್ಕ ಮುನಿಯಪ್ಪ ಕೆಂಪಣ್ಣ ಲಕ್ಷ್ಮಯ್ಯ ಅವರಿಗೆ ಸೇರಿದ್ದು ಇವರೆಲ್ಲರೂ ಬಸಪ್ಪ ಅವರ ಪುತ್ರರು	ಸರ್ವೆ ಸಂಖ್ಯೆಗಳು 22/2 ಮತ್ತು 22/3 ಅನ್ನು ಹೊಂದಿರುವ ಭೂಮಿ
ಅಮಾನಿ ದೊಡ್ಡಕೆರೆ ಗ್ರಾಮ									
4.	259/4 ಕೃಷಿ ಭೂಮಿ	0	14½	0	ಕೆಂಪಣ್ಣ	ಸರ್ವೆ ಸಂಖ್ಯೆ. 259/2 ಅನ್ನು ಹೊಂದಿರುವ ಭೂಮಿ	ಸರ್ವೆ ಸಂಖ್ಯೆ. 259/1 ಹೊಂದಿರುವ ಭೂಮಿ	ಸರ್ವೆ ಸಂಖ್ಯೆ. 258 ಅನ್ನು ಹೊಂದಿರುವ ಭೂಮಿ	ಕಾಟಮ್ನಲ್ಲೂರು ಗಡಿ
5.	253/3B ಕೃಷಿ ಭೂಮಿ	0	30	1	ಜೆ. ರಾಮಚಂದ್ರ	ಸರ್ವೆ ಸಂಖ್ಯೆ. 251/ 4A ಮತ್ತು 4B ಅನ್ನು ಹೊಂದಿರುವ ಭೂಮಿ	ಸರ್ವೆ ಸಂಖ್ಯೆ. 259/2 ಹೊಂದಿರುವ ಭೂಮಿ	ಸರ್ವೆ ಸಂಖ್ಯೆ. 253 3A ಅನ್ನು ಹೊಂದಿರುವ ಭೂಮಿ	ಸರ್ವೆ ಸಂಖ್ಯೆ. 253 3C ಅನ್ನು ಹೊಂದಿರುವ ಭೂಮಿ
6.	253/3A ಕೃಷಿ ಭೂಮಿ	0	26	1	ಎಂ. ಪ್ರಭಾಕರ್, ಎಂ. ಪ್ರಸಾದ್	ಸರ್ವೆ ಸಂಖ್ಯೆ. 251/ 4A ಮತ್ತು ಸರ್ವೆ ಸಂಖ್ಯೆ. 251/3 ಹೊಂದಿರುವ ಭೂಮಿ	ಸರ್ವೆ ಸಂಖ್ಯೆ. 258/2 259/2 ಹೊಂದಿರುವ ಭೂಮಿ	ಸರ್ವೆ ಸಂಖ್ಯೆ. 253 2 ಅನ್ನು ಹೊಂದಿರುವ ಭೂಮಿ	ಸರ್ವೆ ಸಂಖ್ಯೆ. 253 3B ಅನ್ನು ಹೊಂದಿರುವ ಭೂಮಿ
7.	251/4A ಕೃಷಿ ಭೂಮಿ	0	19	0	ಎಂ. ಪ್ರಭಾಕರ್, ಎಂ. ಪ್ರಸಾದ್	ಸರ್ಕಾರಿ ನಾಲಾ	ಸರ್ವೆ ಸಂಖ್ಯೆ. 253/3A 253/3B ಹೊಂದಿರುವ ಭೂಮಿ	ಸರ್ವೆ ಸಂಖ್ಯೆ. 251/3 ಅನ್ನು ಹೊಂದಿರುವ ಭೂಮಿ	ಸರ್ವೆ ಸಂಖ್ಯೆ. 251/4B ಅನ್ನು ಹೊಂದಿರುವ ಭೂಮಿ
8.	253/2 ಕೃಷಿ ಭೂಮಿ	2	8	0	ಜೆ. ಕೃಷ್ಣರೆಡ್ಡಿ	ಸರ್ವೆ ಸಂಖ್ಯೆ. 251/3 ಹೊಂದಿರುವ ಭೂಮಿ	ಸರ್ವೆ ಸಂಖ್ಯೆ. 258/2 ಹೊಂದಿರುವ ಭೂಮಿ	ಸರ್ವೆ ಸಂಖ್ಯೆ. 251/1 , 4 ಮತ್ತು 5 ಅನ್ನು ಹೊಂದಿರುವ ಭೂಮಿ	ಸರ್ವೆ ಸಂಖ್ಯೆ. 253/3A ಅನ್ನು ಹೊಂದಿರುವ ಭೂಮಿ
9.	253/1 ಪರಿವರ್ತಿಸಲಾದ ಭೂಮಿ	0	2	0	ಮೀನಾಕ್ಷಿ ಎಲ್. ವಿ, ಶ್ರೀನಿವಾಸ ಹೆಚ್. ಎಸ್.	ಸರ್ವೆ ಸಂಖ್ಯೆ. 253/4 ಹೊಂದಿರುವ ಭೂಮಿ	ಸರ್ವೆ ಸಂಖ್ಯೆ. 258/2 ಹೊಂದಿರುವ ಭೂಮಿ	ಸರ್ವೆ ಸಂಖ್ಯೆ. 254/5 ಅನ್ನು ಹೊಂದಿರುವ ಭೂಮಿ	ಸರ್ವೆ ಸಂಖ್ಯೆ. 253/2 ಅನ್ನು ಹೊಂದಿರುವ
10.	253/4 ಪರಿವರ್ತಿಸಲಾದ ಭೂಮಿ	0	2	0	ಮೀನಾಕ್ಷಿ ಎಲ್. ವಿ, ಶ್ರೀನಿವಾಸ ಹೆಚ್. ಎಸ್.	ಸರ್ವೆ ಸಂಖ್ಯೆ. 253/5 ಹೊಂದಿರುವ ಭೂಮಿ	ಸರ್ವೆ ಸಂಖ್ಯೆ. 253/1 ಹೊಂದಿರುವ ಭೂಮಿ	ಸರ್ವೆ ಸಂಖ್ಯೆ. 254/5 ಅನ್ನು ಹೊಂದಿರುವ ಭೂಮಿ	ಸರ್ವೆ ಸಂಖ್ಯೆ. 253/2 ಅನ್ನು ಹೊಂದಿರುವ ಭೂಮಿ
11.	253/5 ಪರಿವರ್ತಿಸಲಾದ ಭೂಮಿ	0	2	0	ಮೀನಾಕ್ಷಿ ಎಲ್. ವಿ, ಶ್ರೀನಿವಾಸ ಹೆಚ್. ಎಸ್.	ಸರ್ವೆ ಸಂಖ್ಯೆ. 251 ಹೊಂದಿರುವ ಭೂಮಿ	ಸರ್ವೆ ಸಂಖ್ಯೆ. 253/4 ಹೊಂದಿರುವ ಭೂಮಿ	ಸರ್ವೆ ಸಂಖ್ಯೆ. 254/5 ಅನ್ನು ಹೊಂದಿರುವ ಭೂಮಿ	ಸರ್ವೆ ಸಂಖ್ಯೆ. 253/2 ಅನ್ನು ಹೊಂದಿರುವ ಭೂಮಿ
12.	254/5 ಪರಿವರ್ತಿಸಲಾದ ಭೂಮಿ	0	27	0	ಮೀನಾಕ್ಷಿ ಎಲ್. ವಿ, ಶ್ರೀನಿವಾಸ ಹೆಚ್. ಎಸ್.	ಸರ್ವೆ ಸಂಖ್ಯೆ. 251/6 ಹೊಂದಿರುವ ಭೂಮಿ	ಸರ್ವೆ ಸಂಖ್ಯೆ. 257/1 ಹೊಂದಿರುವ ಭೂಮಿ	ಸರ್ವೆ ಸಂಖ್ಯೆ. 254/4 ಅನ್ನು ಹೊಂದಿರುವ ಭೂಮಿ	ಸರ್ವೆ ಸಂಖ್ಯೆ. 253/1 ಅನ್ನು 4 ಮತ್ತು 5 ಹೊಂದಿರುವ ಭೂಮಿ
13.	254/4 ಪರಿವರ್ತಿಸಲಾದ ಭೂಮಿ	0	27	0	ಮೀನಾಕ್ಷಿ ಎಲ್. ವಿ, ಶ್ರೀನಿವಾಸ ಹೆಚ್. ಎಸ್.	ಸರ್ವೆ ಸಂಖ್ಯೆ. 251/5 ಹೊಂದಿರುವ ಭೂಮಿ	ಸರ್ವೆ ಸಂಖ್ಯೆ. 257/3 ಮತ್ತು 2 ಹೊಂದಿರುವ ಭೂಮಿ	ಸರ್ವೆ ಸಂಖ್ಯೆ. 254/2 ಅನ್ನು ಹೊಂದಿರುವ ಭೂಮಿ	ಸರ್ವೆ ಸಂಖ್ಯೆ. 254/5 ಅನ್ನು ಹೊಂದಿರುವ ಭೂಮಿ
14.	254/2 ಪರಿವರ್ತಿಸಲಾದ ಭೂಮಿ	0	27	0	ಮೀನಾಕ್ಷಿ ಎಲ್. ವಿ, ಶ್ರೀನಿವಾಸ ಹೆಚ್. ಎಸ್.	ಸರ್ವೆ ಸಂಖ್ಯೆ. 251/2 ಹೊಂದಿರುವ ಭೂಮಿ	ಸರ್ವೆ ಸಂಖ್ಯೆ. 257/3 ಮತ್ತು 4 ಹೊಂದಿರುವ ಭೂಮಿ	ಸರ್ವೆ ಸಂಖ್ಯೆ. 254/1 ಅನ್ನು ಹೊಂದಿರುವ ಭೂಮಿ	ಸರ್ವೆ ಸಂಖ್ಯೆ. 254/4 ಅನ್ನು ಹೊಂದಿರುವ ಭೂಮಿ
15.	251/2 ಪರಿವರ್ತಿಸಲಾದ ಭೂಮಿ	0	15 3/4	0	ಮೀನಾಕ್ಷಿ ಎಲ್. ವಿ, ಶ್ರೀನಿವಾಸ ಹೆಚ್. ಎಸ್.	ಸರ್ಕಾರಿ ಖರಾಬ್ ಭೂಮಿ/ ನಾಲಾ	ಸರ್ವೆ ಸಂಖ್ಯೆ. 254/2 ಹೊಂದಿರುವ ಭೂಮಿ	ಸರ್ವೆ ಸಂಖ್ಯೆ. 251/1 ಅನ್ನು ಹೊಂದಿರುವ ಭೂಮಿ	ಸರ್ವೆ ಸಂಖ್ಯೆ. 251/5 ಅನ್ನು ಹೊಂದಿರುವ ಭೂಮಿ
16.	251/5 ಪರಿವರ್ತಿಸಲಾದ ಭೂಮಿ	0	15 3/4	0	ಮೀನಾಕ್ಷಿ ಎಲ್. ವಿ, ಶ್ರೀನಿವಾಸ ಹೆಚ್. ಎಸ್.	ನಾಲಾ ಮತ್ತು ಸರ್ಕಾರಿ ಖರಾಬ್ ಭೂಮಿ	ಸರ್ವೆ ಸಂಖ್ಯೆ. 254/4 ಹೊಂದಿರುವ ಭೂಮಿ	ಸರ್ವೆ ಸಂಖ್ಯೆ. 251/2 ಅನ್ನು ಹೊಂದಿರುವ ಭೂಮಿ	ಸರ್ವೆ ಸಂಖ್ಯೆ. 251/6 ಅನ್ನು ಹೊಂದಿರುವ ಭೂಮಿ
17.	251/6 ಪರಿವರ್ತಿಸಲಾದ ಭೂಮಿ	0	15½	0	ಮೀನಾಕ್ಷಿ ಎಲ್. ವಿ, ಶ್ರೀನಿವಾಸ ಹೆಚ್. ಎಸ್.	ಸರ್ಕಾರಿ ಖರಾಬ್ ಭೂಮಿ/ ನಾಲಾ	ಸರ್ವೆ ಸಂಖ್ಯೆ. 254/5 ಹೊಂದಿರುವ ಭೂಮಿ	ಸರ್ವೆ ಸಂಖ್ಯೆ. 251/5 ಅನ್ನು ಹೊಂದಿರುವ ಭೂಮಿ	ಸರ್ವೆ ಸಂಖ್ಯೆ. 251/3 ಅನ್ನು ಹೊಂದಿರುವ ಭೂಮಿ
18.	251/3 ಕೃಷಿ ಭೂಮಿ	0	4	0	ಜೆ. ಕೃಷ್ಣರೆಡ್ಡಿ	ಖರಾಬ್ ಭೂಮಿ/ ನಾಲಾ	ಸರ್ವೆ ಸಂಖ್ಯೆ. 253/2 ಹೊಂದಿರುವ ಭೂಮಿ	ಸರ್ವೆ ಸಂಖ್ಯೆ. 251/6 ಅನ್ನು ಹೊಂದಿರುವ ಭೂಮಿ	ಸರ್ವೆ ಸಂಖ್ಯೆ. 251/4A ಅನ್ನು ಹೊಂದಿರುವ ಭೂಮಿ
19.	251/4B ಕೃಷಿ ಭೂಮಿ	0	17	0	ಜೆ. ರಾಮಚಂದ್ರ	ಸರ್ಕಾರಿ ನಾಲಾ	ಸರ್ವೆ ಸಂಖ್ಯೆ. 253/3B, 3C ಮತ್ತು 252/4 ಹೊಂದಿರುವ ಭೂಮಿ	ಸರ್ವೆ ಸಂಖ್ಯೆ. 251/4A ಅನ್ನು ಹೊಂದಿರುವ ಭೂಮಿ	ಸರ್ವೆ ಸಂಖ್ಯೆ. 251/4C ಅನ್ನು ಹೊಂದಿರುವ ಭೂಮಿ
20.	258/2 ಕೃಷಿ ಭೂಮಿ	1	32	2	ರುಕ್ಮಿಣಿ, ಕಮಲ, ಗೀತಾ, ನಾರಾಯಣಸ್ವಾಮಿ ಮತ್ತು ಎಸ್. ವಿ. ಗಣೇಶ್ ಎಲ್ಲರೂ ವೆಂಕಟ ರಮಣಪ್ಪನ ಮಕ್ಕಳು	ಸರ್ವೆ ಸಂಖ್ಯೆ. 253/1 2 ಮತ್ತು 253/3A	ಸರ್ವೆ ಸಂಖ್ಯೆ. 258/1 ಮತ್ತು ನಾಲಾ	ಸರ್ವೆ ಸಂಖ್ಯೆ. 257/1 ಅನ್ನು ಹೊಂದಿರುವ ಭೂಮಿ	ಸರ್ವೆ ಸಂಖ್ಯೆ. 259/1, ಅನ್ನು 259/4 ಮತ್ತು 259/2 ಅನ್ನು ಹೊಂದಿರುವ ಭೂಮಿ
21.	259/1 ಕೃಷಿ ಭೂಮಿ	0	13½	0	ವೆಂಕಟೇಶ್ ಕೆ. ಬಿ, ದಿವಂಗತ ದೊಡ್ಡ ಬಾಚಪ್ಪ ಅವರ ಪುತ್ರ	ಸರ್ವೆ ಸಂಖ್ಯೆ. 259/4 ಹೊಂದಿರುವ ಭೂಮಿ	ಸರ್ವೆ ಸಂಖ್ಯೆ. 256 ಹೊಂದಿರುವ ಭೂಮಿ	ಸರ್ವೆ ಸಂಖ್ಯೆ. 258/2 ಅನ್ನು ಹೊಂದಿರುವ ಭೂಮಿ	ಕಟ್ಟಂನಲ್ಲೂರು ಗ್ರಾಮದ ಗಡಿ

ಮಾಲಿನಿ ರಾಜು
ಮೀನಾ ಬಿ. ಎಸ್
ಅಝಬ ಪಾರ್ಟ್‌ನರ್ಸ್,
ವಕೀಲರು ಮತ್ತು ಸಾಲಿಸಿಟರ್‌ಗಳು
ಲೆವೆಲ್ 5, 37 ಕನ್ನಿಂಗ್‌ಹಾಮ್,
ಕನ್ನಿಂಗ್‌ಹಾಮ್ ರಸ್ತೆ,
ಬೆಂಗಳೂರು – 560 052.
ಇಮೇಲ್: malini.raju@azbpartners.com
ದೂರವಾಣಿ: + 91 80 4240 0500

ಮನೆ ಬಾಡಿಗೆ ಮಸೂದೆಗೆ ಅಸ್ತು

ದಂಡ ಪ್ರಮಾಣ ಹೆಚ್ಚಳ, ಜೈಲು ಶಿಕ್ಷೆ ರದ್ದು ಸಣ್ಣ ಬಾಡಿಗೆದಾರರ ರಕ್ಷಣೆಗೆ ಬದ್ಧ: ಸಚಿವ

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): ದಂಡದ ಮೊತ್ತವನ್ನು ಹೆಚ್ಚಿಸಿ, ಜೈಲು ಶಿಕ್ಷೆಯನ್ನು ಕೈಬಿಡುವ ಉದ್ದೇಶದ ಕರ್ನಾಟಕ ಬಾಡಿಗೆ (ತಿದ್ದುಪಡಿ) ಮಸೂದೆಗೆ ವಿಧಾನಸಭೆ ಅಂಗೀಕಾರ ನೀಡಿತು.

ಮಸೂದೆಯ ಉದ್ದೇಶ ವಿವರಿಸಿದ ಕಂದಾಯ ಸಚಿವ ಕೃಷ್ಣಬೈರೇಗೌಡ, 'ಕೇಂದ್ರ ಸರ್ಕಾರದ ರೂಪಿಸಿದ ಮಾದರಿ ಮಸೂದೆಗೆ ಕೆಲವು ಸರಳ ತಿದ್ದುಪಡಿ ಮಾಡಲಾಗಿದೆ. ಮೂಲ ಮಸೂದೆಯಲ್ಲಿ ಕಾನೂನು ಉಲ್ಲಂಘಿಸಿದರೆ ಜೈಲು ಶಿಕ್ಷೆ ವಿಧಿಸುವ ಅವಕಾಶವಿತ್ತು. ಅದನ್ನು ಕೈಬಿಡಲಾಗಿದೆ' ಎಂದು ಹೇಳಿದರು.

ಮಸೂದೆಯ ಕುರಿತು ಮಾತನಾಡಿದ ಬಿಜೆಪಿಯ ಸುರೇಶ್ ಕುಮಾರ್, ಸಣ್ಣ ಪುಟ್ಟ ಬಾಡಿಗೆದಾರರು ಶೋಷಣೆ ಒಳಗಾಗಿದ್ದಾರೆ. ಅದನ್ನು ತಡೆಯಲು ಮಸೂದೆಯಲ್ಲಿ ಅವಕಾಶ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಕೃಷ್ಣ ಬೈರೇಗೌಡ, 'ಇವತ್ತಿಗೂ ಸಣ್ಣ ಪುಟ್ಟ ಬಾಡಿಗೆದಾರರಿಗೆ ಶೋಷಣೆ ಆಗುತ್ತಿದೆ ಎಂಬುದು ನಿಜ. ಅಂತಹವರನ್ನು ರಕ್ಷಿಸಲು ಕಾನೂನಿನಲ್ಲಿ ಅವಕಾಶವಿದೆ. ಆದರೆ, ನಾವು ಈ ಕಾನೂನನ್ನು ಅನುಸರಣೆ ಮಾಡುವುದನ್ನೇ ಮರೆತಿದ್ದೇವೆ. ಜನರಲ್ಲಿ ಅರಿವು ಮೂಡಿಸಬೇಕು' ಎಂದು ಅವರು ಹೇಳಿದರು.

ಅಂಗೀಕೃತಗೊಂಡ ಮಸೂದೆಗಳು

ಮಲೆ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ಮಸೂದೆ, ಚಂದ್ರಗುತ್ತಿ ಶ್ರೀ ರೇಣುಕಾಂಬ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಮಸೂದೆ, ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಮಸೂದೆ, ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿಗಳ (ತಿದ್ದುಪಡಿ) ಮಸೂದೆ, ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ (ತಿದ್ದುಪಡಿ) ಮಸೂದೆ, ಕರ್ನಾಟಕ ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತರ (ಕ್ಷೇಮಾಭಿವೃದ್ಧಿ) (ತಿದ್ದುಪಡಿ) ಮಸೂದೆ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ (ಎರಡನೇ ತಿದ್ದುಪಡಿ) ಮಸೂದೆ, ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ಮಸೂದೆ ಅಂಗೀಕಾರವಾದವು.

ಮಲೆನಾಡು, ಬಯಲುಸೀಮೆ ಮಂಡಳಿ ಸದಸ್ಯತ್ವಕ್ಕೆ ಅವಕಾಶ

ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ವ್ಯಾಪ್ತಿಯಲ್ಲಿ ಆಯ್ಕೆಯಾದ ಮತ್ತು ಮತದಾರರಾಗಿ ನೋಂದಾಯಿಸಿರುವ ವಿಧಾನ ಪರಿಷತ್ತಿನ ಸದಸ್ಯರನ್ನು ಮಂಡಳಿಯ ಸದಸ್ಯರಾಗಿ ಸೇರಿಸುವ ಉದ್ದೇಶದಿಂದ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ (ತಿದ್ದುಪಡಿ) ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ ವ್ಯಾಪ್ತಿಯ ಒಳಗೆ ಚುನಾವಣಾ ಕ್ಷೇತ್ರಗಳನ್ನು ಹೊಂದಿರುವ ಸಂಸತ್ ಮತ್ತು ವಿಧಾನ ಮಂಡಲದ ಸದಸ್ಯರು, ಜಿಲ್ಲಾ ಪಂಚಾಯತ್ ಅಧ್ಯಕ್ಷರು, ರಾಜ್ಯ ಸರ್ಕಾರದಿಂದ 10 ಮಂದಿಯನ್ನು (ಈ ಪೈಕಿ ಇಬ್ಬರು ಎಸ್‌ಸಿ, ಒಬ್ಬರು ಎಸ್‌ಟಿ) ನಾಮನಿರ್ದೇಶನ ಮಾಡಲು, ಬಯಲು ಸೀಮೆಯ ಪ್ರತಿಯೊಂದು ವಿಭಾಗದ ವಿಭಾಗೀಯ ಆಯುಕ್ತರು, ಉಪ ಆಯುಕ್ತರು ಮತ್ತು ಮಂಡಳಿಯ ಕಾರ್ಯದರ್ಶಿಯನ್ನು ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಗೆ ಸದಸ್ಯರನ್ನಾಗಿ ಮಾಡಲು ಅವಕಾಶ ಕಲ್ಪಿಸಲು ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ (ತಿದ್ದುಪಡಿ) ಮಸೂದೆಗೆ ಅನುಮೋದನೆ ನೀಡಲಾಯಿತು.

ಚಿಟಿಕೆ ಸುದ್ದಿ

ಭಾವನೆಯಲ್ಲ, ಅದು ನಿಯಮ..

ಸುವರ್ಣ ವಿಧಾನಸೌಧ (ಬೆಳಗಾವಿ): ಸದನದ ಕಲಾಪಗಳಲ್ಲಿ ಅನ್ವಯವಾಗುವುದು ಭಾವನೆಯಲ್ಲ, ನಿಯಮವಷ್ಟೆ ಎನ್ನುವ ಚರ್ಚೆ ಮಂಗಳವಾರ ವಿಧಾನಪರಿಷತ್‌ನಲ್ಲಿ ನಡೆಯಿತು.

ಶೂನ್ಯ ವೇಳೆಯಲ್ಲಿ ವಾಯವ್ಯ ರಸ್ತೆ ಸಾರಿಗೆ ಸಂಸ್ಥೆಯ ಹೆಸರು ಬದಲಾವಣೆ ಕುರಿತು ಪ್ರಸ್ತಾಪಿಸಿದ ಕಾಂಗ್ರೆಸ್‌ನ ಚನ್ನರಾಜ ಹಟ್ಟಿಹೊಳಿ, ಎರಡು ಪುಟಗಳ ಪ್ರಸ್ತಾವವನ್ನು ಸದನದ ಮುಂದಿಟ್ಟರು. ಆಗ ಮಧ್ಯ ಪ್ರವೇಶಿಸಿದ ಸಭಾಪತಿ ಸ್ಥಾನದಲ್ಲಿದ್ದ ಎಂ.ಕೆ.ಪ್ರಾಣೇಶ್, 'ನಿಯಮದ ಪ್ರಕಾರ 150 ಪದಗಳನ್ನಷ್ಟೇ ಶೂನ್ಯವೇಳೆಯಲ್ಲಿ ಓದಬೇಕು. ಎರಡು ಪುಟಗಳಿಗೆ ಅವಕಾಶ ಇಲ್ಲ' ಎಂದರು.

ಅದಕ್ಕೆ ಹಟ್ಟಿಹೊಳಿ, 'ನಿಮ್ಮ ಭಾವನೆಯನ್ನು ಮುಂದಿನ ಬಾರಿ ಗೌರವಿಸುತ್ತೇನೆ' ಎಂದರು. ಅವರ ಮಾತಿಗೆ ಆಕ್ಷೇಪ ವ್ಯಕ್ತಪಡಿಸಿದ ಬಿಜೆಪಿಯ ಭಾರತಿ ಶೆಟ್ಟಿ ಮತ್ತಿತರರು ಅದು 'ಸಭಾಪತಿಯವರ ಭಾವನೆ ಅಲ್ಲ, ಸದನದ ನಿಯಮ' ಎಂದು ಕಾಲೆಳೆದರು.

ನಾಲ್ಕು ತಿದ್ದುಪಡಿ ಮಸೂದೆ ಮಂಡನೆ

ಸುವರ್ಣ ಸೌಧ (ಬೆಳಗಾವಿ): ವಾಹನ ನೋಂದಣಿ ಸಮಯದಲ್ಲಿ ಬೇರೆ ಬೇರೆ ವರ್ಗದ ಮೋಟಾರು ವಾಹನಗಳಿಗೆ ಪ್ರತ್ಯೇಕ ಉಪಕರ ವಿಧಿಸಲು ಅವಕಾಶ ಕಲ್ಪಿಸುವ 'ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ (ತಿದ್ದುಪಡಿ) ಮಸೂದೆ' ಸೇರಿ ನಾಲ್ಕು ತಿದ್ದುಪಡಿ ಮಸೂದೆಗಳನ್ನು ವಿಧಾನಸಭೆಯಲ್ಲಿ ಮಂಗಳವಾರ ಮಂಡಿಸಲಾಯಿತು.

ಸಾರಿಗೆ ಸಚಿವರ ಪರವಾಗಿ ಕಾನೂನು ಸಚಿವ ಎಚ್‌.ಕೆ. ಪಾಟೀಲ ಅವರು 'ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ (ತಿದ್ದುಪಡಿ) ಮಸೂದೆ', 'ಬಾಂಬೆ ಸಾರ್ವಜನಿಕ ನ್ಯಾಸ(ಕರ್ನಾಟಕ ತಿದ್ದುಪಡಿ) ಮಸೂದೆ-2025', ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪರವಾಗಿ 'ಬೆಂಗಳೂರು ಮಹಾನಗರ ಭೂಸಾರಿಗೆ ಪ್ರಾಧಿಕಾರ(ತಿದ್ದುಪಡಿ) ಮಸೂದೆ' ಮತ್ತು ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು, 'ನಾಡಪ್ರಭು ಕೆಂಪೇಗೌಡ ಪಾರಂಪರಿಕ ತಾಣದ ಅಭಿವೃದ್ಧಿ ಪ್ರಾಧಿಕಾರ (ಎರಡನೇ ತಿದ್ದುಪಡಿ) ಮಸೂದೆಯನ್ನು ಮಂಡಿಸಿದರು.

1,689 ಶಾಲಾ, ಕಾಲೇಜು ಆಸ್ತಿಗೆ ಖಾತೆ ಇಲ್ಲ

ಸುವರ್ಣ ವಿಧಾನಸೌಧ (ಬೆಳಗಾವಿ): ರಾಜ್ಯದಲ್ಲಿನ 1,689 ಸರ್ಕಾರಿ ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜುಗಳ ಕಟ್ಟಡಗಳು ಆಯಾ ಶಾಲೆ–ಕಾಲೇಜುಗಳ ಹೆಸರಿಗೆ ಖಾತೆಯೇ ಆಗಿಲ್ಲ.

ವಿಧಾನಪರಿಷತ್‌ನಲ್ಲಿ ಜೆಡಿಎಸ್‌ನ ಕೆ.ವಿವೇಕಾನಂದ ಅವರ ಪ್ರಶ್ನೆಗೆ ಉತ್ತರ ನೀಡಿರುವ ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು, 4,872 ಪ್ರೌಢಶಾಲೆಗಳಲ್ಲಿ 3,437 ಕಟ್ಟಡಗಳು ಖಾತೆಯಾಗಿವೆ. 1,435 ಆಗಬೇಕಿದೆ. 1,319 ಪದವಿಪೂರ್ವ ಕಾಲೇಜುಗಳಲ್ಲಿ 1,055 ಖಾತೆಯಾಗಿವೆ. 264 ಖಾತೆ ಆಗಿಲ್ಲ ಎಂದು ಮಾಹಿತಿ ನೀಡಿದ್ದಾರೆ.

ಸರ್ಕಾರ ಶಾಲಾ ಆಸ್ತಿಗಳ ಸಂರಕ್ಷಣೆಗಾಗಿ ಕಂದಾಯ, ಗ್ರಾಮೀಣಾಭಿವೃದ್ಧಿ, ಪೌರಾಡಳಿತ ಇಲಾಖೆಗಳ ಸಹಯೋಗದಲ್ಲಿ 2022–23ನೇ ಸಾಲಿನಿಂದ ಪ್ರತಿ ವರ್ಷ ಶಾಲಾ–ಕಾಲೇಜು ಆಸ್ತಿ ಸಂರಕ್ಷಣಾ ಆಂದೋಲನ ನಡೆಸಲಾಗುತ್ತಿದೆ. ಉಳಿದ ಎಲ್ಲ ಆಸ್ತಿಯನ್ನೂ ಹಂತ ಹಂತವಾಗಿ ಖಾತೆ ಮಾಡಲು ಕ್ರಮವಹಿಸಲಾಗುತ್ತದೆ ಎಂದು ಹೇಳಿದ್ದಾರೆ.

ಅಡುಗೆಗಾಗಿ ತರಕಾರಿ

ಪ್ರಜಾವಾಣಿ ಚಿತ್ರ: ರಂಜು ಪಿ.

ವಿಧಾನಮಂಡಲ ಚಳಿಗಾಲದ ಅಧಿವೇಶನ ಹಿನ್ನೆಲೆಯಲ್ಲಿ ಭದ್ರತಾ ಕೆಲಸದಲ್ಲಿ ತೊಡಗಿದ ಪೊಲೀಸರಿಗೆ ತಯಾರಿಸಲಾಗುವ ಅಡುಗೆಗಾಗಿ ಬೆಳಗಾವಿಯ ಪೊಲೀಸ್ ಟೌನ್‌ಶಿಪ್‌ನಲ್ಲಿ ಮಹಿಳಾ ಕಾರ್ಮಿಕರು ಮಂಗಳವಾರ ತರಕಾರಿಗಳನ್ನು ಕತ್ತರಿಸುತ್ತಿರುವುದು ಕಂಡು ಬಂತು

ಅಧಿವೇಶನ ಅವಧಿ ವಿಸ್ತರಣೆಗೆ ಮನವಿ

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ನಡೆಯುತ್ತಿರುವ ವಿಧಾನ ಮಂಡಲದ ಚಳಿಗಾಲದ ಅಧಿವೇಶನವನ್ನು ಒಂದು ವಾರ ವಿಸ್ತರಿಸಬೇಕು ಎಂದು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣ ಸ್ವಾಮಿ ಅವರು ಸಭಾಪತಿ ಬಸವರಾಜ ಹೊರಟ್ಟಿ ಅವರಿಗೆ ಮನವಿ ಸಲ್ಲಿಸಿದರು.

ಮಂಗಳವಾರದ ಕಲಾಪದ ವೇಳೆ ನಾರಾಯಣಸ್ವಾಮಿ, 'ಅಧಿವೇಶನ ಇನ್ನು ನಾಲ್ಕು ದಿನ ಮಾತ್ರವೇ ಇದೆ. ಪ್ರಶ್ನೋತ್ತರ, ಮಸೂದೆಗಳ ಮೇಲಿನ ಚರ್ಚೆ ನಡೆಯಬೇಕಿದೆ. ಇದರಿಂದಾಗಿ ಉತ್ತರ ಕರ್ನಾಟಕದ ಸಮಸ್ಯೆಗಳ ಕುರಿತು ಚರ್ಚೆಗೆ ಅಗತ್ಯದಷ್ಟು ಸಮಯ ಸಿಗುವುದಿಲ್ಲ. ಹೀಗಾಗಿ ಅಧಿವೇಶನವನ್ನು ಇನ್ನೂ ಒಂದು ವಾರ ವಿಸ್ತರಿಸಬೇಕು ನಿಮ್ಮ ಮೂಲಕ ಸರ್ಕಾರವನ್ನು ಕೋರುತ್ತೇನೆ' ಎಂದು ಮನವಿ ಸಲ್ಲಿಸಿದರು.

ಸಭಾನಾಯಕ ಎಸ್‌.ಎನ್‌. ಬೋಸರಾಜು, 'ಬೇರೆಲ್ಲಾ ವಿಷಯಗಳನ್ನು ಕೈಬಿಡಿ, ಉತ್ತರ ಕರ್ನಾಟಕದ ವಿಷಯಗಳನ್ನೇ ಚರ್ಚಿಸೋಣ' ಎಂದು ನಾರಾಯಣಸ್ವಾಮಿ ಅವರ ಕಾಲೆಳೆದರು. ನಾರಾಯಣಸ್ವಾಮಿ, 'ಮಸೂದೆ ಮಂಡನೆ, ಚರ್ಚೆಯನ್ನು ಕೈಬಿಡಿ' ಎಂದು ತಿರುಗೇಟು ನೀಡಿದರು.

ಆಗ ಸಭಾಪತಿ ಬಸವರಾಜ ಹೊರಟ್ಟಿ ಅವರು, 'ಸದಸ್ಯರು ಪ್ರಶ್ನೋತ್ತರ ಅವಧಿಯಲ್ಲಿ ಅನಗತ್ಯವಾಗಿ ಮಾತನಾಡುವುದರಿಂದ ಸಮಯ ವ್ಯರ್ಥವಾಗುತ್ತಿದೆ. ಅದನ್ನು ನಿಲ್ಲಿಸಿದರೆ, ಇರುವ ಸಮಯದಲ್ಲಿಯೇ ಉತ್ತರ ಕರ್ನಾಟಕದ ಸಮಸ್ಯೆಗಳ ಬಗ್ಗೆ ಚರ್ಚಿಸಬಹುದು' ಎಂದರು. ಜತೆಗೆ, 'ಇನ್ನಷ್ಟು ಸಮಯ ಬೇಕು ಎಂಬುದು ನನ್ನ ಅಭಿಪ್ರಾಯ. ಈ ಬಗ್ಗೆ ಮುಖ್ಯಮಂತ್ರಿ ಅವರ ಜತೆ ಮಾತನಾಡಿ. ನಾನೂ ಮಾತನಾಡುತ್ತೇನೆ' ಎಂದು ಸಭಾನಾಯಕ ಬೋಸರಾಜು ಅವರಿಗೆ ಸೂಚಿಸಿದರು.

'ಮುಂದೆಯೂ ನಾನೇ ಸಿ.ಎಂ'

ಒಂದನೇ ಪುಟದಿಂದ...

ನಡೆದಿದ್ದೇನು?: ಕುಣಿಗಲ್ ಕ್ಷೇತ್ರದ ಸದಸ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಷಡ್ಡಕರಾದ ಎಚ್‌.ಡಿ. ರಂಗನಾಥ್ ಅವರು ವಿಧಾನಸಭೆಯಲ್ಲಿ ಮಂಗಳವಾರ ಪ್ರಶ್ನೆಯೊಂದನ್ನು ಕೇಳಿದ್ದರು. ಇದಕ್ಕೆ ಸಹಕಾರ ಖಾತೆಯನ್ನೂ ಹೊಂದಿರುವ ಸಿದ್ದರಾಮಯ್ಯ ಉತ್ತರ ನೀಡಿದರು.

ಉತ್ತರದಿಂದ ಸಮಾಧಾನರಾಗದ ರಂಗನಾಥ್, ಮರುಪ್ರಶ್ನೆಗೆ ಕೇಳುವಾಗ ತಮ್ಮ ತಾಲೂಕಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಡಿಸಿಸಿ ಬ್ಯಾಂಕ್‌ನಿಂದ ಸಾಲ ನೀಡುವಾಗ ತಮ್ಮ ಕ್ಷೇತ್ರಕ್ಕೆ ತಾರತಮ್ಯ ಮಾಡಲಾಗಿದೆ. ಒಂದು ಲಕ್ಷ ಖಾತೆದಾರರಿದ್ದರೂ 20 ಸಾವಿರ ರೈತರಿಗೆ ಅಲ್ಪಾವಧಿ ಸಾಲವನ್ನು ನೀಡಿದ್ದಾರೆ ಎಂದು ಏರಿದ ಧ್ವನಿಯಲ್ಲಿ ದೂರಿದರು.

'ರಂಗನಾಥ್ ಆಕ್ರೋಶದಿಂದ ಮಾತನಾಡಿದ್ದಾರೆ. ನನ್ನ ಮೇಲೆ ವಿಶ್ವಾಸವಿಡಿ. ಮುಂದಿನ ವರ್ಷದಲ್ಲಿ ಅದನ್ನು ಸರಿಪಡಿಸುತ್ತೇನೆ' ಎಂದು ಸಿದ್ದರಾಮಯ್ಯ ಮೆಲುದನಿಯಲ್ಲೇ ಹೇಳಿದರು.

ಆಗ ಮಧ್ಯಪ್ರವೇಶಿಸಿದ ವಿರೋಧ ಪಕ್ಷದ ನಾಯಕ ಆರ್‌. ಅಶೋಕ, 'ರಂಗನಾಥ್ ಅವರಿಗೆ ಬೇಕೂ ಅಂತ ತಾರತಮ್ಯ ಮಾಡಿದರೆ ಹೇಗೆ' ಎನ್ನುತ್ತಾ ಸರ್ಕಾರದ ನಾಯಕತ್ವವನ್ನೂ ಪ್ರಸ್ತಾಪಿಸಿದರು. 'ನೀನು ಉರಿಯೋ ಗಾಯಕ್ಕೆ ಉಪ್ಪು ಹಾಕಲು ಹೋಗಬೇಡ' ಎಂದು ಸಿದ್ದರಾಮಯ್ಯ ಅಶೋಕಗೆ ತಿರುಗೇಟು ನೀಡಿದರು.

'ಹಾಗಿದ್ದರೆ ಉರಿಯುತ್ತಿರುವುದು ಗ್ಯಾರಂಟಿ ಅಲ್ಲವೇ' ಎಂದು ಮತ್ತೆ ಅಶೋಕ ಛೇಡಿಸಿದರು.

'ನಾನು ಹೇಳಿದ್ದು ಗಾದೆ ಮಾತು' ಎಂದು ಸಿದ್ದರಾಮಯ್ಯ ಸಮಜಾಯಿಷಿ ನೀಡಿದರು.

'ಗಾದೆ ಮಾತು ಹೇಳುತ್ತಿದ್ದೀರೋ ಅಥವಾ ನಿಮ್ಮಲ್ಲಿ ಆಗುತ್ತಾ ಇರೋದನ್ನು ಹೇಳಿದೀರೋ' ಎಂದು ಬಿಜೆಪಿಯ ಸುನಿಲ್‌ಕುಮಾರ್ ಕಾಲೆಳೆದರು.

'ನಿಮಗೆ ಗಾದೆ ಮಾತು ಗೊತ್ತಿಲ್ಲ ಎಂದರೆ ನಾನು ಏನು ಹೇಳಲಿ. ಉರಿಯೋ ಉಪ್ಪು ಹಾಕುವುದೇ ವಿರೋಧಪಕ್ಷದವರ ಕೆಲಸ. ವಿರೋಧಪಕ್ಷದವರು ಏನೇ ಪ್ರಚೋದನೆ ಮಾಡಿದರೂ ನಮ್ಮವರು ಯಾರೂ ಕೂಡ ಪ್ರಚೋದನೆಗೆ ಒಳಗಾಗುವುದಿಲ್ಲ. ವಿರೋಧಪಕ್ಷದವರು ಇದರಲ್ಲಿ ಹುಳಿ ಹಿಂಡುವ ಅಗತ್ಯವಿಲ್ಲ ಎಂದು ಸಿದ್ದರಾಮಯ್ಯ ಗದರಿದರು.

ಈಗಲೂ ಸಿ.ಎಂ– ಸಿದ್ದರಾಮಯ್ಯ ಐದು ವರ್ಷ ಅಲ್ಲವೇ–ಅಶೋಕ

ಸಿಎಂ: ಈಗಲೂ ನಾನೇ ಮುಖ್ಯಮಂತ್ರಿ. ಹೈಕಮಾಂಡ್ ಹೇಳುವ ತನಕವೂ ನಾನೇ ಮುಖ್ಯಮಂತ್ರಿ

ಅಶೋಕ: ಹಾಗಿದ್ದರೆ ನೀವು ಐದು ವರ್ಷ ಮುಖ್ಯಮಂತ್ರಿ ಆಗಿರುವುದಿಲ್ಲವೆ?

ಸಿ.ಎಂ: ಐದು ವರ್ಷ ನಾವೇ ಇರುತ್ತೇವೆ. ಜನ ಐದು ವರ್ಷಕ್ಕೆ ನಮ್ಮನ್ನು ಆಶೀರ್ವದಿಸಿದ್ದಾರೆ. ಹೈಕಮಾಂಡ್ ಏನು ತೀರ್ಮಾನ ಮಾಡುತ್ತದೆಯೋ ಅದರಂತೆ ಕೇಳುತ್ತೇವೆ

ಬಿಜೆಪಿಯವರಿಗೆ ಯಾವ ಕಾರಣಕ್ಕೂ ರಾಜ್ಯದ ಜನ ಆಶೀರ್ವಾದ ಮಾಡುವುದಿಲ್ಲ. ಎರಡು ಬಾರಿ ಅಧಿಕಾರ ಮಾಡಿದ್ದೀರಿ, ಯಾವಾಗಲಾದರೂ ಜನರ ಆಶೀರ್ವಾದ ತೆಗೆದುಕೊಂಡು ಅಧಿಕಾರ ಮಾಡಿದ್ದೀರಾ? 'ಆಪರೇಷನ್ ಕಮಲ'ದ ಮೂಲಕ ಅಧಿಕಾರ ಹಿಡಿದವರು ನೀವು. ಮುಂದೆಯೂ ನಿಮಗೆ ಆಶೀರ್ವಾದ ಮಾಡುವುದಿಲ್ಲ. ಕಾಂಗ್ರೆಸ್ ಪಕ್ಷದಲ್ಲಿ ಹೈಕಮಾಂಡ್ ಮಾತು ಅಂತಿಮ. ಆದರೆ ಬಿಜೆಪಿಯ ಅಧ್ಯಕ್ಷಗಿರಿ ಆಯ್ಕೆಯಲ್ಲಿ ಒಮ್ಮತ ಸಾಧಿಸಿಲ್ಲ. ಬಿಜೆಪಿಯವರಿಗೆ ಹೊಟ್ಟೆ ಕಿಚ್ಚು

ಅಶೋಕ: 2019ರಲ್ಲಿ ಜನ ನಿಮಗೆ ಆಶೀರ್ವಾದ ಮಾಡಿರಲಿಲ್ಲ. ಆದರೆ, ಜೆಡಿಎಸ್ ಮನೆ ಬಾಗಿಲಿಗೆ ಹೋಗಿ, ಅವರ ಜತೆ ಸರ್ಕಾರ ಮಾಡಿದ್ದೀರಲ್ಲ

ಸಿಎಂ: ಬಿಜೆಪಿ ಅಧಿಕಾರಕ್ಕೆ ಬರಬಾರದು ಎಂದು ಜೆಡಿಎಸ್ ಜತೆ ಸೇರಿ ಸರ್ಕಾರ ಮಾಡಿದ್ದು

ಎಸ್‌. ಸುರೇಶ್ ಕುಮಾರ್: ಯಾವಾಗಲೂ ಏಕ ವಚನದಲ್ಲೇ ಮಾತನಾಡುವ ಸಿದ್ದರಾಮಯ್ಯ, ಈಗ 'ನಾವೇ' ಐದು ವರ್ಷ ಸಿ.ಎಂ ಎಂದು ಬಹುವಚನಕ್ಕೆ ಬಂದಿದ್ದಾರೆ. 'ನಾನು ಹೋದಲ್ಲಿ ಮಾತ್ರ ಹೋಗುತ್ತೇನೆ' ಎಂಬ ಕನಕದಾಸರ ಮಾತಿನಂತೆ ಆಗಿದೆ ಅವರ ಮಾತು

ಸಿ.ಎಂ: 'ನಾನು ಎನ್ನುವುದು ಹೋದರೆ ಹೋದೇನು' ಎಂದು ಕನಕದಾಸರು ಹೇಳಿದ್ದಾರೆ. ಅವರಿಗೂ ನನಗೂ ಹೋಲಿಕೆ ಮಾಡಬೇಡಿ. ನಾವು ಸರ್ಕಾರ ರಚನೆ ಮಾಡಿದ್ದೇವೆ. ಸರ್ಕಾರ ಆಗಿರುವಾಗ 'ನಾವು' ಅಂತ ಹೇಳಬೇಕು. 'ನನ್ನ ಸರ್ಕಾರ' ಅಂತ ಹೇಳಲು ಆಗಲ್ಲ. 'ನಮ್ಮ ಸರ್ಕಾರ' ಎನ್ನಬೇಕಾಗುತ್ತದೆ.

ಮೊಟ್ಟೆ: 3 ದಿನಗಳಲ್ಲಿ ವರದಿ

ಸುವರ್ಣ ವಿಧಾನಸೌಧ (ಬೆಳಗಾವಿ): ಮೊಟ್ಟೆ ಬಳಕೆ ಆರೋಗ್ಯಕ್ಕೆ ಹಾನಿಕಾರಕ ಎಂಬ ಕಂಪನಿಯೊಂದರ ವರದಿಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದ್ದು, 124 ಮಾದರಿಗಳನ್ನು ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ವರದಿಯ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ವಿಧಾನಪರಿಷತ್ ಶೂನ್ಯವೇಳೆಯಲ್ಲಿ ಕಾಂಗ್ರೆಸ್‌ನ ರಮೇಶ್ ಬಾಬು ವಿಷಯ ಪ್ರಸ್ತಾವಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ದಿನೇಶ್, 'ಮೂರು ದಿನಗಳಲ್ಲಿ ವರದಿ ಕೈಸೇರಲಿದೆ. ಹಿಂದೆಯೂ ಇಂತಹ ಸುದ್ದಿ ಹರಡಿದಾಗ ಹಲವು ಮಾದರಿಗಳನ್ನು ಪರೀಕ್ಷೆಗೆ ಒಳಪಡಿಸಲಾಗಿತ್ತು. ಒಂದು ಮಾದರಿಯಲ್ಲಿ ಮಾತ್ರ ಗುಣಮಟ್ಟ ಕಡಿಮೆ ಇತ್ತು. ಮೊಟ್ಟೆ ಒಂದು ಪೌಷ್ಟಿಕಾಂಶವಾಗಿದ್ದು, ಯಾವುದೇ ಸಮಸ್ಯೆ ಇರುವುದಿಲ್ಲ. ಹಾಗಾಗಿ, ಆತಂಕ ಅನಗತ್ಯ. ಇಂತಹ ವಿಷಯಗಳಲ್ಲಿ ಸರ್ಕಾರ ಎಚ್ಚರಿಕೆ ವಹಿಸಲಿದೆ ಎಂದರು.

'ಕಂಪನಿಯೊಂದರ ವರದಿಯು ಮೊಟ್ಟೆ ಉತ್ಪಾದನಾ ವಲಯದ ಮೇಲೆ ಪರಿಣಾಮ ಬೀರುತ್ತದೆ. ಮೊಟ್ಟೆ ಸೇವಿಸುವ ಜನರು ಆತಂಕಕ್ಕೆ ಒಳಗಾಗಿದ್ದಾರೆ. ಇಂತಹ ದುರುದ್ದೇಶದ ವರದಿ ಮಾಡಿದವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕು' ಎಂದು ರಮೇಶ್ ಬಾಬು ಒತ್ತಾಯಿಸಿದರು.

ಆಳಂದ ಮತಕಳವು: ಪ್ರತಿಧ್ವನಿ

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): ಆಳಂದ ವಿಧಾನಸಭಾ ಕ್ಷೇತ್ರದಲ್ಲಿ ನಡೆದಿದೆ ಎನ್ನಲಾದ ಮತ ಕಳವು ಪ್ರಕರಣವು ವಿಧಾನಸಭೆಯಲ್ಲಿ ಮಂಗಳವಾರ ಪ್ರತಿಧ್ವನಿಸಿತು.

ವಿಷಯ ಪ್ರಸ್ತಾಪಿಸಿದ ಕಾಂಗ್ರೆಸ್‌ನ ಬಿ.ಆರ್‌. ಪಾಟೀಲ, 'ನನಗೆ ವಿಧಾನ ಸಭೆಗೆ ಬರಲು ಅಡ್ಡಿ ಮಾಡುವ ಪ್ರಯತ್ನ ನಡೆದಿತ್ತು. ಆ ಪ್ರಯತ್ನ ಈಗ ಬಯಲಾಗಿದೆ. ಮತ ಕಳವು ನಡೆಸಿರುವುದು ಬಹಿರಂಗವಾಗಿದೆ. ಈ ಬಗ್ಗೆ ಚರ್ಚೆಗೆ ಅವಕಾಶ ನೀಡಬೇಕು' ಎಂದು ಒತ್ತಾಯಿಸಿದರು.

ಅದಕ್ಕೆ ವಿರೋಧ ಪಕ್ಷದ ಸದಸ್ಯರು ಗಟ್ಟಿ ಧ್ವನಿಯಿಂದ ಆಕ್ಷೇಪ ವ್ಯಕ್ತಪಡಿಸಿದರು. 'ಮತ ಕಳವು ಶುರು ಮಾಡಿದ್ದೇ ಕಾಂಗ್ರೆಸ್. ಈ ವಿಚಾರವಾಗಿ ಎಸ್‌ಐಟಿ ಮಧ್ಯಂತರ ವರದಿ ಸಲ್ಲಿಸಿದ ನಂತರ ಚರ್ಚೆ ಮಾಡೋಣ' ಎಂದು ಬಿಜೆಪಿಯ ವಿ. ಸುನಿಲ್ ಕುಮಾರ್ ಮತ್ತಿತರರು ಆಡಳಿತ ಪಕ್ಷದ ಸದಸ್ಯರ ಮೇಲೆ ಮುಗಿಬಿದ್ದರು.

ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಬೇಕು ಎಂದು ಕಾಂಗ್ರೆಸ್ ಸದಸ್ಯರು ಆಗ್ರಹಿಸಿದಾಗ, 'ಈ ವಿಷಯ ಕಾರ್ಯಸೂಚಿಯಲ್ಲಿ ಇಲ್ಲ' ಎಂದು ಸಭಾಧ್ಯಕ್ಷ ಯು.ಟಿ. ಖಾದರ್ ಸಮಾಧಾನಪಡಿಸಲು ಯತ್ನಿಸಿದರು.

ಬಿ.ಆರ್‌. ಪಾಟೀಲ ಅವರ ಆಗ್ರಹಕ್ಕೆ ದನಿಗೂಡಿಸಿದ ಸಚಿವ ಪ್ರಿಯಾಂಕ್ ಖರ್ಗೆ, 'ಒಂದು ಮತಕ್ಕೆ ₹80ಕ್ಕೆ ವೆಚ್ಚ ಮಾಡಿ ಕಳವು ಮಾಡಲಾಗಿದೆ. ಸಂವಿಧಾನವನ್ನು ಕೊಲೆ ಮಾಡುತ್ತಿದ್ದಾರೆ. ಸದನದಲ್ಲಿ ಚರ್ಚೆಗೆ ಅವಕಾಶ ಕೊಡಿ' ಎಂದು ಮನವಿ ಮಾಡಿದರು. ಈ ವೇಳೆ ಆಡಳಿತ ಮತ್ತು ವಿರೋಧ ಪಕ್ಷದ ಸದಸ್ಯರ ನಡುವೆ ವಾಕ್ಸಮರವೇ ನಡೆಯಿತು.

ಈ ಮಧ್ಯೆ, 'ಗೃಹಲಕ್ಷ್ಮೀ' ಯೋಜನೆಯ ವಿಚಾರ ಪ್ರಸ್ತಾಪಿಸಿದ ವಿರೋಧ ಪಕ್ಷದ ನಾಯಕ ಆರ್‌. ಅಶೋಕ, 'ಫೆಬ್ರುವರಿ ಮತ್ತು ಮಾರ್ಚ್ ತಿಂಗಳಲ್ಲಿ 'ಗೃಹಲಕ್ಷ್ಮೀ' ಹಣ ನೀಡಲಾಗಿದೆ ಎಂದು ಹೇಳುವ ಮೂಲಕ ಸಚಿವರು ಸಸನಕ್ಕೆ ತಪ್ಪು ಮಾಹಿತಿ ನೀಡಿರುವ ಬಗ್ಗೆ ಚರ್ಚೆಗೆ ಅವಕಾಶ ನೀಡಬೇಕು' ಎಂದು ಪಟ್ಟು ಹಿಡಿದರು.

ಸದನ: ಮಾತು- ಗಮ್ಮತ್ತು

'ಸತ್ಯ ಹೇಳುವ ಸಚಿವರು'

ಜೆಡಿಎಸ್‌ನ ಟಿ.ಎ.ಶರವಣ ಅವರು ಪೌರಾಡಳಿತ ಇಲಾಖೆಯ ಅಡಿಯಲ್ಲಿ ಬರುವ ನಗರ ಸ್ಥಳೀಯ ಸಂಸ್ಥೆಗಳ ಬಗ್ಗೆ ಪೌರಾಡಳಿತ ಸಚಿವ ರಹೀಂ ಖಾನ್ ಅವರಲ್ಲಿ ಪ್ರಶ್ನೆ ಕೇಳಿದ್ದರು. ಸಚಿವರು ಉತ್ತರಿಸುವಾಗ, 'ಉತ್ತರ ಕೊಟ್ಟಿದ್ದಾರೆ' ಎಂದರು. ಮಧ್ಯ ಪ್ರವೇಶಿಸಿದ ಶರವಣ, 'ಸಚಿವರೇ, ಉತ್ತರ ಕೊಟ್ಟಿದ್ದಾರೆ ಎನ್ನಬಾರದು. ಉತ್ತರ ಕೊಟ್ಟಿದ್ದೇನೆ ಎನ್ನಬೇಕು' ಎಂದು ಸರಿಪಡಿಸಿದರು. ರಹೀಂ ಖಾನ್ ಅವರು, 'ಉತ್ತರ ಕೊಟ್ಟಿದ್ದೇನೆ' ಎಂದು ಸರಿಪಡಿಸಿಕೊಂಡರು. ಶರವಣ ಅವರು, 'ಅವರು ಮೊದಲು ಹೇಳಿದ್ದೇ ಸರಿಯಾಗಿತ್ತು. ಅಧಿಕಾರಿಗಳು ಉತ್ತರ ಕೊಟ್ಟಿದ್ದಾರೆ ಎಂದು ಸರಿಯಾಗಿ ಹೇಳಿದ್ದರು. ಇವರು ಸತ್ಯ ಹೇಳುವ ಸಚಿವರು' ಎಂದರು.

ವಿಮಾನ ನಿಲ್ದಾಣಕ್ಕಾಗಿ 'ಜಗಳ'

ರಾಜ್ಯ ಸರ್ಕಾರದ ಸಚಿವರು ನಡೆಸಿದ 'ಜಗಳ'ಕ್ಕೆ ವಿಧಾನ ಪರಿಷತ್ತು ಸಾಕ್ಷಿಯಾಯಿತು. ಕಾಂಗ್ರೆಸ್‌ನ ತಿಪ್ಪಣ್ಣಪ್ಪ ಕಮಕನೂರ ಅವರು ಕಲಬುರಗಿ ವಿಮಾನ ನಿಲ್ದಾಣದಿಂದ ವಿಮಾನಗಳ ಕಾರ್ಯಾಚರಣೆಯನ್ನು ರದ್ದುಪಡಿಸಲಾಗುತ್ತಿದೆ. ಇದಕ್ಕೆ ಪರಿಹಾರ ಒದಗಿಸಬೇಕು ಎಂದು ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ.ಪಾಟೀಲ ಅವರನ್ನು ಕೋರಿದರು.

ಸಚಿವ ಎಂ.ಬಿ.ಪಾಟೀಲ, 'ಕೇಂದ್ರ ಸರ್ಕಾರವು ಉಡಾನ್ ಯೋಜನೆಯನ್ನು ಇನ್ನೂ 7-10 ವರ್ಷ ವಿಸ್ತರಿಸಬೇಕು' ಎಂದರು.

ತಿಪ್ಪಣ್ಣಪ್ಪ, 'ನಮಗೆ ವಿಮಾನ ನಿಲ್ದಾಣ ಬೇಕೇಬೇಕು' ಎಂದು ಪಟ್ಟುಹಿಡಿದರು. ಆಗ ಮಧ್ಯಪ್ರವೇಶಿಸಿದ ಸಕ್ಕರೆ ಸಚಿವ ಶಿವಾನಂದ ಪಾಟೀಲ ಅವರು, 'ಬೀದರ್‌ಗೆ ಹೇಗೆ ವಿಮಾನ ನಿಲ್ದಾಣ ಕೊಟ್ಟಿರಿ' ಎಂದು ಎಂ.ಬಿ.ಪಾಟೀಲರತ್ತ ಪ್ರಶ್ನೆ ಎಸೆದರು.

ಆ ಪ್ರಶ್ನೆಗೆ ಕೆರಳಿದ ಅರಣ್ಯ ಸಚಿವ ಈಶ್ವರ ಬಿ.ಖಂಡ್ರೆ, 'ಬೀದರ್‌ನಲ್ಲಿ 60 ವರ್ಷಗಳಿಂದ ವಾಯುನೆಲೆ ಇದೆ. ಅಲ್ಲಿ ₹20ಕೋಟಿ– ₹30 ಕೋಟಿ ವೆಚ್ಚ ಮಾಡಿ, ಟರ್ಮಿನಲ್ ನಿರ್ಮಿಸಿ ವಿಮಾನಯಾನ ಆರಂಭಿಸಲಾಗಿದೆ. ಬೇರೆಡೆ ₹200ಕೋಟಿ-₹300 ಕೋಟಿ ಬೇಕು' ಎಂದು ಪಟ್ಟು ಹಾಕಿದರು.

ನಿದ್ರೆಗೆ ತೊಂದರೆಯಾಗುತ್ತಿದೆ ಎಂದ ಬಿಜೆಪಿಯ ಡಿ.ಎಸ್‌.ಅರುಣ್

ಪರಿಷತ್ತಿನಲ್ಲಿ ಆಜಾನ್, ಪಟಾಕಿ ಗದ್ದಲ

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): 'ಕತ್ತಲಿನ ವೇಳೆ ಮಸೀದಿಗಳಲ್ಲಿ ಲೌಡ್‌ಸ್ಪೀಕರ್ ಬಳಸಿ ಆಜಾನ್ ಕೂಗಲು ಇರುವ ನಿರ್ಬಂಧವು ಸರಿಯಾಗಿ ಪಾಲನೆ ಯಾಗುತ್ತಿಲ್ಲ. ಇದರಿಂದ ನಿದ್ರೆಗೆ ತೊಂದರೆಯಾಗುತ್ತಿದೆ' ಎಂದ ಬಿಜೆಪಿಯ ಡಿ.ಎಸ್‌.ಅರುಣ್ ಅವರ ಮಾತು ವಿಧಾನ ಪರಿಷತ್ತಿನಲ್ಲಿ ಕೆಲಕಾಲ ಗದ್ದಲಕ್ಕೆ ಕಾರಣವಾಯಿತು.

ಪರಿಷತ್ತಿನಲ್ಲಿ ಮಂಗಳವಾರ ಪ್ರಶ್ನೋತ್ತರದ ವೇಳೆ ಅರುಣ್ ಅವರು ಈ ವಿಷಯವನ್ನು ಪ್ರಸ್ತಾಪಿಸಿ, ಪರಿಸರ ಸಚಿವ ಈಶ್ವರ ಬಿ.ಖಂಡ್ರೆ ಅವರನ್ನು ಪ್ರಶ್ನಿಸಿದರು. 'ನಾನು ಎಷ್ಟೋ ಬಾರಿ ನಸುಕಿನ 4.30-4.45ರ ಹೊತ್ತಿಗೆ ಮನೆಗೆ ಹೋಗುತ್ತೇನೆ. ಇನ್ನೇನು ಮಲಗಬೇಕು ಎನ್ನುವಷ್ಟರಲ್ಲಿ, ನಮ್ಮ ಮನೆಯ ಹಿಂದಿರುವ ಮಸೀದಿಯಲ್ಲಿ 5 ಗಂಟೆಗೆ ಜೋರಾಗಿ ಆಜಾನ್ ಕೂಗುತ್ತಾರೆ. ನನ್ನ ನಿದ್ದೆ ಹೋಗುತ್ತದೆ' ಎಂದರು.

'ಈ ಬಗ್ಗೆ ದೂರು ನೀಡಲು ಯಾರಿಗೂ ಧೈರ್ಯವಿಲ್ಲ. ಅಂತಹ ಸ್ಥಿತಿ ಇದೆ. ನಮ್ಮ ಭಜನೆ ಮತ್ತಿತರ ಕಾರ್ಯಕ್ರಮಗಳಿಗೆ ಪೊಲೀಸರು ಅಡ್ಡಿಪಡಿಸುತ್ತಾರೆ. ಆದರೆ ಮಸೀದಿಗೆ ಹೋಗಿ ಮನವಿ ಸಲ್ಲಿಸುತ್ತಾರೆ. ಈ ಸ್ಥಿತಿ ಬದಲಾಗಬೇಕು' ಎಂದು ಒತ್ತಾಯಿಸಿದರು.

ಸಚಿವ ಈಶ್ವರ ಖಂಡ್ರೆ, 'ಕಾನೂನು ಎಲ್ಲರಿಗೂ ಅನ್ವಯವಾಗುತ್ತದೆ. ಭಜನೆ, ಕೀರ್ತನೆ, ದೀಪಾವಳಿ ಮತ್ತು ದೇವಾಲಯಗಳಿಗೂ ಅನ್ವಯವಾಗುತ್ತದೆ. ಆಜಾನ್‌ಗೂ ಅನ್ವಯವಾಗುತ್ತದೆ' ಎಂದರು. ಇದಕ್ಕೆ ಬಿಜೆಪಿಯ ಕೇಶವಪ್ರಸಾದ್, ಭಾರತಿ ಶೆಟ್ಟಿ ಆಕ್ಷೇಪ ಎತ್ತಿದರು. ಆಗ ಸಭಾಪತಿ ಬಸವರಾಜ ಹೊರಟ್ಟಿ, 'ಸದಸ್ಯರು ಕೇಳಿದ ಪ್ರಶ್ನೆಗಷ್ಟೇ ಉತ್ತರಿಸಿ. ಆ ಬಗ್ಗೆ ಏನು ಮಾಡುತ್ತೀರಿ ಎಂಬುದನ್ನಷ್ಟೇ ಹೇಳಿ' ಎಂದರು.

ಭಾರತಿ ಶೆಟ್ಟಿ ಅವರು, 'ಈ ಹಬ್ಬಗಳೆಲ್ಲಾ ವರ್ಷದಲ್ಲಿ ಯಾವುದೋ ಒಂದು ದಿನ ನಡೆಯುತ್ತದೆ. ಅವರೂ ಬೇಕಿದ್ದಲ್ಲಿ ಒಂದು ತಿಂಗಳು ಹಬ್ಬ ಮಾಡಲಿ. ಆದರೆ ಅವರು ವರ್ಷಪೂರ್ತಿ, ಹಗಲೂ ರಾತ್ರಿ ಆಜಾನ್ ಕೂಗುತ್ತಾರೆ' ಎಂದರು. ಅರುಣ್, 'ಪ್ರತಿದಿನ ಐದು ಬಾರಿ ಆಜಾನ್ ಕೂಗುತ್ತಾರೆ. ಈ ಸರ್ಕಾರದಲ್ಲಿ ಅದು ಹೆಚ್ಚಾಗಿದೆ' ಎಂದರು. ಭಾರತಿ ಶೆಟ್ಟಿ, 'ಈ ಸರ್ಕಾರದಲ್ಲಿ ಇದೆಲ್ಲಾ ವಿಪರೀತ ಹೆಚ್ಚಾಗಿದೆ' ಎಂದು ದನಿಗೂಡಿಸಿದರು.

ಆಗ ಸಚಿವ ಖಂಡ್ರೆ, 'ಇದು ಸೂಕ್ಷ್ಮ ವಿಚಾರ. ಇದರಲ್ಲಿ ಯಾರೂ ರಾಜಕೀಯ ಮಾಡಬಾರದು. ಕಾನೂನು ಎಲ್ಲರಿಗೂ ಒಂದೇ' ಎಂದು ಪುನರುಚ್ಚರಿಸಿದರು. ಬಿಜೆಪಿಯ ಹಲವು ಸದಸ್ಯರು ಎದ್ದುನಿಂತು ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದರು. ಗದ್ದಲ ಹೆಚ್ಚಾದಾಗ ಸಭಾಪತಿ ಅವರು, ಎಲ್ಲರನ್ನೂ ಸಮಾಧಾನಪಡಿಸಿ ಕೂರಿಸಿದರು.



ಲೌಡ್ ಸ್ಪೀಕರ್ ಬಳಸಿ ಆಜಾನ್ ಕೂಗುವುದರಿಂದ ತಮ್ಮ ನಿದ್ದೆ ಹಾಳಾಗುತ್ತಿದೆ ಎಂದು ಬಿಜೆಪಿಯ ಡಿ.ಎಸ್‌.ಅರುಣ್ ಅವರು ವಿಧಾನ ಪರಿಷತ್ತಿನಲ್ಲಿ ವಿಷಯ ಪ್ರಸ್ತಾಪಿಸಿದರು –ಪ್ರಜಾವಾಣಿ ಚಿತ್ರ

ಪ್ರಶ್ನೋತ್ತರ (ವಿಧಾನಸಭೆ)

1933ರ ವಸತಿಗೃಹದಲ್ಲಿ ವಾಸ

ರಾಯಚೂರು ಜಿಲ್ಲೆ ತುರುವಿಹಾಳ ಪಟ್ಟಣದ ಬಳಗನೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ 16 ವಸತಿ ಗೃಹಗಳಿದ್ದು, ಈ ವಸತಿ ಗೃಹಗಳ ಕಟ್ಟಡ 1933ನೇ ಸಾಲಿನಲ್ಲಿ ನಿರ್ಮಾಣಗೊಂಡಿದ್ದು, ಶಿಥಿಲಾವಸ್ಥೆಯಲ್ಲಿರುವ ಈ ವಸತಿಗೃಹದಲ್ಲಿ 10 ಪೊಲೀಸ್ ಸಿಬ್ಬಂದಿ ಕುಟುಂಬಗಳು ವಾಸವಿದ್ದು, ಈ ಕಟ್ಟಡ ನೆಲಸಮಗೊಳಿಸಿ ಹೊಸದಾಗಿ ಕಟ್ಟಿಕೊಡಲಾಗುವುದು

ಜಿ.ಪರಮೇಶ್ವರ, ಗೃಹಸಚಿವ. **ಪ್ರಶ್ನೆ: ಬಸನಗೌಡ ತುರವಿಹಾಳ್,** ಕಾಂಗ್ರೆಸ್

ಶಿವಮೊಗ್ಗಕ್ಕೆ ಪೊಲೀಸ್ ಕಮಿಷನರೇಟ್ ಪರಿಶೀಲನೆ

ಶಿವಮೊಗ್ಗ ಜಿಲ್ಲೆಗೆ ಹೊಸದಾಗಿ 32 ಎಸ್‌ಐಗಳನ್ನು ನೀಡಲಾಗುವುದು. ಈ ಎಸ್‌ಐಗಳು ತರಬೇತಿ ಹಂತದಲ್ಲಿದ್ದಾರೆ. ಮುಂದಿನ ಹಂತದಲ್ಲಿ ಇನ್ನೂ 10 ಎಸ್‌ಐ ಹುದ್ದೆಗಳನ್ನು ಭರ್ತಿ ಮಾಡಲಾಗುವುದು. ಶಿವಮೊಗ್ಗಕ್ಕೆ ಪೊಲೀಸ್ ಕಮಿಷನರೇಟ್ ಮಾಡಲು ಕೆಲವು ಮಾನದಂಡ ಅನುಸರಿಸಬೇಕಾಗುತ್ತದೆ. ಸಾಧಕ–ಬಾಧಕಗಳನ್ನು ನೋಡಿ ಮುಂದಿನ ದಿನಗಳಲ್ಲಿ ಪರಿಶೀಲನೆ ನಡೆಸುತ್ತೇವೆ. ರಾಜ್ಯದಲ್ಲಿ 1600 ಪಿಎಸ್‌ಐ ಹುದ್ದೆಗಳ ಭರ್ತಿಗೆ ಹಣಕಾಸು ಇಲಾಖೆಗೆ ಪ್ರಸ್ತಾವನೆ ಮಂಡಿಸಲಾಗಿದೆ

ಜಿ.ಪರಮೇಶ್ವರ, ಗೃಹಸಚಿವ. **ಪ್ರಶ್ನೆ: ಎಸ್‌.ಎನ್‌. ಚನ್ನಬಸಪ್ಪ,** ಬಿಜೆಪಿ

ಮದ್ಯಪಾನ ಜಾಗೃತಿಗೆ ಅನುದಾನವಿಲ್ಲ

ಮದ್ಯಪಾನದ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸುವ ಕೆಲಸ ಆಗುತ್ತಿಲ್ಲ. ಇದಕ್ಕೆ ಅನುದಾನದ ಕೊರತೆ ಇದೆ. ಇದಕ್ಕಾಗಿ ಹೆಚ್ಚು ಅನುದಾನ ಕೇಳುತ್ತೇವೆ. ಗ್ರಾಮ ಸಭೆಗಳಿಗೆ ಹೋಗಿ ಅಹವಾಲುಗಳನ್ನು ಕೇಳದ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೇವೆ. ಗ್ರಾಮಾಂತರ ಪ್ರದೇಶದಲ್ಲಿ ಸಾರಾಯಿ ಕೊಟ್ಟು ಕೆಲಸ ಮಾಡಿಸಿಕೊಳ್ಳುತ್ತಿದ್ದಾರೆ

ಆರ್‌.ಬಿ.ತಿಮ್ಮಾಪುರ, ಅಬಕಾರಿ ಸಚಿವ. **ಪ್ರಶ್ನೆ: ಹರೀಶ್ ಬಿ.ಪಿ**

ಸಿಗಂದೂರಿಗೆ ಪೊಲೀಸ್ ಠಾಣೆ

ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕು ಸಿಗಂದೂರಿಗೆ ಅಪಾರ ಪ್ರಮಾಣದ ಪ್ರವಾಸಿಗರು ಮತ್ತು ಭಕ್ತರು ಬರುವುದರಿಂದ ಪೊಲೀಸ್ ಠಾಣೆ ಆರಂಭಿಸುವ ಕುರಿತು ಮುಖ್ಯಮಂತ್ರಿ ಜತೆ ಚರ್ಚಿಸಲಾಗುವುದು. ಇದಕ್ಕಾಗಿ ರಾಷ್ಟ್ರೀಯ ಪೊಲೀಸ್ ಆಯೋಗ ವರದಿಯ ಮಾರ್ಗಸೂಚಿಯ ಮಾನದಂಡವನ್ನು ಸಡಿಲಿಸುತ್ತೇವೆ

ಜಿ.ಪರಮೇಶ್ವರ, ಗೃಹಸಚಿವ. **ಪ್ರಶ್ನೆ: ಗೋಪಾಲಕೃಷ್ಣ ಬೇಳೂರು,** ಕಾಂಗ್ರೆಸ್

ಪ್ರಶ್ನೋತ್ತರ (ವಿಧಾನಪರಿಷತ್)

ರಾಜ್ಯದಲ್ಲಿ 600 ಹುಲಿಗಳು

ರಾಜ್ಯದಲ್ಲಿ ಹಿಂದಿನ ಹುಲಿ ಗಣತಿ ನಡೆದಾಗ 563 ಹುಲಿಗಳು ಇರುವುದು ಪತ್ತೆಯಾಗಿತ್ತು. ಈಚೆಗೆ ಹುಲಿ-ಮಾನವ ಸಂಘರ್ಷ ಹೆಚ್ಚಾದ ಕಾರಣ, ಕ್ಯಾಮೆರಾ ಟ್ರ್ಯಾಪ್ ಮತ್ತಿತರ ವಿಧಾನಗಳ ಮೂಲಕ ಹುಲಿಗಳ ಸಂಖ್ಯೆ ಲೆಕ್ಕಹಾಕಲಾಗಿದೆ. ರಾಜ್ಯದಲ್ಲಿ ಈಗ 600ಕ್ಕೂ ಹೆಚ್ಚು ಹುಲಿಗಳು ಇರುವುದು ಪತ್ತೆಯಾಗಿದೆ. ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಧಾರಣಾ ಸಾಮರ್ಥ್ಯ 100 ಹುಲಿಗಳಷ್ಟು ಮಾತ್ರ. ಆದರೆ ಅಲ್ಲಿ ಈಗ 200ರಷ್ಟು ಹುಲಿಗಳಿವೆ ಎಂಬುದು ಗೊತ್ತಾಗಿದೆ. ಮಾನವ-ವನ್ಯಜೀವಿ ಸಂಘರ್ಷಕ್ಕೆ ಗುರಿಯಾಗಿದ್ದ 32 ಹುಲಿಗಳನ್ನು ಸೆರೆಹಿಡಿಯಲಾಗಿದೆ

ಈಶ್ವರ ಬಿ.ಖಂಡ್ರೆ, ಅರಣ್ಯ ಸಚಿವ. **ಪ್ರಶ್ನೆ: ಡಿ.ತಿಮ್ಮಯ್ಯ,** ಕಾಂಗ್ರೆಸ್

ಕಾಯಂ ವೈದ್ಯಕೀಯ ಅಧೀಕ್ಷಕರಿಲ್ಲ

- 33 ರಾಜ್ಯದಲ್ಲಿರುವ ವೈದ್ಯಕೀಯ ಸಂಸ್ಥೆಗಳ ಸಂಖ್ಯೆ
- 4 ವೈದ್ಯಕೀಯ ಅಧೀಕ್ಷಕರ ಕಾಯಂ ನೇಮಕಾತಿ ಆಗಿರುವ ಸಂಸ್ಥೆಗಳು
- 21 ಪ್ರಭಾರ ವೈದ್ಯಕೀಯ ಅಧೀಕ್ಷಕರು ಇರುವ ಸಂಸ್ಥೆಗಳು
- 6 ವೈದ್ಯಕೀಯ ಅಧೀಕ್ಷಕ ಹುದ್ದೆಯೇ ಸೃಜನೆಯಾಗದ ಸಂಸ್ಥೆಗಳು
- 1 ವೈದ್ಯಕೀಯ ಅಧೀಕ್ಷಕರ ನಿಯೋಜನೆ ಇಲ್ಲದ ಸಂಸ್ಥೆ

ಕಸ್ತೂರಿರಂಗನ್ ವರದಿ ಜಾರಿ ಸಾಧ್ಯವಿಲ್ಲ

ಪಶ್ಚಿಮ ಘಟ್ಟಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ಈವರೆಗೆ ಆರು ಅಧಿಸೂಚನೆಗಳನ್ನು ಹೊರಡಿಸಿದ್ದು, ಅವುಗಳ ಜಾರಿ ಸಾಧ್ಯವಿಲ್ಲ ಎಂದು ಕೇಂದ್ರ ಸರ್ಕಾರಕ್ಕೆ ಅಷ್ಟೂ ಬಾರಿ ಪತ್ರ ಬರೆದಿದ್ದೇವೆ. ಸರ್ಕಾರದ ಈ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲ. 2024ರಲ್ಲಿ ಕೇಂದ್ರವು ಹೊರಡಿಸಿದ್ದ 6ನೇ ಅಧಿಸೂಚನೆಯಲ್ಲಿ ರಾಜ್ಯದ ಪಶ್ಚಿಮ ಘಟ್ಟದ 20,668 ಚದರ ಕಿ.ಮೀ. ಪರಿಸರ ಸೂಕ್ಷ್ಮ ಪ್ರದೇಶ ಎಂದು ಘೋಷಿಸುವಂತೆ ಸೂಚಿಸಿತ್ತು. ಅದರಲ್ಲಿ 16,000 ಚದರ ಕಿ.ಮೀ.ನಷ್ಟು ಪ್ರದೇಶವು ವನ್ಯಜೀವಿಧಾಮ, ರಾಷ್ಟ್ರೀಯ ಉದ್ಯಾನ, ಹುಲಿ ಸಂರಕ್ಷಿತ ಪ್ರದೇಶ ಮತ್ತು ಸಂರಕ್ಷಿತ ಅರಣ್ಯ ಪ್ರದೇಶ ಇವೆ. ಉಳಿದ 4,000 ಚದರ ಕಿ.ಮೀ. ಪ್ರದೇಶ ಅರಣ್ಯ ಪ್ರದೇಶದಿಂದ ಹೊರಗೆ ಇದೆ.ಈ ವರದಿ ಜಾರಿ ಸಾಧ್ಯವಿಲ್ಲ ಎಂದು ಕೇಂದ್ರದ ಅಧಿಸೂಚನೆಯನ್ನು ತಿರಸ್ಕರಿಸಿದ್ದೇವೆ.

ಈಶ್ವರ ಬಿ.ಖಂಡ್ರೆ, ಅರಣ್ಯ ಸಚಿವ. **ಪ್ರಶ್ನೆ: ಐವನ್ ಡಿಸೋಜ, ಕಾಂಗ್ರೆಸ್**

ಭ್ರೂಣ ಪತ್ತೆ ತಡೆಗೆ ಚಿಂತನೆ

ಒಂದೆಡೆಯಿಂದ ಮತ್ತೊಂದೆಡೆಗೆ ಸುಲಭವಾಗಿ ಸಾಗಿಸ ಬಹುದಾದ ಪೋರ್ಟೆಬಲ್ ಅಲ್ಟ್ರಾ ಸೌಂಡ್ ಸ್ಕ್ಯಾನಿಂಗ್ ಯಂತ್ರಗಳು ಬಳಕೆಯಲ್ಲಿವೆ. ಈ ತಂತ್ರಜ್ಞಾನವನ್ನು ದುರ್ಬಳಕೆ ಮಾಡಿಕೊಂಡು ಕೆಲವರು ಭ್ರೂಣ ಲಿಂಗ ಪತ್ತೆ ಪರೀಕ್ಷೆಗಳನ್ನು ನಡೆಸುತ್ತಿದ್ದಾರೆ. ಹೆಣ್ಣು ಭ್ರೂಣ ಹತ್ಯೆಗಳಿಗೆ ಇದು ಕಾರಣವಾಗುತ್ತಿದೆ. ಹೀಗಾಗಿ ಇಂತಹ ಯಂತ್ರಗಳಿಗೆ ಕಡಿವಾಣ ಹಾಕಿ ಎಂದು ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲು ನಿರ್ಧರಿಸಲಾಗಿದೆ

ದಿನೇಶ್ ಗುಂಡೂರಾವ್, ಆರೋಗ್ಯ ಸಚಿವ. **ಪ್ರಶ್ನೆ: ಸಿ.ಟಿ.ರವಿ,** ಬಿಜೆಪಿ

ಮತ್ತಷ್ಟು ಕ್ಯಾನ್ಸರ್ ಆಸ್ಪತ್ರೆ

ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಒಂದು ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಆರಂಭಿಸುವುದು ಸರ್ಕಾರದ ಗುರಿ. ಅದರಂತೆಯೇ ಕಿದ್ವಾಯಿ ಕ್ಯಾನ್ಸರ್ ಆಸ್ಪತ್ರೆ ಮೇಲಿನ ಒತ್ತಡ ಕಡಿಮೆ ಮಾಡುವ ಮತ್ತು ದೂರದ ಜಿಲ್ಲೆಗಳ ಜನರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಬೇರೆಡೆ ಕ್ಯಾನ್ಸರ್ ಆಸ್ಪತ್ರೆ ಗಳನ್ನು, ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ ಕ್ಯಾನ್ಸರ್ ಚಿಕಿತ್ಸಾ ಘಟಕಗಳನ್ನು ಆರಂಭಿಸಲಾಗುತ್ತಿದೆ. ಈಗಾಗಲೇ ಹಲವು ಜಿಲ್ಲೆಗಳಲ್ಲಿ ಕ್ಯಾನ್ಸರ್ ಆಸ್ಪತ್ರೆ ಕಟ್ಟಡಗಳ ನಿರ್ಮಾಣ ಕಾಮಗಾರಿ ನಡೆಯುತ್ತಿದೆ.

ಶರಣಪ್ರಕಾಶ ಪಾಟೀಲ, ವೈದ್ಯಕೀಯ ಶಿಕ್ಷಣ ಸಚಿವ. **ಪ್ರಶ್ನೆ: ಎಂ.ಪಿ.ಕುಶಾಲಪ್ಪ,** ಬಿಜೆಪಿ

'ಗ್ಯಾರಂಟಿ' ಸಮಾವೇಶಕ್ಕೆ ₹18.66 ಕೋಟಿ

ಯಾವುದಕ್ಕೆ ಎಷ್ಟು ಹಣ?

ಒಂದನೇ ಪುಟದಿಂದ...

- 2025ನೇ ಸಾಲಿನ ಮೈಸೂರು ದಸರಾ ಮಹೋತ್ಸವಕ್ಕೆ ಹೆಚ್ಚುವರಿಯಾಗಿ ₹23.50 ಕೋಟಿ
- ವಿವಿಧ ವಿಶ್ವವಿದ್ಯಾಲಯಗಳಿಗೆ ಪಿಂಚಣಿ ಪಾವತಿಗೆ ಹೆಚ್ಚುವರಿಯಾಗಿ ₹100 ಕೋಟಿ
- ಖಾಸಗಿ ದೇವಸ್ಥಾನ, ಮಠಗಳಿಗೆ ಅನುದಾನ ನೀಡಲು ಹೆಚ್ಚುವರಿಯಾಗಿ ₹7.50 ಕೋಟಿ
- 2019, 2020, 2021ನೇ ಸಾಲಿನ ಗುಣಾತ್ಮಕ ಸಿನಿಮಾಗಳಿಗೆ ಸಹಾಯಧನ ಮತ್ತು ವಾರ್ಷಿಕ ಚಲನಚಿತ್ರ ಪ್ರಶಸ್ತಿ ವಿತರಣೆಗೆ ಹೆಚ್ಚುವರಿಯಾಗಿ ₹18 ಕೋಟಿ
- ವಿವಿಧ ಜೈಲುಗಳಲ್ಲಿ ಬಾಕಿ ಇರುವ ಬಂದಿಗಳ ಕೂಲಿಗೆ ₹17.50 ಕೋಟಿ

ನಿಗಮಗಳಿಗೆ ₹348.36 ಕೋಟಿ ಮರು ಪಾವತಿ

ಒಂದನೇ ಪುಟದಿಂದ...

ಅಲೆಮಾರಿ, ಅರೆ ಅಲೆಮಾರಿ ಅಭಿವೃದ್ಧಿ ನಿಗಮ, ಮಡಿವಾಳ ಮಾಚಿದೇವ ನಿಗಮ ಮತ್ತು ವಿಶ್ವಕರ್ಮ ಅಭಿವೃದ್ಧಿ ನಿಗಮದಿಂದ ತಲಾ ₹5 ಕೋಟಿ, ಮರಾಠ ಅಭಿವೃದ್ಧಿ ನಿಗಮದಿಂದ ₹27 ಕೋಟಿ, ಕಾಡುಗೊಲ್ಲ ನಿಗಮದಿಂದ ₹10.36 ಕೋಟಿ, ದೇವರಾಜ ಅರಸು ಅಭಿವೃದ್ಧಿ ನಿಗಮದಿಂದ ₹150 ಕೋಟಿ, ನಿಜಶರಣ ಅಂಬಿಗರ ಚೌಡಯ್ಯ ಮತ್ತು ಉಪ್ಪಾರ ನಿಗಮದಿಂದ ತಲಾ ₹3 ಕೋಟಿ, ವೀರಶೈವ ಲಿಂಗಾಯತ ಮತ್ತು ಒಕ್ಕಲಿಗ ಅಭಿವೃದ್ಧಿ ನಿಗಮದಿಂದ ತಲಾ ₹7 ಕೋಟಿಯನ್ನು ಸಮೀಕ್ಷೆಗಾಗಿ ಬಳಕೆ ಮಾಡಲಾಗಿತ್ತು.

‘ಜಾತಿ ಪ್ರಮಾಣಪತ್ರಕ್ಕೆ ತೊಡಕು’

ಹಿಂದುಳಿದ ವರ್ಗಗಳಿಗೆ ಗುತ್ತಿಗೆಯಲ್ಲಿ ಮೀಸಲಾತಿ: ಸಚಿವ ಕೃಷ್ಣ ಬೈರೇಗೌಡ

ಪ್ರಮುಖ ಅಂಶಗಳು
- ತಂತ್ರಾಂಶ ಅಪ್‌ಡೇಟ್ ಮಾಡದ ಎನ್‌ಐಸಿ
- ತೊಡಕು ಸರಿಪಡಿಸಲು ಆಗಸ್ಟ್‌ನಲ್ಲಿಯೇ ಮನವಿ

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): ‘ಹಿಂದುಳಿದ ವರ್ಗಗಳ ಆದಾಯ ಮಿತಿ ಸಂಬಂಧ ರಾಷ್ಟ್ರೀಯ ಮಾಹಿತಿ ಕೇಂದ್ರವು (ಎನ್‌ಐಸಿ) ತಂತ್ರಾಂಶವನ್ನು ಅಪ್‌ಡೇಟ್ ಮಾಡಿಲ್ಲ. ಈ ಕಾರಣದಿಂದಾಗಿ ಗುತ್ತಿಗೆಯಲ್ಲಿ ಮೀಸಲಾತಿಗಾಗಿ ಜಾತಿ ಪ್ರಮಾಣಪತ್ರ ಅಗತ್ಯವಿರುವವರಿಗೆ, ಅವುಗಳನ್ನು ನೀಡಲಾಗುತ್ತಿಲ್ಲ’ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ವಿಧಾನ ಪರಿಷತ್ತಿಗೆ ತಿಳಿಸಿದರು.

ವಿಧಾನ ಪರಿಷತ್ತಿನ ಮಂಗಳವಾರದ ಕಲಾಪದ ವೇಳೆ ಕಾಂಗ್ರೆಸ್ ಸದಸ್ಯ ಯತೀಂದ್ರ ಎಸ್. ಅವರು ಈ ವಿಷಯ ಪ್ರಸ್ತಾಪಿಸಿದರು. ‘ಹಿಂದುಳಿದ ವರ್ಗಗಳ ಪ್ರವರ್ಗ-1 ಮತ್ತು ಪ್ರವರ್ಗ-2ಎ ಸಮುದಾಯದವರಿಗೆ ₹1 ಕೋಟಿವರೆಗಿನ ಸಿವಿಲ್ ಕಾಮಗಾರಿಗಳಲ್ಲಿ ಸರ್ಕಾರವು ಮೀಸಲಾತಿ ಕಲ್ಪಿಸಿದೆ. ಆದರೆ ಜಾತಿ ಪ್ರಮಾಣಪತ್ರ ಸಿಗದೇ ಇರುವ ಕಾರಣಕ್ಕೆ ಮೀಸಲಾತಿಯ ಪ್ರಯೋಜನ ಈ ಸಮುದಾಯದವರಿಗೆ ಸಿಗುತ್ತಿಲ್ಲ’ ಎಂದರು.

‘ಹಿಂದುಳಿದ ವರ್ಗದವರಿಗೆ ಕೆನೆಪದರ ನೀತಿ ಅನ್ವಯವಾಗುತ್ತದೆ. ಈ ವರ್ಗದವರಿಗೆ ಜಾತಿ-ಆದಾಯ ಪ್ರಮಾಣಪತ್ರ ಪಡೆಯಲು ವಾರ್ಷಿಕ ₹8 ಲಕ್ಷ ಆದಾಯ ಮಿತಿ ಇದೆ. ಯಾವುದೇ ಗುತ್ತಿಗೆದಾರರಿಗೂ ಇಷ್ಟು ಕಡಿಮೆ ಆದಾಯ ಇರಲು ಸಾಧ್ಯವಿಲ್ಲ. ಗುತ್ತಿಗೆಯಲ್ಲಿ ಮೀಸಲಾತಿ ಪಡೆದುಕೊಳ್ಳಲು ಇವರು ಜಾತಿ ಪ್ರಮಾಣಪತ್ರ ಸಲ್ಲಿಸಬೇಕು. ಆದರೆ ಜಾತಿ ಪ್ರಮಾಣಪತ್ರ ಪಡೆಯುವ ಪೋರ್ಟಲ್‌ನಲ್ಲಿ ₹8 ಲಕ್ಷಕ್ಕಿಂತ ಹೆಚ್ಚು ಆದಾಯ ನಮೂದಿಸಿ ದ ತಕ್ಷಣ, ಅದು ಅರ್ಜಿಯನ್ನು ತಿರಸ್ಕರಿಸುತ್ತದೆ. ಈ ಸಮಸ್ಯೆ ಬಗೆಹರಿಸುವಲ್ಲಿ ಕಂದಾಯ ಇಲಾಖೆ ವಿಳಂಬ ತೋರುತ್ತಿದೆ’ ಎಂದರು.

ಸಚಿವ ಕೃಷ್ಣ ಬೈರೇಗೌಡ, ‘ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯು ಈ ಸಂಬಂಧ ಜುಲೈ 29ರಂದು ಆದೇಶ ಹೊರಡಿಸಿದೆ. ಜಾತಿ-ಆದಾಯ ಪ್ರಮಾಣಪತ್ರ ನೀಡುವಲ್ಲಿ ಇರುವ ತೊಡಕನ್ನು ಗಮನಿಸಿ, ಅದನ್ನು ಸರಿಪಡಿಸಿ ಎಂದು ಎನ್‌ಐಸಿಗೆ ಆಗಸ್ಟ್‌ನಲ್ಲಿಯೇ ಮನವಿ ಸಲ್ಲಿಸಿದ್ದೇವೆ. ಅವರಿಂದ ಇನ್ನೂ ಆ ಕೆಲಸ ಆಗಿಲ್ಲ. ಈ ಬಗ್ಗೆ ಎನ್‌ಐಸಿಯ ಬೆನ್ನುಬಿದ್ದು, ತಾಂತ್ರಿಕ ಸಮಸ್ಯೆಯನ್ನು ಬಗೆಹರಿಸುತ್ತೇವೆ’ ಎಂದರು.

ಪರಿಷತ್ತು: ಗಮನಸೆಳೆದ ಸೂಚನೆಗಳು

- **ಪರವಾನಗಿ ಭೂಮಾಪಕರಿಗೆ ಕಡಿಮೆ ಭತ್ಯೆ ಸಿಗುತ್ತದೆ. ಅವರನ್ನು, ಖಾಲಿ ಇರುವ 750 ಭೂಮಾಪಕರ ಹುದ್ದೆಗೆ ಅಥವಾ ಬಾಂದು ಜವಾನರ ಹುದ್ದೆಗೆ ಕಾಯಂ ನೇಮಕ ಮಾಡಿಕೊಳ್ಳಬೇಕು: ಶಿವಕುಮಾರ್ ಕೆ.**

ಪರವಾನಗಿ ಭೂಮಾಪಕರನ್ನು ಆ್ಯಡ್‌ಹಾಕ್ (ಅಧಿಕ ಹುದ್ದೆ) ಆಗಿ ನಿಯೋಜನೆ ಮಾಡಿರುವುದರಿಂದ ಕಾಯಂ ನೇಮಕಾತಿ ಸಾಧ್ಯವಿಲ್ಲ. ಭೂಮಾಪನ ಸಾಮಗ್ರಿ ಹೊರುವಂತಹ ಬಾಂದು ಜವಾನರ ಹುದ್ದೆಗೆ ಅವರನ್ನು ನೇಮಕ ಮಾಡುವುದು ಸರಿಯಲ್ಲ
ಕೃಷ್ಣ ಬೈರೇಗೌಡ, ಕಂದಾಯ ಸಚಿವ

- **ಬಸವ ಕಲ್ಯಾಣದಲ್ಲಿ ಅನುದಾನ ಕೊರತೆಯಿಂದ ಸ್ಮಾರಕಗಳಿಗೆ ಹಾನಿಯಾಗುತ್ತಿದೆ: ಎಂ.ಜಿ. ಮುಳೆ**

₹742 ಕೋಟಿ ವೆಚ್ಚದಲ್ಲಿ ಅನುಭವ ಮಂಟಪ ಸ್ಥಾಪಿಸಲಾಗುತ್ತಿದೆ. ಅದರ ಜತೆಯಲ್ಲಿ 17 ಸ್ಮಾರಕಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಮುಂದಿನ ಬಜೆಟ್‌ನಲ್ಲಿ ಇನ್ನೂ 12 ಸ್ಮಾರಕಗಳ ರಕ್ಷಣೆಗೆ ಕ್ರಮ ತೆಗೆದುಕೊಳ್ಳುತ್ತೇವೆ
ಕೃಷ್ಣ ಬೈರೇಗೌಡ, ಕಂದಾಯ ಸಚಿವ

- **ಆಂಧ್ರಪ್ರದೇಶದ ತಿರುಮಲ ಬೆಟ್ಟದಲ್ಲಿರುವ ಕರ್ನಾಟಕ ಭವನದ ನಿರ್ಮಾಣ ಕಳಪೆಯಾಗಿದೆ: ಟಿ.ಎ.ಶರವಣ**

ತಿರುಮಲದಲ್ಲಿ ಕರ್ನಾಟಕ ಭವನದ ಕಾಮಗಾರಿ ಟಿಟಿಡಿ ನಡೆಸುತ್ತಿದೆ. ಕಾಮಗಾರಿ ಇನ್ನೂ ಪೂರ್ಣಗೊಂಡಿಲ್ಲ, ಪೂರ್ಣಗೊಂಡ 5 ವರ್ಷಗಳವರೆಗೆ ಅವರೇ ನಿರ್ವಹಣೆ ಮಾಡಬೇಕು ಎಂಬ ಷರತ್ತು ಇದೆ. ಕಳಪೆ ಕಾಮಗಾರಿ ಬಗ್ಗೆ ಎಚ್ಚರಿಕೆ ವಹಿಸಲಾಗುವುದು
ರಾಮಲಿಂಗಾರೆಡ್ಡಿ, ಮುಜರಾಯಿ ಸಚಿವ

ರಸ್ತೆ ಅಗೆತ ತಪ್ಪಿಸಿದ ರೋಬೋಟ್

ಜಲಮಂಡಳಿಯಿಂದ 38 ಕಡೆ ಯಶಸ್ವಿ ಪ್ರಯೋಗ

ಪ್ರಜಾವಾಣಿ ವಾರ್ತೆ

ಬೆಂಗಳೂರು ಜಲಮಂಡಳಿ ಸಿಬ್ಬಂದಿ ರೋಬೋಟಿಕ್ಸ್ ತಂತ್ರಜ್ಞಾನ ಬಳಸಿ ನೀರಿನ ಮಾರ್ಗದ ತಪಾಸಣೆ ನಡೆಸಿದರು

ಬೆಂಗಳೂರು: ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಅಳವಡಿಸಿಕೊಂಡಿರುವ ಅತ್ಯಾಧುನಿಕ 'ರೋಬೋಟಿಕ್ ತಂತ್ರಜ್ಞಾನ'ದಿಂದಾಗಿ ರಸ್ತೆ ಅಗೆತ ಪ್ರಮಾಣ ಕಡಿಮೆಯಾಗಿದೆ.

ಪೈಪ್‌ಲೈನ್ ನಿರ್ವಹಣೆಗೆ ತಿಂಗಳ ಹಿಂದೆ ಪ್ರಾಯೋಗಿಕವಾಗಿ ಆರಂಭಿಸಿರುವ ರೋಬೋಟ್ ಬಳಕೆಯಿಂದ ನೆಲದಾಳದ ಸಮಸ್ಯೆಗಳನ್ನು ನಿಖರವಾಗಿ ಗುರುತಿಸಿ ಪರಿಹಾರ ನೀಡಲಾಗಿದೆ ಎಂದು ಜಲಮಂಡಳಿ ತಿಳಿಸಿದೆ.

ತಂತ್ರಜ್ಞಾನ ಅಳವಡಿಕೆಯಾದ ನಂತರ 75 ದೂರುಗಳನ್ನು ಸ್ವೀಕರಿಸಲಾಗಿದ್ದು, ಈ ಪೈಕಿ 67 ಸ್ಥಳಗಳಲ್ಲಿ ಈಗಾಗಲೇ ದುರಸ್ತಿ ಕಾರ್ಯ ಪೂರ್ಣಗೊಂಡಿದೆ. 38 ಸ್ಥಳಗಳಲ್ಲಿ ರಸ್ತೆ ಅಗೆತವನ್ನು ತಪ್ಪಿಸಲಾಗಿದೆ. ಇದರಿಂದ ಮಂಡಳಿಗೆ ಹಣ ಉಳಿತಾಯವಾಗಿದ್ದು, ನಾಗರಿಕರಿಗೆ ಉಂಟಾಗುತ್ತಿದ್ದ ಅನಾನುಕೂಲ ತಪ್ಪಿಸಲಾಗಿದೆ. ಉಳಿದಿರುವ 11 ಮನವಿ ಪತ್ರಗಳು ಪರಿಶೀಲನೆ ಹಂತದಲ್ಲಿವೆ.

‘ರೋಬೋಟ್‌ನಿಂದ ಒಳಚರಂಡಿ ಕೊಳವೆಯೊಳಗಿನ ಅಡ್ಡಿ, ದೋಷ ಮತ್ತು ಆಂತರಿಕ ಹಾನಿಯ 93ಕ್ಕೂ ಹೆಚ್ಚು ದೋಷಗಳನ್ನು ಪತ್ತೆ ಹಚ್ಚಲಾಗಿದೆ. ಪ್ರಾಯೋಗಿಕ ಭಾಗವಾಗಿ ಅಗೆತ ಅನಿವಾರ್ಯವಾಗಿತ್ತು. ಆದರೆ, ತಂತ್ರಜ್ಞಾನದಿಂದ ಸಮಸ್ಯೆಯ ನಿಖರ ಸ್ಥಳ ಮತ್ತು ಸ್ವರೂಪ ತಿಳಿಯುವುದು ಸುಲಭವಾಗಿದೆ’ ಎಂದು ಮಂಡಳಿ ಅಧ್ಯಕ್ಷ ಡಾ.ರಾಮ ಪ್ರಸಾತ್ ಮನೋಹರ್ ತಿಳಿಸಿದ್ದಾರೆ

‘ಸಾಂಪ್ರದಾಯಿಕವಾಗಿ ರಸ್ತೆ ಅಗೆಯುವುದರಿಂದ ಉಂಟಾಗುತ್ತಿದ್ದ ರಸ್ತೆತಡೆ, ಸಂಚಾರ ದಟ್ಟಣೆ, ದೂಳು, ಶಬ್ದ ಮಾಲಿನ್ಯ ಹಾಗೂ ಓಡಾಟಕ್ಕೆ ಆಗುತ್ತಿದ್ದ ತೊಂದರೆಯನ್ನು ಈ ತಂತ್ರಜ್ಞಾನ ನಿವಾರಿಸಿದೆ. ಮುಂಬರುವ ದಿನಗಳಲ್ಲಿ ನಗರದ ಇತರೆ ವಲಯಗಳಿಗೂ ತಪಾಸಣೆಯನ್ನು ವಿಸ್ತರಿಸಲು ಮಂಡಳಿ ಯೋಜಿಸಿದೆ’ ಎಂದು ತಿಳಿಸಿದ್ದಾರೆ.

ಕನ್ನಮಂಗಲ ಗ್ರಾ.ಪಂ ಅಧ್ಯಕ್ಷರ ಪದಚ್ಯುತಿ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಪೂರ್ವ ತಾಲ್ಲೂಕಿನ ಕನ್ನಮಂಗಲ ಗ್ರಾಮ ಪಂಚಾಯಿತಿ ಅಧ್ಯಕ್ಷರನ್ನು ಪದಚ್ಯುತಿಗೊಳಿಸಲಾಗಿದೆ.

ಗ್ರಾಮ ಪಂಚಾಯಿತಿ ಸದಸ್ಯರು ಮಂಡಿಸಿದ್ದ ಅವಿಶ್ವಾಸ ಗೊತ್ತುವಳಿಗೆ, 16 ಸದಸ್ಯರ ಪೈಕಿ 12 ಸದಸ್ಯರ ಮತಗಳು ಬಂದವು. ಉಪ ವಿಭಾಗಾಧಿಕಾರಿ ಕಿರಣ್ ನೇತೃತ್ವದಲ್ಲಿ ಅವಿಶ್ವಾಸ ಗೊತ್ತುವಳಿ ಸಭೆ ಮಂಗಳವಾರ ನಡೆಯಿತು.

ಅಧ್ಯಕ್ಷೆ ಪವಿತ್ರಾ ರವಿ ಸೇರಿ ನಾಲ್ಕು ಸದಸ್ಯರು ಸಭೆಗೆ ಗೈರಾಗಿದ್ದರು. ಅವಿಶ್ವಾಸ ನಿರ್ಣಯದಿಂದ ಅಧ್ಯಕ್ಷರು ಸ್ಥಾನದಿಂದ ಪದಚ್ಯುತಗೊಂಡಿದ್ದಾರೆ. ನೂತನ ಅಧ್ಯಕ್ಷರ ಆಯ್ಕೆಗೆ ಸದ್ಯದಲ್ಲೇ ದಿನಾಂಕ ನಿಗದಿಪಡಿಸುವುದಾಗಿ ಉಪ ವಿಭಾಗಾಧಿಕಾರಿ ತಿಳಿಸಿದರು.

‘ಪವಿತ್ರಾ ರವಿ ಅವರು ಅಭಿವೃದ್ಧಿ ಕಾರ್ಯಗಳಿಗೆ ಸ್ಪಂದಿಸುತ್ತಿಲ್ಲ. ಸದಸ್ಯರನ್ನು ಪರಿಗಣಿಸದೆ ಹಿಟ್ಲರ್ ರೀತಿಯಲ್ಲಿ ವರ್ತಿಸುತ್ತಿದ್ದರು. ಇದ್ದರಿಂದ ಬೇಸತ್ತು ಅವರ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಲಾಗಿತ್ತು’ ಎಂದು ಸದಸ್ಯ ಯಲ್ಲಪ್ಪ ಹೇಳಿದರು.

ಕ್ವೆಸ್ಟ್ ಅಲೆಯನ್ಸ್ ಆಯೋಜಿಸಿದ್ದ ಕ್ವೆಸ್ಟ್ 2 ಲರ್ನ್ ಶೃಂಗಸಭೆಯ ಸಂವಾದದಲ್ಲಿ ಮನೋಜ್ ಕೊಠಾರಿ, ಡಿ ಮಾಧವಿ ಲತಾ, ಸಂಜಯ್‌ಕುಮಾರ್ ಸಿಂಗ್, ಕಬೇರಿ ಮುದುಲಿ ಭಾಗಿಯಾಗಿದ್ದರು

‘ಎಐ ಆಧಾರಿತ ಘಟಕ ಸ್ಥಾಪನೆ’

ಬೆಂಗಳೂರು: ‘ಕರ್ನಾಟಕದಲ್ಲಿ ಕೃತಕ ಬುದ್ಧಿಮತ್ತೆ ಆಧರಿತ ಚಟುವಟಿಕೆಗಳನ್ನು ಕೆಳ ಹಂತದವರೆಗೂ ವಿಸ್ತರಿಸಲು ತಂತ್ರಗಾರಿಕೆ ಹಾಗೂ ಎಐ ಘಟಕವನ್ನು ನಾಲ್ಕು ತಿಂಗಳಲ್ಲಿ ಸ್ಥಾಪಿಸಲಾಗುವುದು’ ಎಂದು ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್‌ನ (ಕೆಡೆಮ್) ಸಿಇಒ ಸಂಜೀವ್ ಕುಮಾರ್ ಗುಪ್ತಾ ತಿಳಿಸಿದರು.

ಕ್ವೆಸ್ಟ್ ಅಲೆಯನ್ಸ್ ಆಯೋಜಿಸಿದ್ದ ಕ್ವೆಸ್ಟ್–2 ಲರ್ನ್ ಶೃಂಗಸಭೆ 2025ರಲ್ಲಿ ಮಾತನಾಡಿದ ಅವರು, ‘ಕರ್ನಾಟಕ ಕಾರ್ಯತಂತ್ರ ಮತ್ತು ಬುದ್ಧಿಮತ್ತೆ ಘಟಕ ಆರಂಭಿಸಿ ವಿಶ್ವವಿದ್ಯಾಲಯ, ಕಾಲೇಜು, ತರಬೇತಿ ಸಂಸ್ಥೆ ಮತ್ತು ಸರ್ಕಾರಿ ಡೇಟಾಬೇಸ್‌ಗಳಿಂದ ಸಂಯೋಜಿಸಲಾಗುತ್ತದೆ. ಹೊಸ ಅವಕಾಶಗಳು, ವಿವಿಧ ವಲಯಗಳ ನಡುವಿನ ಅಂತರ ತಗ್ಗಿಸಲಿವೆ. ಪ್ರಾದೇಶಿಕ ಕಾರ್ಯಪಡೆಯ ಅಗತ್ಯಗಳನ್ನು ಘಟಕ ಪೂರೈಸಲಿದೆ’ ಎಂದು ಹೇಳಿದರು.

‘ಆರು ಪ್ರಾದೇಶಿಕ ಕ್ಲಸ್ಟರ್‌ಗಳನ್ನು ಬಲಪಡಿಸಲಾಗುತ್ತಿದೆ. ಶಿಕ್ಷಣ ಸಂಸ್ಥೆ, ಇನ್ಕ್ಯುಬೇಟರ್, ವೇಗವರ್ಧಕಗಳು ಮತ್ತು ವಿದ್ಯಾರ್ಥಿ ಸಮುದಾಯಗಳನ್ನು ಒಳಗೊಂಡ ಬಹು-ಪಾಲುದಾರರ ಕಾರ್ಯಾಗಾರಗಳ ನಂತರ ಪ್ರತಿ ಕ್ಲಸ್ಟರ್ 2031–32ರ ವೇಳೆಗೆ ಗುರಿ ಸಾಧಿಸಲಿವೆ’ ಎಂದು ತಿಳಿಸಿದರು.

‘ಇದರೊಟ್ಟಿಗೆ ಪ್ರತೀ ಜಿಲ್ಲೆಯಲ್ಲಿ ಜಿಲ್ಲಾ ಕೌಶಲ ಗುಂಪು ಸ್ಥಾಪಿಸಲಾಗುತ್ತದೆ. ಜಿಲ್ಲಾಧಿಕಾರಿ ಅಧ್ಯಕ್ಷತೆಯ ಈ ಗುಂಪಿನಲ್ಲಿ ಕೈಗಾರಿಕೆ, ಶೈಕ್ಷಣಿಕ ಕ್ಷೇತ್ರದವರು, ವಿದ್ಯಾರ್ಥಿಗಳು ಮತ್ತು ಉದ್ಯಮಿಗಳು ಇರಲಿದ್ದಾರೆ. ಈ ಗುಂಪುಗಳು ಸ್ಥಳೀಯ ಆರ್ಥಿಕತೆಗೆ ಏನು ಬೇಕು ಎಂಬುದರ ಆಧಾರದ ಮೇಲೆ ಜಿಲ್ಲಾ ಮಟ್ಟದಲ್ಲಿ ನಿರ್ದಿಷ್ಟ ಕೌಶಲ ಅಭಿವೃದ್ಧಿ ಯೋಜನೆ ವಿನ್ಯಾಸಗೊಳಿಸಲಿವೆ’ ಎಂದು ಹೇಳಿದರು.

ಆಂಧ್ರಪ್ರದೇಶದ ಸಮಗ್ರ ಶಿಕ್ಷಾ ವಿಭಾಗದ ಅಧ್ಯಾಪಕಿ ಡಿ ಮಾಧವಿ ಲತಾ, ಒಡಿಶಾ ಸರ್ಕಾರದ ಪಂಚಸಖಾ ಸಿಖ್ಯ ಸೇತು ಸಂಘಟನ್‌ನ ವಿಶೇಷ ಕರ್ತವ್ಯಾಧಿಕಾರಿ ಕಬೇರಿ ಮುದುಲಿ, ಟುರಿಯನ್ ಲ್ಯಾಬ್ಸ್‌ನ ಸಿಇಒ ಮನೋಜ್ ಕೊಠಾರಿ ಉಪಸ್ಥಿತರಿದ್ದರು.

ಶಿಕ್ಷಣ ತಜ್ಞರು, ನೀತಿ ನಿರೂಪಕರು, ತಂತ್ರಜ್ಞರು, ಕಲಾವಿದರು, ಸಂಶೋಧಕರು ಸೇರಿದಂತೆ 300 ಜನ ಕ್ವೆಸ್ಟ್ ಅಲೆಯನ್ಸ್ ಶೃಂಗಸಭೆಯಲ್ಲಿ ಭಾಗಿಯಾಗಿದ್ದರು.

‘ಇನ್ನೋ ಮಂಥನ್’ಗೆ ಒಪ್ಪಂದ

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): ಸ್ನಾತಕ, ಸ್ನಾತಕೋತ್ತರ, ಡಿಪ್ಲೊಮಾ ಹಾಗೂ ವೃತ್ತಿಶಿಕ್ಷಣ ವಿದ್ಯಾರ್ಥಿಗಳಲ್ಲಿ ನವೋದ್ಯಮ, ನಾವೀನ್ಯತೆ ಹಾಗೂ ಸ್ಟಾರ್ಟ್‌ಅಪ್ ಕುರಿತು ಉತ್ತೇಜಿಸಲು ‘ಇನ್ನೋ ಮಂಥನ್’ ವ್ಯಾಪಾರ ಯೋಜನಾ ಪ್ರಸ್ತುತಿ ಸ್ಪರ್ಧಾ ಕಾರ್ಯಕ್ರಮ ಪರಿಚಯಿಸಲಾಗುತ್ತಿದೆ.

ಈ ಕುರಿತು ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ (ಎಫ್‌ಕೆಸಿಸಿಐ) ಅಧ್ಯಕ್ಷೆ ಉಮಾ ರೆಡ್ಡಿ ಹಾಗೂ ಶಿಕ್ಷಣ ಇಲಾಖೆ ಆಯುಕ್ತೆ ಕೆ.ಎನ್. ಮಂಜುಶ್ರೀ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ, ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ನೇತೃತ್ವದಲ್ಲಿ ಒಪ್ಪಂದಕ್ಕೆ ಸಹಿ ಹಾಕಿದರು.

ಈ ಕಾರ್ಯಕ್ರಮದ ಪ್ರಮುಖ ಧ್ಯೇಯ ಸರ್ಕಾರಿ ಕಾಲೇಜುಗಳ ವಿದ್ಯಾರ್ಥಿಗಳು ಸ್ವಾವಲಂಬಿ ಜೀವನಕ್ಕಾಗಿ ನವೋದ್ಯಮದ ಪಥವನ್ನು ಅನುಸರಿಸುವಂತೆ ಸಬಲೀಕರಣಗೊಳಿಸುವುದು, ಭವಿಷ್ಯದ ಉದ್ಯಮ ಸೃಷ್ಟಿಕರ್ತರು ಹಾಗೂ ವ್ಯಾಪಾರ ನಾಯಕರಾಗಿ ರೂಪಿಸಲು ಈ ಯೋಜನೆಯ ಅನುಷ್ಠಾನಕ್ಕಾಗಿ ರಾಜ್ಯ ಸರ್ಕಾರ ₹73.20 ಲಕ್ಷ ಅನುದಾನ ಒದಗಿಸುತ್ತಿದೆ.

‘ವಿದ್ಯಾರ್ಥಿ ತಂಡಗಳ ಪಟ್ಟಿಯನ್ನು ಜುಲೈನಲ್ಲಿ ಪ್ರಕಟಿಸಲಾಗುವುದು. ವಿಜೇತ ತಂಡಗಳಿಗೆ ನಗದು ಬಹುಮಾನ, ಪ್ರಮಾಣ ಪತ್ರ ವಿತರಿಸಲಾಗುವುದು’ ಎಂದು ಸಚಿವ ಸುಧಾಕರ್ ತಿಳಿಸಿದರು.

ಪಾಕಿಸ್ತಾನದ ವಿರುದ್ಧ 1971ರಲ್ಲಿ ನಡೆದ ಯುದ್ಧದಲ್ಲಿ ಸಾಧಿಸಿದ ಐತಿಹಾಸಿಕ ವಿಜಯದ ಅಂಗವಾಗಿ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಹಾಗೂ ರಾಷ್ಟ್ರೀಯ ಸೈನಿಕ ಸ್ಮಾರಕ ಮ್ಯಾನೇಜ್‌ಮೆಂಟ್ ಟ್ರಸ್ಟ್ ಜಂಟಿಯಾಗಿ ನಗರದ ರಾಷ್ಟ್ರೀಯ ಸೈನಿಕ ಸ್ಮಾರಕದ ಬಳಿ ಮಂಗಳವಾರ ಹಮ್ಮಿಕೊಂಡಿದ್ದ ‘ವಿಜಯ ದಿವಸ ಸ್ಮರಣೆ’ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಸ್ಮಾರಕಕ್ಕೆ ಪುಷ್ಪ ನಮನ ಸಲ್ಲಿಸಿದರು
ಪ್ರಜಾವಾಣಿ ಚಿತ್ರ

ಗೊತ್ತುಪಡಿಸಿದ ಪ್ರದೇಶಗಳಲ್ಲಿ ಷರತ್ತುಗಳೊಂದಿಗೆ ಆಹಾರ ನೀಡಲು ಅನುಮತಿ: ಜಿಬಿಎ

ಪಾರಿವಾಳಗಳಿಗೆ ಆಹಾರ ನೀಡಿದರೆ ಶಿಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾರಿವಾಳಗಳಿಂದ ಕಾಯಿಲೆಗಳು ಹರಡುತ್ತಿರುವುದರಿಂದ ಸಾರ್ವಜನಿಕ ಸ್ಥಳಗಳಲ್ಲಿ ಅವುಗಳಿಗೆ ಆಹಾರ ನೀಡುವುದನ್ನು ಜಿಬಿಎ ನಿಷೇಧಿಸಿದೆ.

ಜಿಬಿಎ ಗುರುತಿಸಿರುವ ಸ್ಥಳದಲ್ಲಿ ಮಾತ್ರ ನಿಗದಿತ ಸಮಯದಲ್ಲಿ ಪಾರಿವಾಳಗಳಿಗೆ ಆಹಾರ ನೀಡಬೇಕು. ಇದನ್ನು ಉಲ್ಲಂಘಿಸಿದರೆ ಭಾರತೀಯ ನ್ಯಾಯ ಸಂಹಿತೆ (ಬಿಎನ್ ಎಸ್) 270, 271 ಮತ್ತು 271ರಂತೆ ಪ್ರಕರಣ ದಾಖಲಿಸಿ, ದಂಡ ಹಾಕುವ ಜೊತೆಗೆ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ನಗರಾಭಿವೃದ್ಧಿ ಇಲಾಖೆ ಆದೇಶ ಹೊರಡಿಸಿದೆ.

ಇದರಂತೆ, ನಿಯಮ ಉಲ್ಲಂಘಿಸಿ ಪಾರಿವಾಳಗಳಿಗೆ ಆಹಾರ ನೀಡಿದವರಿಗೆ, ಸಾಂಕ್ರಾಮಿಕ ರೋಗ ಹರಡಿದ ನಿರ್ಲಕ್ಷ್ಯದ ಪ್ರಕರಣ ದಾಖಲಿಸಲಾಗುತ್ತದೆ. ಅವರಿಗೆ ದಂಡ ಹಾಗೂ ಆರು ತಿಂಗಳವರೆಗೆ ಜೈಲು ಶಿಕ್ಷೆ ವಿಧಿಸಬಹುದಾಗಿದೆ.

ಯಾವುದೇ ವ್ಯಕ್ತಿಯು ಸಾರ್ವಜನಿಕ ರಿಗೆ ತೊಂದರೆ ಅಥವಾ ಆರೋಗ್ಯಕ್ಕೆ ಅಪಾಯವನ್ನು ಉಂಟುಮಾಡುವ ಪ್ರದೇಶಗಳಲ್ಲಿ ಪಾರಿವಾಳಗಳಿಗೆ ಆಹಾರ ನೀಡಬಾರದು ಅಥವಾ ಆಹಾರವನ್ನು ನೀಡಲು ಪ್ರೇರೇಪಿಸಬಾರದು. ಪಾರಿವಾಳಗಳಿಗೆ ಆಹಾರವನ್ನು ನೀಡುವುದನ್ನು ಗೊತ್ತುಪಡಿಸಿದ ಪ್ರದೇಶಗಳಲ್ಲಿ ಮಾತ್ರ ಷರತ್ತುಗಳೊಂದಿಗೆ ಅನುಮತಿಸಲಾಗುತ್ತದೆ. ನಿಗದಿಪಡಿಸಿದ ಪ್ರದೇಶಗಳ ನಿರ್ವಹಣೆ ಮತ್ತು ನಿರ್ದೇಶನಗಳ ಅನುಸರಣೆಯ ಜವಾಬ್ದಾರಿಯನ್ನು ಕೆಲವು ಎನ್‌ಜಿಒ ವಹಿಸಿಕೊಳ್ಳಬೇಕು ಎಂದು ತಿಳಿಸಲಾಗಿದೆ.

ಸಾರ್ವಜನಿಕ ಸ್ಥಳಗಳಲ್ಲಿ ಪಾರಿವಾಳಗಳಿಗೆ ಅನಿಯಂತ್ರಿತವಾಗಿ ಆಹಾರ ನೀಡುವುದರಿಂದ ಪಕ್ಷಿಗಳು ದೊಡ್ಡ ಪ್ರಮಾಣದಲ್ಲಿ ಗುಂಪು ಸೇರುತ್ತಿದ್ದು, ಅತಿಯಾದ ಹಿಕ್ಕೆಗಳು ಮತ್ತು ಗಂಭೀರ ಆರೋಗ್ಯ ಸಮಸ್ಯೆಗಳು ಉಂಟಾಗುತ್ತಿವೆ ಎಂದು ಆರೋಗ್ಯ ಇಲಾಖೆ ಹೇಳಿದೆ. ಪಾರಿವಾಳದ ಹಿಕ್ಕೆಗಳು ಮತ್ತು ಗರಿಗಳಿಂದ ಶ್ವಾಸಕೋಶದ ಕಾಯಿಲೆಗಳಾದ ಅತಿಸಂವೇದನಾ ನ್ಯುಮೋನಿಟಿಸ್ ಮತ್ತು ಇತರ ಶ್ವಾಸಕೋಶದ ಕಾಯಿಲೆಗಳು ಹೆಚ್ಚುತ್ತಿವೆ.

ತಜ್ಞರ ವೈದ್ಯಕೀಯ ಅಭಿಪ್ರಾಯ ಮತ್ತು ವರದಿಗಳು ಸೂಚಿಸುವಂತೆ ಪಾರಿವಾಳದ ಹಿಕ್ಕೆಗಳು ಮತ್ತು ಗರಿಗಳ ಸಂಪರ್ಕದಿಂದ ಶ್ವಾಸಕೋಶದ ಹಾನಿಗೆ ಕಾರಣವಾಗಬಹುದು. ವಿಶೇಷವಾಗಿ ಮಕ್ಕಳು, ವೃದ್ಧರು ಮತ್ತು ಮೊದಲೇ ಉಸಿರಾಟದ ಸಮಸ್ಯೆ ಇರುವ ದುರ್ಬಲ ವ್ಯಕ್ತಿಗಳಲ್ಲಿ ಈ ಅಪಾಯ ಹೆಚ್ಚಿರುತ್ತದೆ.

ಹೀಗಾಗಿ, ಪಾರಿವಾಳಗಳ ಹಿಕ್ಕೆಗಳು ಮತ್ತು ಗರಿಗಳಿಂದ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿರುವುದರ ಬಗ್ಗೆ ನಗರ ಪಾಲಿಕೆಗಳು ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ನಡೆಸಬೇಕು ಎಂದು ಸೂಚಿಸಲಾಗಿದೆ.

‘ನರೇಗಾ: ಉಗ್ರ ಹೋರಾಟ’

ಯೋಜನೆ ಹೆಸರು, ಸ್ವರೂಪ ಬದಲಿಸಲು ಹೊರಟಿರುವ ಕೇಂದ್ರ ಸರ್ಕಾರ: ಸಿ.ಎಂ ಕಿಡಿ

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಹೆಸರು ಮತ್ತು ಸ್ವರೂಪ ಬದಲಿಸುವ ಮೂಲಕ ಬಡ ಜನರ ಅನ್ನ ಕಸಿದುಕೊಳ್ಳಲು ಹೊರಟಿರುವ ಕೇಂದ್ರ ಸರ್ಕಾರದ ನಡೆಯ ವಿರುದ್ಧ ರಾಜ್ಯದಾದ್ಯಂತ ಹೋರಾಟ ನಡೆಸುತ್ತೇವೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

‘ಎಕ್ಸ್’ನಲ್ಲಿ ಪೋಸ್ಟ್ ಮಾಡಿರುವ ಅವರು, ‘ಕೇಂದ್ರ ಸರ್ಕಾರವು ತಾನೇ ಶೇ 100ರಷ್ಟು ವೆಚ್ಚ ಭರಿಸಬೇಕಿದ್ದ ನರೇಗಾ ಯೋಜನೆಯ ಸ್ವರೂಪ ಬದಲಿಸುವ ಮೂಲಕ, ಶೇ 40ರಷ್ಟು ವೆಚ್ಚದ ಹೊರೆಯನ್ನು ರಾಜ್ಯ ಸರ್ಕಾರಗಳ ತಲೆಗೆ ಕಟ್ಟಿದೆ’ ಎಂದಿದ್ದಾರೆ.

‘ಪ್ರಧಾನಿ ನರೇಂದ್ರ ಮೋದಿ ಅವರ ಸರ್ಕಾರವು ನರೇಗಾ ಯೋಜನೆಯ ಹೆಸರು ಬದಲಿಸುವ ಮೂಲಕ ಮಹಾತ್ಮ ಗಾಂಧಿ ಬಗೆಗಿನ ತನ್ನ ದ್ವೇಷವನ್ನು ಮತ್ತು ಯೋಜನೆಯ ಸ್ವರೂಪ ಬದಲಿಸುವ ಮೂಲಕ ಒಕ್ಕೂಟ ವ್ಯವಸ್ಥೆಯ ಬಗೆಗಿನ ತನ್ನ ವಿರೋಧವನ್ನು ಬಯಲು ಮಾಡಿಕೊಂಡಿದೆ’ ಎಂದಿದ್ದಾರೆ.

‘ವಿದೇಶದಲ್ಲಿ ಸುತ್ತಾಡುವಾಗ ಗಾಂಧಿ ಭಜನೆ ಮಾಡುವ ಮೋದಿ ಅವರು, ದೇಶದಲ್ಲಿ ಮಾತ್ರ ಗಾಂಧೀಜಿ ಹೆಸರನ್ನು ಅಳಿಸುವ ಹುನ್ನಾರ ನಡೆಸುತ್ತಲೇ ಇದ್ದಾರೆ. ಗಾಂಧೀಜಿ ಹಂತಕ ಗೋಡ್ಸೆಯನ್ನು ಮೆರೆಸಲು ಹೊರಟಿರುವ ಪರಿವಾರದಿಂದ ಬೇರೇನನ್ನು ನಿರೀಕ್ಷಿಸಲು ಸಾಧ್ಯ’ ಎಂದು ಪ್ರಶ್ನಿಸಿದ್ದಾರೆ.

‘ಬಡವರ ಅನ್ನದ ಬಟ್ಟಲಿಗೆ ಕೈಹಾಕಿರುವ, ಬಾಪೂಜಿಗೆ ಅವಮಾನ ಮಾಡಿರುವ, ರಾಜ್ಯ ಸರ್ಕಾರಗಳ ಕತ್ತು ಹಿಸುಕಲು ಹೊರಟಿರುವ ನರೇಂದ್ರ ಮೋದಿ ಅವರ ಸರ್ಕಾರದ ಈ ಜನವಿರೋಧಿ ನಿರ್ಧಾರವನ್ನು ಖಂಡಿಸುತ್ತೇವೆ. ಇದರ ವಿರುದ್ಧ ರಾಜ್ಯದಾದ್ಯಂತ ಹೋರಾಟ ಸಂಘಟಿಸುತ್ತೇವೆ’ ಎಂದು ಹೇಳಿದ್ದಾರೆ.

ಜತೆಗೆ, ‘ನರೇಗಾ ಯೋಜನೆಯನ್ನು ಅದರ ಮೂಲ ಸ್ವರೂಪದಲ್ಲಿಯೇ ಉಳಿಸಿಕೊಳ್ಳುವ ಹೊಣೆಯನ್ನು, ಅದರ ಫಲಾನುಭವಿಗಳೂ ಹೊತ್ತುಕೊಳ್ಳಬೇಕು. ರಾಜ್ಯದ ಬಿಜೆಪಿ ನಾಯಕರನ್ನು ಹಿಡಿದು ನಿಲ್ಲಿಸಿ, ಈ ಅನ್ಯಾಯದ ವಿರುದ್ಧ ಪಕ್ಷಾತೀತವಾಗಿ ದನಿ ಎತ್ತುವಂತೆ ಒತ್ತಡ ಹೇರಬೇಕು’ ಎಂದು ಕರೆ ನೀಡಿದ್ದಾರೆ.

> **ಮೋದಿ ಸರ್ಕಾರದ ಈ ನಡೆಯಿಂದ ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗ ಖಾತರಿ ಕ್ಷೀಣಿಸಲಿದೆ. ಜನರು ಕೆಲಸ ಹುಡುಕಿಕೊಂಡು ವಲಸೆ ಹೋಗುವುದು ಹೆಚ್ಚಲಿದೆ**
>
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

ಇಂದು ಪ್ರತಿಭಟನೆ: ಡಿ.ಕೆ. ಶಿವಕುಮಾರ್

ಸುವರ್ಣ ವಿಧಾನಸೌಧ (ಬೆಳಗಾವಿ): ಮಹಾತ್ಮ ಗಾಂಧಿ ಉದ್ಯೋಗ ಖಾತರಿ ಯೋಜನೆಯ (ನರೇಗಾ ಯೋಜನೆ) ಹೆಸರು ಬದಲಿಸಲು ಹೊರಟಿರುವ ಕೇಂದ್ರ ಸರ್ಕಾರದ ಕ್ರಮದ ವಿರುದ್ಧವಾಗಿ ಸುವರ್ಣ ವಿಧಾನಸೌಧದ ಆವರಣದಲ್ಲಿರುವ ಗಾಂಧಿ ಪ್ರತಿಮೆ ಎದುರು ಬುಧವಾರ ಪ್ರತಿಭಟನೆ ನಡೆಸಲಾಗುವುದು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ನರೇಗಾ ಯೋಜನೆಯನ್ನು ದುರ್ಬಲಗೊಳಿಸಲು ಮತ್ತು ಮಹಾತ್ಮ ಗಾಂಧಿ ಹೆಸರಿಗೆ ಚ್ಯುತಿ ತರುವ ಉದ್ದೇಶದೊಂದಿಗೆ ಯೋಜನೆ ಹೆಸರು ಬದಲಿಸಲು ಕೇಂದ್ರ ಸರ್ಕಾರ ಮುಂದಾಗಿದೆ. ಅದನ್ನು ವಿರೋಧಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ನನ್ನ ನೇತೃತ್ವದಲ್ಲಿ ಬೆಳಿಗ್ಗೆ 9.30ಕ್ಕೆ ಪ್ರತಿಭಟನೆ ನಡೆಸಲಾಗುವುದು. ರಾಜ್ಯದ ಎಲ್ಲ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿಯೂ ಕಾಂಗ್ರೆಸ್‌ನಿಂದ ಪ್ರತಿಭಟನೆ ನಡೆಸಲಾಗುವುದು’ ಎಂದರು.

ನ್ಯಾಯಾಂಗ ವ್ಯವಸ್ಥೆಯಿಂದ ನ್ಯಾಯ: ‘ನ್ಯಾಷನಲ್ ಹೆರಾಲ್ಡ್’ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯ ಸಲ್ಲಿಸಿದ್ದ ಆರೋಪಪಟ್ಟಿ ಸಂಬಂಧ ದೆಹಲಿ ವಿಶೇಷ ಕೋರ್ಟ್ ಆದೇಶದ ಕುರಿತಂತೆ ಪ್ರತಿಕ್ರಿಯಿಸಿದ ಡಿ.ಕೆ. ಶಿವಕುಮಾರ್, ‘ನ್ಯಾಷನಲ್ ಹೆರಾಲ್ಡ್, ಯಂಗ್ ಇಂಡಿಯಾ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಸೇರಿದಂತೆ ಕಾಂಗ್ರೆಸ್ ನಾಯಕರ ವಿರುದ್ಧ ಕಿರುಕುಳ ನೀಡುವ ಕೆಲಸ ಮಾಡುತ್ತಿತ್ತು. ಅದಕ್ಕೆ ದೆಹಲಿ ವಿಶೇಷ ನ್ಯಾಯಾಲಯ ಸರಿಯಾದ ಉತ್ತರ ನೀಡಿದೆ. ಜಾರಿ ನಿರ್ದೇಶನಾಲಯದ ಆರೋಪ ಪಟ್ಟಿಯನ್ನು ನ್ಯಾಯಾಲಯ ತಿರಸ್ಕರಿಸಿದೆ. ನ್ಯಾಯಾಂಗ ವ್ಯವಸ್ಥೆ ಗಟ್ಟಿಯಾಗಿದೆ ಎಂಬುದಕ್ಕೆ ಇದೇ ಸಾಕ್ಷಿ’ ಎಂದು ಹೇಳಿದರು.

‘ಇದೇ ಪ್ರಕರಣದಲ್ಲಿ ನನಗೆ ಮತ್ತು ನನ್ನ ಸಹೋದರ ಡಿ.ಕೆ. ಸುರೇಶ್ ಅವರಿಗೆ ದೆಹಲಿ ಪೊಲೀಸರು ನೋಟಿಸ್ ಜಾರಿ ಮಾಡಿದ್ದರು. ಅದಕ್ಕೆ ಎಫ್‌ಐಆರ್ ಸೇರಿದಂತೆ ಇತರ ದಾಖಲೆಗಳನ್ನು ನೀಡುವಂತೆ ಕೋರಿದ್ದೆವು. ಇದೀಗ ನ್ಯಾಯಾಲಯದ ತೀರ್ಪು ನಮಗೆ ನ್ಯಾಯ ದೊರಕುವಂತೆ ಮಾಡಿದೆ’ ಎಂದರು.

ಮಾಹಿತಿ ಒದಗಿಸಲು ನಿರ್ಲಕ್ಷ್ಯ ತೋರಿದರೆ ವಜಾಕ್ಕೆ ಆದೇಶ: ಹೈಕೋರ್ಟ್

ಸರ್ಕಾರಿ ಅಧಿಕಾರಿಗಳಿಗೆ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಯಾವುದೇ ಪ್ರಕರಣದಲ್ಲಿ ಸರ್ಕಾರಿ ವಕೀಲರು ಕೋರಿದ ಮಾಹಿತಿಯನ್ನು ನೀಡದ ಅಥವಾ ಮಾಹಿತಿ ನೀಡಲು ವಿಳಂಬ ಧೋರಣೆ ತೋರುವ ಸರ್ಕಾರಿ ಅಧಿಕಾರಿಗಳ ವಿರುದ್ಧ ವಿಚಾರಣೆ ನಡೆಸಿ ಸೇವೆಯಿಂದ ವಜಾಗೊಳಿಸಲು ಆದೇಶಿಸಲಾಗುವುದು’ ಎಂದು ಹೈಕೋರ್ಟ್ ಕಠಿಣ ಎಚ್ಚರಿಕೆ ನೀಡಿದೆ.

ಚಿತ್ರದುರ್ಗದ ಹಿರಿಯ ನಾಗರಿಕ ವಿಶ್ವನಾಥನ್ ಎಂಬುವರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದ ರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಎಚ್ಚರಿಕೆ ನೀಡಿದೆ.

ನಿವೃತ್ತ ಸರ್ಕಾರಿ ಉದ್ಯೋಗಿಯಾಗಿರುವ ಅರ್ಜಿದಾರರು, ಹಿರಿಯ ನಾಗರಿಕರು ಮತ್ತು ಪೋಷಕರ ಕಲ್ಯಾಣ ಕಾಯ್ದೆ ಅಡಿ ಪರಿಹಾರ ಕೋರಿ ಚಿತ್ರದುರ್ಗದ ಉಪ ವಿಭಾಗಾಧಿಕಾರಿಗೆ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯ ಮುಂದುವರಿದ ಭಾಗವಾಗಿ ಹೈಕೋರ್ಟ್ ಕದ ತಟ್ಟಿದ್ದಾರೆ.

ಪ್ರಕರಣದಲ್ಲಿ ಹೈಕೋರ್ಟ್ ಈ ಹಿಂದಿನ ವಿಚಾರಣೆ ವೇಳೆ ಚಿತ್ರದುರ್ಗದ ತಹಶೀಲ್ದಾರ್‌ಗೆ ₹50 ಸಾವಿರ ದಂಡ ಸಹಿತ ವಾರಂಟ್ ಜಾರಿಗೊಳಿಸಿತ್ತು. ಡಿ.16ರಂದು ವಿಚಾರಣೆಗೆ ಖುದ್ದು ಹಾಜರಿರುವಂತೆಯೂ ನಿರ್ದೇಶಿಸಿತ್ತು.

ಈ ಆದೇಶದ ಅನ್ವಯ ತಹಶೀಲ್ದಾರ್ ಮಂಗಳವಾರ ವಿಚಾರಣೆಗೆ ಖುದ್ದು ಹಾಜರಾಗಿದ್ದರು. ವಿಚಾರಣೆ ವೇಳೆ ನ್ಯಾಯಪೀಠ ಸರ್ಕಾರಿ ವಕೀಲರಿಗೆ ಮಾಹಿತಿ ನೀಡುವಲ್ಲಿ ನಿರ್ಲಕ್ಷ್ಯ ತೋರಲಾಗಿದೆ ಎಂಬ ಆಕ್ಷೇಪಕ್ಕೆ ಸಂಬಂಧಿಸಿದಂತೆ ಸರ್ಕಾರಿ ಅಧಿಕಾರಿಗಳಿಗೆ ಈ ಎಚ್ಚರಿಕೆ ನೀಡಿದೆ.

ಮೂತ್ರಪಿಂಡ ದಾನಕ್ಕೆ ಅನುವು



ಬೆಂಗಳೂರು: ಯಾವುದೇ ಪ್ರತಿ ಫಲಾಪೇಕ್ಷೆ ಇಲ್ಲದೆ ತಮ್ಮ ಒಂದು ಮೂತ್ರಪಿಂಡವನ್ನು ದಾನ ಮಾಡಲು ಮುಂದಾಗಿರುವ 58 ವರ್ಷದ ಮಹಿಳಾ ವೈದ್ಯರೊಬ್ಬರ ಮನವಿ ಪುರಸ್ಕರಿಸಿರುವ ಹೈಕೋರ್ಟ್, ಈ ಕುರಿತಂತೆ ದಾನಕ್ಕೆ ಅನುಮತಿ ನೀಡಿದೆ.

‘ನನ್ನ ಕಿಡ್ನಿ ದಾನ ಮಾಡಲು ಅನುಮತಿ ನೀಡಬೇಕು’ ಎಂದು ಕೋರಿದ್ದ ವೈದ್ಯರೊಬ್ಬರ ಅರ್ಜಿಯನ್ನು ಅಂಗಾಂಗ ಕಸಿ ಸಮಿತಿ ತಿರಸ್ಕರಿಸಿತ್ತು.

ಈ ಕ್ರಮವನ್ನು ಪ್ರಶ್ನಿಸಿ ವೈದ್ಯರು ಹೈಕೋರ್ಟ್ ಮೆಟ್ಟಿಲೇರಿದ್ದರು. ಈ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ, ‘ಅರ್ಜಿದಾರರ ಮನವಿ ಅಂಗೀಕರಿಸಿ ಕಾರ್ಯರೂಪಕ್ಕೆ ತರಬೇಕು’ ಎಂದು ಸಮಿತಿಗೆ ನಿರ್ದೇಶಿಸಿದೆ.

‘ಅರ್ಜಿದಾರರು ವಯಸ್ಕರು ಮತ್ತು ವೃತ್ತಿಯಲ್ಲಿ ವೈದ್ಯರಾಗಿದ್ದು, ಮೂತ್ರಪಿಂಡ ದಾನಕ್ಕೆ ಸಂಬಂಧಿಸಿದ ಎಲ್ಲಾ ಅಂಶಗಳ ಅರಿವು ಹೊಂದಿದವರಾಗಿದ್ದಾರೆ. ಸ್ವಂತ ಇಚ್ಛೆಯಿಂದ ತಮ್ಮ ಮೂತ್ರಪಿಂಡ ದಾನ ಮಾಡಲು ಸಿದ್ಧವಾಗಿರುವ ಕಾರಣ ಅವರ ಮನವಿ ಪರಿಗಣಿಸಿ’ ಎಂದು ನ್ಯಾಯಪೀಠ ಸಮಿತಿಗೆ ಆದೇಶಿಸಿದೆ.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಎಐಡಿಎಸ್‌ಒ ಸದಸ್ಯರು, ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು —ಪ್ರಜಾವಾಣಿ ಚಿತ್ರ

‘ಘಟಕ ಕಾಲೇಜು ಬೇಡ’

ಬೆಂಗಳೂರು: ಸರ್ಕಾರಿ ರಾಮ ನಾರಾಯಣ್ ಚೆಲ್ಲಾರಾಂ ಕಾಲೇಜು (ಆರ್.ಸಿ) ಮತ್ತು ಸರ್ಕಾರಿ ಕಲಾ ಕಾಲೇಜುಗಳನ್ನು ಡಾ. ಮನಮೋಹನ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ಘಟಕ ಕಾಲೇಜುಗಳನ್ನಾಗಿ ಮಾಡಲು ಮುಂದಾಗಿರುವ ರಾಜ್ಯ ಸರ್ಕಾರದ ನಡೆ ಖಂಡಿಸಿ ಎಐಡಿಎಸ್‌ಒ ಶುಕ್ರವಾರ ಪ್ರತಿಭಟನೆ ನಡೆಸಿತು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ವಿದ್ಯಾರ್ಥಿಗಳು ಹಾಗೂ ಸಂಘಟನೆಯ ಸದಸ್ಯರು ಸರ್ಕಾರದ ವಿರುದ್ಧ ಘೋಷಣೆ ಕೂಗಿ, ಕೂಡಲೇ ಸರ್ಕಾರ ತನ್ನ ನಿರ್ಧಾರ ಹಿಂಪಡೆಯಬೇಕು ಎಂದು ಆಗ್ರಹಿಸಿದರು.

ಎಐಡಿಎಸ್‌ಒ ಜಿಲ್ಲಾ ಸಮಿತಿಯ ಸೆಕ್ರೆಟರಿಯಟ್ ಸದಸ್ಯ ನವಾಜ್ ಮಾತನಾಡಿ, ‘ಅತಿಥಿ ಉಪನ್ಯಾಸಕರ ನೇಮಕಾತಿ ಮಾಡದೆ, ಎರಡು ತಿಂಗಳು ತರಗತಿಗಳನ್ನು ನಡೆಸದೆ ಪರೀಕ್ಷೆ ಸಮಯದಲ್ಲಿ ಆರ್.ಸಿ ಮತ್ತು ಸರ್ಕಾರಿ ಕಲಾ ಕಾಲೇಜುಗಳನ್ನು ಘಟಕ ಕಾಲೇಜುಗಳನ್ನಾಗಿ ಮಾಡಲಾಗುತ್ತಿದೆ. ಸರ್ಕಾರಿ ಕಾಲೇಜುಗಳೆಂದು ರೈತರು, ಕಾರ್ಮಿಕರ ಮಕ್ಕಳು ಬಹಳ ದೂರದಿಂದ ಬರುತ್ತಾರೆ. ಎಷ್ಟೊಂದು ಜನ ವಿದ್ಯಾರ್ಥಿಗಳು ಕಾಲೇಜಿನ ಶುಲ್ಕ ಭರ್ತಿ ಮಾಡಲು ಅರೆಕಾಲಿಕ ಕೆಲಸಗಳಿಗೆ ಹೋಗುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ಘಟಕ ಕಾಲೇಜುಗಳಾಗಿ ಮಾಡುವುದು ಸರಿಯಲ್ಲ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಖಜಾಂಚಿ ಸುಭಾಷ್ ಬೆಟ್ಟದಕೊಪ್ಪ ಮಾತನಾಡಿ, ‘ಶಿಕ್ಷಣ ಸಚಿವರು ಈ ನಿರ್ಧಾರವನ್ನು ತಕ್ಷಣ ಕೈಬಿಡಬೇಕು. ಕೇವಲ 6 ತಿಂಗಳ ಹಿಂದೆ ಹೋರಾಟದ ಫಲವಾಗಿ, ಘಟಕ ಕಾಲೇಜುಗಳನ್ನಾಗಿ ಮಾಡಬೇಕೆನ್ನುವ ನಿರ್ಧಾರದಿಂದ ಹಿಂದೆ ಸರಿದಿತ್ತು. ಆದರೆ, ಈಗ ಪರೀಕ್ಷೆಗಳನ್ನು ಘೋಷಿಸಿದ ನಂತರ ಮತ್ತೆ ಈ ಪ್ರಕ್ರಿಯೆಯನ್ನು ಕೈಗೆತ್ತಿಕೊಳ್ಳುವ ಮೂಲಕ ವಿದ್ಯಾರ್ಥಿಗಳಿಗೆ ದ್ರೋಹ ಬಗೆದಿದೆ’ ಎಂದು ಆರೋಪಿಸಿದರು.

ಜಿಲ್ಲಾ ಉಪಾಧ್ಯಕ್ಷ ರೋಹಿತ್, ಸದಸ್ಯರಾದ ತುಳಸಿ, ಪ್ರಕೃತಿ, ರಕ್ಷು ಉಪಸ್ಥಿತರಿದ್ದರು.

ಜಿಬಿಎ: ಜನಪ್ರತಿನಿಧಿಗಳ ಹೆಸರು ಸೇರ್ಪಡೆಗೆ ಮಸೂದೆ

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಸದಸ್ಯರ ಪಟ್ಟಿಯಲ್ಲಿ ಕೆಲವು ಜನಪ್ರತಿನಿಧಿಗಳ ಹೆಸರುಗಳು ಬಿಟ್ಟು ಹೋಗಿರುವುದರಿಂದ ಅವರ ಹೆಸರು ಸೇರಿಸುವ ಉದ್ದೇಶದ 2ನೇ ತಿದ್ದುಪಡಿ ಮಸೂದೆಗೆ ವಿಧಾನಸಭೆ ಅಂಗೀಕಾರ ನೀಡಿತು. ಬೆಂಗಳೂರು ನಗರಾಭಿವೃದ್ಧಿ ಸಚಿವ ಡಿ.ಕೆ.ಶಿವಕುಮಾರ್ ಮಸೂದೆ ಮಂಡಿಸಿದರು.

ಚಿಕ್ಕಬಳ್ಳಾಪುರ ಸಂಸದ ಕೆ. ಸುಧಾಕರ್ ಅವರ ಕ್ಷೇತ್ರದ ಕೆಲವು ಭಾಗ ಪಾಲಿಕೆ ವ್ಯಾಪ್ತಿಗೆ ಬರುತ್ತವೆ. ರಾಜ್ಯಸಭೆ ಸದಸ್ಯೆ ಸುಧಾಮೂರ್ತಿ ಬೆಂಗಳೂರಿನಲ್ಲಿದ್ದಾರೆ. ಅವರು ಸೇರಿದಂತೆ ಜಿಬಿಎ ಸದಸ್ಯರ ಪಟ್ಟಿಯಲ್ಲಿ ಪಾಲಿಕೆ ವ್ಯಾಪ್ತಿಯ ನಿವಾಸಿಯಾಗಿರುವ ಜನಪ್ರತಿನಿಧಿಗಳ ಹೆಸರು ಬಿಟ್ಟು ಹೋಗಿದೆ. ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳು, ವಿಧಾನ ಪರಿಷತ್ ಸದಸ್ಯರು, ಸರ್ಕಾರದ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಮತ್ತು ಹಣಕಾಸು ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳನ್ನೂ ಜಿಬಿಎ ಸದಸ್ಯರನ್ನಾಗಿ ಸೇರಿಸಲಾಗುವುದು ಎಂದರು.

‘ಜಿಬಿಎಗೆ ಚುನಾವಣೆ ನಡೆಯುವುದಿಲ್ಲ. ಇದು ರಾಜ್ಯ ಮಟ್ಟದ ಸಂಸ್ಥೆಯಾಗಿದೆ. ಮುಂದೆ ಹೊಸ ಪ್ರದೇಶವನ್ನು ಪಾಲಿಕೆ ವ್ಯಾಪ್ತಿಗೆ ಸೇರಿಸಿಕೊಂಡಾಗ ಆ ಭಾಗದಲ್ಲಿ 6 ತಿಂಗಳ ಒಳಗೆ ಚುನಾವಣೆ ನಡೆಸಬೇಕಾಗುತ್ತದೆ. ಈ ಪ್ರದೇಶದಲ್ಲಿ ಯಾರಾದರೂ ಪಂಚಾಯಿತಿ ಸದಸ್ಯರಾಗಿದ್ದರೆ, ಅವರಿಗೆ ಇದರಲ್ಲಿ ಮತದಾನದ ಹಕ್ಕು ಬರುವುದಿಲ್ಲ. ಈ ಬದಲಾವಣೆ ಹಂತದಲ್ಲಿ ಆ ಪ್ರದೇಶವನ್ನು ಪ್ರತಿನಿಧಿಸಲು ಅವಕಾಶ ಕಲ್ಪಿಸಿದ್ದೇವೆ. ಇದು ಅಗತ್ಯವಿಲ್ಲ ಬೇಡ ಎಂದರೆ ಇದನ್ನು ತೆಗೆದು ಹಾಕಲು ಸಿದ್ಧನಿದ್ದೇನೆ. ನಿಮ್ಮ ಸಲಹೆಯಂತೆ ನಾಮ ನಿರ್ದೇಶಿತ ಸದಸ್ಯರ ಸೇರ್ಪಡೆ ಕೈಬಿಡುತ್ತೇನೆ’ ಎಂದು ಶಿವಕುಮಾರ್ ಹೇಳಿದರು.

ವಿರೋಧ ಪಕ್ಷದ ನಾಯಕ ಆರ್. ಅಶೋಕ ಮಾತನಾಡಿ, ‘ರಾಜ್ಯಸಭೆ ಹಾಗೂ ವಿಧಾನ ಪರಿಷತ್ತಿನ ಚುನಾಯಿತ ಪ್ರತಿನಿಧಿಗಳು ಒಂದೊಂದು ನಗರಸಭೆ, ಪುರಸಭೆಗಳಿಗೆ ಬದಲಾವಣೆ ಮಾಡಿಕೊಂಡು ಹೋಗುತ್ತಿರುತ್ತಾರೆ. ಬೆಂಗಳೂರು ಮಹಾನಗರ ಪಾಲಿಕೆ ಚುನಾವಣೆ, ಬಳ್ಳಾರಿ ನಗರ ಸಭೆ ಚುನಾವಣೆ, ಬೀದರ್‌ನಲ್ಲಿ ನಡೆಯುವ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಹೋಗಿ ಮತ ಚಲಾಯಿಸುತ್ತಾರೆ. ಇದು ನಕಲಿ ಮತದಾನದಂತಾಗುತ್ತದೆ. ಹೀಗಾಗಿ ಅವರು 5 ವರ್ಷದಲ್ಲಿ ಯಾವುದಾದರೂ ಒಂದು ಕಡೆ ಮತದಾನದ ಅಧಿಕಾರ ಹೊಂದಿರಬೇಕು’ ಎಂದರು.

‘ವಿರೋಧ ಪಕ್ಷದ ನಾಯಕರ ಸಲಹೆಯನ್ನು ಒಪ್ಪುತ್ತೇನೆ. ಯಾರೇ ಆದರೂ ಒಂದೇ ಕಡೆ ಮತ ಹಾಕುವಂತಾಗಬೇಕು. ಆದರೆ ಜಿಬಿಎ ಚುನಾಯಿತ ಸಂಸ್ಥೆಯಲ್ಲ’ ಎಂದು ಶಿವಕುಮಾರ್ ಹೇಳಿದರು.

ಬಗರ್‌ಹುಕುಂ ಅಕ್ರಮ ಆರೋಪ • ದುರುದ್ದೇಶದಿಂದ ಪ್ರಕರಣ ದಾಖಲು: ಸುಪ್ರೀಂ ಕೋರ್ಟ್

ಅಶೋಕ ವಿರುದ್ಧದ ಎಫ್‌ಐಆರ್ ರದ್ದು

ಪ್ರಜಾವಾಣಿ ವಾರ್ತೆ

ಆರ್.ಅಶೋಕ

ನವದೆಹಲಿ: ಬಗರ್‌ಹುಕುಂ ಅಕ್ರಮ ಹಗರಣದಲ್ಲಿ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ವಿರುದ್ಧ 2018ರಲ್ಲಿ ದಾಖಲಾಗಿದ್ದ ಎಫ್‌ಐಆರ್ ಅನ್ನು ಸುಪ್ರೀಂ ಕೋರ್ಟ್ ಮಂಗಳವಾರ ರದ್ದುಗೊಳಿಸಿದೆ.

ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಸಂಜಯ್ ಕರೋಲ್ ಮತ್ತು ವಿಪುಲ್ ಎಂ. ಪಂಚೋಲಿ ಅವರ ಪೀಠವು, ಅಶೋಕ ವಿರುದ್ಧ ವಿಚಾರಣೆಗೆ ಪೂರ್ವಾನುಮತಿ ಪಡೆದಿರಲಿಲ್ಲ ಹಾಗೂ ದುರುದ್ದೇಶದಿಂದ ಪ್ರಕರಣ ದಾಖಲಿಸಲಾಗಿದೆ ಎಂದು ಅಭಿಪ್ರಾಯಪಟ್ಟಿದೆ.

‘ಮೇಲ್ಮನವಿ ಸಲ್ಲಿಸಿದವರ ವಿರುದ್ಧದ ಕ್ರಮಗಳು ಮೇಲ್ನೋಟಕ್ಕೆ ರಾಜಕೀಯ ಪ್ರೇರಿತವಾಗಿವೆ ಮತ್ತು ಆ ಮೂಲಕ ದುರುದ್ದೇಶದಿಂದ ಕೂಡಿದೆ. ವಿಳಂಬವನ್ನು ಬದಿಗಿಟ್ಟರೂ ಮೇಲ್ಮನವಿ ಸಲ್ಲಿಸಿದವರ ವಿರುದ್ಧ ಕಾನೂನು ಕ್ರಮ ಜರುಗಿಸಲು ಮುಂದುವರಿಯಲು ಸಾಧ್ಯವಿಲ್ಲ’ ಎಂದೂ ಪೀಠ ಹೇಳಿದೆ.

ಅಕ್ರಮಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಮೂರು ದೂರುಗಳನ್ನು ಸಲ್ಲಿಸಿದ್ದಾರೆ. ಮೊದಲ ಎರಡು ದೂರುಗಳಲ್ಲಿ ಸಾಕಷ್ಟು ಸಾಕ್ಷ್ಯಗಳ ಕೊರತೆ ಕಂಡುಬಂದಿದೆ ಎಂದು ಪೀಠ ಗಮನಿಸಿದೆ.

ಅಶೋಕ ಅವರ ಮೇಲ್ಮನವಿಯನ್ನು ಅಂಗೀಕರಿಸಿದ ನ್ಯಾಯಪೀಠವು, ಎಫ್‌ಐಆರ್ ರದ್ದುಗೊಳಿಸಲು ನಿರಾಕರಿಸಿದ ಕರ್ನಾಟಕ ಹೈಕೋರ್ಟ್‌ನ 2018ರ ಸೆಪ್ಟೆಂಬರ್ ತೀರ್ಪನ್ನು ರದ್ದುಗೊಳಿಸಿತು.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಬಡ ರೈತರಿಗೆ ಮೀಸಲಿಟ್ಟಿದ್ದ ಜಮೀನನ್ನು ಅಶೋಕ ಅವರು ಬಗರ್‌ಹುಕುಂ ಸಮಿತಿಯ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಮೇಯರ್, ಮಾಜಿ ಮೇಯರ್ ಹಾಗೂ ಮಾಜಿ ಉಪ ಮೇಯರ್‌ಗಳಿಗೆ ಹಂಚಿಕೆ ಮಾಡಿದ್ದರು ಎಂದು ಕರ್ನಾಟಕ ಸರ್ಕಾರ ದೂರಿತ್ತು.

‘1998ರಿಂದ 2006ರವರೆಗೆ ಅಶೋಕ ಅವರು ಬೆಂಗಳೂರು ದಕ್ಷಿಣ ತಾಲ್ಲೂಕು ಬಗರ್‌ಹುಕುಂ ಭೂ-ಸಕ್ರಮೀಕರಣ ಸಮಿತಿ ಅಧ್ಯಕ್ಷರಾಗಿದ್ದರು. ಈ ವೇಳೆ ಅವರು ಕಾನೂನುಬಾಹಿರವಾಗಿ ಅನರ್ಹ ಫಲಾನುಭವಿಗಳಿಗೆ ಜಮೀನು ಮಂಜೂರು ಮಾಡಿದ್ದಾರೆ’ ಎಂದು ಆರೋಪಿಸಿ ಎ.ಆನಂದ ಎಂಬುವವರು ಎಸಿಬಿಗೆ ದೂರು ನೀಡಿದ್ದರು. ಈ ದೂರು ಆಧರಿಸಿ ಎಸಿಬಿ ಪೊಲೀಸರು ಎಫ್‌ಐಆರ್ ದಾಖಲಿಸಿದ್ದರು.

‘ಜಮೀನು ಹಂಚಿಕೆಯಲ್ಲಿ ಯಾವುದೇ ಅಕ್ರಮ ನಡೆದಿಲ್ಲ. ಇದು ನನ್ನ ವಿರುದ್ಧ ರಾಜಕೀಯ ದುರುದ್ದೇಶದಿಂದ ದಾಖಲಿಸಿರುವ ಪ್ರಕರಣ. ಆದ್ದರಿಂದ ರದ್ದುಪಡಿಸಬೇಕು’ ಎಂದು ಕೋರಿ ಅಶೋಕ ಅವರು ಹೈಕೋರ್ಟ್ ಮೆಟ್ಟಿಲೇರಿದ್ದರು.

ತನಿಖೆ ಮುಂದುವರಿಸಲು ಎಸಿಬಿಗೆ ಹೈಕೋರ್ಟ್ 2018ರಲ್ಲಿ ಹಸಿರು ನಿಶಾನೆ ತೋರಿಸಿತ್ತು. ಇದನ್ನು ಪ್ರಶ್ನಿಸಿ ಅಶೋಕ ಅವರು ಸುಪ್ರೀಂ ಕೋರ್ಟ್‌ಗೆ ವಿಶೇಷ ಮೇಲ್ಮನವಿ ಅರ್ಜಿ ಸಲ್ಲಿಸಿದ್ದರು.

ಪ್ರಕರಣದ ವಿಚಾರಣೆ ನಡೆಸಿದ್ದ ನ್ಯಾಯಪೀಠವು ಪ್ರಮಾಣಪತ್ರ ಸಲ್ಲಿಸುವಂತೆ ಲೋಕಾಯುಕ್ತ ಹಾಗೂ ರಾಜ್ಯ ಸರ್ಕಾರಕ್ಕೆ ಸೂಚಿಸಿತ್ತು.

ವಂಚಕರಿಗೆ ಹಣ ಕೊಡಲು ಫ್ಲ್ಯಾಟ್, ಸೈಟ್ ಮಾರಾಟ

‘ಡಿಜಿಟಲ್ ಅರೆಸ್ಟ್’ ಬೆದರಿಕೆ: ₹2 ಕೋಟಿ ಕಳೆದುಕೊಂಡ ಟೆಕಿ

• ಸೈಬರ್ ಪೊಲೀಸರಿಂದ ತೀವ್ರಗೊಂಡ ತನಿಖೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟೆಕಿಯೊಬ್ಬರಿಗೆ ಕರೆ ಮಾಡಿದ್ದ ಸೈಬರ್ ವಂಚಕರು, ‘ಡಿಜಿಟಲ್ ಅರೆಸ್ಟ್’ ಹೆಸರಿನಲ್ಲಿ ಬೆದರಿಸಿ ₹2 ಕೋಟಿ ವಂಚಿಸಿದ್ದಾರೆ. ಈ ಸಂಬಂಧ ವೈಟ್‌ಫೀಲ್ಡ್ ಸೈಬರ್ ಅಪರಾಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನ್ಯೂ ತಿಪ್ಪಸಂದ್ರ ನಿವಾಸಿ, ಸಾಫ್ಟ್‌ವೇರ್ ಉದ್ಯೋಗಿ ಹಣ ಕಳೆದುಕೊಂಡಿದ್ದಾರೆ. ಟೆಕಿ ನೀಡಿದ ದೂರು ಆಧರಿಸಿ ಮಾಹಿತಿ ತಂತ್ರಜ್ಞಾನ ಕಾಯ್ದೆ ಹಾಗೂ ಭಾರತೀಯ ನ್ಯಾಯ ಸಂಹಿತೆ ಸೆಕ್ಷನ್‌ಗಳಾದ 319(2), 318(4) ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಸೈಬರ್ ಅಪರಾಧ ವಿಭಾಗದ ಪೊಲೀಸರು ಹೇಳಿದರು.

‘ಡಿಜಿಟಲ್ ಅರೆಸ್ಟ್’ಗೆ ಒಳಗಾಗುವ ಭಯದಲ್ಲಿ ವಂಚಕರಿಗೆ ಹಣ ಕೊಡಲು ದೂರುದಾರೆ ಫ್ಲ್ಯಾಟ್ ಹಾಗೂ ನಿವೇಶನ ಮಾರಾಟ ಮಾಡಿದ್ದಾರೆ ಎಂದು ಪೊಲೀಸರು ಹೇಳಿದರು.

ಕೊರಿಯರ್ ಕಂಪನಿ, ಮುಂಬೈ ಪೊಲೀಸರ ಸೋಗಿನಲ್ಲಿ ಟೆಕಿಗೆ ಸೈಬರ್ ವಂಚಕರು ಕರೆ ಮಾಡಿ ವಂಚಿಸಿದ್ದಾರೆ ಎಂದು ಪೊಲೀಸರು ಹೇಳಿದರು.

ನ್ಯೂ ತಿಪ್ಪಸಂದ್ರದಲ್ಲಿ ದೂರುದಾರೆ ಪುತ್ರನೊಂದಿಗೆ ನೆಲಸಿದ್ದಾರೆ. ನ.19ರಂದು ಕೊರಿಯರ್ ಕಂಪನಿ ಪ್ರತಿನಿಧಿಗಳ ಹೆಸರಿನಲ್ಲಿ ಕರೆ ಮಾಡಿದ್ದ ವಂಚಕರು, ‘ನಿಮ್ಮ ಹೆಸರಿನಲ್ಲಿರುವ ಕೊರಿಯರ್‌ನಲ್ಲಿ ಮಾದಕ ಪದಾರ್ಥಗಳು ದೊರೆತಿವೆ. ಆಧಾರ್ ಕಾರ್ಡ್ ಸಹ ಲಿಂಕ್ ಆಗಿದೆ. ಮುಂಬೈ ಪೊಲೀಸರು ಬಂಧಿಸಲಿದ್ದಾರೆ’ ಎಂಬುದಾಗಿ ಬೆದರಿಸಿದ್ದರು.

‘ಬಂಧನದಿಂದ ಪಾರಾಗಲು ಕೆಲವು ದಾಖಲೆಗಳ ಪರಿಶೀಲನೆಗೆ ಒಳಗಾಗಬೇಕು. ನಾವು ಹೇಳುವವರೆಗೂ ನೀವು ಎಲ್ಲಿಯೂ ತೆರಳುವಂತಿಲ್ಲ. ಹೇಳಿದಂತೆ ಕೇಳಬೇಕು’ ಎಂದು ವಂಚಕರು ಸೂಚಿಸಿದ್ದರು. ದಾಖಲೆಗಳ ಪರಿಶೀಲನೆ ವೇಳೆ ಹಂತಹಂತವಾಗಿ ಹಣ ವರ್ಗಾವಣೆ ಮಾಡಬೇಕೆಂದೂ ಸೂಚಿಸಿದ್ದರು. ಬ್ಯಾಂಕ್ ಖಾತೆಯಲ್ಲಿದ್ದ ಹಣವನ್ನು ವಂಚಕರು ನೀಡಿದ್ದ ಬೇರೆ ಬೇರೆ ಬ್ಯಾಂಕ್ ಖಾತೆಗಳಿಗೆ ಟೆಕಿ ವರ್ಗಾವಣೆ ಮಾಡಿದ್ದರು’ ಎಂದು ಪೊಲೀಸರು ಹೇಳಿದರು.

‘ವಿಚಾರಣೆಗೆ ಸರಿಯಾಗಿ ಸಹಕರಿಸಬೇಕು. ಹೇಳಿದಂತೆ ಮಾಡದಿದ್ದರೆ ಮಗನ ಭವಿಷ್ಯಕ್ಕೆ ತೊಂದರೆ ಆಗುತ್ತದೆ ಎಂದು ನಕಲಿ ಮುಂಬೈ ಪೊಲೀಸರು ಬೆದರಿಕೆ ಹಾಕಿದ್ದರು. ಈ ಮಾತುಗಳಿಗೆ ಹೆದರಿದ್ದ ಟೆಕಿ, ಸೈಬರ್ ವಂಚಕರ ಸೂಚನೆಗಳನ್ನು ಪಾಲಿಸಿದ್ದರು. ಹಣ ವರ್ಗಾವಣೆಗಾಗಿ ಮಾಲೂರಿನಲ್ಲಿದ್ದ ಎರಡು ನಿವೇಶನ ಹಾಗೂ ವಿಜ್ಞಾನ ನಗರದಲ್ಲಿದ್ದ ಒಂದು ಫ್ಲ್ಯಾಟ್ ಕಡಿಮೆ ಬೆಲೆಗೆ ಮಾರಾಟ ಮಾಡಿ ವಂಚಕರಿಗೆ ಹಣ ನೀಡಿದ್ದರು.

ಅದಾದ ಮೇಲೆ ಪೊಲೀಸ್ ಠಾಣೆಗೆ ತೆರಳಿ ನಿರಾಕ್ಷೇಪಣಾ ಪತ್ರ (ಎನ್‌ಒಸಿ) ಪಡೆದುಕೊಳ್ಳಿ, ಬಳಿಕ ನಿಮ್ಮ ಖಾತೆಗೆ ಹಣ ಬರಲಿದೆ ಎಂಬುದಾಗಿ ವಂಚಕರು ಟೆಕಿಗೆ ತಿಳಿಸಿದ್ದರು’ ಎಂದು ಪೊಲೀಸರ ಹೇಳಿದರು. ‘ಈ ಸಂಬಂಧ ಪೊಲೀಸರನ್ನು ದೂರುದಾರೆ ವಿಚಾರಿಸಿದಾಗ ವಂಚನೆಗೆ ಒಳಗಾಗಿರುವುದು ಗೊತ್ತಾಗಿತ್ತು. ಕೂಡಲೇ ರಾಷ್ಟ್ರೀಯ ಸೈಬರ್ ಕ್ರೈಮ್ ಸಹಾಯವಾಣಿ (1930) ಹಾಗೂ ವೈಟ್ ಫೀಲ್ಡ್ ಸೈಬರ್ ಅಪರಾಧ ಠಾಣೆಗೆ ದೂರು ನೀಡಿದ್ದರು’ ಎಂದು ಮೂಲಗಳು ಹೇಳಿವೆ.

‘ಡಿಜಿಟಲ್ ಅರೆಸ್ಟ್‌ಗೆ ಹೆದರಬೇಕಿಲ್ಲ’

‘ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ. ‘ಡಿಜಿಟಲ್ ಅರೆಸ್ಟ್’ ಎಂಬುದು ಇಲ್ಲ. ಈ ರೀತಿಯ ಕರೆಗಳು ಬಂದರೆ ಯಾರೂ ಹೆದರಬೇಕಿಲ್ಲ’ ಎಂದು ಡಿಸಿಪಿ ಪರಶುರಾಮ್ ಹೇಳಿದರು.

ಅಪರಾಧ ಸುದ್ದಿ

ಮಗುವಿಗಾಗಿ ಪತ್ನಿ ಅಪಹರಿಸಿದ ಪತಿ

ಬೆಂಗಳೂರು: ಕಿರುತೆರೆಯ ನಟಿಯೂ ಆಗಿರುವ ಪತ್ನಿಯನ್ನು ಅಪಹರಣ ಮಾಡಿರುವ ಆರೋಪದ ಅಡಿ ಪತಿ, ಚಿತ್ರ ನಿರ್ಮಾಪಕರೊಬ್ಬರ ವಿರುದ್ಧ ಬ್ಯಾಟರಾಯನಪುರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ನಟಿ ಚೈತ್ರಾ ಅಪಹರಣಕ್ಕೆ ಒಳಗಾದವರು. ಇವರ ಪತಿ ಹರ್ಷವರ್ಧನ್ ಆರೋಪಿ.

ನಟಿಯ ಸಹೋದರಿ ನೀಡಿರುವ ದೂರಿನ ಮೇಲೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

‘ಚೈತ್ರಾ, ಹರ್ಷವರ್ಧನ್ 2023ರಲ್ಲಿ ವಿವಾಹವಾಗಿದ್ದರು. ದಂಪತಿಗೆ ಒಂದೂವರೆ ವರ್ಷದ ಮಗುವಿದೆ. ಕೌಟುಂಬಿಕ ಕಲಹದಿಂದ ದಂಪತಿ ಪ್ರತ್ಯೇಕವಾಗಿ ವಾಸಿಸುತ್ತಿದ್ದರು. ಪತಿ ಹರ್ಷವರ್ಧನ್ ಹಾಸನದಲ್ಲಿ ನೆಲಸಿದ್ದರೆ, ಚೈತ್ರಾ ಒಂದೂವರೆ ವರ್ಷದ ಮಗುವಿನೊಂದಿಗೆ ಬೆಂಗಳೂರಿನ ಮಾಗಡಿ ರಸ್ತೆಯಲ್ಲಿರುವ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದರು. ಚೈತ್ರಾ ಅವರು ಧಾರಾವಾಹಿ, ಸಿನಿಮಾಗಳಲ್ಲಿ ನಟಿಸುತ್ತಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಮಗು ನೀಡದ ಕಾರಣಕ್ಕೆ ಪತ್ನಿಯನ್ನು ಹರ್ಷವರ್ಧನ್ ಅವರು ಅಪಹರಣ ಮಾಡಿದ್ದರು ಎಂಬ ಆರೋಪವಿದೆ.

‘ಚೈತ್ರಾ ಅವರ ತಾಯಿ ಸಿದ್ದಮ್ಮ ಅವರಿಗೆ ಹರ್ಷವರ್ಧನ್ ಕರೆ ಮಾಡಿ, ‘ನಿಮ್ಮ ಮಗಳನ್ನು ನಾನೇ ಅಪಹರಿಸಿದ್ದೇನೆ. ಆಕೆಯನ್ನು ಬಿಡಬೇಕಾದರೆ ನನ್ನ ಮಗಳನ್ನು ನನ್ನ ಬಳಿಗೆ ಕಳುಹಿಸಬೇಕು. ಮಗು ಸಿಕ್ಕಿದರೆ ಮಾತ್ರ ಚೈತ್ರಾಳನ್ನು ಬಿಡುತ್ತೇನೆ’ ಎಂಬುದಾಗಿ ಬೆದರಿಸಿದ್ದರು’ ಎಂದು ದೂರು ನೀಡಲಾಗಿದೆ.

ಕೃತ್ಯ ನಡೆದ ಸ್ಥಳ ಪರಿಶೀಲಿಸಿದ ಎಸ್‌ಪಿಪಿ ನೇತೃತ್ವದ ತಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ನಗರದ 57ನೇ ಎಸಿಎಂಎಂ ನ್ಯಾಯಾಲಯದಲ್ಲಿ ಬುಧವಾರದಿಂದ ಸಾಕ್ಷಿಗಳ ವಿಚಾರಣೆ ಆರಂಭ ಆಗಲಿದೆ.

ಸಾಕ್ಷಿಗಳ ವಿಚಾರಣೆಗೂ ಮುನ್ನ ಪ್ರಾಸಿಕ್ಯೂಷನ್ ಪರ ವಕೀಲರು ಹಾಗೂ ತನಿಖಾಧಿಕಾರಿಗಳು ಸಿದ್ಧತೆ ನಡೆಸಿದರು. ಕೃತ್ಯ ನಡೆದಿರುವ ವಿವಿಧ ಸ್ಥಳಕ್ಕೆ ಎಸ್‌ಪಿಪಿ ಪ್ರಸನ್ನ ಕುಮಾರ್, ಸಹಾಯಕ ಎಪಿಪಿ ಸಚಿನ್ ಹಾಗೂ ತನಿಖಾಧಿಕಾರಿ ಎಸಿಪಿ ಚಂದನ್ ಅವರು ಮಂಗಳವಾರ ಮಧ್ಯಾಹ್ನ ಭೇಟಿ ನೀಡಿ ಪರಿಶೀಲನೆ ನಡೆಸಿದರು. ರೇಣುಕಸ್ವಾಮಿ ಮೃತದೇಹ ಎಸೆದಿದ್ದ ರಾಜಕಾಲುವೆ ಬಳಿಯ ಸ್ಥಳ, ಹಲ್ಲೆ ನಡೆದಿದ್ದ ಪಟ್ಟಣಗೆರೆಯ ಶೆಡ್‌ಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು ಎಂದು ಮೂಲಗಳು ಹೇಳಿವೆ.

ವಿಚಾರಣೆ ವೇಳೆ ಹಾಜರಿರುವಂತೆ ಸೂಚಿಸಿ ರೇಣುಕಸ್ವಾಮಿ ಅವರ ತಂದೆ

ದರ್ಶನ್

ಹಾಗೂ ತಾಯಿಗೆ (ಸಾಕ್ಷಿ ಸಂಖ್ಯೆ 7 ಹಾಗೂ 8) ನ್ಯಾಯಾಲಯವು ಡಿಸೆಂಬರ್ 4ರಂದು ಸಮನ್ಸ್ ಜಾರಿಗೊಳಿಸಿತ್ತು. ಬುಧವಾರ ನಡೆಯುವ ವಿಚಾರಣೆ ವೇಳೆ ಅವರು ಹಾಜರಾಗುವ ಸಾಧ್ಯತೆಯಿದೆ. ಒಟ್ಟು 272 ಸಾಕ್ಷಿಗಳ ಪಟ್ಟಿಯನ್ನು ಸಹಾಯಕ ಪ್ರಾಸಿಕ್ಯೂಟರ್(ಎಪಿಪಿ) ಸಚಿನ್ ಅವರು ನ್ಯಾಯಾಲಯಕ್ಕೆ ಸಲ್ಲಿಸಿದ್ದಾರೆ.

ಪ್ರಮುಖ ಸಾಕ್ಷಿಯಾಗಿರುವ ರೇಣುಕಸ್ವಾಮಿ ತಂದೆ–ತಾಯಿಯನ್ನು ಪಾಟಿ ಸವಾಲಿಗೆ ಒಳಪಡಿಸಬೇಕಿದೆ ಎಂದು ಹಿಂದಿನ ವಿಚಾರಣೆ ವೇಳೆ ಸಚಿನ್ ಅವರು ನ್ಯಾಯಾಧೀಶರನ್ನು ಕೋರಿದ್ದರು.

ಪವಿತ್ರಾಗೌಡ, ನಟ ದರ್ಶನ್ ಸೇರಿದಂತೆ ಇತರೆ ಆರೋಪಿಗಳ ಪರ ವಕೀಲರು ಆ ಮನವಿಗೆ ಆಕ್ಷೇಪಿಸಿದ್ದರು. ವಾದ–ಪ್ರತಿವಾದ ಆಲಿಸಿದ್ದ ನ್ಯಾಯಾಧೀಶರು ಸಾಕ್ಷಿಗಳಿಗೆ ಸಮನ್ಸ್ ಜಾರಿ ಮಾಡಿದ್ದರು.

ಪುರಾವೆ ಸಿಕ್ಕರೆ ಪೊಲೀಸರ ವಿರುದ್ಧ ಕ್ರಮ: ಡಿಸಿಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪಾರ್ಟಿ ಮಾಡುತ್ತಿದ್ದ ಸಂದರ್ಭದಲ್ಲಿ ಯುವತಿಯೊಬ್ಬಳು ಹೋಟೆಲ್ ಬಾಲ್ಕನಿಯಿಂದ ಕೆಳಗೆ ಬಿದ್ದು ಗಾಯಗೊಂಡಿದ್ದ ಪ್ರಕರಣದಲ್ಲಿ ಪೊಲೀಸ್ ಸಿಬ್ಬಂದಿ ವಿರುದ್ಧದ ಆರೋಪಗಳಿಗೆ ಸೂಕ್ತ ಪುರಾವೆಗಳಿದ್ದರೆ ಕ್ರಮ ಕೈಗೊಳ್ಳಲಾಗುವುದು’ ಎಂದು ವೈಟ್‌ಫೀಲ್ಡ್ ವಿಭಾಗದ ಡಿಸಿಪಿ ಕೆ.ಪರಶುರಾಮ ತಿಳಿಸಿದರು.

ಯುವತಿಯ ತಂದೆ ನೀಡಿರುವ ದೂರಿನ ಅನ್ವಯ ಹೋಟೆಲ್ ವ್ಯವಸ್ಥಾಪಕರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು ತನಿಖೆ ನಡೆಸಲಾಗುತ್ತಿದೆ ಎಂದು ತಿಳಿಸಿದರು.

ಮಾರತ್ತಹಳ್ಳಿ ನಿವಾಸಿ ವೈಷ್ಣವಿ (21) ಗಾಯಗೊಂಡಿದ್ದರು. ವೈಷ್ಣವಿ ತಂದೆ ಅಂತೋನಿ ರಾಜ್ ದೂರು ನೀಡಿದ್ದಾರೆ. ಗಾಯಾಳು ವೈಷ್ಣವಿ ಡಿ.14ರಂದು ತಡರಾತ್ರಿ 1 ಗಂಟೆ ಸುಮಾರಿಗೆ ಎಇಸಿಎಸ್ ಲೇಔಟ್‌ನಲ್ಲಿರುವ ಸೀ ಎಸ್ಟಾ ಲಾಡ್ಜ್‌ನಲ್ಲಿ ತನ್ನ 7 ಮಂದಿ ಸ್ನೇಹಿತರ ಜತೆ ಪಾರ್ಟಿ ಮಾಡಲು ತೆರಳಿದ್ದರು.

ಈ ವೇಳೆ ಸಂಗೀತ ಹಾಕಿಕೊಂಡು ಡಾನ್ಸ್ ಮಾಡುತ್ತಿದ್ದರು. ಅಕ್ಕಪಕ್ಕದ ನಿವಾಸಿಗಳಿಗೆ ತೊಂದರೆ ಉಂಟಾಗಿ, ಪೊಲೀಸ್ ಸಹಾಯವಾಣಿ 112ಕ್ಕೆ ದೂರು ನೀಡಿದ್ದರು. ‘ಹೊಯ್ಸಳ ಪೊಲೀಸರು ಭಾನುವಾರ ಬೆಳಿಗ್ಗೆ 5.30ರ ಹೊತ್ತಿಗೆ ಹೋಗಿದ್ದರು. ಈ ವೇಳೆ, ನಾಲ್ಕನೇ ಮಹಡಿಯ ಕೊಠಡಿಯಲ್ಲಿ 8 ಮಂದಿ ಇದ್ದರು. ಪೊಲೀಸರು ಬಾಡಿವೋರ್ನ್ ಕ್ಯಾಮೆರಾ ಆನ್ ಮಾಡಿಕೊಂಡು ಅವರನ್ನು ವಿಚಾರಿಸಿದ್ದಾರೆ. ಅವರ ಐಡೆಂಟಿಟಿ ಕಾರ್ಡ್ ಹಾಗೂ ವಿಳಾಸ ಕೇಳಿದ್ದಾರೆ. ಇಬ್ಬರು ಯುವಕರನ್ನು ಕರೆದುಕೊಂಡು ರಿಸೆಪ್ಷನ್ ಬಳಿ ಬಂದಾಗ ಘಟನೆ ನಡೆದಿದೆ’ ಎಂದು ಡಿಸಿಪಿ ತಿಳಿಸಿದ್ದಾರೆ.

‘ಕಾಂಪೌಂಡ್‌ನಲ್ಲಿ ಚೂಪಾದ ಗ್ರಿಲ್‌ಗಳಿದ್ದ ಕಾರಣ ಯುವತಿಗೆ ಗಂಭೀರ ಗಾಯಗಳಾಗಿದೆ. ಆಕೆಯನ್ನು ಖಾಸಗಿ ಆಸ್ಪತ್ರೆಗೆ ಸ್ಥಳದಲ್ಲಿದ್ದವರು ದಾಖಲಿಸಿದ್ದಾರೆ. ಹೋಟೆಲ್‌ನವರು ಪಾಲಿಕೆಯಿಂದ ಅನುಮತಿ ಪಡೆದಿಲ್ಲದಿರುವುದರಿಂದ ಕ್ರಮ ಕೈಗೊಳ್ಳಲು ಜಿಬಿಎಗೆ ಸೂಚಿಸಲಾಗಿದೆ’ ಎಂದು ಅವರು ಮಾಹಿತಿ ನೀಡಿದ್ದಾರೆ.

ಡ್ರಗ್ಸ್ ಮುಕ್ತ ರಾಮಮೂರ್ತಿನಗರ ಮ್ಯಾರಥಾನ್‌ಗೆ ಹರಿಬಾಬು ಚಾಲನೆ ನೀಡಿದರು. ಶಾಂತಕೃಷ್ಣಮೂರ್ತಿ, ಕಲ್ಕೆರೆ ಕೃಷ್ಣಮೂರ್ತಿ, ಭಾಗ್ಯಶ್ರೀ ಸವಾಂತ್, ಸತೀಶ್, ಅಂಬರೀಶ್, ಪೃಥ್ವಿ ಕೃಷ್ಣಮೂರ್ತಿ ಉಪಸ್ಥಿತರಿದ್ದರು

‘ದುಶ್ಚಟಗಳಿಗೆ ಬಲಿಯಾಗಬೇಡಿ’

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಯುವಕರು ದುಶ್ಚಟಗಳಿಗೆ ಬಲಿಯಾಗದೆ ಆರೋಗ್ಯವಂತ ಸಮಾಜ ನಿರ್ಮಾಣಕ್ಕೆ ಕೈ ಜೋಡಿಸಬೇಕು ಎಂದು ಬೆಂಗಳೂರು ನಗರ ಅಪರಾಧ ವಿಭಾಗದ ಡಿಸಿಪಿ ಹರಿಬಾಬು ಹೇಳಿದರು.

ಕೆ.ಆರ್.ಪುರ ಸಮೀಪದ ಎನ್.ಆರ್.ಐ ಬಡಾವಣೆಯಲ್ಲಿ ಎಸ್.ಕೆ.ಎಫ್ ಫೌಂಡೇಶನ್ ಹಮ್ಮಿಕೊಂಡಿದ್ದ ಡ್ರಗ್ಸ್ ಮುಕ್ತ ರಾಮಮೂರ್ತಿನಗರ ಮ್ಯಾರಥಾನ್‌ನಲ್ಲಿ ಮಾತನಾಡಿದರು.

ಅತಿಹೆಚ್ಚು ಯುವಕರನ್ನು ಹೊಂದಿರುವ ಭಾರತದಲ್ಲಿ ಮಾದಕ ವ್ಯಸನಕ್ಕೆ ಯುವಕರು ಬಲಿಯಾಗುತ್ತಿರುವುದು ಖೇದಕರ. ದುಶ್ಚಟಕ್ಕೆ ಬಲಿಯಾಗದೆ ಅರೋಗ್ಯವಂತ ಸಮಾಜ ನಿರ್ಮಿಸಿ ಎಂದರು.

ನಟಿ ಸಪ್ತಮಿಗೌಡ ಮಾತನಾಡಿ, ಯುವಕರನ್ನು ಮಾದಕ ವ್ಯಸನದಿಂದ ಕಾಪಾಡುವ ಉದ್ದೇಶದಿಂದ ಎಸ್.ಕೆ.ಎಫ್ ಫೌಂಡೇಶನ್ ಹಮ್ಮಿಕೊಂಡಿರುವ ಕಾರ್ಯಕ್ರಮ ಶ್ಲಾಘನೀಯ ಎಂದರು.

ಮ್ಯಾರಥಾನ್‌ನಲ್ಲಿ ರಾಮಮೂರ್ತಿ ನಗರದ ಸುತ್ತಮುತ್ತಲಿನ ಶಾಲಾ, ಕಾಲೇಜು ವಿದ್ಯಾರ್ಥಿಗಳು, ಅಪಾರ್ಟ್‌ಮೆಂಟ್ ನಿವಾಸಿಗಳು, ಪೊಲೀಸ್ ಅಧಿಕಾರಿಗಳು ಪಾಲ್ಗೊಂಡಿದ್ದರು.

ಎಸ್.ಕೆ.ಎಫ್ ಫೌಂಡೇಶನ್‌ನ ಅಧ್ಯಕ್ಷೆ ಶಾಂತಕೃಷ್ಣಮೂರ್ತಿ, ಸಂಸ್ಥಾಪಕ ಸದಸ್ಯ ಕಲ್ಕೆರೆ ಕೃಷ್ಣಮೂರ್ತಿ, ಮ್ಯಾರಥಾನ್ ಪಟು ಭಾಗ್ಯಶ್ರೀ ಸವಾಂತ್, ಇನ್‌ಸ್ಪೆಕ್ಟರ್ ಸತೀಶ್, ಅಂಬರೀಶ್, ಪೃಥ್ವಿ ಕೃಷ್ಣಮೂರ್ತಿ ಉಪಸ್ಥಿತರಿದ್ದರು.

24 ವಾರಕ್ಕೆ ಜನನ: 480 ಗ್ರಾಂ ತೂಕದ ಮಗುವಿಗೆ ಚಿಕಿತ್ಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅವಧಿ ಪೂರ್ವ (24 ವಾರ) ಜನಿಸಿದ 480 ಗ್ರಾಂ ತೂಕದ ಮಗುವನ್ನು ಪ್ರಾಣಾಪಾಯದಿಂದ ಪಾರು ಮಾಡುವಲ್ಲಿ ಇಲ್ಲಿನ ರೇನ್‌ಬೊ ಮಕ್ಕಳ ಆಸ್ಪತ್ರೆಯ ವೈದ್ಯರು ಯಶಸ್ವಿಯಾಗಿದ್ದಾರೆ.

ತಾಯಿಗೆ ತೀವ್ರ ರಕ್ತದೊತ್ತಡ ಮತ್ತು ಮಧುಮೇಹ ಕಾಣಿಸಿಕೊಂಡ ಪರಿಣಾಮ, ಭ್ರೂಣಕ್ಕೆ ರಕ್ತದ ಹರಿವು ಕಡಿಮೆಯಾಗಿತ್ತು. ಇದರಿಂದಾಗಿ ಅವಧಿ ಪೂರ್ವ ಹೆರಿಗೆ ಮಾಡಿಸಲಾಯಿತು. ಅಂಗೈಗಿಂತ ಚಿಕ್ಕ ಮಗುವಿನ ತೂಕ, ಜನಿಸಿದ ಮೊದಲ ವಾರದ ಅಂತ್ಯಕ್ಕೆ 440 ಗ್ರಾಂಗೆ ಇಳಿಯಿತು. ನವಜಾತ ಶಿಶುಗಳ ತೀವ್ರ ನಿಗಾ ಘಟಕದಲ್ಲಿ 147 ದಿನಗಳು ಇರಿಸಿ, ಚಿಕಿತ್ಸೆ ಒದಗಿಸಿದ ಬಳಿಕ ಮಗುವಿನ ತೂಕ 2.3 ಕೆ.ಜಿ.ಗೆ ಏರಿತು ಎಂದು ಆಸ್ಪತ್ರೆ ತಿಳಿಸಿದೆ.

ಮಕ್ಕಳ ವಿಭಾಗದ ಸಲಹಾ ತಜ್ಞ ಡಾ.ಸರವಣನ್ ಆರ್. ಮಾಹಿತಿ ನೀಡಿ, ‘ಈ ಪ್ರಕರಣದಲ್ಲಿ ಆಸ್ಪತ್ರೆಯ ಕುಟುಂಬ ಕೇಂದ್ರಿತ ನವಜಾತ ಶಿಶುವಿನ ಆರೈಕೆಯು ಮಗುವಿನ ಚೇತರಿಕೆಯಲ್ಲಿ ನಿರ್ಣಾಯಕ ಭಾಗವಾಗಿತ್ತು. ಮಗುವು ಚೇತರಿಸಿಕೊಂಡು ಮನೆಗೆ ತೆರಳಿದೆ’ ಎಂದು ಹೇಳಿದ್ದಾರೆ.

ಸಿಐಡಿ ತನಿಖೆಗೆ ಕೋರಿ ಮುಖ್ಯಮಂತ್ರಿಗೆ ಪತ್ರ: ಖಂಡ್ರೆ

ಅರಣ್ಯಭೂಮಿ ಕಬಳಿಕೆ ಯತ್ನ: ವ್ಯಕ್ತಿ ಸೆರೆ

ಪ್ರಜಾವಾಣಿ ವಾರ್ತೆ

ಬೆಳಗಾವಿ/ ಚಿಕ್ಕಮಗಳೂರು: ಬೆಂಗಳೂರಿನ ಕೆಂಗೇರಿ ಬಳಿಯ ಬಿ.ಎಂ. ಕಾವಲ್‌ನಲ್ಲಿ 532 ಎಕರೆ ಅರಣ್ಯ ಹಾಗೂ ಸರ್ಕಾರಿ ಭೂಮಿ ಕಬಳಿಸಲು ನಕಲಿ ದಾಖಲೆ ಸಲ್ಲಿಸಿ ನ್ಯಾಯಾಲಯದಿಂದ ಆದೇಶ ಪಡೆದಿದ್ದ ಆರೋಪಿ, ಮರೇಬೈಲ್ ಗ್ರಾಮದ ಎಂ.ಬಿ.ಮನ್ಮಥ (ನೇಮಣ್ಣಗೌಡ) ಅವರನ್ನು ಪೊಲೀಸರು ಬಂಧಿಸಿದ್ದಾರೆ.

ಆರೋಪಿಯನ್ನು ತಮ್ಮ ಕಸ್ಟಡಿಗೆ ಪಡೆದುಕೊಂಡು ಪೊಲೀಸರು ವಿಚಾರಣೆ ನಡೆಸುತ್ತಿದ್ದಾರೆ ಎಂದು ಗೊತ್ತಾಗಿದೆ.

‘ಮನ್ಮಥ ಅವರು ಹಿಂದೆಯೂ ಇದೇ ರೀತಿ ಸುಳ್ಳು ಮತ್ತು ನಕಲಿ ದಾಖಲೆ ಸಲ್ಲಿಸಿ, 512 ಎಕರೆ 26 ಗುಂಟೆ ಅರಣ್ಯ, ಸರ್ಕಾರಿ ಭೂಮಿಯ ಮೇಲೆ ಹಕ್ಕು ಸಾಧಿಸಲು ಪ್ರಯತ್ನಿಸಿದ್ದರು. ಈ ಸಂಬಂಧ ಕಳೆದ ನ.28ರಂದು ಅರಣ್ಯ ಇಲಾಖೆಯ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರು ಮೂಡಿಗೆರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು’ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ. ಖಂಡ್ರೆ ಅವರು ಬೆಳಗಾವಿಯಲ್ಲಿ ಮಂಗಳವಾರ ತಿಳಿಸಿದರು.

ಅರಣ್ಯ ಮತ್ತು ಸರ್ಕಾರಿ ಭೂಮಿ ಕಬಳಿಕೆಯ ಸಂಚಿನಲ್ಲಿ ಯಾರು ಶಾಮೀಲಾಗಿದ್ದಾರೆ ಎಂಬುದು ಪೊಲೀಸ್ ತನಿಖೆಯಿಂದ ಬಯಲಾಗಲಿದೆ ಎಂದು ಹೇಳಿದರು.

‘ಸಾವಿರಾರು ಕೋಟಿ ರೂಪಾಯಿ ಬೆಲೆ ಬಾಳುವ ಸರ್ಕಾರಿ ಭೂಮಿ ಮತ್ತು ಅರಣ್ಯ ಭೂಮಿ ಕಬಳಿಸುವವರಿಗೆ ಪರೋಕ್ಷವಾಗಿ ಮತ್ತು ಪ್ರತ್ಯಕ್ಷವಾಗಿ ಕೆಲವು ಅಧಿಕಾರಿಗಳು ಮತ್ತು ಸರ್ಕಾರಿ ವಕೀಲರು ಸಹಾಯ ಮಾಡುತ್ತಿರುವುದು ಕಂಡುಬಂದಿದೆ. ಸಿಐಡಿ ಅಥವಾ ವಿಶೇಷ ತನಿಖಾ ತಂಡದಿಂದ ತನಿಖೆ ನಡೆಸುವಂತೆ ಕೋರಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆಯಲಾಗುವುದು. ನಕಲಿ ದಾಖಲೆ ಸೃಷ್ಟಿಸಿ ಅರಣ್ಯ ಭೂಮಿ ಕಬಳಿಸಲು ಯತ್ನಿಸಿದವರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು’ ಎಂದು ಸಚಿವರು ಹೇಳಿದರು.

ದೂರು ನೀಡಿದ್ದ ತಹಶೀಲ್ದಾರ್: ನಕಲಿ ದಾಖಲೆ ಸೃಷ್ಟಿಸಿ ಅಷ್ಟೂ ಜಾಗವನ್ನು ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಳ್ಳಲು ಪ್ರಯತ್ನಿಸಿದ್ದ ಆರೋಪದಲ್ಲಿ ಮೂಡಿಗೆರೆ ತಹಶೀಲ್ದಾರ್ ಅಶ್ವಿನಿ ಅವರೂ ಡಿ.13ರಂದು ಮೂಡಿಗೆರೆ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ವಿವಿಧ 21 ಸರ್ವೆ ನಂಬರ್‌ನಲ್ಲಿ ಒಟ್ಟು 512 ಎಕರೆ 26 ಗುಂಟೆಯನ್ನು ತಮ್ಮ ಪೂರ್ವಜರಾದ ಈರೇಗೌಡ ಎಂಬುವರು ಸಾಗುವಳಿ ಮಾಡುತ್ತಿದ್ದರು. 1956ರ ಇನಾಂ ರದ್ದತಿ ಕಾಯ್ದೆ ಪ್ರಕಾರ ಸರ್ಕಾರದ ವಶಕ್ಕೆ ಹೋಗಿದೆ. ಬಳಿಕ ಅವರು ಹಾಸನದ ವಿಶೇಷ ಜಿಲ್ಲಾಧಿಕಾರಿ ಮುಂದೆ ಅಧಿಭೋಗದಾರಿಕೆ ಅರ್ಜಿ ಸಲ್ಲಿಸಿದ್ದರು. 1974ರಲ್ಲಿ ಈರೇಗೌಡರಿಗೆ ಹಕ್ಕು ಮರು ವರ್ಗಾವಣೆಯಾಗಿದೆ ಎಂಬ ದಾಖಲೆಗಳನ್ನು ಚಿಕ್ಕಮಗಳೂರು ಉಪ ವಿಭಾಗಾಧಿಕಾರಿ ಅವರ ಮುಂದೆ ನೇಮಣ್ಣಗೌಡ ಸಲ್ಲಿಸಿದ್ದರು.

ವಿಚಾರಣೆ ನಡೆಸಿದ ಉಪ ವಿಭಾಗಾಧಿಕಾರಿ, ‘ಗ್ರಾಮ ಲೆಕ್ಕಾಧಿಕಾರಿಯ ನಕಲಿ ಸಹಿ, ನಕಲಿ ನಕ್ಷೆಗಳನ್ನು ತಯಾರಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ. ಆದ್ದರಿಂದ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿ’ ಎಂದು ತಹಶೀಲ್ದಾರ್ ಅವರಿಗೆ ಸೂಚನೆ ನೀಡಿದ್ದರು. ಅದರಂತೆ ತಹಶೀಲ್ದಾರ್ ಮೂಡಿಗೆರೆ ಠಾಣೆಗೆ ದೂರು ನೀಡಿದ್ದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE
NOTICE IS HEREBY GIVEN THAT, our client has negotiated and agreed to purchase the Schedule Property from its owners Madhivekaran Chinnsamy & Hemavathi P. All persons having any claims against the Schedule Property or any part thereof are hereby required to submit the same in writing along with documentary proof to the undersigned at their office within 15 days from the date of publication hereof, failing which our clients shall proceed without any reference to such claim and the same, if any, will be considered as waived. This notice is issued in the interest of the intending purchaser.

SCHEDULE PROPERTY
All that piece and parcel of the Site No 13, Katha No.4114, Property No.9983899924, presently comes under the limits of CMC Hebbagodi, carved out of converted Sy.Nos.114 & 115, measuring East to West : 65 Feet & North to South: 40 Feet, totally measuring 2600 Square Feet, in the Layout Known and called as “RELIAABLE LAVENDULA”, situated at Kammasandra Village, Attibele Hobli, Anekal Taluk, Bengaluru together with all appurtenances whatsoever whether underneath or above the surface and bounded:
East: Site No.32, West: Road, North: Site No.14, South Site No.12.
Dated this 16th day of December, 2025 (16-12-2025), Bangalore.
Sd/-
M/s. Jury Legal Solutions
Advocates
No. 8, 14th Cross, 14th Main, 4th Sector, HSR Layout, Bangalore-560102.
Mob: 9844481368, 9902195500

ಸಾರ್ವಜನಿಕ ಪ್ರಕಟಣೆ
ನಮ್ಮ ಕಕ್ಷಿದಾರರಾದ **ಮೆ॥ ಪ್ರೀಮಿಯರ್ ಫಾರ್ಮ್ಸ್ ಸ್ಟೆಡ್ ಪ್ರೈವೇಟ್ ಲಿಮಿಟೆಡ್** ಅವರು ಷೆಡ್ಯೂಲ್ ನಲ್ಲಿ ಉಲ್ಲೇಖಿಸಲಾದ ಆಸ್ತಿಯನ್ನು ಅದರ ಮಾಲೀಕರಾದ ಹಾಗೂ ಫ್ಲಾಟ್ ನಂ.502, ಸೀಸರ್ಸ್ ಸಿಯಾನ್ ಅಪಾರ್ಟ್ಮೆಂಟ್ಸ್, ಕಿತ್ತಗನೂರು ಮುಖ್ಯರಸ್ತೆ, ಗಾರ್ಡನ್ ಸಿಟಿ ಕಾಲೇಜು, ಬೆಂಗಳೂರು ಇಲ್ಲಿ ವಾಸವಗಿರುವ ಶ್ರೀ. ಅಡ್ಡಗಡ ರಾಜೇಶ್ ಬಿನ್ ಅಡ್ಡಗಡ ಮಲ್ಲಿಕಾರ್ಜುನ ರಾವ್ ರವರಿಂದ ಕ್ರಯಕ್ಕೆ ಪಡೆಯಲು ಉದ್ದೇಶಿಸಿದ್ದು, ಆದ್ದರಿಂದ, ಪ್ರಸ್ತಾವಿತ ಮಾರಾಟ ವಹಿವಾಟಿಗೆ ಸಂಬಂಧಿಸಿದಂತೆ ಯಾವುದೇ ಆಕ್ಷೇಪಣೆಗಳಿದ್ದರೆ ಈ ಪ್ರಕಟಣೆಯ ದಿನಾಂಕದಿಂದ 15 ದಿನಗಳ ಒಳಗೆ ಈ ಕೆಳಗೆ ಸಹಿ ಮಾಡಿದವರೊಂದಿಗೆ ಸಂಬಂಧಿತ ದಾಖಲೆಗಳೊಂದಿಗೆ ಸಲ್ಲಿಸಲು ಸಾರ್ವಜನಿಕರಿಗೆ ಈ ಮೂಲಕ ಸೂಚನೆ ನೀಡಲಾಗಿದೆ. ಸದರಿ ದಿನಾಂಕದೊಳಗೆ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸದಿದ್ದರೆ, ನಮ್ಮ ಕಕ್ಷಿದಾರರು ಉದ್ದೇಶಿತ ಮಾರಾಟ ವಹಿವಾಟನ್ನು ಪೂರ್ಣಗೊಳಿಸುತ್ತಾರೆ ಹಾಗೂ ನಂತರ ಸ್ವೀಕರಿಸಿದ ಯಾವುದೇ ಕ್ಲೇಮ್‌ಗಳು / ಆಕ್ಷೇಪಣೆಗಳು / ದೂರುಗಳು ನಮ್ಮ ಕಕ್ಷಿದಾರರಾದ ಮೆ॥ ಪ್ರೀಮಿಯರ್ ಫಾರ್ಮ್ಸ್ ಸ್ಟೆಡ್ ಪ್ರೈವೇಟ್ ಲಿಮಿಟೆಡ್‌ಗೆ ಬದ್ಧವಾಗಿರುವುದಿಲ್ಲ.

ಷೆಡ್ಯೂಲ್ ಸ್ವತ್ತು
ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಅಂಬಲಿಪುರ ಗ್ರಾಮದ ಕೃಷಿಯೇತರ ವಸತಿ ಉದ್ದೇಶಗಳಿಗೆ, ಬೆಂಗಳೂರು ಜಿಲ್ಲೆಯ ಜಿಲ್ಲಾಧಿಕಾರಿ ಅವರು ದಿನಾಂಕ 30.03.1989ರಂದು ಹೊರಡಿಸಿದ ಅಧಿಕೃತ ಜ್ಞಾಪಕ ಪತ್ರ No.B.Dis.ALN.SR(ಎಸ್) 452/88–89 ಮತ್ತು No.B.Dis.ALN.SR(ಎಸ್) 454/88–89 ರಂತೆ ಪರಿವರ್ತಿಸಲಾದ ಸರ್ವೆ ನಂ. 21 ಮತ್ತು 22ರಲ್ಲಿ ರಚಿಸಲಾದ "ಶುಭ್ ಎನ್ಕ್ಲೇವ್" ಬಡಾವಣೆಯಲ್ಲಿರುವ ನಿವೇಶನ ಸಂಖ್ಯೆ 12, ಬಿಬಿಎಂಪಿ ಖಾತಾ ನಂ.73/78/89/21&22/12, ಬಿಬಿಎಂಪಿ ಖಾತಾ ಎಸ್.ಎಲ್.ನಂ.73, ಪ್ರಸ್ತುತ ಬೆಂಗಳೂರು ಪೂರ್ವ ನಗರಪಾಲಿಕೆಯ ವ್ಯಾಪ್ತಿಯಲ್ಲಿ, ಗ್ರೇಟರ್ ಬೆಂಗಳೂರು ಪ್ರಾಧಿಕಾರ, ಇಪಿಐಡಿ ಸಂಖ್ಯೆ 2605794822, ವಾರ್ಡ್ ಸಂಖ್ಯೆ 150, ಬೆಳ್ಳಂದೂರು, ಬೆಂಗಳೂರು ಪೂರ್ವಕ್ಕೆ 19 ಅಡಿ, ಪಶ್ಚಿಮಕ್ಕೆ 3 ಅಡಿ, ಉತ್ತರಕ್ಕೆ 173 ಅಡಿ ಮತ್ತು ದಕ್ಷಿಣಕ್ಕೆ 174 ಅಡಿ, ಸಂಪೂರ್ಣವಾಗಿ 1910 ಚದರ ಅಡಿ ಅಳತೆ ಹೊಂದಿರುವ ಹಾಗೂ ಈ ಕೆಳಗಿನಂತೆ ಚಕ್ಕುಬಂದಿಗೊಳಪಟ್ಟ ಸ್ವತ್ತು – **ಪೂರ್ವದಿಂದ::** ಫ್ಲಾಟ್ ನಂ.7, **ಪಶ್ಚಿಮದಿಂದ** :: ರಸ್ತೆ, **ಉತ್ತರದಿಂದ::** ಅಂಬಲಿಪುರದ ಗ್ರಾಮದ ಗಡಿ **ದಕ್ಷಿಣ** :: ಫ್ಲಾಟ್ ನಂ.8 ಮತ್ತು 13.
Prasad & Prasanna, Advocates,
No.81/1, M. T. B. Building, 1st Floor, Begur Road, Near Baldwin School, Hongasandra, Bangalore -560 068
Phone : 8792235359 / 9535749494
Email : prasannar_143@rediffmail.com

JOB OPPORTUNITIES

Accounts & Finance

ACCOUNTANT WITH 5yrs Exp. Knowledge of Tally, Excel & M.S Office Must. Salary 25k To 30k Jakkur 8123243297 info@behlconstruction.com

WANTED-TALLY PROFESSIONAL In Accounts Department, Location, Siddaiah Road Near Shanti Nagar Bus Stand Ct: 9535218502 9845351200.

WANTED ACCOUNTANT with 2-3 Years Experience for Established CA Firm in Bengaluru. Should be able to work Independently. Salary Commensurate with Experience. Please send mail to : venkatesh@nca-india.com

WANTED EXPERIENCED ACCOUNTANTS (Male)for dealing Income Tax Matters. Salary.Rs.25000 to Rs.40000.pm. Contact: G.Subramaniam BIMS Consulting Group Near Shivananda Circle. (9448575683) bimsconsult@yahoo.com

General

WANTED OFFICE assistant with two wheeler. Attractive salary will be given based on candidate experience. Contact: 080- 23588510/ 8431046669/ 9036688651

Multiple Vacancy

VIDYA SOUDHA ACADEMY OF MANAGEMENT SCIENCES
Peenya, Bengaluru-560058
REQUIRES
Assistant Professor
Commerce & Management
Master's Degree/MBA /NET/KSET/Ph.D. preferred
Admin/Marketing Executive
Any Degree | Master Degree
Min. 2 yrs. (Experience in education institution preferred)
Interested candidates can email their profiles to :
hr@vidyasoudha.edu.in
Or Call : +91 89715 66659
on or before 20.12.2025

ಉದ್ಯೋಗಾವಕಾಶ
ಡ್ರೈವರ್‌ಗಳು ಬೇಕಾಗಿದ್ದಾರೆ
ಆಸಕ್ತರು ಸಂಪರ್ಕಿಸಿ
ಮೊಬೈಲ್ ನಂ.
9845696949

HRD & Admin

WANTED MALE/ Female Office Assistant Any Degree Knowing Tally, Fluent In English, Kannada, Hindi Around Rajajinagar Contact: 9108458798/ 9845579620

Janatha Education Society®
VIVEKANANDA EDUCATIONAL INSTITUTIONS
Dr. Rajkumar Road, Next to Orion Mall, Rajajinagar, Bengaluru - 560055.
Phone: 080 - 23371952 | 6366733434 | jobs@jes-edu.in
Applications are invited for the following posts
VIVEKANANDA INSTITUTE OF TECHNOLOGY
Assistant Executive Engineer : B.E Civil with 10 yrs exp., salary commensurate with experience.
Placement Officer : MBA with 5 years experience
Physical Edn Director (F) : B.PEd / M.PEd with 3 yrs exp.
Attender : Pass in SSLC
Candidates to submit their BIODATA by post / in person to Hon.Secretary, JES within 7 days or email to jobs@jes-edu.in
H.C Balakrishna, Hon.President
Appareddy Harish, Hon.Secretary

Wanted

WANTED EXPERIENCED Dhobis for a laundry washing unit in Bannerghatta, Bangalore Salary : 18,000 to 25,000 Call: 9880266007 / 8050666007

Walk-in

WALK-IN INTERVIEW
We are hiring Fresher & experienced Candidates for the post of
SALES EXECUTIVES / BRANCH MANAGER / CLUSTER MANAGER
Location: Bangalore, Karnataka
Interview
Date: 18th December, Thursday,
Time: 10:00 am to 4:00 pm
Venue: Mahaveer Finance India Ltd., Shri Venkatadri Door No.646, 5th Main Road, RBI Layout, Phase 7, J P Nagar Bangalore, Karnataka - 560078
Contact person: Mr. Suresh M, (Branch Manager) - 97432 84200
Mr. Shashikumar B N (Branch Manager) 89044 58648
email: bangalore@mahaveerfinance.com

Part-Time Jobs

PART-TIME JOB, Android smart phone mandatory. Only WhatsApp on: 7019246661.

Graphic Designers

WANTED MALE Graphic Designer (Corel Draw Photoshop Illustrator) Pvt Ltd Company around Rajajinagar Contact: 9108458798/ 9845579620

RENTAL PROPERTIES

Accommodation Available

Commercial

GANDHI BAZAAR Main Road: Rent 60K. GF 140 Sft Office Space, Good Frontage. Contact: 9110235083

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE SELLING

Industrial & Factory

Tumkur Road

SALE/ BUILT to suit, 9.5 Acres Industrial Land near Babaspet. Suitable for Industry, Warehouse. 9972636255

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

CONNECT ಕ್ಲಾಸಿಫೈಡ್ಸ್

MYSORE EDUCATION SOCIETY
ಎಂ.ಇ.ಎಸ್. ಪ್ರೊ. ಬಿ.ಆರ್. ಸುಬ್ಬಾರಾವ್ ಪದವಿ ಪೂರ್ವ ಕಾಲೇಜು
#05, 2nd 'B' Cross, IV Main, III Stage, 11th 'B' Cross, I Block, BEL Layout, Vidyaranyapura, Bengaluru-560097
College Code: AN 0486

ರಾಜ್ಯಮಟ್ಟದ ರಸಪ್ರಶ್ನೆ ಸ್ಪರ್ಧೆಯಲ್ಲಿ ಯಶ್ ವೈ ಮತ್ತು ಪ್ರಣವ್ ಎಮ್ ಪಾಟೀಲ್ ಎಂ.ಇ.ಎಸ್. ಪ್ರೊ. ಬಿ.ಆರ್. ಸುಬ್ಬಾರಾವ್ ಪದವಿ ಪೂರ್ವ ಕಾಲೇಜು ವಿದ್ಯಾರಣ್ಯಪುರ ಇವರು ಪ್ರಥಮ ಸ್ಥಾನ ಪಡೆದಿರುತ್ತಾರೆ.
080-23646446
8861126840, 8861126826, 8861121122, 8861123636
mesbrs@gmail.com
https://mesbrspuc.in
ಆಡಳಿತ ಮಂಡಳಿ, ಪ್ರಾಂಶುಪಾಲರು ಮತ್ತು ಸಿಬ್ಬಂದಿ ವರ್ಗದವರಿಂದ, ಶುಭ ಹಾರೈಕೆಗಳು

PERSONAL

Change of Name

I, NAYEMMUNNISA A R D/o Abdul Rahim aged about 68 years residing at ward 16 Azad Nagar Sidlaghatta Town Chikkaballapur Dist. Have Changed my name to Nayeemunnisa A R vide affidavit dated 15.12.2025 before Notary N.R Ravi Kumar, Sidlaghatta. Henceforth I shall be called as Nayeemunnisa A R only.

CHANGE OF NAME
I, Madhu W/o Dalbir Singh, resident of L-401, Sipani Royal Heritage, Chandapura, Suryanagar, Iggalur, Bangalore District-562106. have changed my name from **MADHU to POONAM** vide affidavit dated: 15.12.2025 before advocate and notary Muniswamy .T, Bengaluru Dist-562106.

CHANGE OF NAME
I, **SARDAR SALIM BAIG** S/o Sardar Baig, residing at # P-8/2, Aste Officers Enclave, Vishwa Vihar, C.V.Raman Nagar, Varthur Road, Bengaluru - 560093, have changed my name from **SARDAR SALIM BAIG** to **SALIM BAIG**, vide affidavit 15.12.2025 before notary A.R. Muneer Ahmed, Bengaluru.

RASHI GATEWAY
Premium Plots @
NELAMANGALA
Beside JAS Tollgate, Bangalore Pune Highway
BMRDA / NPA
APPROVED SITES FOR SALE
✓ Large Plots
✓ Corner Plots on 80Ft Road
✓ Bank loan Available for Plots
Contact :
+91 99020 52259

DH Classifieds
DECCAN HERALD
More value, more impact
ಪ್ರಜಾವಾಣಿ
RECRUITMENT
BOOK YOUR JOB ADS IN DECCAN HERALD ALL KARNATAKA + PRAJAVANI BENGALURU CITY
CLASSIFIED DISPLAY
@ 550/-* PER SQCM
SINGLE / DOUBLE / MULTIPLE COLUMN
www.dhclassifieds.com
BOOK NOW
For more details contact:
+91 9845114560 | +91 9886213331 | +91 9731810277

ತವಕ... ಬೆಂಗಳೂರಿನಲ್ಲಿ ನಡೆದ ಪ್ರಜಾವಾಣಿ ರಸಪ್ರಶ್ನೆ ಸ್ಪರ್ಧೆಯ ಫೈನಲ್ಸ್‌ನಲ್ಲಿ ಉತ್ತರಿಸಲು ಉತ್ಸುಕತೆ ತೋರಿದ ವಿದ್ಯಾರ್ಥಿಗಳು (ಎಡಚಿತ್ರ) ವಿದ್ಯಾರ್ಥಿಗಳ ನಡುವೆ ನಡೆದ ಸಂವಾದ –ಪ್ರಜಾವಾಣಿ ಚಿತ್ರಗಳು: ಪ್ರಶಾಂತ್ ಎಚ್.ಜಿ.

ಶಿಶುಗೃಹ ಸ್ಕೂಲ್‌ಗೆ ಚಾಂಪಿಯನ್ ಪಟ್ಟ

‘ಪ್ರಜಾವಾಣಿ’ ರಾಜ್ಯ ಮಟ್ಟದ ರಸಪ್ರಶ್ನೆ ಸ್ಪರ್ಧೆ–2025: ಲಿಟ್ಲ್ ರಾಕ್ ಇಂಡಿಯನ್ ಸ್ಕೂಲ್ ರನ್ನರ್ ಅಪ್

ORCHIDS The International School Presents ಪ್ರಜಾವಾಣಿ QUIZ CHAMPIONSHIP 2025

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರಿ ಕುತೂಹಲ ಮೂಡಿಸಿದ್ದ ‘ಪ್ರಜಾವಾಣಿ’ಯ ರಾಜ್ಯ ಮಟ್ಟದ ರಸಪ್ರಶ್ನೆ ಸ್ಪರ್ಧೆ–2025ರ ಫೈನಲ್‌ನಲ್ಲಿ ಆರಂಭದಿಂದಲೇ ಮುನ್ನಡೆ ಕಾಯ್ದುಕೊಂಡಿದ್ದ ಬೆಂಗಳೂರಿನ ಶಿಶುಗೃಹ ಸೀನಿಯರ್ ಸ್ಕೂಲ್ ತಂಡ ಅಂತಿಮ ಹಂತದಲ್ಲೂ ಅತ್ಯುತ್ತಮವಾಗಿ ಉತ್ತರಿಸಿ ಹೆಚ್ಚಿನ ಅಂಕಗಳ ಅಂತರದಿಂದ ಚಾಂಪಿಯನ್ ಆಗಿ ಹೊರಹೊಮ್ಮಿತು.

ಜಯನಗರದ ರಾಷ್ಟ್ರೀಯ ವಿದ್ಯಾಲಯದ ಆರ್.ವಿ. ಸಭಾಂಗಣದಲ್ಲಿ ಸೋಮವಾರ ನಡೆದ ರಸಪ್ರಶ್ನೆ ಸ್ಪರ್ಧೆಯು ಜ್ಞಾನದ ವಿಸ್ತರಣೆಗೆ, ಕುತೂಹಲದ ಕ್ಷಣಗಳಿಗೆ ಸಾಕ್ಷಿಯಾಯಿತು. ಅಂತಿಮವಾಗಿ ಹುಬ್ಬಳ್ಳಿ ವಲಯದ ಬ್ರಹ್ಮಾವರದ ಲಿಟ್ಲ್ ರಾಕ್ ಇಂಡಿಯನ್ ಸ್ಕೂಲ್ ತಂಡವು ದ್ವಿತೀಯ ಹಾಗೂ ಬಾಗಲಕೋಟೆಯ ಬಸವೇಶ್ವರ ಅಂತರ ರಾಷ್ಟ್ರೀಯ ಪಬ್ಲಿಕ್ ಸ್ಕೂಲ್ ತಂಡವು ತೃತೀಯ ಸ್ಥಾನ ಪಡೆದವು.

ಜ್ಞಾನದಲ್ಲಿ ಯಾರಿಗೂ ನಾವು ಕಡಿಮೆ ಇಲ್ಲ ಎನ್ನುವಂತೆ ಯೋಚಿಸಿ ವಿದ್ಯಾರ್ಥಿಗಳು ಉತ್ತರಿಸಿದರು. ರಾಜ್ಯದ ನಾನಾ ಕ್ಷೇತ್ರಗಳಿಗೆ ಸಂಬಂಧಿಸಿದ ಪ್ರಶ್ನೆಗಳಿಂದ ಹಿಡಿದು ಹಲವು ದೇಶಗಳ ಕುರಿತ ಪ್ರಶ್ನೆಗಳಿಗೆ ಸೈ ಎನ್ನುವಂತೆಯೇ ಉತ್ತರಿಸಿದರು. ಎದುರಾಳಿಗಳಿಗೆ ನೀರು ಕುಡಿಸಿ ಗೆದ್ದು ಸಂಭ್ರಮಿಸಿದರು.

ಫೈನಲ್ಸ್‌ನಲ್ಲಿ ಆರ್ಕಿಡ್ ಚಾಯ್ಸ್, ದೇಶ ಸುತ್ತು–ಕೋಶ ಓದು, ಚಿತ್ರ–ವಿಚಿತ್ರ, ವಿಷಯ–ವಿಶೇಷ, ಫಟಾಫಟ್ ಎಂಬ ಐದು ಸುತ್ತುಗಳು ಇದ್ದವು. ಫಟಾಫಟ್ ಸುತ್ತಿನಲ್ಲಿ ಅಚ್ಚರಿ ಪ್ರಶ್ನೆಗಳು ತೇಲಿಬಂದವು. ಅಷ್ಟೇ ಜಾಣ್ಮೆ, ತಾಳ್ಮೆಯ ಉತ್ತರಗಳು ಬಂದವು. ಅಂಕಗಳ ಏಣಿಯಾಟದಲ್ಲಿ ಮೊದಲ ಎರಡು ಸ್ಥಾನದಲ್ಲಿಯೇ ಎರಡು ತಂಡಗಳಲ್ಲಿ ಒಂದು ತಂಡ ಋಣಾತ್ಮಕ ಸುತ್ತಿನಲ್ಲಿ ತಪ್ಪು ಉತ್ತರ ನೀಡಿ ಅಂಕ ಕಳೆದುಕೊಂಡಿತು. ಇದು ಮತ್ತೊಂದು ತಂಡಕ್ಕೆ ವರದಾನವೂ ಆಗಿ 2ನೇ ಸ್ಥಾನಕ್ಕೆ ತೃಪ್ತಿಪಟ್ಟರು.

ಬೆಂಗಳೂರು, ಹುಬ್ಬಳ್ಳಿ, ದಾವಣಗೆರೆ, ಮೈಸೂರು, ಬೀದರ್, ಬಾಗಲಕೋಟೆ ವಲಯಗಳಲ್ಲಿ ಗೆಲುವು ಸಾಧಿಸಿ, ಫೈನಲ್‌ಗೆ ಆಯ್ಕೆಯಾಗಿದ್ದ ಆರು ತಂಡಗಳು ರಾಜ್ಯ ಮಟ್ಟದ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದವು. 7ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ನಡೆದ ವಲಯವಾರು ಸ್ಪರ್ಧೆಯಲ್ಲಿ ನೂರಾರು ತಂಡಗಳು ಪಾಲ್ಗೊಂಡಿದ್ದವು. ಅದರಲ್ಲಿ ವಿಜೇತ ತಂಡಗಳು ಅಂತಿಮ ಸುತ್ತಿನ ಸ್ಪರ್ಧೆಯಲ್ಲಿ ಪಾಲ್ಗೊಂಡವು.

ಆರಂಭದ ಸುತ್ತಿನಿಂದಲೇ ಮುನ್ನಡೆ ಕಾಯ್ದುಕೊಂಡು ಬಂದಿದ್ದ ತ್ರಿವಿಕ್ರಮ್ ಕೇಶವನ್ ಮತ್ತು ವಿಷ್ಣು ಎಸ್. ಗಣೇಶ್ ಜೋಡಿಯು ಕೆಲ ಸುತ್ತುಗಳಲ್ಲಿ ಎಡವಿದರೂ ಪಾಸಿಂಗ್ ಪ್ರಶ್ನೆಗಳನ್ನು ಗ್ರಹಿಸಿ ಉತ್ತರಿಸುವ ಮೂಲಕ ಹೆಚ್ಚು ಅಂಕಗಳನ್ನು ಪಡೆದು ಗೆಲುವಿನ ದಡ ಸೇರಿ ಸಂಭ್ರಮಿಸಿತು. ವಿಜೇತ ತಂಡ ಆಕರ್ಷಕ ಟ್ರೋಫಿ, ಪ್ರಶಸ್ತಿ ಪತ್ರ, ಟ್ಯಾಬ್ ತಮ್ಮದಾಗಿಸಿಕೊಂಡಿತು.

ಶಿಶುಗೃಹ ತಂಡಕ್ಕೆ ಪೈಪೋಟಿ ನೀಡಿದ ಲಿಟ್ಲ್ ರಾಕ್ ಇಂಡಿಯನ್ ಸ್ಕೂಲ್‌ನ ತಕ್ಷಕ್ ಶೆಟ್ಟಿ ಮತ್ತು ಸೃಜನ್ ಎನ್.ವೈ ಜೋಡಿಯು ನಾಲ್ಕನೇ ಸುತ್ತಿನ ಅಂತ್ಯದಲ್ಲಿ ಮೊದಲನೇ ಸ್ಥಾನದಲ್ಲಿದ್ದರೂ ಕೊನೆಯ ಸುತ್ತಿನಲ್ಲಿ ತಪ್ಪು ಉತ್ತರ ನೀಡಿ ಅಂಕ ಕಳೆದುಕೊಂಡಿತು. ಇದರಿಂದಾಗಿ ದ್ವಿತೀಯ ಸ್ಥಾನದೊಂದಿಗೆ ಟ್ರೋಫಿ, ಪ್ರಶಸ್ತಿ ಪತ್ರ, ಮೊಬೈಲ್ ಫೋನ್ ಪಡೆದರೆ, ತೃತೀಯ ಸ್ಥಾನ ಪಡೆದ ಬಸವೇಶ್ವರ ಇಂಟರ್‌ನ್ಯಾಷನಲ್ ಪಬ್ಲಿಕ್ ಸ್ಕೂಲ್‌ನ ತೇಜಲ್ ಮತ್ತು ಸ್ತುತಿ ರಾಠಿ ಜೋಡಿಗೆ ಟ್ರೋಫಿ, ಪ್ರಶಸ್ತಿ ಪತ್ರ ಹಾಗೂ ಸ್ಮಾರ್ಟ್‌ವಾಚ್ ನೀಡಲಾಯಿತು.

ಅಂತಿಮ ಸುತ್ತಿನಲ್ಲಿ ವಿಜೇತ ತಂಡಗಳ ಜತೆ ಕಲಬುರಗಿಯ ಎಸ್.ಬಿ.ಆರ್. ಪಬ್ಲಿಕ್ ಸ್ಕೂಲ್‌ನ ಬಸವಪ್ರಸಾದ್ ಪಾಟೀಲ್–ಎಂ.ಪಿ.ಶ್ರೇಯಸ್, ದಾವಣಗೆರೆಯ ಬಾಪೂಜಿ ಹಿರಿಯ ಪ್ರಾಥಮಿಕ ಶಾಲೆಯ ಈಶಾನ್ ಎಸ್.ಬೆಂಗೇರಿ–ಚಿನ್ಮಯ್ ಆರ್. ಕಲಾಲ್ ಹಾಗೂ ಮೈಸೂರಿನ ರಾಮಕೃಷ್ಣ ವಿದ್ಯಾಶಾಲೆಯ ರಿಷಿ ಭಾರ್ಗವ್ ಶ್ರಾಫ್ – ಹಿರೇನ್ ಬಿ.ರೈ ತಂಡ ಇದ್ದವು.

ಆತ್ಮವಿಶ್ವಾಸದ ಆಟ: ಕ್ವಿಜ್ ಮಾಸ್ಟರ್ ಮೇಘವಿ ಮಂಜುನಾಥ್ ಅವರು ಕೇಳುವ ಪ್ರತಿ ಪ್ರಶ್ನೆಯನ್ನು ಸ್ಪರ್ಧಿಗಳು ಉತ್ಸಾಹದಿಂದಲೇ ಎದುರಿಸುತ್ತಿದ್ದರು. ವಿಜ್ಞಾನ, ಸಮಾಜ, ಸಂಶೋಧನೆ, ಇತಿಹಾಸ, ಪ್ರಶಸ್ತಿ ಪುರಸ್ಕೃತರು, ಪ್ರಚಲಿತ ವಿಷಯ, ವನ್ಯಜೀವಿ, ಸಾಹಿತ್ಯ ವಿಷಯಗಳ ಮೇಲೆ ಪ್ರಶ್ನೆ ಕೇಳಲಾಯಿತು. ಸೂಕ್ಷ್ಮ ಗ್ರಹಿಕೆ, ತಾಳ್ಮೆ, ಆತ್ಮವಿಶ್ವಾಸದಿಂದಲೇ ಸ್ಪರ್ಧಿಗಳು ಉತ್ತರಿಸಿದರು.

ಪ್ರತಿಯೊಂದು ಸುತ್ತೂ ಕುತೂಹಲ ಹೆಚ್ಚಿಸುವಂತೆ ಮಾಡಿತು. ಪರದೆಯ ಮೇಲೆ ಪ್ರಶ್ನೆಗಳು ಮೂಡುತ್ತಿದ್ದಂತೆಯೇ ಆಲೋಚಿಸಿ, ಉತ್ತರಿಸುವ ಕೌಶಲ ತೋರಿದ ತಂಡಗಳು ತಮ್ಮ ಬುಟ್ಟಿಗೆ ಅಂಕವನ್ನು ಜಮೆ ಮಾಡಿಕೊಂಡು ಜಯದ ನಗೆ ಬೀರುತ್ತಿದ್ದವು.

ಸ್ಪರ್ಧೆಯಲ್ಲಿ ಕೇಳಿದ ಪ್ರಶ್ನೆಗಳು ಎಲ್ಲರನ್ನೂ ತುದಿಗಾಲಿನಲ್ಲಿ ನಿಲ್ಲಿಸಿದವು. ವಿದ್ಯಾರ್ಥಿಗಳ ಸಾಮಾನ್ಯ ಜ್ಞಾನದ ಜೊತೆಗೆ ಅವರಲ್ಲಿರುವ ಏಕಾಗ್ರತೆ, ಚಾಣಾಕ್ಷತನ, ಗ್ರಹಿಕೆ ಸಾಮರ್ಥ್ಯ ಒರೆಗೆ ಹಚ್ಚಲಾಗಿತ್ತು. ಕೆಲ ಪ್ರಶ್ನೆಗಳಿಗೆ ತಂಡಗಳು ಉತ್ತರ ನೀಡದಿದ್ದಾಗ, ಪ್ರೇಕ್ಷಕರಾಗಿ ಕುಳಿತಿದ್ದ ಮಕ್ಕಳು, ಶಿಕ್ಷಕರು, ಪೋಷಕರು ಸರಿ ಉತ್ತರ ಹೇಳಿ, ಬಹುಮಾನ ಪಡೆದು ಸಂಭ್ರಮಿಸಿದರು.

ದಿ ಪ್ರಿಂಟರ್ಸ್ ಮೈಸೂರು ಪ್ರೈವೇಟ್ ಲಿಮಿಟೆಡ್‌ನ (‘ಪ್ರಜಾವಾಣಿ’ ಮತ್ತು ‘ಡೆಕ್ಕನ್ ಹೆರಾಲ್ಡ್’ ಪತ್ರಿಕಾ ಸಮೂಹ) ನಿರ್ದೇಶಕಿ ಕೆ.ಟಿ. ಸೌಭಾಗ್ಯಲಕ್ಷ್ಮಿ, ‘45’ ಸಿನಿಮಾದ ನಿರ್ದೇಶಕ ಅರ್ಜುನ್ ಜನ್ಯ ಅವರು ವಿಜೇತ ಸ್ಪರ್ಧಿಗಳಿಗೆ ಬಹುಮಾನ ವಿತರಿಸಿದರು.

‘ಪ್ರಜಾವಾಣಿ’ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ದಿ ಪ್ರಿಂಟರ್ಸ್ ಮೈಸೂರು ಪ್ರೈವೇಟ್ ಲಿಮಿಟೆಡ್ ಸಿಒಒ ಕಿರಣ್ ಸುಂದರ್ ರಾಜನ್, ಆರ್ಕಿಡ್ಸ್ ವಲಯ ಮುಖ್ಯಸ್ಥೆ ಮಂಜುಳಾ, ದಾವಣಗೆರೆಯ ಸಿದ್ಧಗಂಗಾ ಪಿಯು ಕಾಲೇಜು ನಿರ್ದೇಶಕ ಡಿ.ಎಸ್. ಜಯಂತ್ ಪಾಲ್ಗೊಂಡಿದ್ದರು.

ಆರ್ಕಿಡ್ಸ್ ದಿ ಇಂಟರ್‌ನ್ಯಾಷನಲ್ ಸ್ಕೂಲ್ ಪ್ರಸ್ತುತಿಪಡಿಸಿದ ಈ ಕಾರ್ಯಕ್ರಮದಲ್ಲಿ ಬ್ಯಾಂಕಿಂಗ್ ಪಾರ್ಟ್‌ನರ್ 'ಎಸ್‌ಬಿಐ', ರಿಫ್ರೆಶ್‌ಮೆಂಟ್ ಪಾರ್ಟ್‌ನರ್ 'ಮೊಗು ಮೊಗು', ಸ್ಪೆಷಲ್ ಪಾರ್ಟ್‌ನರ್ ‘ಭೀಮ’, ನ್ಯೂಟ್ರಿಷನ್ ಪಾರ್ಟ್‌ನರ್ ‘ನಂದಿನಿ’ ಸಹಕರಿಸಿದವು. ಪೂರ್ವಿಕಾ, ವಿಐಪಿಎಸ್, ಟ್ಯಾಲೆಂಟ್ ಸ್ಪ್ರಿಂಟ್, ಐಸಿಎಸ್ ಮಹೇಶ್ ಪಿಯು ಕಾಲೇಜು, ಸೂಪರ್ ಬ್ರೈನ್, ಮಾರ್ಗದರ್ಶಿ, ದಿ ಟೀಮ್ ಅಕಾಡೆಮಿ, ಐಬಿಎಂಆರ್, ಮಂಗಳೂರು ಪಿಯು ಕಾಲೇಜು, ಶಾರದಾ ವಿದ್ಯಾಮಂದಿರ ಸಹಯೋಗ ನೀಡಿದ್ದವು. ‘ಏಷ್ಯಾನೆಟ್ ಸುವರ್ಣ ನ್ಯೂಸ್’ ಸಹಯೋಗ ನೀಡಿತು.

> **ವಿಭಾಗ ಮಟ್ಟಕ್ಕಿಂತ ರಾಜ್ಯಮಟ್ಟದಲ್ಲಿ ‘ಪ್ರಜಾವಾಣಿ’ ರಸಪ್ರಶ್ನೆ ಕಠಿಣ ಎನ್ನಿಸಿತು. ಟ್ವಿಸ್ಟ್ ಎನ್ನಿಸುವ ಪ್ರಶ್ನೆಗಳು ನಮ್ಮನ್ನು ಯೋಚಿಸುವಂತೆ ಮಾಡಿದವು. ರಸಪ್ರಶ್ನೆ ಹೇಗೆ ಎದುರಿಸಬೇಕು ಎನ್ನುವ ಅಂಶ ತಿಳಿದುಕೊಂಡೆವು. ಮೊದಲನೇ ಸ್ಥಾನ ಪಡೆದಿದ್ದಕ್ಕೆ ಖುಷಿಯಾಗಿದೆ**
> **ತ್ರಿವಿಕ್ರಮ ಕೇಶವನ್, ವಿಷ್ಣು ಎಸ್.ಗಣೇಶ್,** ಶಿಶುಗೃಹ ಸೀನಿಯರ್ ಸ್ಕೂಲ್, ಬೆಂಗಳೂರು

> **ಮೇಘವಿ ಮಂಜುನಾಥ್ ಅವರು ನಡೆಸಿಕೊಟ್ಟ ರಸಪ್ರಶ್ನೆ ಶೈಲಿ, ನೀಡುತ್ತಿದ್ದ ವಿವರಣೆ, ಉತ್ಸಾಹ ತುಂಬುತ್ತಿದ್ದ ಪರಿ, ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಯ ಮಾಹಿತಿ ಒತ್ತಡ ಎನ್ನಿಸಲಿಲ್ಲ. ಜ್ಞಾನದ ಹರಿವು ವಿಸ್ತರಿಸಿಕೊಳ್ಳುವ ಅವಕಾಶವನ್ನು ‘ಪ್ರಜಾವಾಣಿ’ ಕಲ್ಪಿಸಿತು**
> **ತಕ್ಷಕ್ ಶೆಟ್ಟಿ, ಸೃಜನ್ ಎನ್.ವೈ,** ಲಿಟ್ಲ್ ರಾಕ್ ಇಂಡಿಯನ್ ಸ್ಕೂಲ್, ಬ್ರಹ್ಮಾವರ, ಉಡುಪಿ ಜಿಲ್ಲೆ

> **ಹಿಂದೆ ರಸಪ್ರಶ್ನೆ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದರೂ ರಾಜ್ಯ ಮಟ್ಟದ ಹಂತದವರೆಗೂ ಹೋಗಿರಲಿಲ್ಲ. ‘ಪ್ರಜಾವಾಣಿ’ ರಸಪ್ರಶ್ನೆ ನಡೆಸಿದ ರೀತಿ ನಮ್ಮ ಚಿಂತನೆಯ ಕ್ರಮವನ್ನು ಬದಲಿಸಿದೆ. ನಮ್ಮ ಪ್ರಯತ್ನಕ್ಕೆ ಮೂರನೇ ಬಹುಮಾನ ಲಭಿಸಿದ್ದು ಖುಷಿ ತಂದಿದೆ**
> **ತೇಜಲ್ ಅಮಾರಿ, ಸ್ತುತಿ ರಾಠಿ,** ಬಸವೇಶ್ವರ ಅಂತರರಾಷ್ಟ್ರೀಯ ಪಬ್ಲಿಕ್ ಶಾಲೆ, ಬಾಗಲಕೋಟೆ

ಪ್ರಜಾವಾಣಿ ಮುದ್ರಣಾಲಯಕ್ಕೆ ಭೇಟಿ ನೀಡಿದ ವಿದ್ಯಾರ್ಥಿಗಳು

ಫಲಿತಾಂಶದ ವಿವರ

ಶಾಲೆ	ವಿದ್ಯಾರ್ಥಿಗಳು	ವಲಯ	ಸ್ಥಾನ
ಶಿಶುಗೃಹ ಸೀನಿಯರ್ ಸ್ಕೂಲ್, ಬೆಂಗಳೂರು	ತ್ರಿವಿಕ್ರಮ್ ಕೇಶವನ್, ವಿಷ್ಣು ಎಸ್.ಗಣೇಶ್	ಬೆಂಗಳೂರು	ಪ್ರಥಮ
ಲಿಟ್ಲ್ ರಾಕ್ ಇಂಡಿಯನ್ ಸ್ಕೂಲ್, ಬ್ರಹ್ಮಾವರ	ತಕ್ಷಕ್ ಶೆಟ್ಟಿ, ಸೃಜನ್ ಎನ್.ವೈ	ಹುಬ್ಬಳ್ಳಿ	ದ್ವಿತೀಯ
ಬಸವೇಶ್ವರ ಅಂತರರಾಷ್ಟ್ರೀಯ ಪಬ್ಲಿಕ್ ಶಾಲೆ, ಬಾಗಲಕೋಟೆ	ತೇಜಲ್ ಅಮಾರಿ, ಸ್ತುತಿ ರಾಠಿ	ಬಾಗಲಕೋಟೆ	ತೃತೀಯ
ಶ್ರೀ ಶರಣಬಸವೇಶ್ವರ ವಸತಿ ಪಬ್ಲಿಕ್ ಶಾಲೆ, ಕಲಬುರಗಿ	ಬಸವ ಪ್ರಸಾದ್, ಶ್ರೇಯಸ್	ಬೀದರ್	ನಾಲ್ಕನೇ ಸ್ಥಾನ
ಬಾಪೂಜಿ ಹಿರಿಯ ಪ್ರಾಥಮಿಕ ಶಾಲೆ, ದಾವಣಗೆರೆ	ಚಿನ್ಮಯ್ ಕಲಾಲ್, ಇಶಾನ್ ಎಸ್	ದಾವಣಗೆರೆ	ಐದನೇ ಸ್ಥಾನ
ಶ್ರೀ ರಾಮಕೃಷ್ಣ ವಿದ್ಯಾಶಾಲಾ, ಮೈಸೂರು	ರಿಷಿ ಭಾರ್ಗವ್ ಶ್ರಾಫ್, ಹಿರೇನ್.ಬಿ.ರೈ	ಮೈಸೂರು	ಆರನೇ ಸ್ಥಾನ

ಬಾಲಕನ ಚುರುಕುತನ

ರಸಪ್ರಶ್ನೆ ಸ್ಪರ್ಧೆಯಲ್ಲಿ ತಂಡಗಳು ಉತ್ತರ ನೀಡಲು ಆಗದೇ ಇದ್ದಾಗ ವೇದಿಕೆ ಮುಂಭಾಗದಲ್ಲಿ ಸಭಿಕರಾಗಿ ಕುಳಿತಿದ್ದ ವಿದ್ಯಾರ್ಥಿಗಳಿಗೆ ಅವಕಾಶ ಮಾಡಿಕೊಡಲಾಯಿತು. ಇದರಲ್ಲಿ ಅತಿ ಹೆಚ್ಚು ಮೂರು ಉತ್ತರ ನೀಡಿ ಶಿಶುಗೃಹ ಶಾಲೆಯ ಆರವ್ ಬಹುಮಾನ ಪಡೆದುಕೊಂಡು ಗಮನ ಸೆಳೆದಿದ್ದು ವಿಶೇಷವಾಗಿತ್ತು.

ಕಳೆದುಕೊಂಡವನಿಗೆ ‘ಮೊಬೈಲ್’ ಬಹುಮಾನ

ರಸಪ್ರಶ್ನೆ ಸ್ಪರ್ಧೆಗೆಂದು ಉಡುಪಿಯ ಬ್ರಹ್ಮಾವರದಿಂದ ಬೆಂಗಳೂರಿಗೆ ಬರುವಾಗ ಬಸ್‌ನಲ್ಲಿಯೇ ಮೊಬೈಲ್ ಕಳೆದುಕೊಂಡಿದ್ದ ಸೃಜನ್‌ಗೆ ಬಹುಮಾನವಾಗಿ ಮೊಬೈಲ್ ಸಿಕ್ಕಿದ್ದು ಖುಷಿ ನೀಡಿತ್ತು. ಹುಬ್ಬಳ್ಳಿ ವಲಯಕ್ಕೆ ದ್ವಿತೀಯ ಸ್ಥಾನ ಲಭಿಸಿದ್ದರಿಂದ ಇಬ್ಬರಿಗೂ ಮೊಬೈಲ್ ನೀಡಲಾಯಿತು. ಫಲಿತಾಂಶ ಪ್ರಕಟಿಸಿ ಕೈಗೆ ಮೊಬೈಲ್ ಇದ್ದ ಉಡುಗೊರೆ ನೀಡಿದಾಗ ಸೃಜನ್ ಖುಷಿಗೆ ಪಾರವೇ ಇರಲಿಲ್ಲ.

ಬಿಎಂಆರ್‌ಸಿಎಲ್ ಕಾರ್ಯಾಚರಣೆ ನಿಯಂತ್ರಣ ಕೇಂದ್ರದಲ್ಲಿ ವಿದ್ಯಾರ್ಥಿಗಳು

ಮಕ್ಕಳಿಗೆ ಕಲಿಕಾ ಕಾರ್ಯಾಗಾರ

ಬೆಂಗಳೂರು: ‘ಪ್ರಜಾವಾಣಿ–ರಸಪ್ರಶ್ನೆ ಚಾಂಪಿಯನ್‌ಶಿಪ್’ನ್ ಫೈನಲ್‌ಗೆ ಆಯ್ಕೆಯಾಗಿದ್ದ ಅಭ್ಯರ್ಥಿಗಳಿಗೆ ಈ ಕ್ವಿಜ್‌ನ ಭಾಗವಾಗಿ ಕಲಿಕಾ ಕಾರ್ಯಾಗಾರ ನಡೆಸಲಾಯಿತು.

ಬೆಂಗಳೂರು, ಹುಬ್ಬಳ್ಳಿ, ದಾವಣಗೆರೆ, ಮೈಸೂರು, ಬೀದರ್, ಬಾಗಲಕೋಟೆ ವಲಯಗಳಲ್ಲಿ ಗೆಲುವು ಸಾಧಿಸಿ, ಫೈನಲ್‌ಗೆ ಆಯ್ಕೆಯಾಗಿದ್ದ ಆರು ತಂಡಗಳ ಅಭ್ಯರ್ಥಿಗಳು ಈ ಕಾರ್ಯಾಗಾರದ ಭಾಗವಾಗಿದ್ದರು. ಕುಂಬಳಗೋಡಿನಲ್ಲಿರುವ ದಿ ಪ್ರಿಂಟರ್ಸ್ ಮೈಸೂರು ಪ್ರೈವೇಟ್ ಲಿಮಿಟೆಡ್‌ನ (‘ಪ್ರಜಾವಾಣಿ’ ಮತ್ತು ‘ಡೆಕ್ಕನ್ ಹೆರಾಲ್ಡ್’) ಮುದ್ರಣಾಲಯಕ್ಕೆ ಸೋಮವಾರ ಸಂಜೆ ಭೇಟಿ ನೀಡಿ, ಮುದ್ರಣ ಪ್ರಕ್ರಿಯೆ ಬಗ್ಗೆ ತಿಳಿದುಕೊಂಡರು.

ಎಂ.ಎಚ್. ಮರಿಗೌಡ ರಸ್ತೆಯಲ್ಲಿರುವ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳಿಯು (ಕೆಎಂಎಫ್) ಪ್ರಧಾನ ಕಚೇರಿಗೆ ಮಂಗಳವಾರ ಭೇಟಿ ನೀಡಿದರು. ಅಲ್ಲಿ ಹಾಲು ಸಂಸ್ಕರಿಸುವ ವಿಧಾನ, ಹಾಲಿನ ಉತ್ಪನ್ನಗಳ ತಯಾರಿಕೆ, ನಂದಿನಿ ಬ್ರ್ಯಾಂಡ್ ಬಗ್ಗೆ ವಿದ್ಯಾರ್ಥಿಗಳು ತಿಳಿದುಕೊಂಡರು.

ಬೈಯಪ್ಪನಹಳ್ಳಿಯಲ್ಲಿ ಇರುವ ಬೆಂಗಳೂರು ಮೆಟ್ರೊ ರೈಲು ನಿಗಮದ (ಬಿ.ಎಂ.ಆರ್.ಸಿ.ಎಲ್) ಕಾರ್ಯಾಚರಣೆ ನಿಯಂತ್ರಣ ಕೇಂದ್ರಕ್ಕೂ ಮಕ್ಕಳು ಭೇಟಿ ನೀಡಿದರು. ನಮ್ಮ ಮೆಟ್ರೊದ ನೇರಳೆ ಮಾರ್ಗ ಹಾಗೂ ಹಸಿರು ಮಾರ್ಗ ಹೇಗೆ ಕಾರ್ಯಾಚರಣೆ ಮಾಡುತ್ತದೆ? ನಿಯಂತ್ರಣ ಹೇಗೆ ಸೇರಿ ವಿವಿಧ ಸಂಗತಿಗಳ ಬಗ್ಗೆ ಮಾಹಿತಿ ಒದಗಿಸಲಾಯಿತು. ನಿಂತಿದ್ದ ಮೆಟ್ರೊ ರೈಲು ಒಂದರಲ್ಲಿ ಚಾಲಕರ ಆಸನದಲ್ಲಿ ಕುಳಿತು, ರೈಲು ನಿರ್ವಹಣೆ ಬಗ್ಗೆ ಅನುಭವ ಪಡೆದುಕೊಂಡರು.

ಕೆಎಂಎಫ್ ಪ್ರಧಾನ ಕಚೇರಿಯಲ್ಲಿ ಮಾಹಿತಿ ಪಡೆದ ವಿದ್ಯಾರ್ಥಿಗಳು

ಉತ್ತಮ ಉತ್ತರಕ್ಕೆ ಕಾತರ

‘ಪ್ರಜಾವಾಣಿ’ ರಸಪ್ರಶ್ನೆಯೊಂದಿಗೆ ಇದು ನನ್ನ ಆರನೇ ಆವೃತ್ತಿಯ ಪಯಣ. ಮಕ್ಕಳಲ್ಲಿರುವ ಜ್ಞಾನ, ವಿವಿಧ ವಿಷಯಗಳಲ್ಲಿನ ಆಸಕ್ತಿಯನ್ನು ಹೊರಗೆಡಹಲು ಇದೊಂದು ವೇದಿಕೆಯಾಯಿತು. ಉತ್ತರ ಕರ್ನಾಟಕ ಭಾಗದಲ್ಲಿ ಈ ಬಾರಿ ದೊರೆತ ಪ್ರತಿಕ್ರಿಯೆ, ಮಕ್ಕಳ ಪಾಲ್ಗೊಳ್ಳುವಿಕೆ ಉತ್ತಮವಾಗಿತ್ತು. ತಾರ್ಕಿಕ ಪ್ರಶ್ನೆಗಳಿಗೆ ಪೂರಕವಾಗಿ ಯೋಚಿಸಿ ಬುದ್ಧಿವಂತಿಕೆ ಬಳಸುವುದರೊಂದಿಗೆ ಉತ್ತರ ನೀಡುವ ಪ್ರಯತ್ನವನ್ನು ಮಕ್ಕಳು ಮಾಡಿದ ಪರಿ ಖುಷಿ ನೀಡಿತು.

ಮೇಘವಿ ಮಂಜುನಾಥ್, ಕ್ವಿಜ್ ಮಾಸ್ಟರ್

ಕೇಂದ್ರ ಸರ್ಕಾರದ ವಿರುದ್ಧ ರಾಜ್ಯಸಭಾ ಸಂಸದ ಜಿ.ಸಿ.ಚಂದ್ರಶೇಖರ್ ವಾಗ್ದಾಳಿ

ಪಿ.ಎಂ ಆವಾಸ್: ರಾಜ್ಯದಲ್ಲಿ ಶೇ 12 ಸಾಧನೆ

ಪ್ರಜಾವಾಣಿ ವಾರ್ತೆ

ಚಂದ್ರಶೇಖರ್

ನವದೆಹಲಿ: ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ ಕರ್ನಾಟಕದಲ್ಲಿ ಕೇವಲ ಶೇ 12ರಷ್ಟು ಸಾಧನೆ ಆಗಿದೆ ಎಂದು ರಾಜ್ಯಸಭಾ ಸದಸ್ಯ ಜಿ.ಸಿ. ಚಂದ್ರಶೇಖರ್ ಕಿಡಿಕಾರಿದರು.

ರಾಜ್ಯಸಭೆಯಲ್ಲಿ ಮಂಗಳವಾರ ನಡೆದ ಪೂರಕ ಅಂದಾಜಿನ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ‘ಇದು ಪ್ರಧಾನಿ ನರೇಂದ್ರ ಮೋದಿ ಅವರ ಕನಸಿನ ಯೋಜನೆ. 2024–25ರಲ್ಲಿ ರಾಜ್ಯದಲ್ಲಿ 2.74 ಲಕ್ಷ ಮನೆ ನಿರ್ಮಾಣದ ಗುರಿ ಹೊಂದಲಾಗಿತ್ತು. ಇಲ್ಲಿಯವರೆಗೆ 4,443 ಮನೆಗಳು ಮಾತ್ರ ನಿರ್ಮಾಣ ಆಗಿವೆ. 29 ಸಾವಿರ ಮನೆಗಳು ನಿರ್ಮಾಣ ಹಂತದಲ್ಲಿವೆ. 2.39 ಲಕ್ಷ ಮನೆಗಳ ನಿರ್ಮಾಣ ಆರಂಭ ಆಗಿಲ್ಲ’ ಎಂದು ದೂರಿದರು.

ಆಯುಷ್ಮಾನ್ ಭಾರತ ಯೋಜನೆಯಡಿ ಕರ್ನಾಟಕ ರಾಜ್ಯಕ್ಕೆ ಕೇಂದ್ರ ಸರ್ಕಾರ ತನ್ನ ಪಾಲನ್ನು ಸಮರ್ಪಕವಾಗಿ ಕೊಡುತ್ತಿಲ್ಲ. ರಾಜ್ಯ ಸರ್ಕಾರ ಹಲವು ಸಲ ಮನವಿ ಮಾಡಿದರೂ ಕೇಂದ್ರ ಸ್ಪಂದಿಸಿಲ್ಲ ಎಂದು ಅವರು ಆರೋಪಿಸಿದರು.

ರಾಜ್ಯದಲ್ಲಿ ಆಯುಷ್ಮಾನ್ ಭಾರತ್ ಯೋಜನೆಗೆ ಐದು ವರ್ಷಗಳಲ್ಲಿ ₹7,239 ಕೋಟಿ ಖರ್ಚು ಮಾಡಲಾಗಿದೆ. ಕೇಂದ್ರ ಕೊಟ್ಟಿರುವುದು ₹2,056 ಕೋಟಿ ಮಾತ್ರ. 2020ರಲ್ಲಿ ರೋಗಿಗಳ ಸಂಖ್ಯೆ 8 ಲಕ್ಷ ಇದ್ದರೆ ಈಗ 35 ಲಕ್ಷಕ್ಕೆ ಏರಿದೆ. ಕೇಂದ್ರದ ಪಾಲು ಗಣನೀಯವಾಗಿ ಕುಸಿದಿದೆ’ ಎಂದರು.

15ನೇ ಹಣಕಾಸು ಆಯೋಗವು ಕಳೆದ ಎರಡು ವರ್ಗಗಳಿಂದ ರಾಜ್ಯ ಆರೋಗ್ಯ ಇಲಾಖೆಗೆ ಅನುದಾನವನ್ನೇ ಕೊಟ್ಟಿಲ್ಲ. ಕೇಂದ್ರ ಪ್ರಾಯೋಜಿತ ಯೋಜನೆಗಳಲ್ಲೂ ₹22 ಸಾವಿರ ಕೋಟಿ ಬಿಡುಗಡೆಗೆ ಬಾಕಿ ಇದೆ. ರಾಜ್ಯದಲ್ಲಿ ವೃದ್ಧಾಪ್ಯ ವೇತನಕ್ಕೆ ₹271 ಕೋಟಿ ನೀಡಬೇಕಿತ್ತು. ಇಲ್ಲಿಯವರೆಗೆ ಕೇಂದ್ರ ಸರ್ಕಾರ ಚಿಕ್ಕಾಸು ಕೊಟ್ಟಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇದೇ ವೇಳೆ ಸದನದಲ್ಲಿದ್ದ ಕೇಂದ್ರ ಆರೋಗ್ಯ ಸಚಿವ ಪ್ರಲ್ಹಾದ ಜೋಶಿ ಸದನದಿಂದ ಹೊರಡಲು ಸಿದ್ಧರಾದರು. ಆಗ ಜಿ.ಸಿ.ಚಂದ್ರಶೇಖರ್, ’ಜೋಶಿ ಅವರೇ, ಇದು ರಾಜ್ಯದ ಸಮಸ್ಯೆ. ಸದನದಿಂದ ಓಡಿ ಹೋಗಬೇಡಿ’ ಎಂದು ವ್ಯಂಗ್ಯವಾಗಿ ಹೇಳಿದರು.

ಸಂಸದರ ನಿಧಿಯಿಂದ ರೋಗಿಗಳ ಚಿಕಿತ್ಸೆಗೆ ಕನಿಷ್ಠ ₹1 ಕೋಟಿ ಒದಗಿಸಬೇಕು. ಈ ಮೂಲಕ ರೋಗಿಗಳಿಗೆ ನೆರವಾಗಬೇಕು. ಇದಕ್ಕಾಗಿ ಕಾನೂನು ತಿದ್ದುಪಡಿ ಮಾಡಬೇಕು ಎಂದು ಒತ್ತಾಯಿಸಿದರು.

ಸೈಬರ್ ಅಪರಾಧ: 11 ಲಕ್ಷ ಸಿಮ್‌ಗಳಿಗೆ ನಿರ್ಬಂಧ

ನವದೆಹಲಿ: ದೇಶದಲ್ಲಿ ಸೈಬರ್ ಅಪರಾಧ ಪ್ರಕರಣಗಳನ್ನು ನಿಯಂತ್ರಿಸಲು ಇಲ್ಲಿಯವರೆಗೆ 11.14 ಲಕ್ಷ ಸಿಮ್ ಕಾರ್ಡ್‌ಗಳು ಹಾಗೂ 2.96 ಲಕ್ಷ ಇಎಂಇಐಗಳನ್ನು ನಿರ್ಬಂಧಿಸಲಾಗಿದೆ ಎಂದು ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ಬಂಡಿ ಸಂಜಯ್ ಕುಮಾರ್ ತಿಳಿಸಿದ್ದಾರೆ.

ಲೋಕಸಭೆಯಲ್ಲಿ ಮಂಗಳವಾರ ಪ್ರಶ್ನೋತ್ತರ ಅವಧಿಯಲ್ಲಿ ಮೈಸೂರು ಸಂಸದ ಯದುವೀರ್ ಒಡೆಯರ್ ಕೇಳಿದ ಪ್ರಶ್ನೆಗೆ ಸಚಿವರು ಲಿಖಿತ ಉತ್ತರ ನೀಡಿದ್ದಾರೆ.

ಬ್ಯಾಂಕ್‌ಗಳು/ಹಣಕಾಸು ಸಂಸ್ಥೆಗಳ ಸಹಯೋಗದಲ್ಲಿ ಶಂಕಿತ ಸೈಬರ್ ಅಪರಾಧಿಗಳ ಗುರುತಿಸುವಿಕೆಯ ಪ್ರಕ್ರಿಯೆ ಆರಂಭಿಸಲಾಗಿದ್ದು, ಇಲ್ಲಿಯವರೆಗೆ 18.43 ಲಕ್ಷಕ್ಕೂ ಹೆಚ್ಚು ಶಂಕಿತರ ದತ್ತಾಂಶಗಳನ್ನು ಪತ್ತೆ ಹಚ್ಚಲಾಗಿದೆ. ಈ ಮೂಲಕ, ₹8,031 ಕೋಟಿ ಮೊತ್ತ ಸೈಬರ್ ಅಪರಾಧಿಗಳ ಪಾಲಾಗುವುದನ್ನು ತಪ್ಪಿಸಲಾಗಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

‘ರೈತರ ನೆರವಿಗೆ ಧಾವಿಸದ ರಾಜ್ಯ ಸರ್ಕಾರ’

ನವದೆಹಲಿ: ಬೆಲೆ ಕುಸಿತದಿಂದಾಗಿ ಕರ್ನಾಟಕದ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಆದರೆ, ರೈತರ ನೆರವಿಗೆ ಧಾವಿಸಬೇಕಿದ್ದ ಕಾಂಗ್ರೆಸ್ ಸರ್ಕಾರದಲ್ಲಿ ಕುರ್ಚಿ ಕಾದಾಟದಲ್ಲಿ ತೊಡಗಿದೆ ಎಂದು ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ ಆರೋಪಿಸಿದರು.

ರಾಜ್ಯಸಭೆಯಲ್ಲಿ ಮಂಗಳವಾರ ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಅವರು, ‘ಮಾರುಕಟ್ಟೆಯಲ್ಲಿ ಬೆಲೆ ಕುಸಿದಾಗ ಬೆಂಬಲ ಬೆಲೆಯೊಂದಿಗೆ ಖರೀದಿ ಮಾಡಬೇಕು. ರಾಜ್ಯ ಸರ್ಕಾರಗಳು ಖರೀದಿ ಕೇಂದ್ರಗಳನ್ನು ತೆರೆದು ಬೆಳೆ ಖರೀದಿಸಬೇಕು. ಕರ್ನಾಟಕದಲ್ಲಿ ಮೆಕ್ಕೆಜೋಳ ಸೇರಿ 48 ಲಕ್ಷ ಹೆಕ್ಟೇರ್‌ನಲ್ಲಿ ಬೇರೆ ಬೇರೆ ಬೆಳೆ ಬೆಳೆಯಲಾಗಿದೆ. ಮುಂಗಾರು ಅವಧಿಯಲ್ಲಿ ಪ್ರವಾಹದಿಂದ 14 ಲಕ್ಷ ಹೆಕ್ಟೇರ್ ಬೆಳೆ ನಾಶವಾಗಿದೆ. ಇಂತಹ ಸಮಯದಲ್ಲಿ ರಾಜ್ಯ ಸರ್ಕಾರ ನೆರವಿಗೆ ಬರಬೇಕಿತ್ತು’ ಎಂದರು.

ಸರಿಯಾದ ಸಮಯಕ್ಕೆ ಬೆಳೆ ಖರೀದಿ ಮಾಡದ ಹಿನ್ನೆಲೆಯಲ್ಲಿ ಕಡಿಮೆ ಬೆಲೆ ಮಾರಾಟ ಮಾಡಬೇಕಾದ ಅನಿವಾರ್ಯ ಸ್ಥಿತಿ ನಿರ್ಮಾಣವಾಗಿದೆ. ಹೀಗಾಗಿ, ಕೇಂದ್ರ ಸರ್ಕಾರ ಮಧ್ಯಪ್ರವೇಶಿಸಬೇಕು. ಕನಿಷ್ಠ ಹಿಂಗಾರು ಬೆಳೆಗಳನ್ನು ಸಂಸ್ಥೆಗಳ ಮೂಲಕ ಖರೀದಿ ಮಾಡಬೇಕು ಎಂದು ಅವರು ಆಗ್ರಹಿಸಿದರು.

‘ಎಸ್ಸೆಸ್ಸೆಲ್ಸಿ ತಲುಪುವ ಮಕ್ಕಳು ಶೇ 70’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲ್ಯಾಣ ಕರ್ನಾಟಕ ಭಾಗದ ಶಾಲೆಗಳಲ್ಲಿ ಕಲಿಯುವ ಮಕ್ಕಳಲ್ಲಿ ಶೇ 65ರಿಂದ 70ರಷ್ಟು ವಿದ್ಯಾರ್ಥಿಗಳು ಮಾತ್ರ ಎಸ್‌ಎಸ್‌ಎಲ್‌ಸಿ ಹಂತ ತಲುಪುತ್ತಿದ್ದಾರೆ.

ಗುಲ್ಬರ್ಗಾ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದ ಪ್ರಾಧ್ಯಾಪಕಿ ಛಾಯಾ ದೇಗಾಂವಕರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ಎಂಟು ಸದಸ್ಯರ ಸಮಿತಿ ಸರ್ಕಾರಕ್ಕೆ ಸಲ್ಲಿಸಿದ ಅಧ್ಯಯನ ವರದಿಯಲ್ಲಿ ಕಲ್ಯಾಣ ಕರ್ನಾಟಕ ಭಾಗದ ಇಂತಹ ಹಲವು ಶೈಕ್ಷಣಿಕ ಸ್ಥಿತಿಗತಿಗಳನ್ನು ಉಲ್ಲೇಖಿಸಲಾಗಿದೆ.

ಕಲ್ಯಾಣ ಕರ್ನಾಟಕದ ಏಳು ಜಿಲ್ಲೆಗಳ ವ್ಯಾಪ್ತಿಯ ಒಟ್ಟು ಶಾಲೆಗಳಲ್ಲಿ ಶೇ 57.35ರಷ್ಟು ಸರ್ಕಾರಿ ಶಾಲೆಗಳಿದ್ದು, 5ರಿಂದ 8ನೇ ತರಗತಿಯ ಮಕ್ಕಳ ಶೈಕ್ಷಣಿಕ ಗುಣಮಟ್ಟ ಶೇ 89 ಇದ್ದರೆ, ನಂತರ ಕಡಿಮೆಯಾಗುತ್ತಾ ಹೋಗಿದೆ. ಶೇ 12 ವಿದ್ಯಾರ್ಥಿಗಳು ಕಲಿಕೆಯಲ್ಲಿ ಹಿಂದುಳಿದಿದ್ದಾರೆ. ಎಸ್‌ಎಸ್‌ಎಲ್‌ಸಿ ಫಲಿತಾಂಶ ಶೇ 53.40 ಇದೆ. ವಿಜಯನಗರ ಜಿಲ್ಲೆ ಹೊರತುಪಡಿಸಿದರೆ ಉಳಿದ ಜಿಲ್ಲೆಗಳು ರಾಜ್ಯ ಸರಾಸರಿಗಿಂತ ಕಡಿಮೆ ಫಲಿತಾಂಶ ಪಡೆಯುತ್ತಿವೆ ಎಂದು ವರದಿ ಹೇಳಿದೆ.

ಶಿಕ್ಷಕರ ಕೊರತೆ, ಕಡಿಮೆ ಮಟ್ಟದ ಬೋಧನಾ ಸಾಮರ್ಥ್ಯ, ಹಲವು ಶಾಲೆಗಳು ಅತಿಥಿ ಶಿಕ್ಷಕರನ್ನೇ ಅವಲಂಬಿಸಿರುವುದು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳ ಪರಿಣಾಮಕಾರಿ ನಿರ್ವಹಣೆಯ ಕೊರತೆ, ಹಿರಿಯ ಅಧಿಕಾರಿಗಳ ಶೈಕ್ಷಣಿಕ ಮಾರ್ಗದರ್ಶನದ ಕೊರತೆ, ಶಾಲಾ ಮೇಲ್ವಿಚಾರಣೆ ಮತ್ತು ಪರಿಶೀಲನೆಯಲ್ಲಿನ ಲೋಪಗಳು ಕಾರಣಗಳಾಗಿದ್ದು, ವಿದ್ಯಾರ್ಥಿಗಳ ಗೈರು ಹಾಜರಿ ಇಡೀ ವ್ಯವಸ್ಥೆಯ ಪ್ರಮುಖ ಸಮಸ್ಯೆ ಎಂದು ವಿವರಿಸಲಾಗಿದೆ.

ಪ್ರಾಥಮಿಕ ಶಾಲೆಗಳಲ್ಲಿ 17,274 ಹುದ್ದೆಗಳು, ಪ್ರೌಢಶಾಲೆಗಳಲ್ಲಿ 4,107 ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಇದರಿಂದ ಪ್ರಾಥಮಿಕ ಹಂತದಲ್ಲೇ ಶಿಕ್ಷಣದ ಗುಣಮಟ್ಟ ಕುಸಿದಿದೆ. ತರಬೇತಿ ಪಡೆದ ಶಿಕ್ಷಕರ ಲಭ್ಯತೆ ಖಚಿತಪಡಿಸಲು ಶಿಕ್ಷಕರ ವರ್ಗಾವಣೆ ನೀತಿಯನ್ನು ಪರಿಶೀಲಿಸುವ ಅಗತ್ಯವಿದೆ. ಎಲ್ಲ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲೂ ಆರಂಭಿಕ ಬಾಲ್ಯ ಶಿಕ್ಷಣ (ಇಸಿಇ) ವ್ಯಾಪ್ತಿ ವಿಸ್ತರಿಸಬೇಕು. 1ರಿಂದ 3ನೇ ತರಗತಿಯ ಶಿಕ್ಷಣವನ್ನು ಬಲಗೊಳಿಸಬೇಕು. 4ನೇ ತರಗತಿಯಿಂದ ಮಧ್ಯವರ್ತಿ ಕಲಿಕಾ ವಿಧಾನಗಳನ್ನು ಅಳವಡಿಸಬೇಕು. ಮೂಲಭೂತ ಸಾಕ್ಷರತೆಗೆ ಒತ್ತು ನೀಡಬೇಕು. ಅಗತ್ಯ ಇರುವ ಕಡೆಗಳಲ್ಲಿ ಮಾಧ್ಯಮಿಕ ಶಿಕ್ಷಣವನ್ನು ಪ್ರೌಢಶಾಲೆಗಳಾಗಿ ಮೇಲ್ದರ್ಜೆಗೇರಿಸಬೇಕು. 8ನೇ ತರಗತಿಯಿಂದ ಕಲಿಕೆ ಜತೆಗೆ ವೈಯಕ್ತಿಕ ಬೆಂಬಲ ಒದಗಿಸಬೇಕು. ಶಿಕ್ಷಕರಿಗೆ ಸ್ವಾಯತ್ತತೆ ನೀಡಬೇಕು ಎಂದು ಸಮಿತಿ ಶಿಫಾರಸು ಮಾಡಿದೆ.

ಕಲ್ಯಾಣ ಕರ್ನಾಟಕ ಶೈಕ್ಷಣಿಕ ಸ್ಥಿತಿಗತಿ

ಸರ್ಕಾರಿ ಶಾಲೆಗಳಲ್ಲಿ ಕಲಿಕಾ ಖಾತರಿ

ಸರ್ಕಾರಿ ಶಾಲೆಗಳಲ್ಲಿ ಕಲಿಯುವ ಮಕ್ಕಳಿಗೆ ಕಲಿಕಾ ಖಾತರಿ ಖಚಿತಪಡಿಸಬೇಕು. ಹಾಜರಾತಿ ಹೆಚ್ಚಳ ಮತ್ತು ಕಲಿಕಾ ಫಲಿತಾಂಶ ಸಾಧಿಸುವ ಶಾಲೆಗಳಿಗೆ ಪ್ರಶಸ್ತಿ, ಪುರಸ್ಕಾರ ನೀಡಬೇಕು. ಮುಖ್ಯಶಿಕ್ಷಕರು, ಶಿಕ್ಷಕರಿಗೆ ಉತ್ತೇಜನ ನೀಡಬೇಕು. ಕಲಿಕಾ ಖಾತರಿ ಒದಗಿಸುವ ಶಾಲೆಗಳ ಗುಚ್ಛ ಸಿದ್ಧಪಡಿಸಬೇಕು. ಇಂತಹ ಗರಿಷ್ಠ ಶಾಲೆಗಳನ್ನು ಒಳಗೊಂಡ ಜಿಲ್ಲೆಗಳಿಗೆ ವಿಶೇಷ ಪುರಸ್ಕಾರ ನೀಡಬೇಕು ಎದು ಸಮಿತಿ ಶಿಫಾರಸು ಮಾಡಿದೆ. ದ್ವಿಭಾಷಾ ಮಾಧ್ಯಮದ ಶಾಲೆಗಳಿಗೆ ನುರಿತ ಆಂಗ್ಲ ಭಾಷಾ ಜ್ಞಾನ ಹೊಂದಿರುವ ಶಿಕ್ಷಕರನ್ನು ನೇಮಕ ಮಾಡಬೇಕು. ನಲಿಕಲಿ ಕಾರ್ಯಕ್ರಮದಲ್ಲಿ ಸುಧಾರಣೆ ತರಬೇಕು ಎಂದು ವರದಿ ಹೇಳಿದೆ.

ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ ಶ್ಲಾಘನೆ

ಕಲ್ಯಾಣ ಕರ್ನಾಟಕ ಭಾಗದಲ್ಲಿ ಕರ್ನಾಟಕ ಪಬ್ಲಿಕ್ ಶಾಲೆಗಳು (ಕೆಪಿಎಸ್) ಮಕ್ಕಳನ್ನು ಆಕರ್ಷಿಸುತ್ತಿದ್ದು, ಶಾಲೆಯಿಂದ ಹೊರಗೆ ಉಳಿಯುವ ಮಕ್ಕಳ ಸಂಖ್ಯೆಯನ್ನು ಕಡಿಮೆ ಮಾಡುತ್ತಿವೆ. ಹಾಗಾಗಿ, ಮುಂದಿನ ಐದು ವರ್ಷಗಳಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ (ಕೆಕೆಆರ್‌ಡಿಬಿ) ವತಿಯಿಂದ 200 ಸೇರಿದಂತೆ ಒಟ್ಟು 350 ಕೆಪಿಎಸ್ ಸ್ಥಾಪಿಸಬೇಕು ಎಂದು ಸಮಿತಿ ಶಿಫಾರಸು ಮಾಡಿದೆ.

ಶಿಕ್ಷಣದ ಗುಣಮಟ್ಟ ಮತ್ತು ಪರಿಣಾಮಕಾರಿ ಆಡಳಿತಕ್ಕಾಗಿ ಕಲಬುರಗಿ ಆಯುಕ್ತರ ಕಚೇರಿಯಲ್ಲೇ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ (ಡಿಎಸ್‌ಇಆರ್‌ಟಿ) ಸ್ಥಾಪಿಸಬೇಕು. ಶಿಕ್ಷಣ ವ್ಯವಸ್ಥೆಯ ಮೂಲ ಸೌಕರ್ಯಗಳಿಗಾಗಿ ಹೆಚ್ಚಿನ ಅನುದಾನ ಒದಗಿಸಬೇಕು

ಅನುದಾನಿತ ಸಿಬ್ಬಂದಿಗೂ ಆರೋಗ್ಯ ಸಂಜೀವಿನಿ

ಪ್ರಜಾವಾಣಿ ವಾರ್ತೆ



ಮಧು ಬಂಗಾರಪ್ಪ

ಸುವರ್ಣ ವಿಧಾನಸೌಧ (ಬೆಳಗಾವಿ): ಸರ್ಕಾರಿ ನೌಕರರಿಗೆ ಜಾರಿಗೆ ತಂದಿರುವ ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆಯನ್ನು ಅನುದಾನಿತ ಶಾಲಾ–ಕಾಲೇಜು ಸಿಬ್ಬಂದಿಗೂ ಅನ್ವಯಿಸುವ ಕುರಿತು ಸೂಕ್ತ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು.

ಶಿಕ್ಷಕರ ಕ್ಷೇತ್ರವನ್ನು ಪ್ರತಿನಿಧಿಸುವ ಎಸ್.ಎಲ್.ಬೋಜೇಗೌಡ, ಪುಟ್ಟಣ್ಣ, ಶಶೀಲ್ ನಮೋಶಿ, ಎಸ್.ವಿ.ಸಂಕನೂರ, ಡಿ.ಟಿ. ಶ್ರೀನಿವಾಸ್, ರಾಮೋಜಿಗೌಡ ಅವರ ಪ್ರಶ್ನೆಗಳಿಗೆ ಉತ್ತರ ನೀಡಿದ ಅವರು, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರ ಜತೆ ಚರ್ಚಿಸಿ, ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದರು.

ಪ್ರಾಥಮಿಕ ಶಾಲಾ ಶಿಕ್ಷಕರ ಬಡ್ತಿ ಕುರಿತು ಈಗಾಗಲೇ ಸಂಪುಟ ಸಮ್ಮತಿ ನೀಡಿದೆ. ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ 2015 ರಿಂದ 2020ರವರೆಗೆ ಖಾಲಿ ಇರುವ ಹುದ್ದೆಗಳ ಭರ್ತಿಗೆ ಅನುಮತಿ ನೀಡಲಾಗಿದ್ದು, ಮುಂದಿನ ಶೈಕ್ಷಣಿಕ ಅವಧಿಯ ಒಳಗೆ ಪ್ರಕ್ರಿಯೆ ಪೂರ್ಣಗೊಳಿಸಲಾಗುವುದು. ಮೊಟ್ಟೆ ದರ ಹೆಚ್ಚಳದ ಸಮಸ್ಯೆ ಸೇರಿದಂತೆ ಎಲ್ಲ ಸಮಸ್ಯೆಗಳನ್ನೂ ಕಾಲಮಿತಿಯ ಒಳಗೆ ಬಗೆಹರಿಸಲಾಗುವುದು ಎಂದು ಹೇಳಿದರು.

ತುಂಗಭದ್ರಾ: 24ರಿಂದ ಗೇಟ್ ಅಳವಡಿಕೆ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ‘ತುಂಗಭದ್ರಾ ಅಣೆಕಟ್ಟೆಯ 18ನೇ ಕ್ರೆಸ್ಟ್‌ಗೇಟ್ ಅಳವಡಿಕೆ ಕೆಲಸ ಡಿಸೆಂಬರ್ 24ರಂದು ಆರಂಭ ಆಗಲಿದೆ. ತಿಂಗಳಿಗೆ 8 ಗೇಟ್ ಅಳವಡಿಸುವ ಗುರಿಯಿದೆ’ ಎಂದು ತುಂಗಭದ್ರಾ ಮಂಡಳಿಯ ಕಾರ್ಯನಿರ್ವಾಹಕ ಎಂಜಿನಿಯರ್ ಎನ್. ಚಂದ್ರಶೇಖರ್ ಹೇಳಿದರು.

‘ಇದುವರೆಗೂ ಹಳೆಯ 4 ಗೇಟ್‌ಗಳನ್ನು ಅರ್ಧ ಭಾಗದಷ್ಟು ಕತ್ತರಿಸಿ ತೆಗೆಯಲಾಗಿದೆ. ನೀರು ಕ್ರೆಸ್ಟ್ ಮಟ್ಟಕ್ಕೆ ಕುಸಿದಂತೆ ಹಳೆಯ ಎಲ್ಲಾ 28 ಗೇಟ್ ತೆರವು ಮಾಡಲಾಗುವುದು. ಮೊದಲಿಗೆ 18ನೇ ಗೇಟ್ ಸ್ಥಳದಲ್ಲಿ ಹೊಸ ಗೇಟ್ ಅಳವಡಿಕೆ ಆಗಲಿದೆ. ಜೂನ್ ತಿಂಗಳಿಗೂ ಮುಂಚೆಯೇ ಎಲ್ಲ 33 ಗೇಟ್ ಅಳವಡಿಸಲಾಗುತ್ತದೆ’ ಎಂದರು.

‘ಪ್ರತಿ ಗೇಟ್‌ನಲ್ಲಿ 12 ಬಿಡಿಭಾಗಗಳಿರಲಿವೆ. ಅವುಗಳನ್ನು ಪ್ರತ್ಯೇಕವಾಗಿ ತಂದು ಜೋಡಿಸಲಾಗುವುದು. ಹೀಗಾಗಿ ಅಣೆಕಟ್ಟೆಯ ಮೇಲೆ ಅಧಿಕ ಭಾರ ಬೀಳುವುದಿಲ್ಲ’ ಎಂದರು

ತಾಯಿ ಕೈಯಿಂದ ಜಾರಿ ಬಾವಿಗೆ ಬಿದ್ದು ಮಗು ಸಾವು

ಉಡುಪಿ: ನಗರದ ಕಿನ್ನಿಮುಲ್ಕಿಯಲ್ಲಿ ಮಂಗಳವಾರ ನೀರು ಸೇದುವಾಗ ತಾಯಿಯ ಕೈಯಿಂದ ಜಾರಿ ಬಾವಿಗೆ ಬಿದ್ದು ಒಂದೂವರೆ ವರ್ಷದ ಮಗು ಕೀರ್ತನಾ ಮೃತಪಟ್ಟಿದೆ.

ತಾಯಿ ನಯನಾ ಮಗು ಎತ್ತಿಕೊಂಡು ಮನೆ ಬಳಿಯ ಬಾವಿಯಿಂದ ನೀರು ಸೇದುವಾಗ ಅವಘಡ ನಡೆದಿದೆ. ತಾಯಿ ಕೂಡಲೇ ಹಗ್ಗದ ನೆರವಿನಲ್ಲಿ ಬಾವಿಗೆ ಇಳಿದು ಮಗು ಮೇಲೆತ್ತಿದ್ದಾರೆ. ಬಳಿಕ ಆಸ್ಪತ್ರೆಗೆ ಒಯ್ಯುವಾಗ ಮಗು ಮೃತಪಟ್ಟಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ಜಿ ರಾಮ್ ಜಿ' ಮಸೂದೆ ಮಂಡನೆ

ವಿರೋಧ ಪಕ್ಷಗಳ ಸಂಸದರಿಂದ ಆಕ್ಷೇಪ ಕಾಂಗ್ರೆಸ್ ಪ್ರತಿಭಟನೆ ಇಂದು

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: 'ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ' (ನರೇಗಾ) ಹೆಸರಿನಲ್ಲಿ ಮಹಾತ್ಮ ಗಾಂಧಿ ಹೆಸರು ಕೈಬಿಟ್ಟಿರುವುದು, ರಾಜ್ಯಗಳ ಮೇಲೆ ಶೇ 40ರಷ್ಟು ಹೊರೆ ಹೊರಿಸಿರುವುದು ಸೇರಿ ಇತರೆ ವಿಚಾರಗಳಿಗೆ ಸಂಬಂಧಿಸಿ ವಿರೋಧ ಪಕ್ಷಗಳ ತೀವ್ರ ಆಕ್ಷೇಪದ ಮಧ್ಯೆಯೇ ಕೇಂದ್ರ ಸರ್ಕಾರವು 'ವಿಕಸಿತ ಭಾರತ– ಉದ್ಯೋಗ ಖಾತರಿ ಮತ್ತು ಜೀವನೋಪಾಯ ಮಿಷನ್ (ಗ್ರಾಮೀಣ) (ವಿಬಿ–ಜಿ ರಾಮ್ ಜಿ) ಮಸೂದೆ, 2025' ಅನ್ನು ಮಂಗಳವಾರ ಲೋಕಸಭೆಯಲ್ಲಿ ಮಂಡಿಸಿತು.

ಗ್ರಾಮೀಣಾಭಿವೃದ್ಧಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರು ಮಸೂದೆಯನ್ನು ಮಂಡಿಸಿದರು. ನರೇಗಾ ಕಾಯ್ದೆಯ ಹೆಸರನ್ನು ಬದಲಿಸಿ 'ಪೂಜ್ಯ ಬಾಪು ಗ್ರಾಮೀಣ ರೋಜಗಾರ್ ಯೋಜನೆ' ಎಂಬ ಹೆಸರಿಡಲು ಈ ಮೊದಲು ಕೇಂದ್ರ ಸರ್ಕಾರ ನಿರ್ಧರಿಸಿತ್ತು. ಆದರೆ, ಅಂತಿಮವಾಗಿ ಕೇಂದ್ರವು ನರೇಗಾ ಕಾಯ್ದೆಯನ್ನೇ ಹಿಂಪಡೆಯಲು ಹೊಸ ಮಸೂದೆ ಮಂಡಿಸಿದೆ.

ಶಿವರಾಜ್ ಸಿಂಗ್ ಚೌಹಾಣ್ ಅವರು ಮಸೂದೆ ಮಂಡಿಸುತ್ತಿದ್ದಂತೆಯೇ, ಕಾಂಗ್ರೆಸ್‌ನ ಪ್ರಿಯಾಂಕಾ ಗಾಂಧಿ ವಾದ್ರಾ, ಸಮಾಜವಾದಿ ಪಕ್ಷದ ಅಖಿಲೇಶ್ ಯಾದವ್, ಡಿಎಂಕೆ ಪಕ್ಷದ ಟಿ.ಆರ್. ಬಾಲು, ಆರ್‌ಎಸ್‌ಪಿ ಪಕ್ಷದ ಎನ್‌.ಜೆ. ಪ್ರೇಮಚಂದ್ರನ್ ಸೇರಿದಂತೆ ವಿರೋಧ ಪಕ್ಷದ ಹಲವು ಸಂಸದರು ಎದ್ದು ನಿಂತು ಆಕ್ಷೇಪ ವ್ಯಕ್ತಪಡಿಸಿದರು. 'ಈ ಮಸೂದೆಯನ್ನು ಸಂಸದೀಯ ಸ್ಥಾಯಿ ಸಮಿತಿಗೆ ಕಳುಹಿಸಿ' ಎಂದು ಪಟ್ಟುಹಿಡಿದರು.

'ಗ್ರಾಮೀಣ ಅಭಿವೃದ್ಧಿಗಾಗಿ ಹಿಂದಿನ ಎಲ್ಲ ಸರ್ಕಾರಗಳಿಗಿಂತ ಮೋದಿ ಸರ್ಕಾರವು ಹೆಚ್ಚಿನ ಕೆಲಸ ಮಾಡಿದೆ. ಕೇಂದ್ರ ಸರ್ಕಾರವು ನರೇಗಾ ಯೋಜನೆಯನ್ನು ದುರ್ಬಲಗೊಳಿಸಿಲ್ಲ. ಯಾಕೆಂದರೆ, 100 ಕೆಲಸದ ದಿನಗಳನ್ನು 125 ಕೆಲಸದ ದಿನಗಳಿಗೆ ಏರಿಸಿದ್ದೇವೆ' ಎಂದು ಸಚಿವ ಚೌಹಾಣ್ ಸರ್ಕಾರದ ಕ್ರಮವನ್ನು ಸಮರ್ಥಿಸಿಕೊಂಡರು.

> **ಹೊಸ ಮಸೂದೆಯಲ್ಲಿ ಕೆಲಸದ ದಿನಗಳು ಹೆಚ್ಚಳವಾಗಿವೆ. ಆದರೆ, ಕಾರ್ಮಿಕರ ದಿನಗೂಲಿ ಏನಾದರೂ ಏರಿಕೆಯಾಗಿದೆಯೇ?**
> **ಪ್ರಿಯಾಂಕಾ ಗಾಂಧಿ ವಾದ್ರಾ**
> ಕಾಂಗ್ರೆಸ್ ಸಂಸದೆ

ಗಾಂಧಿ ಪ್ರತಿಮೆ ಎದುರು ಪ್ರತಿಭಟನೆ: ಕೇಂದ್ರ ಸರ್ಕಾರವು ಹೊಸ ಮಸೂದೆಯನ್ನು ಮಂಡನೆ ಮಾಡುತ್ತಿದ್ದಂತೆಯೇ, ಕೈಯಲ್ಲಿ ಮಹಾತ್ಮ ಗಾಂಧಿ ಅವರ ಭಾವಚಿತ್ರವನ್ನು ಹಿಡಿದು ಸಂಸತ್ತಿನ ಮಕರ ದ್ವಾರದ ಬಳಿ ಸೇರಿದ ವಿರೋಧ ಪಕ್ಷಗಳ ಸಂಸದರು ಅಲ್ಲಿಂದ ಆವರಣದಲ್ಲಿರುವ ಗಾಂಧಿ ಪ್ರತಿಮೆವರೆಗೆ ನಡೆದು ಹೋಗಿ ಪ್ರತಿಭಟನೆ ನಡೆಸಿದರು. 'ಮಹಾತ್ಮಾ ಗಾಂಧಿ ಅವರಿಗೆ ಮಾಡಿದ ಅವಮಾನವನ್ನು ದೇಶವು ಸಹಿಸುವುದಿಲ್ಲ' ಎಂದು ಘೋಷಣೆಗಳನ್ನು ಕೂಗಿದರು.

ಕಾಂಗ್ರೆಸ್‌ನಿಂದ ಪ್ರತಿಭಟನೆ: ಹೊಸ ಮಸೂದೆಯನ್ನು ವಿರೋಧಿಸಿ ಕಾಂಗ್ರೆಸ್ ಪಕ್ಷವು ಬುಧವಾರ ದೇಶದಾದ್ಯಂತ ಪ್ರತಿಭಟನೆ ನಡೆಸಲು ಮುಂದಾಗಿದೆ. ಈ ಬಗ್ಗೆ ಪಕ್ಷದ ಎಐಸಿಸಿ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ. ವೇಣುಗೋಪಾಲ್ ಅವರು ರಾಜ್ಯ ಘಟಕದ ಅಧ್ಯಕ್ಷರಿಗೆ ಪತ್ರ ಬರೆದಿದ್ದಾರೆ. 'ಹಕ್ಕು ಆಧರಿತ ಅಭಿವೃದ್ಧಿ ಯೋಜನೆಯನ್ನು ಅಂತ್ಯಗೊಳಿಸುವುದು, ಗಾಂಧೀಜಿ ಅವರ ಸಿದ್ಧಾಂತದ ಮೇಲೆ ದಾಳಿ ನಡೆಸುವ, ಕಾರ್ಮಿಕರ ಹಕ್ಕುಗಳು ಮತ್ತು ಒಕ್ಕೂಟ ವ್ಯವಸ್ಥೆಯ ಜವಾಬ್ದಾರಿಗಳಿಂದ ನುಣುಚಿಕೊಳ್ಳುವುದು ಬಿಜೆಪಿ ಮತ್ತು ಆರ್‌ಎಸ್‌ಎಸ್‌ನ ಪಿತೂರಿಯಾಗಿದೆ' ಎಂದು ಅವರು ಪತ್ರದಲ್ಲಿ ಹೇಳಿದ್ದಾರೆ.

'ಜಿ ರಾಮ್ ಜಿ' ಮಸೂದೆಯನ್ನು ವಿರೋಧಿಸಿ ವಿರೋಧ ಪಕ್ಷಗಳ ಸಂಸದರು ಸಂಸತ್ತಿನ ಆವರಣದಲ್ಲಿ ಇರುವ ಗಾಂಧಿ ಪ್ರತಿಮೆ ಬಳಿ ಮಂಗಳವಾರ ಪ್ರತಿಭಟನೆ ನಡೆಸಿದರು ಪಿಟಿಐ ಚಿತ್ರ

'ಗಾಂಧಿ ಕನಸು ನನಸು ಮಾಡುತ್ತಿದ್ದೇವೆ'

ಮಹಾತ್ಮ ಗಾಂಧಿಯು ನಮ್ಮ ಹೃದಯದಲ್ಲಿ ಇದ್ದಾರೆ. ನರೇಗಾವನ್ನು ಕಾಂಗ್ರೆಸ್ ಜಾರಿ ಮಾಡಿತು ಮತ್ತು ₹2.13 ಲಕ್ಷ ಕೋಟಿ ಖರ್ಚು ಮಾಡಿತು. ಆದರೆ, ಬಡವರ ಅಭಿವೃದ್ಧಿಗಾಗಿ ಮೋದಿ ಸರ್ಕಾರವು ₹8 ಲಕ್ಷ ಕೋಟಿ ಖರ್ಚು ಮಾಡಿದೆ. ಜವಾಹರ್ ರೋಜ್‌ಗಾರ್ ಯೋಜನೆಯ ಹೆಸರನ್ನು ಕಾಂಗ್ರೆಸ್ ಬದಲಾಯಿಸಿತು. ಹಾಗಾದರೆ, ಕಾಂಗ್ರೆಸ್ ನೆಹರೂ ಅವರನ್ನು ಅವಮಾನಿಸಿತೇ? ರಾಮ ದೇವರು ನಮ್ಮ ಪ್ರತಿ ಉಸಿರಿನಲ್ಲಿ ಇದ್ದಾರೆ. 'ಜಿ ರಾಮ್ ಜಿ' ಕುರಿತು ಅವರಿಗೇನು ತೊಂದರೆ? ಗಾಂಧಿ ಅವರು ರಾಮ ರಾಜ್ಯದ ಕನಸು ಕಂಡಿದ್ದರು ಮತ್ತು ಬಡವರ ಅಭಿವೃದ್ಧಿ ಮೂಲಕ ನಾವು ಈ ಕನಸನ್ನು ನನಸು ಮಾಡುತ್ತಿದ್ದೇವೆ

ಶಿವರಾಜ್ ಸಿಂಗ್ ಚೌಹಾಣ್
ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವ

'ರಾಮನ ಹೆಸರು ಹಾಳು ಮಾಡದಿರಿ'

'ಕೊನೇ ಮನುಷ್ಯನಿಗೆ ಮೊದಲ ಆದ್ಯತೆ' ಎನ್ನುವ ಗಾಂಧಿ ಅವರ ತತ್ವದ ಮೇಲೆಯೇ ನರೇಗಾವನ್ನು ಜಾರಿ ಮಾಡಲಾಗಿತ್ತು. ಇದೇ ನರೇಗಾಕ್ಕೆ ಮತ್ತು ಅದಕ್ಕೆ 'ಗಾಂಧಿ' ಹೆಸರು ನೀಡಿದ್ದಕ್ಕೆ ಇದ್ದ ಸಂಬಂಧವಾಗಿತ್ತು. 'ಜಿ ರಾಮ್ ಜಿ' ಎನ್ನುವ ಪದಸಮೂಹ ರೂಪುಗಳ್ಳಬೇಕು ಎನ್ನುವ ದೃಷ್ಟಿಯಿಂದಲೇ ಮಸೂದೆಗೆ ಎರಡು ಭಾಷೆಗಳಲ್ಲಿ ಹೆಸರಿಡಲಾಗಿದೆ. ಇದು ಸಂವಿಧಾನದ 348ನೇ ವಿಧಿಯ ಉಲ್ಲಂಘನೆ. ಜೊತೆಗೆ, ಇದು ನನಗೆ ನನ್ನ ಬಾಲ್ಯದಲ್ಲಿ ಕೇಳಿದ ಬಾಲಿವುಡ್‌ನ 'ದೇಖೋ ಓ ದಿವಾನೋ ಯೇ ಕಾಮ್ ನ ಕರೋ, ರಾಮ್ ಕ ನಾಮ್ ಬದ್ನಾಮ್ ನ ಕರೋ' (ಇಲ್ಲಿ ನೋಡಿರಿ ಮೂಢರೆ, ರಾಮನ ಹೆಸರನ್ನು ಹಾಳುಗೆಡಹುವ ಕೆಲಸ ಮಾಡದಿರಿ) ಹಾಡನ್ನು ನೆನಪಿಸುತ್ತದೆ.

ಶಶಿ ತರೂರ್, ಕಾಂಗ್ರೆಸ್ ಸಂಸದ

'ಜನ ವಿರೋಧಿ ಮಸೂದೆ'

ಮೋದಿ ಅವರಿಗೆ ಎರಡು ವಿಚಾರಗಳು ಸ್ವಲ್ಪವೂ ಇಷ್ಟವಾಗುವುದಿಲ್ಲ– ಮಹಾತ್ಮ ಗಾಂಧಿ ಅವರ ಸಿದ್ಧಾಂತ ಮತ್ತು ಬಡವರ ಹಕ್ಕುಗಳು. ನರೇಗಾ ಯೋಜನೆಯು ಗಾಂಧಿ ಅವರ ಗ್ರಾಮ ಸ್ವರಾಜ್ಯ ಪರಿಕಲ್ಪನೆಯ ಜೀವಂತ ಸಾಕ್ಷಿಯಂಬಂತಿತ್ತು. ಕೋವಿಡ್ ವೇಳೆ ಗ್ರಾಮೀಣ ಭಾಗದ ಕೋಟಿಗಟ್ಟಲೆ ಭಾರತೀಯರಿಗೆ ಆರ್ಥಿಕ ಸುರಕ್ಷೆಯಾಗಿತ್ತು. ಆದರೂ, ಪ್ರಧಾನಿ ಮೋದಿ ಅವರಿಗೆ ಈ ಯೋಜನೆಯು ನಿದ್ದೆಗೆಡಿಸುತ್ತಿತ್ತು. ಕಳೆದ 10 ವರ್ಷಗಳಲ್ಲಿ ಕೇಂದ್ರವು ಈ ಯೋಜನೆಯನ್ನು ದುರ್ಬಲಗೊಳಿಸಲು ಯತ್ನಿಸುತ್ತಲೇ ಬಂದಿದೆ. ಈಗ ಇಡೀ ಯೋಜನೆಯನ್ನೇ ಅಂತ್ಯಗೊಳಿಸಿದ್ದಾರೆ. ರಸ್ತೆಯಿಂದ ಸದನದವರೆಗೆ ನಾವು ಈ ಜನ ವಿರೋಧಿ ಮಸೂದೆಯನ್ನು ವಿರೋಧಿಸುತ್ತೇವೆ

ರಾಹುಲ್ ಗಾಂಧಿ, ಲೋಕಸಭೆ ವಿರೋಧ ಪಕ್ಷದ ನಾಯಕ

ಸಂಕ್ಷಿಪ್ತ ಸುದ್ದಿ

ಪಶ್ಚಿಮ ಬಂಗಾಳ: ಸರ್ಕಾರಿ ವಿ.ವಿಗೆ ರಾಜ್ಯಪಾಲರೇ ಕುಲಾಧಿಪತಿ

ಕೋಲ್ಕತ್ತ (ಪಿಟಿಐ): ರಾಜ್ಯ ಸರ್ಕಾರ ನಡೆಸುವ ವಿಶ್ವವಿದ್ಯಾಲಯಗಳಿಗೆ ರಾಜ್ಯಪಾಲರ ಬದಲಾಗಿ ಮುಖ್ಯಮಂತ್ರಿಯೇ ಕುಲಾಧಿಪತಿಯಾಗಿ ಕಾರ್ಯನಿರ್ವಹಿಸಲು ಅವಕಾಶ ಕಲ್ಪಿಸುವ ಮೂರು ಮಸೂದೆಗಳಿಗೆ ಒಪ್ಪಿಗೆ ನೀಡಲು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ನಿರಾಕರಿಸಿದ್ದಾರೆ. ಈ ಮೂರು ಮಸೂದೆಗಳನ್ನು ಪಶ್ಚಿಮ ಬಂಗಾಳ ವಿಧಾನಸಭೆ ಅಂಗೀಕರಿಸಿತ್ತು.

'ರಾಜ್ಯಪಾಲ ಸಿ.ವಿ. ಆನಂದ ಬೋಸ್ ಅವರೇ ವಿಶ್ವವಿದ್ಯಾಲಯಗಳಿಗೆ ಕುಲಾಧಿಪತಿಯಾಗಿ ಮುಂದುವರಿಯಲಿದ್ದಾರೆ' ಎಂದು ಪಶ್ಚಿಮ ಬಂಗಾಳ ಲೋಕ ಭವನ ಸೋಮವಾರ ತಿಳಿಸಿದೆ. ವಿಶ್ವವಿದ್ಯಾಲಯಗಳ ಆಡಳಿತದ ವಿಚಾರವಾಗಿ ರಾಜ್ಯ ಸರ್ಕಾರ ಮತ್ತು ರಾಜ್ಯಪಾಲರ ಮಧ್ಯೆ ತೀವ್ರ ಜಗಳ ಉಂಟಾದ ಕಾರಣ ಈ ಮಸೂದೆಗಳನ್ನು ಮಂಡಿಸಲಾಗಿತ್ತು.

ನ್ಯಾ. ವರ್ಮ ಅರ್ಜಿ ವಿಚಾರಣೆ

ನವದೆಹಲಿ (ಪಿಟಿಐ): ತಮ್ಮ ವಿರುದ್ಧದ ಭ್ರಷ್ಟಾಚಾರ ಆರೋಪಗಳ ಕುರಿತು ತನಿಖೆಗೆ ಲೋಕಸಭಾ ಸ್ಪೀಕರ್ ರಚಿಸಿರುವ ತನಿಖಾ ಸಮಿತಿಯನ್ನು ಪ್ರಶ್ನಿಸಿ ಅಲಹಾಬಾದ್ ಹೈಕೋರ್ಟ್‌ನ ನ್ಯಾಯಮೂರ್ತಿ ಯಶವಂತ್ ವರ್ಮಾ ಸಲ್ಲಿಸಿದ್ದ ಅರ್ಜಿಯ ವಿಚಾರಣೆಗೆ ಸುಪ್ರೀಂ ಕೋರ್ಟ್ ಮಂಗಳವಾರ ಒಪ್ಪಿಗೆ ಸೂಚಿಸಿದೆ.

ನ್ಯಾಯಮೂರ್ತಿ ದೀಪಂಕರ್ ದತ್ತಾ, ಆಗಸ್ಟೀನ್ ಜಾರ್ಜ್ ಮಸೀಹ್ ಅವರ ಪೀಠವು ಈ ಸಂಬಂಧ ಪ್ರತಿಕ್ರಿಯಿಸುವಂತೆ ಲೋಕಸಭಾ ಸ್ಪೀಕರ್ ಕಚೇರಿ, ಎರಡೂ ಸದನಗಳ ಪ್ರಧಾನ ಕಾರ್ಯದರ್ಶಿಗಳಿಗೆ ನೋಟಿಸ್ ಜಾರಿ ಮಾಡಿದೆ. ಮುಂದಿನ ವಿಚಾರಣೆಯನ್ನು 2026ರ ಜನವರಿಗೆ ಪೀಠ ನಿಗದಿಪಡಿಸಿದೆ.

ಯಶವಂತ್ ಅವರ ಅಧಿಕೃತ ನಿವಾಸದಲ್ಲಿ ಮಾರ್ಚ್ 14ರಂದು ಅರೆ ಸುಟ್ಟ ನೋಟುಗಳ ಕಂತೆಗಳು ಪತ್ತೆಯಾದ ನಂತರ ಅವರನ್ನು ದೆಹಲಿಯಿಂದ ಅಲಹಾಬಾದ್ ಹೈಕೋರ್ಟ್‌ಗೆ ವಾಪಸ್ ಕಳುಹಿಸಲಾಗಿದೆ.

ಪ್ರತಿ ರಾಜ್ಯದಲ್ಲಿ ಎನ್‌ಐಎ ಕೋರ್ಟ್: ಕೇಂದ್ರ

ನವದೆಹಲಿ (ಪಿಟಿಐ): ತ್ವರಿತ ವಿಚಾರಣೆಯನ್ನು ಖಾತರಿಪಡಿಸಲು ದೇಶದ ಪ್ರತಿ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ರಾಷ್ಟ್ರೀಯ ತನಿಖಾ ಸಂಸ್ಥೆಗೆ (ಎನ್‌ಐಎ) ಮೀಸಲಾದ ನ್ಯಾಯಾಲಯಗಳನ್ನು ಸ್ಥಾಪಿಸಲಾಗುವುದು ಎಂದು ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ. ಭಯೋತ್ಪಾದನಾ ನಿಗ್ರಹ ಕಾನೂನಿನ ಅಡಿ 10ಕ್ಕಿಂತ ಹೆಚ್ಚು ಪ್ರಕರಣಗಳು ದಾಖಲಾಗಿರುವ ಕಡೆಗಳಲ್ಲಿ ಒಂದಕ್ಕಿಂತ ಹೆಚ್ಚು ಕೋರ್ಟ್‌ಗಳನ್ನು ತೆರೆಯಲು ನಿರ್ಧರಿಸಲಾಗಿದೆ ಎಂದು ಕೇಂದ್ರ ಸರ್ಕಾರ ಮಾಹಿತಿ ನೀಡಿದೆ. ಸಂಘಟಿತ ಅಪರಾಧ ಮತ್ತು ಭಯೋತ್ಪಾದನೆ ನಿಗ್ರಹ ಕಾಯ್ದೆಯಡಿ ದಾಖಲಾದ ಪ್ರಕರಣಗಳ ತ್ವರಿತ ವಿಚಾರಣೆಗೆ ದೆಹಲಿಯಲ್ಲಿ 16 ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಲಾಗುವುದು ಎಂದು ದೆಹಲಿ ಸರ್ಕಾರವು ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್, ನ್ಯಾಯಮೂರ್ತಿ ಜಾಯ್‌ಮಾಲ್ಯ ಬಾಗ್ಚಿ ಅವರ ಪೀಠಕ್ಕೆ ತಿಳಿಸಿದೆ.

ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ
ಕಾರ್ಯನಿರ್ವಾಹಕ ಅಭಿಯಂತರ, ಕಾರ್ಯಾಲಯ, ಯೋಜನಾ ವಿಭಾಗ, 171, ಹಾವಣ್ಣವರ ಬಿಲ್ಡಿಂಗ್ ಕ್ಲಬ್ ರೋಡ್, ಬೆಳಗಾವಿ.
ದೂರವಾಣಿ ಸಂ: 0831–2420728, ಫ್ಯಾಕ್ಸ:0831–2420728, ಇ–ಮೇಲ್:kn-blg1@pmgsy.nic.in

Ref : ಯೋವಿಬೆ/ಕೆಆರ್‌ಆರ್‌ಡಿಎ/ತಾಂ.ಶಾ/ಟೆಂಡರ/ನ.ಗ್ರಾ.ನ.ರ ಹಂತ–3&4/2025–26/468 Date:15.12.2025

ಅಲ್ಪಾವಧಿ ಟೆಂಡರ್ ಪ್ರಕಟಣೆ – 7ನೇ ಕರೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆಯಿಂದ ಬೆಳಗಾವಿ (ಗ್ರಾಮೀಣ), ಬೆಳಗಾವಿ (ದಕ್ಷಿಣ), ವಿಧಾನ ಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆ ಹಂತ–3 ಹಾಗೂ ಹಂತ–4ರಡಿ (ಮರುಡಾಂಬರೀಕರಣ ಕಾಮಗಾರಿ) ರಸ್ತೆಗಳನ್ನು ಪ್ರಧಾನ ಮಂತ್ರಿ ಗ್ರಾಮ ಸಡಕ ಯೋಜನೆಯ ಮಾನದಂಡಗಳನ್ನು ಅನುಸರಿಸಿ ಅಭಿವೃದ್ಧಿಪಡಿಸಲು ಕರ್ನಾಟಕ ಸರ್ಕಾರದ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ (KPPP) ಮುಖಾಂತರ ಐಟಂ ರೇಟ್ ಅಲ್ಪಾವಧಿ ಟೆಂಡರಗಳನ್ನು ಕರೆಯಲಾಗಿದೆ. ಈ ಯೋಜನೆಯ ಅನುಷ್ಠಾನಕ್ಕಾಗಿ ರಾಜ್ಯ ಸರ್ಕಾರವು ಅನುದಾನವನ್ನು ಒದಗಿಸುತ್ತದೆ.

ಟೆಂಡರ ಪ್ರಕ್ರಿಯೆಯ ವಿವರಗಳು ಕೆಳಕಂಡಂತಿವೆ

1	ಪ್ಯಾಕೇಜಗಳ ವಿವರ	Category	ಟೆಂಡರಗಿಟ್ಟ ಮೊತ್ತ
1]	ಕೆ.ಎಸ್.04–15ಬಿ–KRRDA/2024-25/WORK_INDENT192/CALL-5	Other	ರೂ. 14,52,300.00
2]	ಕೆ.ಎಸ್.04–95ಬಿ–KRRDA/2024-25/WORK_INDENT53/CALL-5	Other	ರೂ. 42,06,893.00
3]	ಕೆ.ಎಸ್.04–69ಎ–KRRDA/2024-25/WORK_INDENT187/CALL-5	Other	ರೂ. 85,60,294.00
2	ಮುಂಗಡ ಠೇವಣಿಯ ಮೊತ್ತ	AS KPPP	
3	ಖಾಲಿ ಟೆಂಡರ್ ಫಾರಂಗಳನ್ನು online ಮೂಲಕ Download ಮಾಡಿಕೊಳ್ಳಲು ದಿನಾಂಕ :	16/12/2025	
4	ಭರ್ತಿಮಾಡಿದ ಟೆಂಡರ್‌ಗಳನ್ನು online ಮುಖಾಂತರ ಸಲ್ಲಿಸುವ ಕೊನೆಯ ದಿನಾಂಕ:	24/12/2025 (17–30 ಗಂಟೆ)	
5	ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ:	26/12/2025 (11–00ಗಂಟೆ)	
6	ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ:	ನಂತರದಲ್ಲಿ ತಿಳಿಸಲಾಗುವುದು	
	ಹೆಚ್ಚಿನ ಮಾಹಿತಿಯನ್ನು https://kppp.karnataka.gov.in ನೋಡಬಹುದು.		

ಸಹಿ/–ಕಾರ್ಯನಿರ್ವಾಹಕ ಅಭಿಯಂತರು, ಯೋಜನಾ ವಿಭಾಗ ಬೆಳಗಾವಿ.
DIPR/BGM/RO-NO-1486/KSMCA/2025-26

OFFICE OF THE PRL. DISTRICT & SESSIONS JUDGE, MYSURU

E- TENDER NOTIFICATION

Subject: Inviting Proposals(Quotations) for procurement of Cleaning Persons for cleaning purpose through Outsource on Service Contract Service basis to the Mysuru Courts and Taluka Courts – reg.
Ref: **1.** Letter No. LAW-LAC/82/2025 dated 25.09.2025 of The Prl. Secretary to the Government, LAW, Justice and Human Rights, Karnataka State Government, Vidhana Soudha, Bengaluru.
2. Letter No. DJA/82/2007 dated 08.10.2025 of the Hon'ble High Court of Karnataka, Bengaluru.
3. Office note and order passed thereon.

This office invites e-Bidding request for proposals (Quotations) from Manpower Service providers who are interested to supply Cleaning Persons for cleaning purpose through outsource on Service Contract basis to Mysuru Court and Taluka Courts of Mysuru District from eligible and interested Firms/Agencies/Operators having business/ branch office, through e-procurement portal (**https://kppp.karnataka.gov.in/**), for a period of 3 years, renewable each year, from the date of commencement and extendable beyond, until the onboarding of next subsequent agency. The details of the numbers of manpower required, are as under:

Sl. No.	Item	Details
1	Tender Number	e- tender Notification No. 7/2025 (Cleaning Persons), dated 08.12.2025
2	Tender Name/ Service sought for:	Procurement of Cleaning Persons for cleaning purpose through Outsource on Service Contract basis on the basis of area of the premises i.e., 38036.94 Sq.m in total to perform all cleaning but not limited to following services: a) Dusting- Once in every 2 days at a given location. b) Sweeping- Thrice in a day, specifically once before the commencement of Office Working Hours c) Mopping- Twice a day, specifically once before the commencement of Office Working Hours, and Any other services that may arise during the engagement of work services. The Bidding amount should include all the expenditure such as wages and statutory benefits, if applicable to the manpower, cost of the cleaning materials, equipment costs, charges and taxes, for the above said services, whatsoever it may be.
3	Procurement entity	The Chief Administrative Officer, District & Sessions Court, Mysuru.
4	Tender Authorities	Inviting Authority: The In-charge Chief Administrative Officer, District & Sessions Court, Mysuru. Evaluating Authority: The In-charge Chief Administrative Officer, District & Sessions Court, Mysuru. Accepting Authority: Prl. District & Sessions Judge, Mysuru. Appellate Authority: The Registrar General, Hon'ble High Court Of Karnataka, Bengaluru.
5	Validity of the Tender contract	**3 years**, renewable each year, subject to the satisfactory quality/ performance or until order of discontinuation of the said service.
6	Bidding Mode	**The total monthly cost of the services**, including all the expenditure such as wages to the manpower, cost of the cleaning materials, charges and taxes, for the above said services, not exceeding 5,00,000/- rupees per month
7	Estimated Approximate Total Tender Cost	No estimation drawn, as no such reference to calculate for the said services is found. **Rs. 60,00,000/- (per annum)** is taken as Nominal Estimated Tender Cost for KPP website requirement only.
8	EMD Amount	**Rs.1,20,000/- (Nominal EMD with no link to Tender estimation coast) PBG will be based on the Tender awarded value.**
9	Billing model	Billing after completion of each calendar month, subject to the satisfactory performance.
10	Last date for clarification : **17.12.2025 at 4.30 p.m.**	
11	Closing Date and Time for submission of Tender proposal: **23.12.2025 at 3.30 p.m.**	
12	Tender Opening Date and Time	Technical: **24.12.2025 at 03.31 p.m.** Financial: Upon approval of Technical Bid
13	Office Contact Number and e-mail ID	0821-2330452 / 2332477 pdjmysuru25@gmail.com & aadalitamysurucourt@gmail.com
14	Pre-bid Meeting Venue	17.12.2025 at 4.30 p.m.
15	Pre-bid Meeting Attendance compulsory	Yes. Certificate of Attendance issued by this office, to be uploaded at relevant column in KPP portal.

ಪಕ್ಷದ ಪ್ರಮುಖರ ಭೇಟಿಯಾದ ನಿತಿನ್

ನಿತಿನ್‌ನಬಿನ್

ನವದೆಹಲಿ(ಪಿಟಿಐ): ಬಿಜೆಪಿ ನೂತನ ರಾಷ್ಟ್ರೀಯ ಕಾರ್ಯಾಧ್ಯಕ್ಷ ನಿತಿನ್ ನಬಿನ್ ಅವರು ಅಧಿಕಾರ ಸ್ವೀಕರಿಸಿದ ದಿನದಿಂದಲೇ ಚಟುವಟಿಕೆ ಆರಂಭಿಸಿದ್ದಾರೆ. ಸೋಮವಾರ ಅಧಿಕಾರ ಸ್ವೀಕರಿಸಿದ್ದ ಅವರು, ಮಂಗಳವಾರ ಬಿಜೆಪಿ ಕೇಂದ್ರ ಕಚೇರಿಯಲ್ಲಿ ಪಕ್ಷದ ಪ್ರಮುಖ ಮುಖಂಡರು, ಕಾರ್ಯಕರ್ತರನ್ನು ಭೇಟಿಮಾಡಿದರು.

ಹಾಲಿ ಮತ್ತು ಮಾಜಿ ಸಚಿವರು, ಪಕ್ಷದ ವಿವಿಧ ವಿಭಾಗಗಳ ಪ್ರಮುಖರು ಮತ್ತು ನಬಿನ್ ಅವರ ತವರು ರಾಜ್ಯ ಬಿಹಾರ ಸೇರಿದಂತೆ ವಿವಿಧ ರಾಜ್ಯಗಳಿಂದ ಬಂದಿದ್ದ ಪಕ್ಷದ ಮುಖಂಡರು, ನೂತನ ಕಾರ್ಯಾಧ್ಯಕ್ಷರನ್ನು ಭೇಟಿ ಮಾಡಿ ಶುಭಕೋರಿದರು. ಪಕ್ಷದ ವಿವಿಧ ವಿಭಾಗಗಳ ಉಸ್ತುವಾರಿಗಳು, ಕಚೇರಿ ಸಿಬ್ಬಂದಿ ಜೊತೆ ನಬಿನ್ ಅವರು ಚರ್ಚೆ ನಡೆಸಿದರು.

ಮಂಗಳವಾರ ಬೆಳಗ್ಗೆ ಕಚೇರಿಗೆ ಬಂದ ನೂತನ ಕಾರ್ಯಾಧ್ಯಕ್ಷರನ್ನು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅರುಣ್ ಸಿಂಗ್, ವಿನೋದ್ ತಾವ್ಡೆ, ದುಷ್ಯಂತ್ ಗೌತಮ್, ಸಂಜಯ್ ಮಾಯುಖ್ ಅವರು ಸ್ವಾಗತಿಸಿದರು. ಕೇಂದ್ರ ಸಚಿವ ಭೂಪಿಂದರ್ ಯಾದವ್, ಕೇಂದ್ರದ ಮಾಜಿ ಸಚಿವ ಶಹನವಾಜ್ ಹುಸೇನ್, ಬಿಹಾರದ ಸಚಿವರಾದ ದಿಲೀಪ್ ಜೈಸ್ವಾಲ್, ಅರುಣ್ ಶಂಕರ್ ಪ್ರಸಾದ್ ಸೇರಿ ಹಲವು ಗಣ್ಯರು ನಬಿನ್ ಅವರನ್ನು ಅಭಿನಂದಿಸಿದರು.

ಎಸ್‌ಐಆರ್: ಕರಡು ಪಟ್ಟಿ ಪ್ರಕಟಿಸಿದ ಚುನಾವಣಾ ಆಯೋಗ

ಬಂಗಾಳ: 58ಲಕ್ಷ ಮತದಾರರಿಗೆ ಕೊಕ್

ಕೋಲ್ಕತ್ತ (ಪಿಟಿಐ): ಕೇಂದ್ರ ಚುನಾವಣಾ ಆಯೋಗವು ಪಶ್ಚಿಮ ಬಂಗಾಳದ ಕರಡು ಮತದಾರರ ಪಟ್ಟಿಯನ್ನು ಮಂಗಳವಾರ ಪ್ರಕಟಿಸಿದೆ. ಸಾವು, ಶಾಶ್ವತ ವಲಸೆ ಮತ್ತು ಅರ್ಜಿ ನಮೂನೆಗಳನ್ನು ಸಲ್ಲಿಸದಿರುವುದು ಸೇರಿದಂತೆ ವಿವಿಧ ಕಾರಣಗಳಿಗಾಗಿ 58 ಲಕ್ಷಕ್ಕೂ ಹೆಚ್ಚು ಮತದಾರರ ಹೆಸರನ್ನು ಕೈಬಿಟ್ಟಿದೆ.

ನವೆಂಬರ್ 4ರಿಂದ ಡಿಸೆಂಬರ್11ರವರೆಗೆ ಮತದಾರರ ಪಟ್ಟಿಯ ಸಮಗ್ರ ವಿಶೇಷ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆ ನಡೆಸಿದ ನಂತರ ಅನರ್ಹ ಮತದಾರರ ಹೆಸರುಗಳನ್ನು ಕರಡು ಪಟ್ಟಿಯಿಂದ ಹೊರಗಿಡಲಾಗಿದೆ ಎಂದು ಆಯೋಗವು ತಿಳಿಸಿದೆ. ಎಸ್‌ಐಆರ್ ಪ್ರಕ್ರಿಯೆ ಬಳಿಕ ರಾಜ್ಯದ ಮತದಾರರ ಸಂಖ್ಯೆ 7.66 ಕೋಟಿಯಿಂದ 7.08 ಕೋಟಿಗೆ ಇಳಿದಿದೆ.

ಕರಡು ಪಟ್ಟಿಗೆ ಸಂಬಂಧಿಸಿದಂತೆ ಮತದಾರರು ಸಲ್ಲಿಸುವ ಆಕ್ಷೇಪಣೆ, ಅಹವಾಲು ಆಲಿಸುವ ಪ್ರಕ್ರಿಯೆಯು ಇನ್ನೊಂದು ವಾರದಲ್ಲಿ ಪ್ರಾರಂಭವಾಗಲಿದೆ ಎಂದು ಆಯೋಗದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಹೆಸರು ಕೈಬಿಟ್ಟ ಮತದಾರರಿಗೆ ನೀಡಬೇಕಿರುವ ನೋಟಿಸ್ ಅನ್ನು ಮುದ್ರಿಸಿ, ಸಂಬಂಧಪಟ್ಟ ಮತದಾರರಿಗೆ ಅವುಗಳನ್ನು ತಲುಪಿಸಲು ಮತ್ತು ಚುನಾವಣಾ ಆಯೋಗದ ಡಾಟಾಬೇಸ್‌ನಲ್ಲಿ ಮಾಹಿತಿ ಸಂಗ್ರಹಿಸುವುದಕ್ಕೆ ಸಮಯ ಬೇಕಿದೆ. ಆದ್ದರಿಂದ ಅಹವಾಲು ಆಲಿಸುವ ಪ್ರಕ್ರಿಯೆ ಒಂದು ವಾರದ ಬಳಿಕ ಆರಂಭವಾಗಲಿದೆ ಎಂದು ಮಾಹಿತಿ ನೀಡಿದ್ದಾರೆ.

2002ರ ಮತದಾರರ ಪಟ್ಟಿಯೊಂದಿಗೆ ಹೆಸರು ಹೊಂದಾಣಿಕೆಯಾಗದ ಸುಮಾರು 85 ಲಕ್ಷ ಮತದಾರರ ಅರ್ಜಿ ನಮೂನೆಗಳನ್ನು ಆಯೋಗ ಸ್ವೀಕರಿಸಿದ್ದು, ಅಹವಾಲು ಆಲಿಸಲು ಅವರಿಗೂ ನೋಟಿಸ್ ಕಳುಹಿಸುವ ಸಾಧ್ಯತೆಯಿದೆ ಎಂದಿದ್ದಾರೆ.

ಅಹವಾಲು ಆಲಿಸಲು ಆಯೋಗವು ನೋಟಿಸ್ ಕಳುಹಿಸಬಹುದಾದ ಮತದಾರರ ನಿಖರ ಸಂಖ್ಯೆ ಬಗ್ಗೆ ಸ್ಪಷ್ಟತೆ ಇಲ್ಲದಿದ್ದರೂ, ಈ ಸಂಖ್ಯೆ ಎರಡು ಕೋಟಿಯನ್ನು ತಲುಪಬಹುದು ಎಂದು ಚುನಾವಣಾ ಆಯೋಗದ ಮೂಲಗಳು ತಿಳಿಸಿವೆ. ಪಟ್ಟಿಯಿಂದ ಹೆಸರು ತೆಗೆದುಹಾಕಲ್ಪಟ್ಟವರಿಗೆ ಫಾರ್ಮ್ 6 ಮತ್ತು ಅಗತ್ಯ ದಾಖಲೆಗಳೊಂದಿಗೆ ತಮ್ಮ ಹಕ್ಕು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಲು 2026ರ ಜನವರಿ 15ರವರೆಗೆ ಅವಕಾಶ ಇದೆ ಎಂದು ಆಯೋಗ ಸ್ಪಷ್ಟಪಡಿಸಿದೆ.

ಅಂಕಿ ಅಂಶಗಳು

58.20 ಲಕ್ಷ ಪಟ್ಟಿಯಿಂದ ಕೈಬಿಡಲಾದ ಮತದಾರರ ಸಂಖ್ಯೆ

7.66 ಕೋಟಿ ಎಸ್‌ಐಆರ್‌ಗೂ ಮುನ್ನ ರಾಜ್ಯದ ಮತದಾರರ ಸಂಖ್ಯೆ

7.08 ಕೋಟಿ ಎಸ್‌ಐಆರ್ ಪ್ರಕ್ರಿಯೆ ಬಳಿಕ ಮತದಾರರ ಸಂಖ್ಯೆ

> **ಕೇಂದ್ರ ಸರ್ಕಾರವು ತನ್ನ ವೈಫಲ್ಯಗಳಿಂದ ಜನರ ಗಮನ ಬೇರೆಡೆ ಸೆಳೆಯಲು ಮತ್ತು ಸಮಾಜದಲ್ಲಿ ಒಡಕು ಉಂಟುಮಾಡಲು ಎಸ್‌ಐಆರ್‌ಅನ್ನು ಬಳಸುತ್ತಿದೆ ಡೆರೆಕ್ ಒಬ್ರಿಯಾನ್, ಟಿಎಂಸಿ ರಾಜ್ಯಸಭಾ ಸದಸ್ಯ**

ರಾಜಸ್ಥಾನ: 42 ಲಕ್ಷ ಮತದಾರರು 'ಔಟ್'

ಜೈಪುರ: ರಾಜಸ್ಥಾನದಲ್ಲಿ ಎಸ್‌ಐಆರ್ ಪ್ರಕ್ರಿಯೆ ಬಳಿಕ ಸುಮಾರು 42 ಲಕ್ಷ ಮತದಾರರ ಹೆಸರುಗಳನ್ನು ಪಟ್ಟಿಯಿಂದ ಕೈಬಿಡಲಾಗಿದೆ ಎಂದು ಮುಖ್ಯ ಚುನಾವಣಾ ಅಧಿಕಾರಿ ನವೀನ್ ಮಹಾಜನ್ ಮಂಗಳವಾರ ತಿಳಿಸಿದ್ದಾರೆ.

5.46 ಕೋಟಿ ಮತದಾರರಲ್ಲಿ 41.85 ಲಕ್ಷ ಮಂದಿಯ ಅರ್ಜಿ ನಮೂನೆಗಳನ್ನು ಸಂಗ್ರಹಿಸಲು ಸಾಧ್ಯವಾಗಿಲ್ಲ. ಏಕೆಂದರೆ ಅವರಲ್ಲಿ ಹಲವರು ಮೃತಪಟ್ಟಿದ್ದಾರೆ, ಶಾಶ್ವತವಾಗಿ ವಲಸೆ ಹೋಗಿದ್ದಾರೆ, ಸ್ಥಳಾಂತರಗೊಂಡಿದ್ದಾರೆ ಅಥವಾ ಗಣತಿಯ ಸಮಯದಲ್ಲಿ ಗೈರಾಗಿದ್ದಾರೆ ಎಂದು ಹೇಳಿದ್ದಾರೆ.

ಗೋವಾದಲ್ಲಿ 1.01 ಲಕ್ಷ ಮತದಾರರು (ಒಟ್ಟು ಮತದಾರರು 11.85 ಲಕ್ಷ), ಪುದುಚೇರಿಯಲ್ಲಿ 1.03 ಲಕ್ಷ ಮತದಾರರು (ಒಟ್ಟು ಮತದಾರರು 10.21ಲಕ್ಷ) ಮತ್ತು ಲಕ್ಷದ್ವೀಪದಲ್ಲಿ ಸುಮಾರು ಒಂದೂವರೆ ಸಾವಿರ ಮತದಾರರನ್ನು ಪಟ್ಟಿಯಿಂದ ಕೈಬಿಡಲಾಗಿದೆ.

ದಾರಿ ತಪ್ಪಿಸುತ್ತಿರುವ ಕಾಂಗ್ರೆಸ್: ನಡ್ಡಾ

ನವದೆಹಲಿ: ಎಸ್‌ಐಆರ್ ಪ್ರಕ್ರಿಯೆ ಮೂಲಕ ಮತದಾರರ ಹೆಸರನ್ನು ಪಟ್ಟಿಯಿಂದ ಕೈಬಿಡಲಾಗುತ್ತಿದೆ ಎಂಬ ಸುಳ್ಳು ಸಂಕಥನವನ್ನು ಸೃಷ್ಟಿಸಿರುವ ಕಾಂಗ್ರೆಸ್ ಪಕ್ಷವು ದೇಶದ ಜನರ ದಾರಿ ತಪ್ಪಿಸುತ್ತಿದೆ ಎಂದು ಕೇಂದ್ರ ಸಚಿವ ಜೆ.ಪಿ.ನಡ್ಡಾ ಮಂಗಳವಾರ ಆರೋಪಿಸಿದ್ದಾರೆ.

ಚುನಾವಣಾ ವ್ಯವಸ್ಥೆಯ ಸುಧಾರಣೆ ಕುರಿತು ರಾಜ್ಯಸಭೆಯಲ್ಲಿ ನಡೆದ ಚರ್ಚೆಗೆ ಪ್ರತಿಕ್ರಿಯಿಸಿದ ಅವರು, ಕಾಂಗ್ರೆಸ್ ವಿರುದ್ಧ ಹರಿಹಾಯ್ದರು. ಪ್ರತಿ ಪಕ್ಷಗಳು ಚುನಾವಣೆಯಲ್ಲಿ ಎದುರಾದ ವೈಫಲ್ಯಗಳನ್ನು ಮರೆಮಾಚಲು ಚುನಾವಣಾ ಆಯೋಗದ ವಿಶ್ವಾಸಾರ್ಹತೆಯನ್ನು ಪ್ರಶ್ನಿಸುವ ಮೂಲಕ ದೇಶದ ಹಿತಾಸಕ್ತಿಗೆ ಹಾನಿ ಉಂಟಮಾಡುತ್ತಿವೆ ಎಂದರು.

ಇ.ಡಿ ಆರೋಪ ಪಟ್ಟಿ ತಿರಸ್ಕಾರ

ಒಂದನೇ ಪುಟದಿಂದ...

'ಪಿಎಂಎಲ್‌ಎ ಸೆಕ್ಷನ್ 66(22)ರ ಅಡಿ ಲಭ್ಯವಿರುವ ಅಧಿಕಾರವನ್ನು ಬಳಸಿ ಆರೋಪ ಪಟ್ಟಿ ಸಲ್ಲಿಸಲಾಗಿದೆ. ದೆಹಲಿ ಕೋರ್ಟ್ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಲಾಗುವುದು' ಎಂದು ಇ.ಡಿ ಹೇಳಿದೆ.

ಕಾಂಗ್ರೆಸ್ ಮುಖಂಡರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ದಿವಂಗತ ಮೋತಿಲಾಲ್ ವೋರಾ ಮತ್ತು ಆಸ್ಕರ್ ಫರ್ನಾಂಡಿಸ್, ಸುಮನ್ ದುಬೆ, ಸ್ಯಾಮ್ ಪಿತ್ರೋಡಾ ಸೇರಿ ಯಂಗ್ ಇಂಡಿಯನ್ ಕಂಪನಿ ಮೂಲಕ ಸಂಚು ರೂಪಿಸಿ 'ನ್ಯಾಷನಲ್ ಹೆರಾಲ್ಡ್' ಪತ್ರಿಕೆ ಪ್ರಕಟಿಸುತ್ತಿದ್ದ ಅಸೋಸಿಯೇಟೆಡ್ ಜರ್ನಲ್ಸ್ ಲಿಮಿಟೆಡ್‌ಗೆ (ಎಜೆಎಲ್) ಸೇರಿದ್ದ ಸುಮಾರು ₹2 ಸಾವಿರ ಕೋಟಿ ಮೌಲ್ಯದ ಆಸ್ತಿಯನ್ನು ಅಕ್ರಮವಾಗಿ ವಶಕ್ಕೆ ಪಡೆದಿದ್ದರು ಎಂದು ಇ.ಡಿ ಆರೋಪಿಸಿತ್ತು. ಯಂಗ್ ಇಂಡಿಯನ್ ಕಂಪನಿಯಲ್ಲಿ ಶೇ 76ರಷ್ಟು ಪಾಲನ್ನು ಗಾಂಧಿ ಕುಟುಂಬ ಹೊಂದಿದ್ದು, ₹90 ಕೋಟಿ ಸಾಲಕ್ಕೆ ಬದಲಾಗಿ ಎಜೆಎಲ್‌ನ ಆಸ್ತಿಯನ್ನು ಮೋಸದಿಂದ ವಶಪಡಿಸಿಕೊಳ್ಳಲಾಗಿದೆ ಎಂದು ಇ.ಡಿ ಆರೋಪ ಪಟ್ಟಿ ಸಲ್ಲಿಸಿತ್ತು.

> **ರಾಜಕೀಯ ಬೇಟೆ, ಸುಳ್ಳು ಪ್ರಚಾರ, ಹೆಸರಿಗೆ ಕಳಂಕ ತರುವ ಆಧಾರ ರಹಿತ ಅಭಿಯಾನಕ್ಕೆ ಸೋಲಾಗಿದೆ. ಇಂತಹ ಬೆದರಿಕೆಗೆ ಮಣಿಯುವುದಿಲ್ಲ**
> **ಸುಪ್ರಿಯಾ ಶ್ರೀನೇತ್**
> ಕಾಂಗ್ರೆಸ್ ವಕ್ತಾರೆ

> **ಕೇಂದ್ರದ ಒತ್ತಡಕ್ಕೆ ಮಣಿದು ಇ.ಡಿ ಆರೋಪ ಪಟ್ಟಿ ಸಲ್ಲಿಸಿತ್ತು. ಕೋರ್ಟ್ ಇದನ್ನು ತಿರಸ್ಕರಿಸಿರುವುದು ಅಧಿಕಾರದ ಮೇಲಿನ ಸತ್ಯದ ಗೆಲುವಾಗಿದೆ**
> **ಅಶೋಕ್ ಗೆಹಲೋತ್,**
> ರಾಜಸ್ಥಾನದ ಮಾಜಿ ಮುಖ್ಯಮಂತ್ರಿ

'ಎಫ್‌ಐಆರ್ ಪ್ರತಿ ಕೊಡಲು ಸಾಧ್ಯವಿಲ್ಲ'

ಒಂದನೇ ಪುಟದಿಂದ...

ಇ.ಡಿ ದೂರು ಆಧರಿಸಿ ದೆಹಲಿ ಪೊಲೀಸರು ಅಕ್ಟೋಬರ್ 3ರಂದು ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಮತ್ತು ಇತರರ ವಿರುದ್ಧ ದೂರು ದಾಖಲಿಸಿಕೊಂಡಿದ್ದರು. .

ಕಾಂಗ್ರೆಸ್ ವಾಗ್ದಾಳಿ: 'ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಮೋದಿ ಸರ್ಕಾರದ ಅಕ್ರಮ ಸಂಪೂರ್ಣವಾಗಿ ಬಯಲಾಗಿದೆ' ಎಂದು ಕಾಂಗ್ರೆಸ್ ವಾಗ್ದಾಳಿ ನಡೆಸಿದೆ. 'ಇ.ಡಿ ಸಲ್ಲಿಸಿದ್ದ ಆರೋಪ ಪಟ್ಟಿಯನ್ನು ಕೋರ್ಟ್ ತಿರಸ್ಕರಿಸುವ ಮೂಲಕ ಇದು ರಾಜಕೀಯಪ್ರೇರಿತ, ಕಾನೂನು ಬಾಹಿರ ಮೊಕದ್ದಮೆ ಎನ್ನುವುದು ಬಯಲಾಗಿದೆ' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಹೇಳಿದ್ದಾರೆ.

ಹೊಸ ಆರೋಪ ಪಟ್ಟಿ ಸಲ್ಲಿಸಲಿರುವ ಇ.ಡಿ

ಒಂದನೇ ಪುಟದಿಂದ...

'ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯ ಸಲ್ಲಿಸಿರುವ ಮಾಹಿತಿ ವರದಿಯನ್ನು (ಇಸಿಐಆರ್) ಕೋರ್ಟ್ ಅನೂರ್ಜಿತಗೊಳಿಸಿಲ್ಲ. ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿ (ಪಿಎಂಎಲ್‌ಎ) ಇದು ಪೊಲೀಸ್ ಎಫ್‌ಐಆರ್‌ಗೆ ಸಮನಾಗಿದೆ' ಎಂದು ಅಧಿಕಾರಿಗಳು ಹೇಳಿದ್ದಾರೆ.

ದಟ್ಟ ಮಂಜು: ಅಪಘಾತದಲ್ಲಿ 23 ಸಾವು

ಲಖನೌ: ದಟ್ಟವಾದ ಮಂಜಿನಿಂದಾಗಿ ಉತ್ತರ ಪ್ರದೇಶದಾದ್ಯಂತ ಮಂಗಳವಾರ ಹಲವು ವಾಹನ ಅಪಘಾತಗಳು ಸಂಭವಿಸಿದ್ದು, 23 ಜನರು ಮೃತಪಟ್ಟಿದ್ದಾರೆ.

ದೆಹಲಿ–ಆಗ್ರಾ ಎಕ್ಸ್‌ಪ್ರೆಸ್‌ವೇನಲ್ಲಿ ಸರ ಣಿ ಅಪಘಾತದಿಂದಾಗಿ 13 ಜನರು ಮೃತಪಟ್ಟಿದ್ದು, ನೂರಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ. ಸಾವಿನ ಸಂಖ್ಯೆ ಏರಿಕೆಯಾಗುವ ಸಾಧ್ಯತೆಯಿದೆ. ಎಂದು ಪೊಲೀಸರು ತಿಳಿಸಿದ್ದಾರೆ.

ನಸುಕಿನಲ್ಲಿ ಸಂಭವಿಸಿದ ಅಪಘಾತದಲ್ಲಿ ಕನಿಷ್ಠ ಏಳು ಬಸ್‌ಗಳು ಮತ್ತು ಎರಡು ಕಾರುಗಳು ಡಿಕ್ಕಿ ಹೊಡೆದಿವೆ. ಕಾರು ಮತ್ತು ಬಸ್‌ಗಳಲ್ಲಿದ್ದ ಜನರು ಸುಟ್ಟು ಕರಕಲಾಗಿದ್ದಾರೆ.

ಉನ್ನಾವೊ ಜಿಲ್ಲೆಯ ಬಾಂಗರಮವೂ ಪ್ರದೇಶದ ಲಖನೌ–ಆಗ್ರಾ ಎಕ್ಸ್‌ಪ್ರೆಸ್‌ವೇಯಲ್ಲಿ ವಾಹನವೊಂದು ಬಂಡೆಗೆ ಡಿಕ್ಕಿ ಹೊಡೆದು ಅದರಲ್ಲಿದ್ದ ನಾಲ್ವರು ಮೃತಪಟ್ಟಿದ್ದಾರೆ. ಸಂತ ಕಬೀರನಗರ ಜಿಲ್ಲೆಯಲ್ಲಿ ಸೋಮವಾರ ಮಧ್ಯರಾತ್ರಿ ಬಸ್ ಟ್ರಕ್‌ಗೆ ಡಿಕ್ಕಿ ಹೊಡೆದು ನಾಲ್ವರು ಪ್ರಯಾಣಿಕರು ಮೃತಪಟ್ಟಿದ್ದು, 20 ಜನರು ಗಾಯಗೊಂಡಿದ್ದಾರೆ.

₹1,279 ಕೋಟಿ ಅನುದಾನಕ್ಕೆ ಕತ್ತರಿ

'ಸ್ವಾಯತ್ತತೆಗೆ ಧಕ್ಕೆ ಆಗಿಲ್ಲ'

ಒಂದನೇ ಪುಟದಿಂದ...

'ಸಂವಿಧಾನದ 243-ಕೆ ವಿಧಿಯು ರಾಜ್ಯ ಚುನಾವಣಾ ಆಯೋಗಕ್ಕೆ ಮತದಾರರ ಪಟ್ಟಿ ಪರಿಷ್ಕರಣೆ ಮೇಲ್ವಿಚಾರಣೆ, ನಿರ್ದೇಶನ ಮತ್ತು ನಿಯಂತ್ರಣಕ್ಕಾಗಿ ಅಧಿಕಾರ ನೀಡಿದೆ ಎಂದು ಕರ್ನಾಟಕ ಸರ್ಕಾರ ತಿಳಿಸಿದೆ. ಆದರೆ, ಈ ವಿಧಿಯಲ್ಲಿ ಕ್ಷೇತ್ರಗಳ ಪುನರ್ ವಿಂಗಡಣೆ ಮತ್ತು ಕ್ಷೇತ್ರಗಳ ಮೀಸಲಾತಿಯ ಬಗ್ಗೆ ಯಾವುದೇ ಉಲ್ಲೇಖವಿಲ್ಲ' ಎಂದು ತಿಳಿಸಿದ್ದಾರೆ.

ಕೋವಿಡ್, ವಿಧಾನಸಭೆ ಹಾಗೂ ಲೋಕಸಭೆಯ ಚುನಾವಣೆಗಳು ಸೇರಿದಂತೆ ಕೆಲವು ಅನಿವಾರ್ಯ ಕಾರಣಗಳಿಂದಾಗಿ 2020-21ರಿಂದ ತಾಲ್ಲೂಕು ಪಂಚಾಯಿತಿಗಳು ಮತ್ತು ಜಿಲ್ಲಾ ಪಂಚಾಯಿತಿಗಳಿಗೆ ಚುನಾವಣೆಗಳನ್ನು ನಡೆಸಿಲ್ಲ ಎಂದು ಕರ್ನಾಟಕ ಸರ್ಕಾರ ತಿಳಿಸಿದೆ. ಆದಾಗ್ಯೂ, ತಾಲ್ಲೂಕು ಪಂಚಾಯಿತಿಗಳು ಮತ್ತು ಜಿಲ್ಲಾ ಪಂಚಾಯಿತಿಗಳಿಗೆ ಆಡಳಿತಾಧಿಕಾರಿಗಳನ್ನು ನೇಮಿಸಲಾಗಿದೆ. ಹೀಗಾಗಿ, ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಯಾವುದೇ ಅಡಚಣೆಯಾಗಿಲ್ಲ ಎಂದೂ ಸ್ಪಷ್ಟಪಡಿಸಿದೆ ಎಂದು ಅವರು ಹೇಳಿದ್ದಾರೆ.

ಬ್ಯಾಟರಿ ಬೇನೆಗೆ ನಿಸ್ತಂತು ಔಷಧ!

ಇತ್ತೀಚೆಗೆ ಪ್ಯಾರಿಸ್‌ನಲ್ಲಿ 1.5 ಕಿ.ಮೀ. ದೂರದ ರಸ್ತೆಯನ್ನೇ ವೈರ್‌ಲೆಸ್ ಚಾರ್ಜಿಂಗ್‌ಗೆ ಸೂಕ್ತವಾಗಿ ವಿನ್ಯಾಸ ಮಾಡಿ, ರೂಪಿಸಿದ್ದಾರೆ. ಅಂದರೆ, ರಸ್ತೆಯ ಮೇಲ್ಭಾಗದಲ್ಲಿ ಡಾಂಬರು ಇದ್ದರೆ, ಅದರ ಕೆಳಗಡೆ ತಾಮ್ರದ ಕಾಯಿಲ್‌ಗಳನ್ನು ಇಟ್ಟಿದ್ದಾರೆ. ಇದರಿಂದ ಈ ರಸ್ತೆಯ ಮೇಲೆ ಚಲಿಸುವ ಕಾರುಗಳು ಚಲಿಸುತ್ತಿರುವಾಗಲೇ ಚಾರ್ಜ್ ಆಗಬಲ್ಲವು!

• ಕೃಷ್ಣಭಟ್

90ರ ದಶಕದಲ್ಲಿ ಫ್ಲಾಪಿ ಡಿಸ್ಕ್‌ನಲ್ಲಿ ಕೆಲವೇ ಕೆಲವು ಕಿಲೋಬೈಟ್ಸ್ ಡೇಟಾವನ್ನು ತುಂಬಿಕೊಂಡು ನಾವು ಓಡಾಡುತ್ತಿದ್ದಾಗ ಇನ್ನು ಸ್ವಲ್ಪೇ ದಿನದಲ್ಲಿ ಯಾವುದೇ ವೈರ್ ಕನೆಕ್ಟ್ ಮಾಡದೇ, ವೈರ್‌ಲೆಸ್ ಆಗಿ ಬ್ಲ್ಯೂಟೂತ್ ಬಳಸಿ ಡೇಟಾವನ್ನು ಸಾಗಿಸಬಹುದು ಎಂದು ಊಹಿಸಿರಲೇ ಇಲ್ಲ. ತೀರಾ ಮೊನ್ನೆ ಮನೆಯಲ್ಲಿದ್ದ ಡಯಲ್ ಮಾಡುವ ಟೆಲಿಫೋನ್ ಇದ್ದಾಗ, ಇನ್ನು ಕೆಲವೇ ವರ್ಷಗಳಲ್ಲಿ ನಾವು ವೈರ್ ಇಲ್ಲದ ಫೋನಲ್ಲಿ ಮಾತನಾಡುತ್ತೇವೆ ಎಂದು ಊಹಿಸಿರಲೂ ಇಲ್ಲ. ಅವೆಲ್ಲವೂ ಜಾರಿಗೆ ಬಂದು, ನಾವು ಈಗ ಹಿಂದೆ ಇವನ್ನೆಲ್ಲ ವೈರ್ ಕನೆಕ್ಟ್ ಮಾಡಿಕೊಂಡೇ ಬಳಸುತ್ತಿದ್ದೆವು ಎಂಬುದನ್ನೇ ಮರೆಯುವಷ್ಟು ಮುಂದೆ ಬಂದಿದ್ದೇವೆ.

ಆದರೆ, ಈ ಫ್ಲಾಪಿ ಡಿಸ್ಕ್ ಕಾಲದಿಂದ ಜಿಬಿಗಟ್ಟಲೆ ಡೇಟಾವನ್ನು ವೈರ್‌ಲೆಸ್ ಆಗಿ ಎಲ್ಲಿಂದ ಎಲ್ಲಿಗೋ ಸಾಗಿಸುವ ವರೆಗೆ ತಂತ್ರಜ್ಞಾನ ಮುಂದುವರಿದರೂ, ಒಂದು ವಿಷಯದಲ್ಲಿ ನಾವು ಇಂದಿಗೂ ಕೇಬಲ್‌ಗೇ ಜೋತು ಬಿದ್ದಿದ್ದೇವೆ! ಕ್ಷಮಿಸಿ, ಕೇಬಲ್‌ಗೆ ಜೋತು ಬಿದ್ದರೆ ನಾವು ಸುಟ್ಟೇ ಹೋಗಬಹುದು; ಅದು ವಿದ್ಯುತ್.

ನಮ್ಮಲ್ಲಿ ಈಗ ಯಾರ ಬಳಿಯಾದರೂ ಇಲ್ಲಿಂದ ಇನ್ನೆಲ್ಲಿಗೋ ಕರೆಂಟನ್ನು ವೈರ್‌ಲೆಸ್ ಆಗಿ ಸಾಗಿಸುತ್ತಾರೆ ಎಂದು ನಾವು ಹೇಳಿದರೆ ನಕ್ಕು ಸುಮ್ಮನಾಗಬಹುದು. ನಾವು ಈಗ ವೈರ್‌ಲೆಸ್ ಚಾರ್ಜಿಂಗ್ ಬಳಕೆ ಮಾಡುತ್ತಿದ್ದೇವಲ್ಲ. ಅದು ಬಹುಶಃ ಈ ವೈರ್‌ಲೆಸ್ ವಿದ್ಯುತ್ ಸಾಗಣೆಯ ಅಂಬೆಗಾಲು ಆಗಿರಬಹುದು.

ಬಹುಶಃ ಇನ್ನೊಂದು 10-15 ವರ್ಷಗಳಲ್ಲಿ ನಾವು ಈಗ ಬಳಸುತ್ತಿರುವ ವಿದ್ಯುತ್‌ನ ರೀತಿಯೇ ಬದಲಾಗಬಹುದು. ಇದರ ಕೆಲವು ಉದಾಹರಣೆಗಳು ಈಗಾಗಲೇ ನಮಗೆ ಸಿಗುತ್ತಿವೆ. ಇತ್ತೀಚೆಗೆ ಪ್ಯಾರಿಸ್‌ನಲ್ಲಿ 1.5 ಕಿ.ಮೀ. ದೂರದ ರಸ್ತೆಯನ್ನೇ ವೈರ್‌ಲೆಸ್ ಚಾರ್ಜಿಂಗ್‌ಗೆ ಸೂಕ್ತವಾಗಿ ವಿನ್ಯಾಸ ಮಾಡಿ, ರೂಪಿಸಿದ್ದಾರೆ. ಅಂದರೆ, ರಸ್ತೆಯ ಮೇಲ್ಭಾಗದಲ್ಲಿ ಡಾಂಬರು ಇದ್ದರೆ, ಅದರ ಕೆಳಗಡೆ ತಾಮ್ರದ ಕಾಯಿಲ್‌ಗಳನ್ನು ಇಟ್ಟಿದ್ದಾರೆ. ಇದರಿಂದ ಈ ರಸ್ತೆಯ ಮೇಲೆ ಚಲಿಸುವ ಕಾರುಗಳು ಚಲಿಸುತ್ತಿರುವಾಗಲೇ ಚಾರ್ಜ್ ಆಗಬಲ್ಲವು! 2035ರ ಹೊತ್ತಿಗೆ ಇಲ್ಲಿನ 10 ಸಾವಿರ ಕಿ.ಮೀ. ರಸ್ತೆಯಲ್ಲಿ ಈ ವೈರ್‌ಲೆಸ್ ಚಾರ್ಜಿಂಗ್ ಸೌಲಭ್ಯ ಒದಗಿಸುವ ಗುರಿಯನ್ನು ಹಾಕಿಕೊಳ್ಳಲಾಗಿದೆ.

ಇನ್ನೊಂದು ಕಡೆ, ಈಗ ನಾವು ಬಳಸುತ್ತಿರುವ ಎಲ್ಲ ಬ್ಯಾಟರಿ ಚಾಲಿತ ಕಾರುಗಳೂ ವೈರ್‌ಲೆಸ್ ಚಾರ್ಜಿಂಗ್ ಸೌಲಭ್ಯವನ್ನು ಸಪೋರ್ಟ್ ಮಾಡುವುದಿಲ್ಲ. ಆದರೆ, ಪೋರ್ಷೆ ಕಾರು ಕಂಪನಿ 2026ರಲ್ಲಿ ಬಿಡುಗಡೆಯಾಗಲಿರುವ ಹೊಸ ಮಾಡೆಲ್‌ನ ಸಯೆನ್ನೆ ಕಾರಿನಲ್ಲಿ ಈ ವೈರ್‌ಲೆಸ್ ಚಾರ್ಜಿಂಗ್ ಸೌಲಭ್ಯವನ್ನೂ ಒದಗಿಸುತ್ತಿದೆ!

ಈ ಚಾರ್ಜಿಂಗ್‌ಗೆ ಒಂದು ವೈರ್‌ಲೆಸ್ ಸೌಲಭ್ಯ ಇಲ್ಲದ್ದರಿಂದ ನಾವು ಎಷ್ಟೆಲ್ಲ ತಾಪತ್ರಯ ಅನುಭವಿಸುತ್ತಿದ್ದೇವೆ ಎಂದು ಊಹಿಸಿಕೊಳ್ಳಿ. ನಾವು ಆರಾಮವಾಗಿ, ಮನೆಯಲ್ಲಿ ಮೊಬೈಲ್ ನೋಡುತ್ತ ಕುಳಿತಿರುತ್ತೇವೆ ಅಥವಾ ಲ್ಯಾಪ್‌ಟಾಪ್‌ನಲ್ಲಿ ಕೆಲಸ ಮಾಡುತ್ತ ಕೂತಿರುತ್ತೇವೆ. ಆದರೆ, ನಾವು ಕೂತಿರುವ ಸ್ಥಳದಲ್ಲಿ ಚಾರ್ಜಿಂಗ್ ಸಾಕೆಟ್ ಇಲ್ಲ. ಅದಕ್ಕೆಂದು ನಾವು ಸಾಕೆಟ್ ಇರುವ ಬಳಿ ಹೋಗಿ ಕುಳಿತುಕೊಳ್ಳಲೇ ಬೇಕು. ಒಂದು ವೇಳೆ ಚಾರ್ಜಿಂಗ್‌ಗೆ ವೈರ್ ಬೇಕೆಂದಿಲ್ಲ ಎಂದಾದರೆ, ನಾವು ಆರಾಮವಾಗಿ ಕುಳಿತಿರುವ ಜಾಗದಲ್ಲೇ ನಮ್ಮ ಲ್ಯಾಪ್‌ಟಾಪ್ ಅಥವಾ ಮೊಬೈಲ್ ಚಾರ್ಜ್ ಮಾಡಿಕೊಳ್ಳಬಹುದಲ್ಲ!

ಇನ್ನು, ಲೈಟ್‌ಗಳದ್ದಂತೂ ಇನ್ನೂ ಸಮಸ್ಯೆ. ಮನೆ ಕಟ್ಟುವಾಗಲೇ ಎಲ್ಲೆಲ್ಲಿ ಲೈಟ್‌ಗಳು ಬೇಕು ಎಂದು ನಿರ್ಧಾರ ಮಾಡಿಕೊಳ್ಳಬೇಕು. ಒಂದು ವೇಳೆ ಆಮೇಲೆ ಎಲ್ಲೋ ಒಂದು ಕಡೆ ಲೈಟ್ ಬೇಕು ಎಂದರೆ, ಅದಕ್ಕೆ ಪ್ರತ್ಯೇಕ ಕೇಬಲ್ ಹಾಕಿಕೊಂಡು ಹೋಗಲು ಗೋಡೆಗೆ ತೂತು ಮಾಡಿ, ಅಂದಕೆಡಿಸಬೇಕು. ಒಂದು ವೇಳೆ ವೈರ್ ಇಲ್ಲದೇ ಕರೆಂಟ್ ಹರಿಸಬಹುದು ಎಂದಾದಾಗ, ನಮಗೆ ಬೇಕಾದಲ್ಲಿ ಒಂದು ಬಲ್ಬ್ ನೇತುಹಾಕಿದರೆ ಅದು ಸೀದಾ ಬೆಳಗುವಂತಿದ್ದರೆ!

ಇಂಥ ತಂತ್ರಜ್ಞಾನಗಳ ಪ್ರಯೋಗ ನಡೆಯುತ್ತಲೇ ಇದೆ; ಯಶಸ್ವಿಯೂ ಆಗಿವೆ. ಆದರೆ, ಇದರಲ್ಲಿ ಸಮಸ್ಯೆ ಇರುವುದು ಮಾನವನ ದೇಹಕ್ಕೆ ಎಲೆಕ್ಟ್ರೋಮ್ಯಾಗ್ನೆಟಿಕ್‌ನಿಂದ ಹಾನಿ ಆಗದೇ ಸುರಕ್ಷಿತ ಮಿತಿಯಲ್ಲಿ ದೊಡ್ಡ ದೊಡ್ಡ ಸಲಕರಣೆಗಳಿಗೆ, ಎಂದರೆ, ಹೆಚ್ಚು ವಿದ್ಯುತ್ ಬೇಡುವ ಸಲಕರಣೆಗಳಿಗೆ ಪವರ್ ಅನ್ನು ಒದಗಿಸುವ ಬಗ್ಗೆ ಸಂಶೋಧನೆ ನಡೆಯುತ್ತಿವೆ. ಮೊಬೈಲ್ ಚಾರ್ಜಿಂಗ್‌ನಲ್ಲಿ ಈಗಾಗಲೇ ಈ ತಂತ್ರಜ್ಞಾನ ಯಶಸ್ವಿಯಾಗಿ ಜಾರಿಯಲ್ಲಿದೆ. ಅದಕ್ಕೂ ಮುಂದಿನ ಹೆಜ್ಜೆಯಾಗಿ, ಮನೆಯಲ್ಲಿರುವ ಲೈಟ್, ಫ್ಯಾನ್‌ಗಳು ಮತ್ತು ಇತರ ಸಾಧನಗಳಿಗೆ ವಿದ್ಯುತ್ ಒದಗಿಸುವುದಕ್ಕೆ ಒಂದು ಕೋಣೆಯನ್ನೇ ವೈರ್‌ಲೆಸ್ ಪವರ್ ಟ್ರಾನ್ಸ್‌ಮಿಷನ್ ಆಗಿ ಪರಿವರ್ತಿಸುವ ಪ್ರಯೋಗಗಳೂ ಯಶಸ್ವಿಯಾಗಿವೆ. ಆದರೆ, ಅದು ಕೈಗೆಟಕುವ ಮಟ್ಟದಲ್ಲಿ ಕಾರ್ಯರೂಪಕ್ಕೆ ತರುವ ಕುರಿತ ಸಂಶೋಧನೆಗಳು ನಡೆಯುತ್ತಲೇ ಇವೆ.

ವಿದ್ಯುತ್ ಅನ್ನು ಹಲವು ವಿಧದಲ್ಲಿ ಹರಿಸಲಾಗುತ್ತದೆ. ನಮಗೆ ಈಗಾಗಲೇ ತಿಳಿದಿರುವಂತೆ ಇಂಡಕ್ಷನ್ ವಿಧಾನ. ಇದು ನಮ್ಮ ಮೈಕ್ರೋವೇವ್ ಓವನ್ ಇದ್ದ ಹಾಗೆ. ಇದು ವಿದ್ಯುತ್ತನ್ನು ಎಲೆಕ್ಟ್ರೋಮ್ಯಾಗ್ನೆಟಿಕ್ ಅಲೆಯನ್ನಾಗಿ ಪರಿವರ್ತಿಸುತ್ತದೆ. ಪ್ರಸರಣ ಸಾಧನ ಇದನ್ನು ಎಲೆಕ್ಟ್ರೋಮ್ಯಾಗ್ನೆಟಿಕ್ ಅಲೆಯನ್ನಾಗಿ ಪರಿವರ್ತಿಸಿದರೆ, ರಿಸೀವರ್‌ನಲ್ಲಿ ಇದನ್ನು ಪುನಃ ವಿದ್ಯುತ್ ಆಗಿ ಪರಿವರ್ತಿಸಲಾಗುತ್ತದೆ. ಇದು ಹೆಚ್ಚು ವಿದ್ಯುತ್ ಬೇಡುವ ಸಲಕರಣೆಗಳಿಗೆ ಸೂಕ್ತ. ಇನ್ನೊಂದು ವಿಧಾನ, ರೇಡಿಯೋ ಫ್ರೀಕ್ವೆನ್ಸಿಯದ್ದು. ಇದರಲ್ಲಿ ಅತಿ ಕಡಿಮೆ ವಿದ್ಯುತ್ ಹರಿಸಲು ಸಾಧ್ಯವಿರುವುದರಿಂದ, ಕಡಿಮೆ ವಿದ್ಯುತ್ ಬೇಡುವ ಸಾಧನಗಳಿಗೆ ಇದು ಸೂಕ್ತ. ನಮ್ಮ ಸ್ಮಾರ್ಟ್ ವಾಚ್‌ಗಳು, ಸೆನ್ಸರ್‌ಗಳು, ಸ್ಮಾರ್ಟ್ ಲೈಟ್‌ಗಳು ಇತ್ಯಾದಿ ಸಲಕರಣೆಗಳಿಗೆ ಸೂಕ್ತ. ಇನ್ನು ಎಂಆರ್‌ಐ ಮಶಿನ್‌ಗಳಲ್ಲಿ ಬಳಸುವಂಥ ಮ್ಯಾಗ್ನೆಟಿಕ್ ರೆಸೊನೆನ್ಸ್ ಟೆಕ್ನಾಲಜಿಯನ್ನೂ ವೈರ್‌ಲೆಸ್ ವಿದ್ಯುತ್ ಪ್ರಸರಣಕ್ಕೆ ಬಳಸಬಹುದು. ಇದರಲ್ಲಿ ಎರಡೂ ಸಾಧನಗಳು ಒಂದೇ ಫ್ರೀಕ್ವೆನ್ಸಿಯಲ್ಲಿ ಇರಬೇಕಾಗುತ್ತದೆ. ಇದು ಕಾರನ್ನು ವೈರ್‌ಲೆಸ್ ಆಗಿ ಚಾರ್ಜ್ ಮಾಡುವುದಕ್ಕೆ ಸೂಕ್ತ.

ಬಹುಶಃ, ಈ ತಂತ್ರಜ್ಞಾನಗಳೆಲ್ಲ ಒಂದು ಹಂತಕ್ಕೆ ಸ್ಟಾಂಡರ್ಡೈಸ್ ಆದರೆ, ಇನ್ನು ಕೆಲವೇ ವರ್ಷಗಳಲ್ಲಿ ಎಲೆಕ್ಟ್ರಿಕ್ ಕಾರು ಖರೀದಿ ಮಾಡುವವರಿಗೆ ರೇಂಜ್ ಎಷ್ಟು ಎಂಬ ಚಿಂತೆ ದೂರವಾಗಬಹುದು. ಕಾರಿನ ಸೌಕರ್ಯವೇ ಮುಖ್ಯವಾಗಿ, ಬ್ಯಾಟರಿ ಎನ್ನುವುದು ತುರ್ತು ಪರಿಸ್ಥಿತಿಯಲ್ಲಿ ಬಳಕೆಗೆ ಮಾತ್ರ ಉಪಯೋಗವಾಗಬಹುದು! ❖



ಪಶುಸಂಗೋಪನೆಗೂ ಬಂತು ಕೃತಕ ಬುದ್ಧಿಮತ್ತೆ

• ಎನ್.ಎಸ್. ಹೆಗಡೆ

ಕೃತಕ ಬುದ್ಧಿಮತ್ತೆ(ಎಐ)ಯ ವ್ಯಾಪ್ತಿ ವಿಶಾಲವಾಗುತ್ತಿದೆ. ಈಗ ಕೃಷಿ, ಪಶುಸಂಗೋಪನೆ ಮುಂತಾದ ಕ್ಷೇತ್ರಗಳಲ್ಲಿಯೂ ಎಐ ತಂತ್ರಜ್ಞಾನವನ್ನು ಬಳಸಿಕೊಳ್ಳುವ ಪ್ರಯತ್ನವನ್ನು ವಿಜ್ಞಾನಿಗಳು ನಡೆಸಿದ್ದಾರೆ. ರೋಬೋಟ್ ತಂತ್ರಜ್ಞಾನವು ಈಗಾಗಲೇ ಸಾಕಷ್ಟು ಬೆಳವಣಿಗೆ ಕಂಡಿದೆ. ಕೃತಕ ಬುದ್ಧಿಮತ್ತೆಯ ಜೊತೆಗೆ ರೋಬೋಟ್ ತಂತ್ರಜ್ಞಾನವನ್ನೂ ಬಳಸಿಕೊಂಡು ಸಂಗೋಪನಾ ಕ್ಷೇತ್ರದಲ್ಲಿ ಇನ್ನಷ್ಟು ಅಭಿವೃದ್ಧಿ ಸಾಧಿಸುವತ್ತ ವಿಜ್ಞಾನಿಗಳು ಗಮನಹರಿಸುತ್ತಿದ್ದಾರೆ. ಇಂಗ್ಲೆಂಡಿನ ಬ್ರಿಸ್ಟಲ್ ಎಂಬ ಪ್ರದೇಶದಲ್ಲಿರುವ ವೆಸ್ಟ್ ಆಫ್ ಇಂಗ್ಲೆಂಡ್ ವಿಶ್ವವಿದ್ಯಾಲಯ ಹಾಗೂ ಸ್ಕಾಟ್ಲೆಂಡಿನ ರೂರಲ್ ಕಾಲೇಜಿನ ಸಂಶೋಧಕರು ಈಗ ಇಂಥದೊಂದು ಪ್ರಯತ್ನದಲ್ಲಿ ತೊಡಗಿದ್ದಾರೆ. ಇವರು ತಮ್ಮ ಪ್ರಯೋಗಗಳಿಗೆ ಆಯ್ಕೆ ಮಾಡಿಕೊಂಡಿರುವುದು – ಹಂದಿಗಳ ಸಾಕಣೆ.

ಪ್ರಪಂಚದ ಅನೇಕ ಕಡೆಗಳಲ್ಲಿ ಅಧಿಕ ಕೊಬ್ಬುಯುಕ್ತ ಮಾಂಸಕ್ಕಾಗಿ ಹಂದಿಗಳನ್ನು ದೊಡ್ಡ ಪ್ರಮಾಣದಲ್ಲಿ ಸಾಕಲಾಗುತ್ತದೆ. ಬಹುತೇಕ ದೇಶಗಳಲ್ಲಿ ಯಾರೂ ಒಂದೆರಡು ಹಂದಿಗಳನ್ನು ಮಾತ್ರ ಸಾಕುವುದಿಲ್ಲ. ನೂರಾರು ಅಥವಾ ಸಾವಿರಾರು ಹಂದಿಗಳನ್ನು ಒಟ್ಟಿಗೆ ಉದ್ದಿಮೆಯ ರೀತಿಯಲ್ಲಿ ಸಾಕಲಾಗುತ್ತದೆ. ಅವುಗಳ ಆರೈಕೆಯನ್ನು ಸಾಮೂಹಿಕವಾಗಿಯೇ ಮಾಡಲಾಗುತ್ತದೆ. ಇಂಗ್ಲೆಂಡ್ ಮತ್ತು ಸ್ಕಾಟ್ಲೆಂಡಿನ ಸಂಶೋಧಕರು ಇಂಗ್ಲೆಂಡಿನ ಆಗ್ನೇಯ ಗ್ರಾಮಾಂತರ ಭಾಗದಲ್ಲಿರುವ ಹಂದಿಸಾಕಣೆಯ ಕೇಂದ್ರವೊಂದನ್ನು ತಮ್ಮ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿದ್ದಾರೆ. ಆ ಕೇಂದ್ರದಲ್ಲಿ ಸಾಕುತ್ತಿರುವ ಹಂದಿಗಳ ಆರೈಕೆ/ಪೋಷಣೆಗಳಿಗೆ ಎಐ ಕ್ಯಾಮೆರಾ ಹಾಗೂ ಎಐ ಚಾಲಿತ ರೋಬೋಟ್‌ಗಳನ್ನು ಬಳಕೆ ಮಾಡಿಕೊಂಡಿದ್ದಾರೆ. ಇವೆರಡೂ ತಂತ್ರಗಳನ್ನು ಜೋಡಿಸಿ ಹಂದಿಗಳ ಆರೈಕೆ ಮಾಡಿದಾಗ ಆರೋಗ್ಯವಂತ ಹಂದಿಗಳನ್ನೂ, ಅವುಗಳ ಉತ್ಕೃಷ್ಟ ಮಾಂಸವನ್ನೂ ಪಡೆಯಲು ಸಾಧ್ಯವಾಯಿತು ಎನ್ನುತ್ತವೆ, ಅವರ ಸಂಶೋಧನೆಗಳು.

ಈ ವಿಜ್ಞಾನಿಗಳು ಅನುಸರಿಸಿದ ಪ್ರಾಯೋಗಿಕ ವಿಧಾನವು ವಿಶಿಷ್ಟವಾದುದು. ಅವರು ಆಯ್ಕೆ ಮಾಡಿದ ಹಂದಿಸಾಕಣೆ ಕೇಂದ್ರದವರು, ಗ್ರಾಮಾಂತರ ಭಾಗದ ವಿಶಾಲವಾದ ಬಯಲು ಪ್ರದೇಶದಲ್ಲಿ ತಮ್ಮ ಹಂದಿಸಾಕಣೆಯ ಕೇಂದ್ರವನ್ನು ಸ್ಥಾಪಿಸಿಕೊಂಡಿದ್ದರು. ರಾತ್ರಿಯಲ್ಲಿ ಆ ಬಯಲಿನಲ್ಲಿ ಹಂದಿಗಳನ್ನು ಸ್ವತಂತ್ರವಾಗಿ ಬಿಡಲಾಗುತ್ತಿತ್ತು. ರಾತ್ರಿ 'ಪಿಗರಿ'ಯಲ್ಲಿ (ಹಂದಿಕೊಟ್ಟಿಗೆ) ಮಲಗಿ ವಿಶ್ರಾಂತಿ ಪಡೆಯುತ್ತಿರುವ ನೂರಾರು ಹಂದಿಗಳನ್ನು ಬೆಳಿಗ್ಗೆ ಸೂರ್ಯೋದಯವಾಗುತ್ತಿದ್ದಂತೆ ಅವುಗಳ ಆಹಾರ ಸೇವನೆಯ ಕಂಪಾರ್ಟ್‌ಮೆಂಟ್‌ಗಳಿಗೆ ಬಿಡತೊಡಗಿದರು. ಪ್ರತಿಯೊಂದು ಹಂದಿಯೂ ನಿಗದಿತ ಮಾರ್ಗದಲ್ಲಿ ಚಲಿಸಿ ಅದಕ್ಕೆಂದೇ ಮೀಸಲಾದ ಆಹಾರದ ಡಬರಿಗಳನ್ನು ಸಮೀಪಿಸುವ ವ್ಯವಸ್ಥೆ ಮಾಡಲಾಗಿತ್ತು.

ಸಂಶೋಧನಾ ತಂಡವು ಪ್ರತಿಯೊಂದು ಹಂದಿಯು ಆಹಾರ ಡಬರಿಯ ಕಡೆಗೆ ಸಾಗುತ್ತಿದ್ದಾಗ ಮಾರ್ಗದಲ್ಲಿ ಅಳವಡಿಸಿದ ಎಐ ಕ್ಯಾಮೆರಾ ಅದರ ಮುಖದ ಚಿತ್ರವನ್ನು ತೆಗೆದು ಕ್ಷಣಾರ್ಧದಲ್ಲಿ ಅದರ ಆಧಾರದ ಮೇಲೆ ಆಯಾ ಹಂದಿಯ ಕುರಿತ ಮಾಹಿತಿಯೆಲ್ಲವನ್ನೂ ಪರಿಶೀಲಿಸುವ ವ್ಯವಸ್ಥೆ ಮಾಡಿತು. ಮಾಹಿತಿಯನ್ನು ಸಂಗ್ರಹಿಸುವಾಗ ಎಐ ವ್ಯವಸ್ಥೆಯು ಅದರ ಮೂತಿ, ಕಿವಿಗಳು, ಕಣ್ಣುಗಳು ಮತ್ತು ಮುಖದ ಇತರ ವೈಶಿಷ್ಟ್ಯಗಳನ್ನು ಗುರುತಿಸಿ ಪ್ರತಿಯೊಂದು ಹಂದಿಯ ವಯಸ್ಸು, ದೇಹಸ್ಥಿತಿ, ಆರೋಗ್ಯ ಸ್ಥಿತಿ, ಮಾನಸಿಕ ಸ್ಥಿತಿ, ಹಸಿವು ಬಾಯಾರಿಕೆಗಳ ಕುರಿತ ಮಾಹಿತಿಯನ್ನು ದಾಖಲಿಸುವ ವ್ಯವಸ್ಥೆ ಮಾಡಲಾಯಿತು. ಪ್ರತಿಯೊಂದು ಹಂದಿಯೂ ಎಷ್ಟು ಹಸಿದಿದೆ, ಅದಕ್ಕೆ ಎಷ್ಟು ಆಹಾರದ ಅವಶ್ಯಕತೆ ಇದೆ, ಅದು ಯಾವ ಬಗೆಯ ಆಹಾರವನ್ನು ಇಷ್ಟಪಡುತ್ತದೆ ಎಂದೆಲ್ಲ ಎಐ ಲೆಕ್ಕ ಹಾಕುತ್ತದೆ. ಆ ಹಂದಿಯು ಆಹಾರದ ಡಬರಿಯನ್ನು ತಲುಪುವ ಹೊತ್ತಿಗೆ ಇಂಥ ಎಲ್ಲ ಲೆಕ್ಕಾಚಾರಗಳನ್ನು ಹಾಕಿದ ಎಐ, ಡಬರಿಯ ಎದುರು ಸಜ್ಜುಗೊಳಿಸಿದ ರೋಬೋಟ್‌ಗೆ ಈ ಮಾಹಿತಿಯನ್ನು ರವಾನಿಸುತ್ತದೆ. ರೋಬೋಟ್ ಎಐಯ ಆದೇಶಕ್ಕೆ ತಕ್ಕಂತೆ ಆಹಾರದ ವಿವಿಧ ಘಟಕಗಳನ್ನು ಕೂಡಿಸಿ ಡಬರಿಗೆ ಸುರಿಯುತ್ತದೆ. ಹೀಗೆ ಪ್ರತಿಯೊಂದು ಹಂದಿಗೂ ಅದರ ಅಗತ್ಯಕ್ಕೆ ತಕ್ಕಂತೆ ಪೌಷ್ಟಿಕ ಆಹಾರ ದೊರೆಯುತ್ತದೆ. ಅಲ್ಲದೆ ಆಹಾರ ಸಾಮಗ್ರಿಯೂ ಪೋಲಾಗದಂತೆ ನೋಡಿಕೊಳ್ಳುತ್ತದೆ.

ಒಂದು ಹಂದಿ ವಿಟಮಿನ್ ಕೊರತೆಯಿಂದ ಬಳಲುತ್ತಿದೆ ಎಂದು ಭಾವಿಸೋಣ. ಅದಕ್ಕೆ ಎಷ್ಟು ವಿಟಮಿನ್ ಅಗತ್ಯವಿದೆ ಎಂದು ಕೃತಕ ಬುದ್ಧಿಮತ್ತೆ ಲೆಕ್ಕ ಹಾಕುತ್ತದೆ. ಅಷ್ಟೇ ಪ್ರಮಾಣದ ವಿಟಮಿನ್‌ಅನ್ನು ರೋಬೋಟ್ ಆಹಾರದ ಜೊತೆಗೆ ಸೇರಿಸುತ್ತದೆ. ಯಾವುದೋ ಪೋಷಕಾಂಶದ ಕೊರತೆ ಇದ್ದರೆ ರೋಬೋಟ್ ಅದನ್ನು ನೀಡುತ್ತದೆ. ಒಂದು ಹಂದಿಗೂ ಪಕ್ಕದ ಇನ್ನೊಂದು ಹಂದಿಗೂ ಭಿನ್ನ ಪ್ರಮಾಣದ ಆಹಾರದ ಅಗತ್ಯವಿರುತ್ತದೆ. ಅದಕ್ಕೆ ಅನುಗುಣವಾಗಿ ರೋಬೋಟ್ ಅದಕ್ಕೆ ಬೇಕಾದಷ್ಟು ಆಹಾರವನ್ನು ಮಾತ್ರ ನೀಡುತ್ತದೆ. ಹೀಗೆ ಪ್ರತಿಯೊಂದು ಹಂದಿಗೂ ಅದಕ್ಕೆ ಅಗತ್ಯವಿದ್ದಷ್ಟೇ ಪೋಷಕಾಂಶವುಳ್ಳ ಆಹಾರ ನೀಡುವುದರಿಂದ ಅವು ಪುಷ್ಟಿಕರವಾಗಿ ಆರೋಗ್ಯವಾಗಿ ಬೆಳೆಯುತ್ತವೆ. ಮಾಂಸಕ್ಕಾಗಿ ಸಾಕಲಾಗುವ ಈ ಹಂದಿಗಳಿಂದ ಒಳ್ಳೆಯ ಮಾಂಸ ದೊರಕುತ್ತದೆ. ಹಂದಿ ಅನಾರೋಗ್ಯ ಪೀಡಿತವಾಗಿದ್ದರೆ ಕೂಡಲೇ ಅದರ ಮಾಲೀಕನಿಗೆ ಮಾಹಿತಿ ನೀಡಿ ಆ ಕುರಿತು ಆತ ತೆಗೆದುಕೊಳ್ಳಬಹುದಾದ ಕ್ರಮದ ಬಗ್ಗೆಯೂ ಸಲಹೆ ನೀಡುವುದಂತೆ! ಹಂದಿ ಸಾಕಣೆದಾರ ಕಂಪ್ಯೂಟರ್ ಪರದೆಯ ಮೇಲೆ ಅಥವಾ ತನ್ನ ಮೊಬೈಲ್ ಸ್ಕ್ರೀನ್ ಮೇಲೆ ಕಣ್ಣಾಡಿಸುತ್ತ ಇದ್ದರೆ ಆಯಿತು ಅಷ್ಟೆ, ಹಂದಿಸಾಕಣೆಯ ಕೆಲಸವನ್ನು ಆತ ಸುಸೂತ್ರವಾಗಿ ನಿರ್ವಹಿಸಬಹುದು.

ಎಐ ತಂತ್ರಜ್ಞಾನವನ್ನು ಬಳಸಿ ಹಸು, ಎಮ್ಮೆ, ಕುರಿ ಮುಂತಾದ ಪ್ರಾಣಿಗಳ ಸಾಕಣೆ ಮಾಡುವ ಸಾಧ್ಯತೆಯನ್ನು ಅಲ್ಲಗಳೆಯಲಾಗದು. ಎಐ ತಂತ್ರಜ್ಞಾನವನ್ನು ಅಳವಡಿಸಿ ಆಹಾರದ ಅಪವ್ಯಯವನ್ನು ತಪ್ಪಿಸಿ ಕಡಿಮೆ ಸಂಪನ್ಮೂಲಗಳನ್ನು ಬಳಸಿ ಅಧಿಕ ಹಾಲು, ಮಾಂಸ ನೀಡುವ ರಾಸುಗಳನ್ನು ಪಡೆಯಬಹುದು. ಈಗಾಗಲೇ ತಳಿ ಅಭಿವೃದ್ಧಿಯ ತಂತ್ರಗಳ ಮೂಲಕ ಅಧಿಕ ಇಳುವರಿ ನೀಡುವ ಅನೇಕ ಮಿಶ್ರತಳಿಗಳನ್ನು ಅಭಿವೃದ್ಧಿಪಡಿಸಲಾಗಿದೆ. ಎಐ ತಂತ್ರಜ್ಞಾನವನ್ನು ಬಳಸಿ ಈ ತಳಿಗಳನ್ನು ಸಾಕುವುದರಿಂದ ಇನ್ನೂ ಅಧಿಕ ಇಳುವರಿಯನ್ನು ಪಡೆಯಲು ಸಾಧ್ಯವಾಗಬಹುದು. ❖

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಸಮಾಜ

ಮೈಸೂರಿನ ಒಡೆಯರು ಹಾಗೂ ಕರ್ನಾಟಕದಲ್ಲಿ ಬ್ರಿಟಿಷ್ ಆಳ್ವಿಕೆಗೆ ಪ್ರತಿರೋಧಗಳು

ಪ್ರಶ್ನೋತ್ತರ:–

34) ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ದಿವಾನರಾಗಿ ಕಾರ್ಯನಿರ್ವಹಿಸಿದ ಮಹನೀಯರನ್ನು ಹೆಸರಿಸಿ

ಉತ್ತರ:– ಪಿ. ಎನ್. ಕೃಷ್ಣಮೂರ್ತಿ, ವಿ. ಪಿ. ಮಾಧವರಾಯರು, ಸರ್. ಎಂ. ವಿಶ್ವೇಶ್ವರಯ್ಯನವರು, ಕಾಂತರಾಜ ಅರಸ್, ಸರ್ ಆಲ್ಬಿಯನ್ ಬ್ಯಾನರ್ಜಿ, ಸರ್ ಮಿರ್ಜಾ ಇಸ್ಮಾಯಿಲ್ ಮುಂತಾದ ಪ್ರಖ್ಯಾತ ದಿವಾನರುಗಳು ಸೇವೆ ಸಲ್ಲಿಸಿದ್ದಾರೆ.

35) ನಾಲ್ವಡಿ ಕೃಷ್ಣರಾಜ ಒಡೆಯರು ಆಶ್ರಯದಲ್ಲಿದ್ದ ವಿದ್ವಾಂಸರು ಯಾರು?

ಉತ್ತರ:– ಶ್ಯಾಮಾಶಾಸ್ತ್ರಿ, ಎಂ. ಹಿರಿಯಣ್ಣ, ವೀಣೆ ಶೇಷಣ್ಣ, ಸಾಂಬಯ್ಯ, ಬಿಡಾರಂ ಕೃಷ್ಣಪ್ಪ, ಮುತ್ತಯ್ಯ ಭಾಗವತರ್, ವಾಸುದೇವಾಚಾರ್ಯ, ಟಿ. ಚೌಡಯ್ಯ, ಮುಂತಾದವರು

36) ಮಹಾತ್ಮ ಗಾಂಧಿಯವರು ಯಾರನ್ನು 'ರಾಜರ್ಷಿ' ಎಂದು ಕರೆದಿದ್ದಾರೆ ?

ಉತ್ತರ:– ನಾಲ್ವಡಿ ಕೃಷ್ಣರಾಜ ಒಡೆಯರು

37). ನಾಲ್ವಡಿ ಕೃಷ್ಣರಾಜ ಒಡೆಯರ ನಂತರ ಯಾರು ಸಿಂಹಾಸನವನ್ನು ಏರಿದರು?

ಉತ್ತರ:– ಜಯಚಾಮರಾಜ ಒಡೆಯರು

38) ಜಯಚಾಮರಾಜ ಒಡೆಯರ ಕಾಲದಲ್ಲಿ ದಿವಾನರಾಗಿ ಸೇವೆ ಸಲ್ಲಿಸಿದವರನ್ನು ಹೆಸರಿಸಿ

ಉತ್ತರ:– ಮಿರ್ಜಾ ಇಸ್ಮಾಯಿಲ್, ಎನ್. ಮಾಧವರಾವ್ ಹಾಗೂ ಆರ್ಕಾಟ್ ರಾಮಸ್ವಾಮಿ

39) ಧೋಂಡಿಯಾ ವಾಘ್‌ನ ಹೋರಾಟ ಅಂತ್ಯ ಹಾಡಲು ಪ್ರಯತ್ನಿಸಿದ ಬ್ರಿಟಿಷ್ ಅಧಿಕಾರಿ ಯಾರು?

ಉತ್ತರ:– ಲಾರ್ಡ್ ವೆಲ್ಲೆಸಿ

40) ಧೋಂಡಿಯಾ ವಾಘ್ ಯಾರ ಆಸ್ಥಾನದಲ್ಲಿ ಸೈನಿಕನಾಗಿ ಸೇರಿದ್ದನು?

ಉತ್ತರ:– ಹೈದಾರಾಲಿ.

41) ಧೋಂಡಿಯಾ ವಾಘ್ ಎಲ್ಲಿ ಜನಿಸಿದ್ದನು?

ಉತ್ತರ:– ಚನ್ನಗಿರಿಯಲ್ಲಿ

42) ಯಾರ ಜತೆಗಿನ ಮನಸ್ತಾಪದಿಂದ ಧೋಂಡಿಯಾ ವಾಘ್ ಸೆರೆಮನೆ ಸೇರುವಂತಾಗಿತ್ತು?

ಉತ್ತರ:– ಟಿಪ್ಪು ಸುಲ್ತಾನ್

43) ಧೋಂಡಿಯಾ ವಾಘ್ ಯಾವೆಲ್ಲಾ ಕೋಟೆಯನ್ನು ವಶಪಡಿಸಿಕೊಂಡಿದ್ದರು?

ಉತ್ತರ:– ಶಿವಮೊಗ್ಗ ಮತ್ತು ಬಿದನೂರು

44) ಧೋಂಡಿಯಾ ವಾಘ್‌ನ ಹೋರಾಟದ ಕುರಿತು ಬರೆಯಿರಿ

ಉತ್ತರ:– ಬ್ರಿಟಿಷ್ ಆಳ್ವಿಕೆಯ ವಿರುದ್ಧ ಕಂಡುಬಂದ ಪ್ರತಿಭಟನೆಗಳು ಮತ್ತು ಬಂಡಾಯಗಳು ಪ್ರಮುಖ ಸ್ಥಾನವನ್ನು ಪಡೆದುಕೊಂಡಿವೆ. ಸಶಸ್ತ್ರ ಬಂಡಾಯಗಳಲ್ಲಿ ಧೋಂಡಿಯಾ ವಾಘ್‌ನ ನಾಯಕತ್ವದಲ್ಲಿ ಕಂಡುಬಂದಿದ್ದ ಸಶಸ್ತ್ರ ಹೋರಾಟ ಪ್ರಮುಖವಾಗಿದೆ. ಧೋಂಡಿಯಾ ಚನ್ನಗಿರಿಯ ಮರಾಠ ಕುಟುಂಬದಲ್ಲಿ ಜನಿಸಿದನು. ಅವನ ಶೌರ್ಯ ಪರಾಕ್ರಮಗಳಿಂದ ಜನ ಅವನನ್ನು ವಾಘ್ ಎಂದು ಕರೆದರು. ಮರಾಠಿಯಲ್ಲಿ ವಾಘ್ ಎಂದರೆ ಹುಲಿ.

ಕ್ರಿ.ಶ. 1789ರ ಸುಮಾರಿಗೆ ಮೈಸೂರಿನ ಹೈದರಾಲಿಯ ಸೈನ್ಯದಲ್ಲಿ ಒಬ್ಬ ಅಶ್ವಾರೋಹಿ ಸೈನಿಕನಾಗಿ ಸೇರಿ ಕಾಲಾನಂತರ ಸೇನಾ ನಾಯಕನಾದನು. ಖಾಸಗಿಯಾಗಿ ಒಂದು ಸೈನ್ಯವನ್ನು ಸಜ್ಜುಗೊಳಿಸಿದ ಅವನು ಟಿಪ್ಪುವಿನ ಸೈನ್ಯದಲ್ಲಿ ಸೇವೆ ಸಲ್ಲಿಸಿದನು. ಆತನೊಂದಿಗೆ ಮನಸ್ತಾಪದಿಂದಾಗಿ ಅವನು ಸೆರೆಮನೆ ಸೇರುವಂತಾಯಿತು. ನಾಲ್ಕನೆಯ ಆಂಗ್ಲೋ ಮೈಸೂರು ಯುದ್ಧದ ಸಮಯದಲ್ಲಿ ಶ್ರೀರಂಗಪಟ್ಟಣದ ಪತನಾ ನಂತರ ಬ್ರಿಟಿಷರು ಈತನನ್ನು ಸೆರೆಮನೆಯಿಂದ ಬಿಡುಗಡೆಗೊಳಿಸಿದರು. ತರುವಾಯ ಇವನು ಒಂದು ಸೈನ್ಯವನ್ನು ಸಂಘಟಿಸಿ ಸೈನಿಕ ಕಾರ್ಯಾಚರಣೆಗಳನ್ನು ಪ್ರಾರಂಭಿಸಿದನು. ಆತನ ಸೈನ್ಯ ದೊಡ್ಡದಾಗಿರಲಿಲ್ಲ. ಅವನು ಟಿಪ್ಪುವಿನ ಸೈನ್ಯದಲ್ಲಿದ್ದ ಅತೃಪ್ತ ಸೈನಿಕರು, ಅಧಿಕಾರದಿಂದ ಮುಕ್ತಗೊಳಿಸಲ್ಪಟ್ಟ ಪಾಳೇಯಗಾರರು ಮೊದಲಾದವರನ್ನು ಸಂಘಟಿಸಿ ಒಂದು ಸೈನ್ಯವನ್ನು ಸುಸಜ್ಜಿತಗೊಳಿಸಿ ಬಂಡಾಯದ ಬಾವುಟವನ್ನು ಹಾರಿಸಿದನು. ಶಿವಮೊಗ್ಗ ಮತ್ತು ಬಿದನೂರಿನ ಕೋಟೆಗಳನ್ನು ವಶಪಡಿಸಿಕೊಂಡನು. ಚಿತ್ರದುರ್ಗದ ಕೋಟೆಯನ್ನು ವಶಪಡಿಸಿಕೊಳ್ಳಲು ವಿಫಲ ಪ್ರಯತ್ನಗಳನ್ನು ನಡೆಸಿದನು. ಗವರ್ನರ್ ಜನರಲ್‌ನಾಗಿದ್ದ ಲಾರ್ಡ್ ವೆಲ್ಲೆಸ್ಲಿ ಬಂಡಾಯವನ್ನು ಹತ್ತಿಕ್ಕಲು ಪ್ರಾರಂಭಿಸಿದನು. ಧೋಂಡಿಯಾನ ನಿಯಂತ್ರಣದಲ್ಲಿದ್ದ ಶಿವಮೊಗ್ಗ, ಹೊನ್ನಾಳಿ, ಹರಿಹರ ಮೊದಲಾದವುಗಳ ಮೇಲೆ ಆಕ್ರಮಣ ನಡೆಸಲಾಯಿತು. ಧೋಂಡಿಯಾ ತನ್ನ ನೆಲೆಯನ್ನು ಕಳೆದುಕೊಂಡನು. ಶಿಕಾರಿಪುರವನ್ನು ಬ್ರಿಟಿಷರು ವಶಪಡಿಸಿಕೊಂಡ ತರುವಾಯ ಧೋಂಡಿಯಾ ನಿಜಾಮನ ಹತೋಟಿಯಲ್ಲಿದ್ದ ಗುತ್ತಿಯ ಕಡೆಗೆ ಪಲಾಯನ ಗೈದನು. ಆಗ ನಿಜಾಮನು ಗುತ್ತಿಯನ್ನು ಮುತ್ತಿದಾಗ ಧೋಂಡಿಯಾ ಮರಾಠರ ಪ್ರದೇಶಕ್ಕೆ ಓಡಿಹೋದನು. ಮರಾಠ ಸೈನ್ಯ ಅವನನ್ನು ಸೋಲಿಸಿ ಅವನ ಶಸ್ತ್ರಾಸ್ತ್ರಗಳು, ಒಂಟೆ ಮತ್ತು ಆನೆಗಳನ್ನು ವಶಪಡಿಸಿಕೊಂಡರೂ ಧೃತಿಗೆಡದ ಧೋಂಡಿಯಾ ತನ್ನ ಹೋರಾಟವನ್ನು ಮುಂದುವರಿಸಿದನು. ಅನೇಕ ಅತೃಪ್ತ ಪಾಳೆಯಗಾರರು ಧೋಂಡಿಯಾನಿಗೆ ಪ್ರೋತ್ಸಾಹಿಸಿದರು. ಮಲಬಾರಿನ ಮಾಹೆಯಲ್ಲಿದ್ದ ಫ್ರೆಂಚರು ಆತನಿಗೆ ಸಹಾಯ ಹಸ್ತವನ್ನು ನೀಡಿದರು. ಹರಿಹರ, ಚಿತ್ರದುರ್ಗ, ಶಿಕಾರಿಪುರ, ಸವಣೂರು, ರಾಣೆಬೆನ್ನೂರು, ಕಿತ್ತೂರು ಮತ್ತು ಲೋಂಡಾ ಹೀಗೆ ವಿಶಾಲ ಭೌಗೋಳಿಕ ಪ್ರದೇಶದಲ್ಲಿ ಬ್ರಿಟಿಷರ ಸೈನ್ಯ ಆತನನ್ನು ಹಿಂಬಾಲಿಸಿತು. ಶಿರಹಟ್ಟಿಯನ್ನು ತನ್ನ ಸುಪರ್ದಿಗೆ ತೆಗೆದುಕೊಂಡ ಬ್ರಿಟಿಷ್ ಸೈನ್ಯ ಧೋಂಡಿಯಾನ ಸೈನ್ಯದ ಅನೇಕ ಸೈನಿಕರನ್ನು ಸಾಯಿಸಿತು. ಧೋಂಡಿಯಾ ವಾಘ್‌ನ ಅಂತ್ಯವನ್ನು ಹಾಡಲು ಲಾರ್ಡ್ ವೆಲ್ಲೆಸ್ಲಿ ನಿರ್ಧರಿಸಿ ದೇಶಿಯ ಸಂಸ್ಥಾನಗಳ ರಾಜರ ಸಹಾಯವನ್ನು ಕೋರಿನು. ಶಿಕಾರಿಪುರದ ಕೋಟೆಯನ್ನು ಪುನಃ ಗೆದ್ದುಕೊಂಡ ಧೋಂಡಿಯಾನ ಸೈನ್ಯವನ್ನು ಬ್ರಿಟಿಷ್ ಸೈನ್ಯ ಚದುರಿಸಿತು. ತುಂಗಭದ್ರಾ ಮತ್ತು ಮಲಪ್ರಭಾ ನದಿಗಳ ನಡುವಿನ ಪ್ರದೇಶದ ವಿಶಾಲ ಭೂಪ್ರದೇಶದಲ್ಲಿ ನಿರ್ಭೀತಿಯಿಂದ ಸಂಚರಿಸುತ್ತಿದ್ದ ಧೋಂಡಿಯಾನ ಸೈನ್ಯವನ್ನು ಸೋಲಿಸಲು ಬ್ರಿಟಿಷರು ಪ್ರಯತ್ನಿಸಿದರು. ಎಲ್ಲಾ ದಿಕ್ಕುಗಳಿಂದಲೂ ಆತನನ್ನು ಬ್ರಿಟಿಷ್ ಸೈನ್ಯ ಸುತ್ತುವರೆಯಿತು. ರಾಯಚೂರಿನಿಂದ ಹೊರಟ ಅವನನ್ನು ಹಿಂಬಾಲಿಸಲಾಯಿತು. ನಿಜಾಮ ಮತ್ತು ಮರಾಠರ ಸೈನ್ಯದ ನಡುವೆ ಸಿಲುಕಿದ ಧೋಂಡಿಯಾನ ನೇತೃತ್ವದಲ್ಲಿನ ಸೈನ್ಯದ ಮೇಲೆ ಬ್ರಿಟಿಷರು ಯಾಪಲಪೆರವಿ ಎಂಬ ಸ್ಥಳದಲ್ಲಿ ಕಾರ್ಯಾಚರಣೆ ನಡೆಸಿ ಕೋಣ್‌ಗಲ್ ಎಂಬ ಸ್ಥಳದಲ್ಲಿ ಆತನನ್ನು ಹತ್ಯೆಗೈದರು. ತಮ್ಮ ನಾಯಕನ ಹತ್ಯೆಯ ನಂತರ ಅಳಿದುಳಿದ ಸೈನಿಕರು ಚದುರಿದರು. ಬಂಡುಕೋರರಿಂದ ಅಪಾರ ಪ್ರಮಾಣದ ಮದ್ದುಗುಂಡುಗಳನ್ನು ಮತ್ತು ಶಸ್ತ್ರಾಸ್ತ್ರಗಳನ್ನು ಬ್ರಿಟಿಷರು ವಶಪಡಿಸಿಕೊಂಡರು.

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

CHEMISTRY

Alcohols, Phenols and Ethers

Multiple Choice Questions

1. The C—O—H bond angle in alcohol is
a) slightly greater than 109°.28'.
b) slightly less than 109°.28'.
c) slightly greater than 120°
d) slightly less than 120°
Ans:- (b) slightly less than 109°.28'.

2. Which of the following types of alcohol contain a bond between sp
a) Primary allylic alcohols
b) Secondary allylic alcohols
c) Tertiary allylic alcohols
d) Vinylic alcohols
Ans:- (d) Vinylic alcohols

3. Which of the following terms does not describe $CH_2=CH–CH_2OH$?
a) Vinylic b) Primary
c) Allylic d) Monohydric
Ans:- (a) Vinylic

4. Which of the following compounds, -OH group is bonded to aryl carbon?
a) Ethanol b) Phenol
c) Vinyl alcohol d) Benzyl alcohol
Ans;- (b) Phenol

5. R-O-R, where R represent an alkyl or aryl group is the general formula of which compound?
a) Ethanol b) Phenol
c) Vinyl alcohol d) Ether
Ans:-(d) Ether

6. Identify the simple ether from the following.
a) $CH_3OC_2H_5$ b) $C_2H_5OC_6H_5$
c) $C_6H_5OC_6H_5$ d) $C_6H_5OCH_3$
Ans:- (c) $C_6H_5OC_6H_5$

7. IUPAC name of m-cresol is.
a) 3-methylphenol b) 3-chlorophenol
c) 3-methoxyphenol d) benzene-1, 3-diol
Ans;- (a) 3-methylphenol

8. The C—O bond length in phenol is less than that in methanol due to
a) partial double bond character of oxygen with aromatic ring
b) sp^2 hybridised carbon to which oxygen attached
c) sp^3 hybridised carbon to which oxygen attached
d) both (a) and (b)
Ans:- (d) both (a) and (b)

9. Which of the following are not used to convert RCHO into RCH_2OH?
a) H_2/Pd b) $LiAlH_4$
c) $NaBH_4$
d) Reaction with RMgX followed by hydrolysis
Ans:- (d) Reaction with RMgX followed by hydrolysis

10. ______ on reaction with B_2H_6 give trialkyl boranes.
a) Alkanes b) Alcohols
c) Alkenes d) Phenols
Ans:- (c) Alkenes

11. Phenol is less acidic than ____________ .
a) ethanol b) o-nitrophenol
c) o-methylphenol d) o-methoxyphenol
Ans:- (b) o-nitrophenol

12. During dehydration of alcohol to alkenes by heating with conc.H_2SO_4, the initiation step is:
a) protonation of alcohol molecule
b) formation of carbocation
c) elimination of water
d) formation of an ester
Ans:- (a) protonation of alcohol molecule

13. The compound that reacts fastest with Lucas reagent at room temperature is
a) butan-1-ol b) butan-2-ol
c) 2-methylpropan-1-ol
d) 2-methylpropan-2-ol
Ans:-(d) 2-methylpropan-2-ol

14. Cumene hydroperoxide on hydrolysis with dilute H_2SO_4 gives __________
a) alcohol and phenol b) only phenol
c) phenol and acetone
d) ether and acetone
Ans:- (c) phenol and acetone

15. How is carbolic acid prepared from benzene diazonium chloride?
a) Preparing an aqueous solution and warming it
b) Freezing it with alcoholic NaCl
c) Treating it with sodium hydroxide
d) Treating it with nitrous acid at 275K
Ans:- (a) Preparing an aqueous solution and warming it

16. Which of the following is necessary for the bromination of phenol?
a) CS_2 b) $FeBr_3$
c) $AlCl_3$ d) BF_3
Ans:- (a) CS_2

17. Phenol is approximately how much times acidic than ethanol?
a) 10 b) 1000
c) 100000 d) 1000000
Ans:- (d) 1000000

18. What is the correct order of boiling points of alcohols having the same number of carbon atoms?
a) 1°>2°>3° b) 3°>2°>1°
c) 3°>1°>2° d) 2°>1°>3°
Ans:- (a) 1°>2°>3°

19. Four compounds A, B, C and D having similar molecular masses were tested for their boiling points. It was found that compound C has the highest boiling point of all four. What is the compound C most likely to be?
a) Hydrocarbon b) Ether
c) Haloalkane d) Alcohol
Ans:- (d) Alcohol

20. Reaction of aqueous sodium hydroxide on chlorobenzene at room temperature gives which of the following products?
a) o-chlorophenol b) Phenol
c) No reaction d) p-chlorophenol
Ans;- (c) No reaction

'ವಿಪಕ್ಷಗಳ ಹತ್ತಿಕ್ಕಲು ದ್ವೇಷ ಭಾಷಣ ನಿಷೇಧ ಮಸೂದೆ'

ಪ್ರಜಾವಾಣಿ ವಾರ್ತೆ

ಮೈಸೂರು/ಮಂಡ್ಯ: 'ದ್ವೇಷ ಭಾಷಣ ನಿಷೇಧ ಮಸೂದೆ ಮೂಲಕ ಪ್ರತಿಪಕ್ಷಗಳನ್ನು ಹತ್ತಿಕ್ಕಲು ಕಾಂಗ್ರೆಸ್ ಸರ್ಕಾರ ಮುಂದಾಗಿದೆ. ಇದಕ್ಕೆ ವಿರೋಧಪಕ್ಷಗಳು ಹೆದರುವುದಿಲ್ಲ' ಎಂದು ಕೇಂದ್ರ ಬೃಹತ್ ಕೈಗಾರಿಕೆ ಸಚಿವ ಎಚ್.ಡಿ. ಕುಮಾರಸ್ವಾಮಿ ಇಲ್ಲಿ ಮಂಗಳವಾರ ಹೇಳಿದರು.

ಪತ್ರಕರ್ತರ ಜೊತೆ ಮಾತನಾಡಿದ ಅವರು 'ಪ್ರಧಾನಿ ನರೇಂದ್ರ ಮೋದಿ ಕುರಿತು ಕಾಂಗ್ರೆಸ್ ಕಾರ್ಯಕರ್ತರು ಏನೇನು ಮಾತನಾಡಿದ್ದಾರೆ, ಅವರ ಮೇಲೆ ಯಾವ ಕ್ರಮ ತೆಗೆದುಕೊಳ್ಳುತ್ತಾರೆ ನೋಡೋಣ' ಎಂದರು.

'ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ 2800 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇಡೀ ಸರ್ಕಾರ ಆಡಳಿತ ವೈಫಲ್ಯ ಹಾಗೂ ಭ್ರಷ್ಟಾಚಾರದಿಂದ ಕೂಡಿದೆ' ಎಂದು ಟೀಕಿಸಿದರು.

'ಕೃಷಿ ಚಟುವಟಿಕೆಗೆ 32 ಲಕ್ಷ ರೈತರಿಗೆ ₹24 ಸಾವಿರ ಕೋಟಿ ನೀಡುವುದಾಗಿ ಹೇಳಿದ್ದ ಸರ್ಕಾರ ನವೆಂಬರ್‌ವರೆಗೆ ಕೇವಲ ₹12 ಸಾವಿರ ಕೋಟಿ ಕೊಟ್ಟಿದೆ. ರೈತರನ್ನು ಆತ್ಮಹತ್ಯೆ ಪರಿಸ್ಥಿತಿಗೆ ತಂದು ನಿಲ್ಲಿಸಿದೆ' ಎಂದರು.

'ಎಸ್‌ಐಟಿ: ಪಾರದರ್ಶಕ ತನಿಖೆ ಖಾತ್ರಿ ನೀಡಿ'

ಬೆಳ್ತಂಗಡಿಯಲ್ಲಿ ಮೊಳಗಿದ ಸ್ತ್ರೀ ಧ್ವನಿ

• ಮಹಿಳೆಯರ ಸಾವಿನ ತನಿಖೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಮಂಗಳೂರು: 'ಮಹಿಳೆಯರೆಂದೂ ಸೋಲುವುದಿಲ್ಲ, ಸೋತ ಇತಿಹಾಸ ಇಲ್ಲವೇ ಇಲ್ಲ', 'ಕೊಂದವರು ಯಾರೆಂದು ಗೊತ್ತಾಗಬೇಕು, ನೊಂದವರಿಗೆ ನ್ಯಾಯ ಸಿಗಲೇಬೇಕು', 'ಧರ್ಮಸ್ಥಳ ಗ್ರಾಮದಲ್ಲಿ ನಡೆದ ಅಸಹಜ ಸಾವುಗಳ ಸಮಗ್ರ ತನಿಖೆಯನ್ನು ಎಸ್‌ಐಟಿ ನಡೆಸಲಿ', 'ಉಗ್ರಪ್ಪ ಸಮಿತಿ ವರದಿ ಜಾರಿಯಾಗಲಿ'... ಇಂತಹ ಹತ್ತಾರು ಘೋಷಣೆಗಳು ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ನೆಲದಲ್ಲಿ ಮಾರ್ದನಿಸಿದವು.

'ಕೊಂದವರು ಯಾರು?' ಆಂದೋಲನದ ನೇತೃತ್ವದಲ್ಲಿ ಮಂಗಳವಾರ ಬೆಳ್ತಂಗಡಿಯಲ್ಲಿ ನಡೆದ ಮಹಿಳಾ ನ್ಯಾಯ ಸಮಾವೇಶ ಹಾಗೂ ಜಾಥಾದಲ್ಲಿ ಭಾಗವಹಿಸಿದ್ದ ರಾಜ್ಯದ ವಿವಿಧ ಜಿಲ್ಲೆಗಳ ಹೋರಾಟಗಾರ್ತಿಯರ ಒಕ್ಕೊರಲ ದನಿಯಲ್ಲಿ ಈ ಘೋಷಣೆಗಳು ಮೊಳಗಿದವು.

ಮೆರವಣಿಗೆಯಲ್ಲಿ ಮುನ್ನ ಬಾಯಿಗೆ ಕಪ್ಪುಪಟ್ಟಿ ಕಟ್ಟಿಕೊಂಡು ಫಲಕ ಪ್ರದರ್ಶಿಸುತ್ತ ಒಂದು ಕಿ.ಮೀ.ಯಷ್ಟು ದೂರ ಮೌನವಾಗಿ ಕಾರ್ಯಕರ್ತೆಯರು ಹೆಜ್ಜೆಹಾಕಿದರು. ಮಿನಿ ವಿಧಾನಸೌಧದ ಆವರಣದಲ್ಲಿ ಒಗ್ಗೂಡಿ ಹಾಡು, ಕವಿತೆ, ಕಿರು ನಾಟಕ, ಸಮೂಹ ಗೀತೆ ಮೂಲಕ ಮಹಿಳೆಯರಿಗೆ ನ್ಯಾಯ ಒದಗಿಸಬೇಕು ಎಂದು ಆಗ್ರಹಿಸಿದರು. ಸೇರಿದ್ದ ಮಹಿಳೆಯರ ಪರವಾಗಿ ಹೋರಾಟಗಾರ್ತಿ ಗೌರಮ್ಮ ಹಕ್ಕೊತ್ತಾಯ ಮಂಡಿಸಿದರು.

ಹಕ್ಕೊತ್ತಾಯಗಳು: ಧರ್ಮಸ್ಥಳ ಗ್ರಾಮದಲ್ಲಿ ನಡೆದಿವೆ ಎನ್ನಲಾದ ಅಸಹಜ ಸಾವುಗಳ ತನಿಖೆಯಲ್ಲಿ ವಿಶೇಷ ತನಿಖಾ ದಳ (ಎಸ್‌ಐಟಿ) ಪಾರದರ್ಶಕವಾಗಿ ಕಾರ್ಯನಿರ್ವಹಿಸುವುದನ್ನು ಖಾತ್ರಿಪಡಿಸಬೇಕು. ದೂರು ದಾಖಲಿಸಲು ಬಂದ ಸಂತ್ರಸ್ತರೊಂದಿಗೆ ಎಸ್‌ಐಟಿ ಅಧಿಕಾರಿಗಳು ದುರ್ವರ್ತನೆ ತೋರಿದ್ದಾರೆಂದು ಆಪಾದನೆಗಿದ್ದು, ಅಂತಹ ಸಂದರ್ಭ ಬರದಂತೆ ಎಚ್ಚರ ವಹಿಸಬೇಕು.

ಕಳೆದ ದಶಕದಲ್ಲಿ ಇಲ್ಲಿ ಘಟಿಸಿರುವ ಎಲ್ಲ ನಾಪತ್ತೆ, ಅಸಹಜ ಸಾವು, ಅತ್ಯಾಚಾರ ಪ್ರಕರಣಗಳನ್ನು ಸಮಗ್ರ ತನಿಖೆಗೆ ಒಳಪಡಿಸಬೇಕು.

ಸಾಕ್ಷಿ ಸಂರಕ್ಷಣಾ ಕಾಯ್ದೆ ಪ್ರಕಾರ ದೂರುದಾರರು, ಸಾಕ್ಷಿದಾರರ ಸುರಕ್ಷತೆ, ಗೋಪ್ಯತೆ ಕಾಪಾಡುವ ಸಂಬಂಧ ಎಸ್‌ಐಟಿ, ಸರ್ಕಾರ ಹಾಗೂ ಮಹಿಳಾ ಆಯೋಗ ಪ್ರಕಟಣೆ ಹೊರಡಿಸಬೇಕು.

ಸೌಜನ್ಯ ಪ್ರಕರಣದಲ್ಲಿ ಅಧಿಕಾರಿಗಳು, ತನಿಖೆ ನಡೆಸಿದವರ ಕರ್ತವ್ಯ ಲೋಪ ಎಸಗಿದ್ದನ್ನು ಪರಿಗಣಿಸಿ, ಅವರ ವಿರುದ್ಧ ಕ್ರಮ ಜರುಗಿಸಬೇಕು. ಅನ್ಯಾಯದ ವಿರುದ್ಧ ಪ್ರತಿಭಟಿಸುವ ಮಹಿಳೆಯರನ್ನು ಜಾಲತಾಣಗಳಲ್ಲಿ ಅಶ್ಲೀಲವಾಗಿ ಪ್ರತಿಬಿಂಬಿಸುವವರ ಮೇಲೆ ಕಠಿಣ ಕ್ರಮ ಜರುಗಿಸಲು ಅನುವಾಗುವಂತೆ ಕಾಯ್ದೆಗೆ ತಿದ್ದುಪಡಿ ಆಗಬೇಕು ಎಂದು ಪ್ರಮುಖವಾಗಿ ಒತ್ತಾಯಿಸಲಾಯಿತು.

ವಿವಿಧ ಸಂಘಟನೆಗಳ ಪ್ರಮುಖರಾದ ಅನಸೂಯಮ್ಮ, ಬಿ.ಎಂ. ರೋಹಿಣಿ, ಸುನಂದಮ್ಮ, ಸಬಿಹಾ ಭೂಮಿ ಗೌಡ, ಜ್ಯೋತಿ ಎ, ಶಶಿಕಲಾ, ಪ್ರಸನ್ನ ರವಿ, ಗೀತಾ ಸುರತ್ಕಲ್, ಸೌಜನ್ಯ ತಾಯಿ ಕುಸುಮಾವತಿ ಮೊದಲಾದವರು ಸಮಾವೇಶದಲ್ಲಿ ಇದ್ದರು. ದು.ಸರಸ್ವತಿ ಕಿರು ನಾಟಕ ಪ್ರದರ್ಶಿಸಿದರು.



ಬೆಳ್ತಂಗಡಿಯಲ್ಲಿ ನಡೆದ ಮಹಿಳಾ ನ್ಯಾಯ ಸಮಾವೇಶದಲ್ಲಿ ಭಾಗವಹಿಸಿದ್ದ ರಾಜ್ಯದ ವಿವಿಧ ಜಿಲ್ಲೆಗಳ ಹೋರಾಟಗಾರ್ತಿಯರು

'ನೀವು ಉತ್ತರದಾಯಿ ಅಲ್ಲವೇ?'

'ಮಹಿಳೆಯರನ್ನು ಕೊಂದವರು ಯಾರೆಂಬ ನಮ್ಮ ಪ್ರಶ್ನೆ ಸಹಜವಾದ ಪ್ರಶ್ನೆಯಾಗಿದ್ದು, ನಮ್ಮ ಹೋರಾಟದ ಮೇಲೆ ಆಪಾದನೆ ಹೊರಿಸುವವರಿಗೆ ಆತ್ಮಸಾಕ್ಷಿಯಲ್ಲಿ ಹುಳುಕಿರಬೇಕು, ನೀವಲ್ಲವೇ ಕೊಂದವರು ಅಥವಾ ಕೊಂದವರನ್ನು ಬೆಂಬಲಿಸಿದವರು? ಕರುಳ ಕುಡಿ ಕಳೆದುಕೊಂಡವರಿಗೆ ನ್ಯಾಯ ಖಾತ್ರಿ ಪಡಿಸುವವರು ಯಾರು?' ಎಂದು ಕೊಂದವರು ಯಾರು ಆಂದೋಲನದ ಮಲ್ಲಿಗೆ ಪ್ರಶ್ನಿಸಿದರು.

'ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ಗೃಹ ಸಚಿವರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಯಾರನ್ನು ಬೆಂಬಲಿಸಬೇಕಿತ್ತು, ಯಾರನ್ನು ಬೆಂಬಲಿಸುತ್ತಿದ್ದೀರಿ? ಈ ನೆಲದ ಹೆಣ್ಣುಮಕ್ಕಳಿಗೆ ನೀವು ಉತ್ತರದಾಯಿಗಳಲ್ಲವೇ?' ಎಂದು ಪ್ರಶ್ನಿಸಿದರು. 'ಬೆಳ್ತಂಗಡಿ ಅಷ್ಟೇ ಅಲ್ಲ, ಹೆಣ್ಣಿಗೆ ಎಲ್ಲೇ ಅನ್ಯಾಯವಾದರೂ ದನಿ ಎತ್ತುತ್ತೇವೆ' ಎಂದೂ ಹೇಳಿದರು.

ಶೀತ ಗಾಳಿ: ಕುಸಿದ ತಾಪಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಬೀಸುತ್ತಿರುವ ಶೀತ ಗಾಳಿ ಹಾಗೂ ಮೋಡ ಕವಿದ ವಾತಾವರಣದಿಂದ ತಾಪಮಾನದಲ್ಲಿ ಕುಸಿತವಾಗಿ, ಚಳಿ ಹೆಚ್ಚಾಗುತ್ತಿದೆ. ಬುಧವಾರವೂ ಮೂರು ಜಿಲ್ಲೆಗಳಲ್ಲಿ ಶೀತ ಗಾಳಿ ಬೀಸುವ ಬಗ್ಗೆ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಬೀದರ್, ಕಲಬುರಗಿ ಹಾಗೂ ವಿಜಯಪುರ ಜಿಲ್ಲೆಗೆ 'ಯೆಲ್ಲೊ ಅಲರ್ಟ್' ನೀಡಲಾಗಿದ್ದು, ಈ ಜಿಲ್ಲೆಗಳಲ್ಲಿ ಶೀತ ಗಾಳಿ ಮುಂದುವರಿಯುವ ಸಾಧ್ಯತೆಯಿದೆ.

ಉತ್ತರ ಒಳನಾಡು ಹಾಗೂ ದಕ್ಷಿಣ ಒಳನಾಡಿನ ಕೆಲವೆಡೆ ಮುಂದಿನ ಐದು ದಿನ ಕನಿಷ್ಠ ಉಷ್ಣಾಂಶವು ಸಾಮಾನ್ಯಕ್ಕಿಂತ 3ರಿಂದ 5 ಡಿಗ್ರಿ ಸೆಲ್ಸಿಯಸ್ ಇಳಿಕೆಯಾಗುವ ಸಂಭವವಿದೆ ಎಂದು ಇಲಾಖೆ ತಿಳಿಸಿದೆ.

ಮಂಗಳವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ ಹಿಂದಿನ 24 ಗಂಟೆಗಳ ಅವಧಿಯಲ್ಲಿ ಧಾರವಾಡ, ಬೀದರ್, ಗದಗ ಸೇರಿ ವಿವಿಧ ಜಿಲ್ಲೆಗಳಲ್ಲಿ ಕನಿಷ್ಠ ಉಷ್ಣಾಂಶವು ಗಣನೀಯವಾಗಿ ಕುಸಿತವಾಗಿತ್ತು. ಧಾರವಾಡದಲ್ಲಿ ಕನಿಷ್ಠ ಉಷ್ಣಾಂಶವು 9.5 ಡಿಗ್ರಿ ಸೆಲ್ಸಿಯಸ್‌ಗೆ ಇಳಿಕೆಯಾಗಿತ್ತು ಎಂದು ತಿಳಿಸಿದೆ.

ಶಾಲಾ ಸಮಯ ಬದಲಿಸಲು ಒತ್ತಾಯ

ಬೆಂಗಳೂರು: 'ರಾಜ್ಯದ ವಿವಿಧೆಡೆ ತಾಪಮಾನ ಕುಸಿಯುತ್ತಿದ್ದು, ಮಕ್ಕಳ ಆರೋಗ್ಯ ಗಮನದಲ್ಲಿಟ್ಟುಕೊಂಡು ಚಳಿಗಾಲ ಮುಗಿಯುವವರೆಗೆ ಶಾಲಾ–ಕಾಲೇಜುಗಳನ್ನು ಪ್ರತಿದಿನ ಬೆಳಿಗ್ಗೆ 9.30ರಿಂದ ಪ್ರಾರಂಭಿಸಬೇಕು' ಎಂದು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಶಶಿಧರ ಕೋಸಂಬೆ ಒತ್ತಾಯಿಸಿದ್ದಾರೆ.

ಈ ಬಗ್ಗೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಪತ್ರ ಬರೆದಿರುವ ಅವರು, 'ರಾಜ್ಯದ 14 ಜಿಲ್ಲೆಗಳಲ್ಲಿ ಶೀತಗಾಳಿ ಕಾಣಿಸುವ ಕುರಿತು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಬೀದರ್, ಕಲಬುರಗಿ, ವಿಜಯಪುರ, ಬಾಗಲಕೋಟೆ, ಬೆಳಗಾವಿ, ಕೊಪ್ಪಳ, ಗದಗ, ಧಾರವಾಡ, ಹಾವೇರಿ, ಶಿವಮೊಗ್ಗ, ದಾವಣಗೆರೆ, ಚಿಕ್ಕಮಗಳೂರು, ಹಾಸನ, ಶಿವಮೊಗ್ಗ ಜಿಲ್ಲೆಗಳಲ್ಲಿ ಯೆಲ್ಲೊ ಅಲರ್ಟ್ ಇದೆ' ಎಂದಿದ್ದಾರೆ.

'ಯುವಜನರಲ್ಲಿ ಮಠ ಸ್ಫೂರ್ತಿ ತುಂಬಲಿ'

ಸುತ್ತೂರು ಶಿವರಾತ್ರೀಶ್ವರ ಶಿವಯೋಗಿಗಳ ಜಯಂತಿ ಉತ್ಸವ

• ಕೆ.ನರಸಿಂಹಮೂರ್ತಿ

ಮಳವಳ್ಳಿ (ಮಂಡ್ಯ ಜಿಲ್ಲೆ): ಇಳಿಸಂಜೆಯ ತಂಪು ಗಾಳಿ, ಸಾವಿರಾರು ಮಂದಿಯ ಭಕ್ತಿಯ ಸಿಂಚನದ ನಡುವೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸುತ್ತೂರು ವೀರಸಿಂಹಾಸನ ಮಹಾಸಂಸ್ಥಾನ ಮಠದ ಶಿವರಾತ್ರೀಶ್ವರ ಶಿವಯೋಗಿಗಳ 1,066ನೇ ಜಯಂತಿ ಮಹೋತ್ಸವಕ್ಕೆ ಇಲ್ಲಿ ಮಂಗಳವಾರ ವಿಧ್ಯುಕ್ತ ಚಾಲನೆ ನೀಡಿದರು.

ಏಷ್ಯಾ ಖಂಡದಲ್ಲೇ ಮೊಟ್ಟಮೊದಲು ಜಲ ವಿದ್ಯುತ್ ಉತ್ಪಾದಿಸಿದ ತಾಲ್ಲೂಕಿನ ಶಿವನಸಮುದ್ರದ ಇತಿಹಾಸವೂ ಕಾರ್ಯಕ್ರಮದ ಶ್ರೀ ಘನಲಿಂಗ ಶಿವಯೋಗಿ ವೇದಿಕೆಯಲ್ಲಿ ಹೊಳೆಯಿತು.

ಮದುವಣಗಿತ್ತಿಯಂತೆ ಸಿಂಗಾರಗೊಂಡಿದ್ದ, ಶಾಂತಿಕಾಲೇಜು ಮುಂಭಾಗದ 33 ಎಕರೆ ಪ್ರದೇಶದಲ್ಲಿ ಒಂದು ವಾರ ಉತ್ಸವವನ್ನು ಕಳೆಗಟ್ಟಿಸಲು, ವಸ್ತುಪ್ರದರ್ಶನದ ಮಳಿಗೆಗಳು ಸಂಭ್ರಮದಿಂದ ಬಾಗಿಲು ತೆರೆದವು.

ಈ ವೇಳೆ ಮಾತನಾಡಿದ ರಾಷ್ಟ್ರಪತಿ, ಸುತ್ತೂರು ಮಠ ಮತ್ತು ಸ್ವಾಮೀಜಿಯವರ ಸೇವಾ ಕಾರ್ಯಗಳನ್ನು ಮುಕ್ತಕಂಠದಿಂದ ಶ್ಲಾಘಿಸಿದರು. 'ನಾಳಿನ ಭಾರತಕ್ಕಾಗಿ ಯುವಜನರಿಗೆ ಇಂಥ ಮಠಗಳು ಸ್ಫೂರ್ತಿ ತುಂಬಬೇಕು' ಎಂದು ಕರೆ ನೀಡಿದರು.

'ಕರ್ನಾಟಕವು ಇಂಥ ಹಲವು ಮಠಗಳ ಸೇವೆಯನ್ನು ಕಂಡಿದೆ. ಕಾಯಕವೇ ಕೈಲಾಸ ಎಂಬುದು ಸಂತರಿಗೆ ಬರಿಯ ಮಾತಾಗದೆ, ಬದುಕಿನ ಭಾಗವೇ ಆಗಿತ್ತು' ಎಂದು ಅಭಿಪ್ರಾಯಪಟ್ಟರು.

'ಶಿವಯೋಗಿಗಳ ತ್ಯಾಗ ಮತ್ತು ಆಧ್ಯಾತ್ಮಿಕ ಶಕ್ತಿಗಳು ಬೆಳಕಿನ ದೀವಿಗೆಗಳಂತೆ. 8ನೇ ಶತಮಾನದಲ್ಲಿ ಮಠವನ್ನು ಸ್ಥಾಪಿಸಿದ ಶಿವಯೋಗಿಗಳು ಒಬ್ಬ ಅಖಂಡ ಗುರು. ಅವರ ನಂತರ ಬಂದ, ಶಿವರಾತ್ರಿ ರಾಜೇಂದ್ರ ಸ್ವಾಮೀಜಿಗಳು ಶೈಕ್ಷಣಿಕ ಮತ್ತು ಸಾಮಾಜಿಕ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರವಹಿಸಿದರು' ಎಂದು ಸ್ಮರಿಸಿದರು.

ಸುತ್ತೂರು ಮಠದ ಜೆಎಸ್‌ಎಸ್ ಮಹಾವಿದ್ಯಾಪೀಠವು ದೇಶದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ ಒಂದಾಗಿದೆ' ಎಂದು ಮೆಚ್ಚುಗೆ ಸೂಚಿಸಿದರು.

ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್, 'ಸಮಾಜದಲ್ಲಿ ಏಕತೆ, ಸಮತೆ ಮತ್ತು ಸದ್ಭಾವ ತರುವಲ್ಲಿ ಮಠವು ಗಣನೀಯ ಕಾರ್ಯ ಮಾಡಿದೆ' ಎಂದರು.

ಸ್ಮರಣ ಸಂಚಿಕೆ ಬಿಡುಗಡೆ ಮಾಡಿದ ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ, ' 60ರ ದಶಕದಿಂದಲೂ ಮಠದೊಂದಿಗೆ ನಮ್ಮ ಕುಟುಂಬ ಅವಿನಾಭಾವ ಸಂಬಂಧವನ್ನು ಹೊಂದಿದೆ' ಎಂದು ನೆನೆದರು.

ಸುತ್ತೂರು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ, ಶಾಸಕ ಪಿ.ಎಂ.ನರೇಂದ್ರಸ್ವಾಮಿ, ಕನಕಪುರ ಶ್ರೀದೇಗುಲ ಮಠದ ಚನ್ನಬಸವ ಸ್ವಾಮಿ ಪಾಲ್ಗೊಂಡರು.

ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು 'ಸ್ಮರಣ ಸಂಚಿಕೆ' ಬಿಡುಗಡೆ ಮಾಡಿದರು. ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋತ್, ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ, ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಕೃಷಿ ಸಚಿವ ಎನ್‌.ಚಲುವರಾಯಸ್ವಾಮಿ ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

ನೋಟು ಹರಿದು 'ಕಮೋಡ್'ಗೆ ಹಾಕಿದ!

ಧಾರವಾಡ, ವಿಜಯನಗರ, ಶಿವಮೊಗ್ಗದಲ್ಲಿ 'ಲೋಕಾ' ದಾಳಿ

ಪ್ರಜಾವಾಣಿ ವಾರ್ತೆ

ಧಾರವಾಡ: ಬೆಳಗಾವಿ ವಿಭಾಗದ ಕೃಷಿ ಜಾಗೃತ ಕೋಶದ ಜಂಟಿ ನಿರ್ದೇಶಕ ರಾಜಶೇಖರ ಬಿಜಾಪೂರ ಅವರ ಮನೆಗೆ ಲೋಕಾಯುಕ್ತ ತಂಡ ಮಂಗಳವಾರ ದಾಳಿ ನಡೆಸಿದ್ದು, ಶೌಚಾಲಯದ ಕಮೊಡ್ ಭಾಗದಲ್ಲಿ ₹ 500 ಮೌಲ್ಯದ ಕೆಲ ಹರಿದ ನೋಟುಗಳು ಸಿಕ್ಕಿವೆ.

ರಾಜಶೇಖರ

ಅಧಿಕಾರಿಗಳು ರಾಜಶೇಖರ ಅವರ ನಗರದ 'ಅಂಜನಾದ್ರಿ' ಮನೆಗೆ ತೆರಳಿ, ದಾಳಿ ಮಾಡಿದರು. ನೋಟುಗಳನ್ನು ತುಂಡು ಮಾಡಿ ಕಮೊಡ್‌ಗೆ ಹಾಕಿ ಫ್ಲಶ್ ಮಾಡಿದ್ದು ಪರಿಶೀಲನೆ ನಡೆಸಿದಾಗ ಲೋಕಾಯುಕ್ತ ಅಧಿಕಾರಿಗಳಿಗೆ ಗೊತ್ತಾಗಿದೆ.

'ರಾಜಶೇಖರ ಅವರು ಮನೆಯಲ್ಲಿ ಇದ್ದರು. ಬಾಗಿಲು ತೆರೆಯಲು ಅರ್ಧ ಗಂಟೆ ತಡ ಮಾಡಿದರು. ₹500 ಮೌಲ್ಯದ ನೋಟುಗಳನ್ನು ಹರಿದು ಕಮೊಡ್‌ಗೆ ಹಾಕಿ ಫ್ಲಶ್ ಮಾಡಿದ್ದಾರೆ. ಹರಿದ ಕೆಲ ನೋಟುಗಳು ಸಿಕ್ಕಿವೆ' ಎಂದು ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಧಾರವಾಡದಲ್ಲಿ ಅವರ ಮನೆಗಳು, ಹಾವೇರಿ ಜಿಲ್ಲೆಯ ಶಿಗ್ಗಾಂವಿಯ ಮೋಜಿನ ಉದ್ಯಾನ ಹಾಗೂ ಬೆಳಗಾವಿ ಕಚೇರಿಯಲ್ಲಿ ದಾಳಿ ನಡೆದಿದೆ. '3 ಮನೆ, 3 ನಿವೇಶನ 6.5 ಎಕರೆ ಜಮೀನು ಸೇರಿ ₹ 6.07 ಕೋಟಿ ಮೌಲ್ಯದ ಆಸ್ತಿ ಪತ್ತೆಯಾಗಿದೆ.

ಡಿಎಚ್‌ಒ ಬಳಿ ₹4.89 ಕೋಟಿ ಅಕ್ರಮ ಆಸ್ತಿ

ಹೊಸಪೇಟೆ (ವಿಜಯನಗರ): ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ (ಡಿಎಚ್‌ಒ) ಡಾ.ಎಲ್‌.ಆರ್‌.ಶಂಕರ್ ನಾಯ್ಕ್ ಅವರ ಬಳಿ ನಿಗದಿತ ಆಸ್ತಿಗಿಂತ ಹೆಚ್ಚುವರಿಯಾಗಿ ₹4.89 ಕೋಟಿ ಮೌಲ್ಯದ ಆಸ್ತಿ ಇರುವುದು ಪತ್ತೆಯಾಗಿದೆ ಎಂದು ಲೋಕಾಯುಕ್ತ ಪ್ರಕಟಣೆ ತಿಳಿಸಿದೆ. ಡಿಎಚ್‌ಒ ಅವರಿಗೆ ಸಂಬಂಧಿಸಿದ 4 ಕಡೆಗಳಲ್ಲಿ ಶೋಧನಾ ಕಾರ್ಯ ಕೈಗೊಳ್ಳಲಾಗಿತ್ತು. ಆಗ ₹4.20 ಕೋಟಿ ಮೌಲ್ಯದ 11 ನಿವೇಶನಗಳು, ಐದು ವಾಸದ ಮನೆಗಳು (ಸ್ಥಿರಾಸ್ತಿ) ಪತ್ತೆಯಾಗಿವೆ. ₹15.56 ಲಕ್ಷ ನಗದು, ₹16.75 ಲಕ್ಷ ಮೌಲ್ಯದ ಚಿನ್ನಾಭರಣ ಸೇರಿ ₹69.82 ಲಕ್ಷ ಮೌಲ್ಯದ ಚರಾಸ್ತಿ ಪತ್ತೆಯಾಗಿದೆ.

ಶಂಕರ್ ನಾಯ್ಕ್

ರೂಪ್ಲಾನಾಯ್ಕ ಬಳಿ ಶೇ 107ರಷ್ಟು ಹೆಚ್ಚು ಆಸ್ತಿ

ಶಿವಮೊಗ್ಗ: ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಇ.ಇ ರೂಪ್ಲಾ ನಾಯ್ಕ ಅವರಿಗೆ ಸೇರಿದ 6 ಸ್ಥಳಗಳಲ್ಲಿ ಲೋಕಾಯುಕ್ತ ಪೊಲೀಸರು, ದಾಳಿ ನಡೆಸಿದ್ದು, ಆದಾಯಕ್ಕಿಂತ ಶೇ 107ರಷ್ಟು ಹೆಚ್ಚು ಆಸ್ತಿ ಪತ್ತೆ ಮಾಡಿದ್ದಾರೆ.

ಶಿವಮೊಗ್ಗದಲ್ಲಿ ಇರುವ ರೂಪ್ಲಾ ನಾಯ್ಕ ಅವರ ಬಾಡಿಗೆ ಮನೆ, ಇಲ್ಲಿನ ಪ್ರೆಸ್ ಟ್ರಸ್ಟ್ ಪಕ್ಕದ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಕಚೇರಿ, ಅವರ ಆಪ್ತರೊಬ್ಬರ ವಿದ್ಯಾನಗರದ ನಿವಾಸ, ಸ್ವಂತ ಊರು ಚಿಕ್ಕಮಗಳೂರು ಜಿಲ್ಲೆ ಸಖರಾಯಪಟ್ಟಣ ಬಳಿಯ ಹಳ್ಳಿಹಟ್ಟಿಯ ನಿವಾಸ, ತೋಟದ ಹೌಸ್, ಬೆಂಗಳೂರಿನ ಕೆಂಗೇರಿ ಉಪ ನಗರದ ಅಪಾರ್ಟ್ ಮೆಂಟ್ ಮೇಲೆ ದಾಳಿ ನಡೆಯಿತು.

ರೂಪ್ಲಾನಾಯ್ಕ

ತಪಾಸಣೆ ವೇಳೆ ₹ 1.94 ಕೋಟಿ ಮೌಲ್ಯದ 6 ನಿವೇಶನ, ₹ 1 ಕೋಟಿ ಮೌಲ್ಯದ 2 ಮನೆ, ಮೂರೂವರೆ ಎಕರೆ ಕೃಷಿ ಭೂಮಿ ಸೇರಿ ₹ 2.94 ಕೋಟಿ ಮೌಲ್ಯದ ಸ್ಥಿರಾಸ್ತಿ, 655 ಗ್ರಾಂ ಆಭರಣ ಸೇರಿ ₹ 1.99 ಕೋಟಿ ಮೌಲ್ಯದ ಚರಾಸ್ತಿ ದೊರೆತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ಶಿರಸಿ ವಿಭಾಗ, ಶಿರಸಿ
ಕ್ರಸಂ:/3054ರಾಹೆಸೇ/ಜಿಮುರ/ಟೆಂಡರ್‌ಅಧಿಸೂಚನೆ:2025–26/2756 ದಿನಾಂಕ: 11.12.2025

ಇ–ಟೆಂಡರ್ ಅಧಿಸೂಚನೆ IFT-KW-2
ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ (ಅಲ್ಪಾವಧಿ)

ಕರ್ನಾಟಕ ರಾಜ್ಯಪಾಲರ ಪರವಾಗಿ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕಾಮಗಾರಿಗಳಿಗಾಗಿ ಇ–ಪ್ರೋಕ್ ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ಮುಖಾಂತರ ಟೆಂಡರನ್ನು ಈ ಕೆಳಕಾಣಿಸಿದಂತೆ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಇ–ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ kppp.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು. ಕಾಮಗಾರಿಗಳ ಇನ್ನುಳಿದ ವಿವರಗಳು ಈ ಕೆಳಗಿನಂತಿವೆ.
ಒಟ್ಟು 2 ಕಾಮಗಾರಿಗಳು
(1) ಟೆಂಡರ್ ಮಾಹಿತಿ ವಿಚಾರಣೆಗೆ ಕೊನೆಯ ದಿನಾಂಕ: 18–12–2025 (16.00 ಗಂಟೆಗೆ) (2) ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: 19–12–2025 (16.00 ಗಂಟೆವರೆಗೆ) (3) ಆರ್ಥಿಕ ಬಿಡ್ ತೆರೆಯುವ ದಿನಾಂಕ: 20–12–2025 (16.30 ಗಂಟೆವರೆಗೆ)

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ
ಶಿರಸಿ (ಉತ್ತರ ಕನ್ನಡ ಜಿಲ್ಲೆ)
DIPR/ADK/KSMCA/831/25-26 Dt.15.12.2025

ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರ
ನಂ.5, 2ನೇ ಮಹಡಿ, ಲೂಪ್‌ಲೇನ್, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು – 560 009.
ದೂ: 080–22341230/35 E-mail: bmicapa@gmail.com
ಸಂಖ್ಯೆ:ಬಿಎಂಐಸಿಎಪಿಎ/ಭೂಉಬ–02/81/2025–26/2159 ದಿನಾಂಕ:16.12.2025

ಸಾರ್ವಜನಿಕ ಪ್ರಕಟಣೆ
[ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ)ರ ಪ್ರಕಾರ]

ಅರ್ಜಿದಾರರಾದ ಶ್ರೀ ವಿ.ರಮೇಶ್ ಕುಮಾರ್ ಬಿನ್ ಲೇಟ್ ವಿ.ಚಂದ್ರಶೇಖರ ನಾಯ್ಡು ಮತ್ತು ಶ್ರೀಮತಿ ಹೇಮಲತಾ.ವಿ ಇವರ ಪರವಾಗಿ ಜಿಪಿಎ ದಾರರಾದ ಶ್ರೀ ವಿ.ರಮೇಶ್ ಕುಮಾರ್ ಬಿನ್ ಲೇಟ್ ವಿ.ಚಂದ್ರಶೇಖರ ನಾಯ್ಡು ಮತ್ತು ಶ್ರೀಮತಿ ಹೇಮಲತಾ.ವಿ ಕೋಂ ರಮೇಶ್‌ಕುಮಾರ್ ಇವರು ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಕೊಡಿಯಾಲಕರೇನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:321/2ರ 03ಎಕರೆ–04ಗುಂಟೆ (0ಎ–04ಗುಂಟೆ 'ಎ' ಖರಾಬನ್ನು ಒಳಗೊಂಡಂತೆ) ಮತ್ತು ಸರ್ವೆ ಸಂಖ್ಯೆ 321/3ರ 02ಎಕರೆ ಒಟ್ಟು 05ಎಕರೆ–04 ಗುಂಟೆ ವಿಸ್ತೀರ್ಣದ ಜಮೀನನ್ನು ಕೆಟಿಸಿಪಿ ಕಾಯ್ದೆ, 1961ರ ಕಲಂ 14(ಎ)ರಡಿಯಲ್ಲಿ "**ವ್ಯವಸಾಯ**" ವಲಯದಿಂದ "**ವಾಣಿಜ್ಯ**" ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಮನವಿ ಸಲ್ಲಿಸಿರುತ್ತಾರೆ. ಸದರಿ ಜಮೀನನ್ನು ಅನುಮೋದಿತ ಮಹಾಯೋಜನೆಯಲ್ಲಿ **ವ್ಯವಸಾಯ** ವಲಯದಲ್ಲಿ ಕಾಯ್ದಿರಿಸಲಾಗಿರುತ್ತದೆ. ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯು ಈ ಕೆಳಕಂಡ ಸಾರ್ವಜನಿಕ ಹಿತಾಸಕ್ತಿ ಹೊಂದಿರುವುದಾಗಿ ಅರ್ಜಿದಾರರು ತಿಳಿಸಿರುತ್ತಾರೆ.
1) ಈ ಜಮೀನನ್ನು ವಾಣಿಜ್ಯ ಉದ್ದೇಶಕ್ಕೆ ಅಭಿವೃದ್ಧಿಪಡಿಸುವುದರಿಂದ ಸಾರ್ವಜನಿಕರಿಗೆ ಉದ್ಯೋಗವಕಾಶಗಳು ಸೃಷ್ಟಿಯಾಗುತ್ತವೆ.
2) ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ.
3) ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ.
4) ವಾಣಿಜ್ಯ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆಯಾಗಿ ಅಭಿವೃದ್ಧಿಯಾಗುವುದರಿಂದ, ಸರ್ಕಾರದ ಬೊಕ್ಕಸಕ್ಕೆ ತೆರಿಗೆ ರೂಪದಲ್ಲಿ ಸಾಕಷ್ಟು ಆದಾಯ ಬರುತ್ತದೆ.
ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆಯ ದಿನಾಂಕದಿಂದ 15 ದಿವಸಗಳೊಳಗಾಗಿ ಸೂಕ್ತ ಕಾರಣಗಳೊಂದಿಗೆ ಲಿಖಿತವಾಗಿ ಸದಸ್ಯ–ಕಾರ್ಯದರ್ಶಿಗಳು, ಬಿ.ಎಂ.ಐ.ಸಿ.ಎ.ಪಿ.ಎ. ಬೆಂಗಳೂರು ಇವರಿಗೆ ಈ ಪ್ರಕಟಣೆಯಲ್ಲಿನ ಮೇಲ್ಕಂಡ ವಿಳಾಸಕ್ಕೆ ಸಲ್ಲಿಸಬೇಕೆಂದು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/–
ಸದಸ್ಯ ಕಾರ್ಯದರ್ಶಿಗಳು,
ಬಿ.ಎಂ.ಐ.ಸಿ.ಎ.ಪಿ.ಎ., ಬೆಂಗಳೂರು
ಡಿಐಪಿಆರ್/ಸಿಪಿ/4484/ಸಿಸಿಎಲ್/2025–26

ಉಪ ಕೃಷಿ ನಿರ್ದೇಶಕರ ಕಛೇರಿ
ರಸಗೊಬ್ಬರ ನಿಯಂತ್ರಣ ಪ್ರಯೋಗಾಲಯ ಬೆಳ್ತಂಗಡಿ ದಕ್ಷಿಣಕನ್ನಡ ಜಿಲ್ಲೆ.
ಇ–ಮೇಲ್: ddafclbel@gmail.com ದೂರವಾಣಿ ಸಂಖ್ಯೆ: 08256–232164
ಸಂಖ್ಯೆ: ಉಕೃನಿ/ರನಿಪ್ರ/ಬೆ/ಪ್ರ.ದ.ಸ್ರ.ಗೈ.ಹಾ/ಪ.ಪ್ರ/2025–26 ದಿನಾಂಕ:11–12–2025

ಪತ್ರಿಕಾ ಪ್ರಕಟಣೆ ನೋಟೀಸು

ಶ್ರೀ ನಾಗಪ್ಪ ಬಿನ್ ದಿ. ಹೊಳೆಯಪ್ಪ ವಡ್ಡರಹಟ್ಟಿ, ಗಂಗಾವತಿ ತಾಲೂಕು, ಕೊಪ್ಪಳ ಜಿಲ್ಲೆ ಇಲ್ಲಿನ ಖಾಯಂ ನಿವಾಸಿ ಹಾಗೂ ಪ್ರಥಮ ದರ್ಜೆ ಸಹಾಯಕರು, ಉಪ ಕೃಷಿ ನಿರ್ದೇಶಕರ ಕಛೇರಿ, ರಸಗೊಬ್ಬರ ನಿಯಂತ್ರಣ ಪ್ರಯೋಗಾಲಯ, ಬೆಳ್ತಂಗಡಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ತಾವು ದಿನಾಂಕ: 28–06–2023 ರಿಂದ ಇಲ್ಲಿಯವರೆಗೆ ಕಛೇರಿಗೆ ಅನಧಿಕೃತ ಗೈರು ಹಾಜರಾಗಿರುತ್ತೀರಿ. ನಿಮಗೆ ಈ ಕಛೇರಿಯಿಂದ ಕರ್ತವ್ಯಕ್ಕೆ ಹಾಜರಾಗಲು ಹಲವಾರು ಬಾರಿ ತಮ್ಮ ಸ್ವ–ವಿಳಾಸಕ್ಕೆ ನೋಟೀಸು ನೀಡಲಾಗಿದ್ದರೂ, ಖಾಯಂ ವಿಳಾಸದಲ್ಲಿ ನೌಕರರು ಇರುವುದಿಲ್ಲ ಎಂದು ಸದ್ರಿ ನೋಟೀಸು ಅಂಚೆ ಇಲಾಖೆಯಿಂದ ಬಟವಾಡೆ ಆಗದೆ ಹಿಂದಿರುಗಿ ಬಂದಿರುತ್ತದೆ. ಆದುದರಿಂದ ನೀವು ಈ ಪ್ರಕಟಣೆ ನೋಡಿದ ಕೂಡಲೇ ಕರ್ತವ್ಯಕ್ಕೆ ಹಾಜರಾಗಲು ಸೂಚಿಸಿದೆ. ತಪ್ಪಿದಲ್ಲಿ ಕೆ.ಸಿ.ಎಸ್.ಆರ್. ನಿಯಮಾವಳಿಯಂತೆ ಶಿಸ್ತು ಕ್ರಮಕ್ಕೆ ಮೇಲಾಧಿಕಾರಿಗಳಿಗೆ ಶಿಫಾರಸ್ಸುಮಾಡಲಾಗುವುದು.

(ಸಹಿ/–)
ಉಪ ಕೃಷಿ ನಿರ್ದೇಶಕರು
ರಸಗೊಬ್ಬರ ನಿಯಂತ್ರಣ ಪ್ರಯೋಗಾಲಯ
ಬೆಳ್ತಂಗಡಿ, ದಕ.
DIPR/DK/MPL/1253/25-26

ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ.
ಆಸ್ತಿ ಅಧಿಕಾರಿಯವರ ಕಛೇರಿ, ಮುಖ್ಯ ಆವರಣ ಇರುವಕ್ಕಿ–577412, ಶಿವಮೊಗ್ಗ ಜಿಲ್ಲೆ
ದೂರವಾಣಿ : 9480838979, ಇ–ಮೇಲ್: eo@uahs.edu.in
ಸಂಖ್ಯೆ : ಕೆಶಿನಾಕೃತೋವಿವಿ(ಶಿ)/ಆ.ಅ/ಡಿ.ಬಿ/ಟಿ.ಎನ್–15/2025–26 ದಿನಾಂಕ : 12.12.2025

ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕೆಳದಿ ಶಿವಪ್ಪನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗದ ಅಧೀನದಲ್ಲಿ ಬರುವ ಕಾಲೇಜುಗಳು ಮತ್ತು ಸಂಶೋಧನ ಕೇಂದ್ರಗಳಿಗೆ ಭದ್ರತಾ ಸಿಬ್ಬಂದಿ ಹಾಗೂ ಸ್ವಚ್ಛತಾ ಸಿಬ್ಬಂದಿಗಳನ್ನು ಪೂರೈಕೆ ಮಾಡುವ ಬಗ್ಗೆ.
ಕೆಳದಿ ಶಿವಪ್ಪನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗದ ಅಧೀನದಲ್ಲಿ ಬರುವ ಕಾಲೇಜುಗಳು ಮತ್ತು ಸಂಶೋಧನ ಕೇಂದ್ರಗಳಿಗೆ ಭದ್ರತಾ ಸಿಬ್ಬಂದಿ ಹಾಗೂ ಸ್ವಚ್ಛತಾ ಸಿಬ್ಬಂದಿಗಳನ್ನು ಪೂರೈಕೆ ಮಾಡಲು ಅರ್ಹ ಕಂಪನಿ ಮತ್ತು ಏಜೆನ್ಸಿಗಳಿಂದ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್ ನೋಟಿಫಿಕೇಷನ್, ಶೆಡ್ಯೂಲ್ ಹಾಗೂ ಟೆಂಡರ್‌ನ ವಿವರಗಳು https://www.kppp.karnataka.gov.in. ವೆಬ್ ಸೈಟ್‌ನಲ್ಲಿ ಲಭ್ಯವಿರುತ್ತದೆ. ಇ.ಎಂ.ಡಿಯನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪಾವತಿ ಮಾದರಿಯಲ್ಲಿ ಪಾವತಿಸಬೇಕು.
ಟೆಂಡರ್ ಶೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿದೆ: 1) ಟೆಂಡರ್ ಪೂರ್ವಬಿಡ್ ಸಭೆ ದಿನಾಂಕ ಮತ್ತು ಸಮಯ : 29.12.2025 ಬೆಳಿಗ್ಗೆ 11.00 ಗಂಟೆಗೆ. 2) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ 07.01.2026 ಸಂಜೆ 4.00 ಗಂಟೆಗೆ. 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ 08.01.2026 ಸಂಜೆ 4.30 ಗಂಟೆಗೆ. 4) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ 12.01.2026 ಬೆಳಿಗ್ಗೆ 10.00 ಗಂಟೆಗೆ.
ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು. ಕೆಲಸದ ಎಲ್ಲಾ ದಿವಸಗಳಲ್ಲೂ ಮತ್ತು ಆಸ್ತಿ ಅಧಿಕಾರಿಗಳು, ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಇರುವಕ್ಕಿ, ಸಾಗರ ತಾಲೂಕು, ಶಿವಮೊಗ್ಗ–577412 ಇವರನ್ನು ಸಂಪರ್ಕಿಸಬಹುದು ದೂರವಾಣಿ ಸಂಖ್ಯೆ: 9480838979.

ಸಹಿ/–
ಆಸ್ತಿ ಅಧಿಕಾರಿಗಳು, ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ,
ಇರುವಕ್ಕಿ, ಶಿವಮೊಗ್ಗ.
ವಾ.ಸಾ.ಸಂ.ಇ/ಶಿ/ನಂ. 68–12/ ಝೇಂಕಾರ್/2025–26

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಕೊ.206, 2ನೇ ಮಹಡಿ, ಜಿಲ್ಲಾಡಳಿತ ಭವನ, ಬೀರಸಂದ್ರ, ದೇವನಹಳ್ಳಿ, ದೊಡ್ಡಬಳ್ಳಾಪುರ ಮುಖ್ಯರಸ್ತೆ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ
ಸಂಖ್ಯೆ: ಮಮಅಇ/ಉನಿಬೆಂಗ್ರಾ/ಐಸಿಡಿಎಸ್/ಪೋ.ಸ.ಶು.ಶೇ.ಸೌ/37/2025–26/1060
ದಿನಾಂಕ: 15/12/2025

ಇ–ಟೆಂಡರ್ ಪ್ರಕಟಣೆ

ಸಕ್ಷಮ ಅಂಗನವಾಡಿಗಳನ್ನಾಗಿ ಉನ್ನತೀಕರಿಸುವ ಸಂಬಂಧ ಬೆಂಗಳೂರು ಗ್ರಾಮಾಂತರ ಜಿಲ್ಲಾ ವ್ಯಾಪ್ತಿಯಲ್ಲಿ 912 ಅಂಗನವಾಡಿ ಕೇಂದ್ರಗಳಿಗೆ ಕೂಡಲೇ ಶುದ್ಧ ಶೇಖರಣಾ ವಸ್ತುಗಳನ್ನು ಖರೀದಿಸಲು ಅರ್ಹ ಟೆಂಡರ್‌ದಾರರನ್ನು ಗುರುತಿಸಬೇಕಾಗಿರುತ್ತದೆ. ಆದ್ದರಿಂದ ಸದರಿ ಶೇಖರಣಾ ವಸ್ತುಗಳನ್ನು ಖರೀದಿಸಿ ಸರಬರಾಜು ಮಾಡಲು ಕರ್ನಾಟಕ ಆಡಳಿತ ಪಾರದರ್ಶಕ ನಿಯಮ–1999 ರಡಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅರ್ಹ ವ್ಯಕ್ತಿ/ಸಂಸ್ಥೆಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಲು ದಿನಾಂಕ: 12–12–2025 ರಿಂದ 02–01–2026ರ ಸಂಜೆ 5.00 ಗಂಟೆಯವರೆಗೆ ಅವಕಾಶವಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಉಪ ನಿರ್ದೇಶಕರ ಕಛೇರಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಇವರನ್ನು ಕಛೇರಿಯ ವೇಳೆಯಲ್ಲಿ ಖುದ್ದಾಗಿ ಅಥವಾ ವೆಬ್‌ಸೈಟ್: https://kppp.karnataka.gov.in ನ್ನು ಸಂಪರ್ಕಿಸಬಹುದಾಗಿದೆ.

ಸಹಿ/– ಉಪ ನಿರ್ದೇಶಕರು,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
ಬೆಂಗಳೂರು ಗ್ರಾಮಾಂತರ ಜಿಲ್ಲೆ
ವಾಸಾಸಂಇ/ವಾಪ್ರ/ಸ್ಪ್ಯಾನ್/4476/2025–26

ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು
ಝಾನ್ಸಿಲಕ್ಷ್ಮೀಬಾಯಿ ರಸ್ತೆ, ಮೈಸೂರು – 570 005
ಸಂಖ್ಯೆ: ಮೈಅಪ್ರಾ:ನಯೋಶಾ:ಭೂಉಬ:ನಯೋ–1: 2025–26 ದಿನಾಂಕ: 10.12.2025

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಪ್ರಕರಣ 14(ಎ)ರನ್ವಯ ಮೈಸೂರು ತಾಲ್ಲೂಕು, ಕಸಬಾ ಒಬಳಿ, ಹಾಲಾಳು ಗ್ರಾಮದ ಸ.ನಂ. 60/8ರ 01 ಎಕರೆ 05 ಗುಂಟೆ ವಿಸ್ತೀರ್ಣದ ಜಮೀನನ್ನು ಕೆ.ಟಿ.ಪಿ.ಪಿ. ಕಾಯ್ದೆ 1961 ರ ಪ್ರಕರಣ 14(ಎ) ರನ್ವಯ ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡುವಂತೆ ಶ್ರೀ ರಹಮತುಲ್ಲಾ ಮಹಮದ್ ಹುಸ್ಸೈನ್ ಇನಾಮದಾರ್, ಪ್ರವೀಣ ಎನ್ ಪಾಟೀಲ ಇವರು ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಬದಲಾವಣೆಯಿಂದ "ಈ ಜಮೀನುಗಳಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು ಮತ್ತು ಮಧ್ಯಮ ವರ್ಗದವರಿಗೆ ಹಾಗೂ ಸಾರ್ವಜನಿಕರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತವೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವ ಸಂಧರ್ಭದಲ್ಲಿ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ ಮತ್ತು ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಲಿನ ಪ್ರದೇಶದ ಅಭಿವೃದ್ಧಿ ಹೊಂದುತ್ತದೆ" ಮತ್ತು ಸಾರ್ವಜನಿಕ ಹಿತಾಸಕ್ತಿ ಕುರಿತು ಮನವಿಯಲ್ಲಿ ತಿಳಿಸಿರುತ್ತಾರೆ. ಸದರಿ ಜಮೀನಿನ ಭೂ ಉಪಯೋಗದ ಬದಲಾವಣೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಸಾರ್ವಜನಿಕರು ಈ ಪ್ರಕಟಣೆಯ ಪತ್ರಿಕೆಯಲ್ಲಿ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ನಗರ ಯೋಜಕ ಸದಸ್ಯರು, ಅಭಿವೃದ್ಧಿ ಪರಾಧಿಕಾರ, ಮೈಸೂರು–570005 ಇವರಿಗೆ ಮುದ್ದಾಂ ಅಥವಾ ನೋಂದಾಯಿತ ಅಂಚೆ ಮೂಲಕ ತಲುಪಿಸಬಹುದಾಗಿದೆ.



ಸಹಿ/– ನಗರ ಯೋಜಕ ಸದಸ್ಯರು,
ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು.
ವಾಸಾಸಂಇ/ಮೈಸೂರು/1369/ ಶಿರಡಿಸಾಯಿ/2025–26

ಕರ್ನಾಟಕ ಸರ್ಕಾರ
ಮೈಸೂರು ಸಕ್ಕರೆ ಕಂಪನಿ ನಿಯಮಿತ, ಮಂಡ್ಯ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಸಕ್ಕರೆ ನಗರ, ಮಂಡ್ಯ–571402.
ಸಂಖ್ಯೆ: ಎಂ.ಎಸ್.ಕೋ/ಎಮ್.ಎಮ್/90/2025–26 ದಿನಾಂಕ: 16.12.2025

ಅಲ್ಪಾವಧಿ ಮರು ಇ–ಟೆಂಡರ್ ಪ್ರಕಟಣೆ

ಮೈಸೂರು ಸಕ್ಕರೆ ಕಂಪನಿ ನಿಯಮಿತ ಮಂಡ್ಯ ಈ ಕೆಳಕಂಡ ಕೆಲಸ/ ಸಾಮಗ್ರಿ/ ಮಾನವ ಸಂಪನ್ಮೂಲ ಒದಗಿಸಲು, ಕಂಟ್ರಾಕ್ಟರ್/ಏಜೆನ್ಸಿದಾರರಿಂದಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅಲ್ಪಾವಧಿ ಮರು ಇ–ಟೆಂಡರ್ ಅಹ್ವಾನಿಸಲಾಗಿದೆ. ಟೆಂಡರ್ ಸಂಖ್ಯೆ: MSCO/2025-26/SE0012/call-2

ಕ್ರ.ಸಂ	ಸಾಮಾಗ್ರಿಗಳ ವಿವರ	ಪರಿಮಾಣ	ಇ.ಎಂ.ಡಿ ಹಣ
01	5000 ಟಿಸಿಡಿ ಸಾಮರ್ಥ್ಯದ ಸಕ್ಕರೆ ಘಟಕ ಮತ್ತು 30 ಮೆ.ವ್ಯಾ. ಸಹ ವಿದ್ಯುತ್ ಘಟಕಕ್ಕೆ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಒದಗಿಸಿ 2026–27 ಹಾಗೂ 2027–28 ನೇ ಹಂಗಾಮಿನ ದುರಸ್ಥಿ ನಿರ್ವಹಣೆ ಮತ್ತು ಚಾಲನೆ ಹಾಗೂ ನಿರ್ವಹಣೆ ಮಾಡಲು (Turn Key Job)	01 ಕೆಲಸ	ರೂ. 15,00,000/–

ಇ–ಪ್ರೊಕ್ಯೂರ್‌ಮೆಂಟ್ ಮರು ಟೆಂಡರನ್ನು www.kppp.karnataka.gov.in ಮುಖಾಂತರ ತುಂಬುವುದು. 1) ಟೆಂಡರನ್ನು ತುಂಬಲು ಕೊನೆಯ ದಿನಾಂಕ: 23.12.2025 ಸಂಜೆ:4.00 ರ ವರೆಗೆ 2) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 26.12.2025. 3) ವಾಣಿಜ್ಯ ಬಿಡ್ ತೆರೆಯುವ ದಿನಾಂಕ: 27.12.2025.
ಟೆಂಡರನ್ನು ಸ್ವೀಕರಿಸುವ/ ತಿರಸ್ಕರಿಸುವ ಹಕ್ಕನ್ನು ವ್ಯವಸ್ಥಾಪಕ ನಿರ್ದೇಶಕರು ಹೊಂದಿರುತ್ತಾರೆ. ವ್ಯವಸ್ಥಾಪಕ ನಿರ್ದೇಶಕರ ತೀರ್ಮಾನವೇ ಅಂತಿಮವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಸೆಲ್ 080–25501216/ 25501227 ಅಥವಾ 9964390489 ರವರನ್ನು ಸಂಪರ್ಕಿಸುವುದು.

ಸಹಿ/–
ಪ್ರಧಾನ ವ್ಯವಸ್ಥಾಪಕರು..
ವಾಸಾಸಂಇ/ಮಂಡ್ಯ/ಶಿರಡಿ ಸಾಯಿ/647/2025–26

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿ(ನಿ),
ಮುಏನೀ ವಿಭಾಗ ನಂ.2, ಬಬಲೇಶ್ವರ.
ತಾ:ಬಬಲೇಶ್ವರ, ಜಿ: ವಿಜಯಪುರ. ದೂರವಾಣಿ:08355–200020,
ಇ–ಮೇಲ್:eemli2babaleshwar@gmail.com
ಸಂ:ಕೃಭಾಜನಿನಿ/ಎಂಎಲ್ಐ/ವಿ.ಸಂ.2/ಯೋ.ಶಾ/ಕ್ಲೋ,ವಿ/ 2025–26/1261 ದಿನಾಂಕ: 15.12.2025

ಅಲ್ಪಾವಧಿ ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಕೆಪಿಪಿ–ಪೋರ್ಟಲ್ ಮುಖಾಂತರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ. ಬೆಂಗಳೂರು, ಇವರ ಪರವಾಗಿ ಕೆಳಗಿನ **ಸನ್ 2025–26 ನೇ ಸಾಲಿನ ಕ್ಲೋಜರ್ ಅವಧಿಯ ಮತ್ತು ವಿಶೇಷ ದುರಸ್ತಿಯ ಕಾಮಗಾರಿಗಳಿಗಾಗಿ** ನೊಂದಾಯಿತ **ಕೆ.ಪಿ.ಡಬ್ಲ್ಯೂ.ಡಿ–2&3 ದರ್ಜೆ** ಗುತ್ತಿಗೆದಾರರಿಂದ ಶೇಕಡಾವಾರು ಏಕಮಾತ್ರ ಲಕೋಟೆಯಲ್ಲಿ ಟೆಂಡರಗಳನ್ನು ಅಹ್ವಾನಿಸಲಾಗಿರುತ್ತದೆ. ಕೆ ಟಿ ಟಿ ಪಿ ನಿಯಮಗಳನ್ವಯ ಅರ್ಹಗುತ್ತಿಗೆದಾರರು ಸೂಚಿಸಿರುವ ಅಗತ್ಯ ದಾಖಲೆಗಳನ್ನು ಸಲ್ಲಿಸುವುದು. [ಟೆಂಡರಿಗಿಟ್ಟ ಮೊತ್ತ ರೂ. **4.04** ರಿಂದ **18.61 ಲಕ್ಷಗಳವರೆಗೆ**].
ಪರಿಶಿಷ್ಟ ಜಾತಿ: 02–ಸಂಖ್ಯೆ ಕಾಮಗಾರಿಗಳು **1]** KBJNL/2025-26/IW/WORK_INDENT1813/CALL-2, **2]** KBJNL/2025-26/IW/WORK_INDENT1822/CALL-2 **ಸಾಮಾನ್ಯ ವರ್ಗ: 01–ಸಂಖ್ಯೆ** ಕಾಮಗಾರಿ **1]** KBJNL/2025-26/GH/WORK_INDENT2674 1) ಅರ್ಹ ಗುತ್ತಿಗೆದಾರರು ಇ–ಟೆಂಡರ ಮೂಲಕ ಪ್ರವೇಶ ಪಡೆಯುವ ದಿ: **16.12.2025 ರಿಂದ 23.12.2025 ಸಾ: 5.00** ಗಂ. 2) ಏಕಮಾತ್ರ ಲಕೋಟೆಯನ್ನು ಕೆಳಗಿನ ಕಚೇರಿಯಲ್ಲಿ **ದಿ: 26.12.2025** ರ ಬೆಳಗ್ಗೆ **11.00 ಗಂಟೆ** ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ https://kppp.karnataka.gov.in ಮುಖಾಂತರ ಅಥವಾ ಕೆಳಗಿನ ಕಛೇರಿಯಿಂದ ಸಂಪರ್ಕಿಸಿ ಪಡೆಯಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿನಿ, ಮುಏನೀ ವಿಭಾಗ ಸಂ.2, ಬಬಲೇಶ್ವರ.
ವಾಸಾಸಂಇ/ವಿಜಯಪುರ/544/ಕೆಎಸ್‌ಎಂಸಿಎ/2025–26

ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ (ಕೆಎಸ್‌ಎನ್‌ಡಿಎಂಸಿ)
(ಕರ್ನಾಟಕ ಸರ್ಕಾರದ ನೋಂದಾಯಿತ ಸಂಸ್ಥೆ)
ಮೇಜರ್ ಸಂದೀಪ್ ಉನ್ನಿಕೃಷ್ಣನ್ ರಸ್ತೆ, ಅಟ್ಟೂರು ಲೇಔಟ್ ಹತ್ತಿರ, ಯಲಹಂಕ, ಬೆಂಗಳೂರು–560 064. ದೂ.: 080–67355000
ಸಂಖ್ಯೆ: ಕೆಎಸ್‌ಎನ್‌ಡಿಎಂಸಿ/ಎಡಿಎಂ/ಎಂಐಎಸ್‌ಸಿ/50/2025–26–ಡಬ್ಲ್ಯೂಎಫ್‌ಟಿಜಿ
ದಿನಾಂಕ: 16.12.2025

ಕೆಎಸ್‌ಎನ್‌ಡಿಎಂಸಿಗೆ ತಾಂತ್ರಿಕ ನಿರ್ದೇಶಕರ ನೇಮಕಾತಿ ಕುರಿತು ಅಧಿಸೂಚನೆ

ವಿಷಯ: ವಿಶ್ವಬ್ಯಾಂಕ್ ಹಣಕಾಸು ನೆರವಿನ ಯೋಜನೆಯ ಅನುಷ್ಠಾನಕ್ಕಾಗಿ ಕರ್ನಾಟಕ ಜಲ ಭದ್ರತೆ ಮತ್ತು ಸ್ಥಿತಿಸ್ಥಾಪಕತ್ವ ಕಾರ್ಯಕ್ರಮದ ಅಡಿಯಲ್ಲಿ ಕೆಎಸ್‌ಎನ್‌ಡಿಎಂಸಿಗೆ ತಾಂತ್ರಿಕ ನಿರ್ದೇಶಕರ ನೇಮಕಾತಿಗೆ ಜಾಹೀರಾತು.

ಎಸ್‌ಪಿಎಂಯು, ಕರ್ನಾಟಕ ರಾಜ್ಯ ನಿರ್ವಹಣಾ ವಿಪತ್ತು ಪ್ರಾಧಿಕಾರ (ಕೆಎಸ್‌ಡಿಎಂಎ) ಯಿಂದ ಅನುಷ್ಠಾನಗೊಳಿಸುತ್ತಿರುವ ವಿಶ್ವಬ್ಯಾಂಕ್ ಹಣಕಾಸು ನೆರವಿನ ಯೋಜನೆಯ ಭಾಗವಾಗಿ, ಕೆಡಬ್ಲ್ಯೂಎಸ್‌ಆರ್‌ಪಿ ಯೋಜನೆಯ ಸಮಗ್ರ ಕಾರ್ಯಾಚರಣೆಗಳನ್ನು ಮೇಲ್ವಿಚಾರಣೆ ಮಾಡಲು ಕೆಎಸ್‌ಎನ್‌ಡಿಎಂಸಿಗೆ ತಾಂತ್ರಿಕ ನಿರ್ದೇಶಕರನ್ನು ನೇಮಕಾತಿ ಮಾಡಲು ಕಂದಾಯ ಇಲಾಖೆ ಮುಂದಾಗಿದೆ. ಕರ್ನಾಟಕ ರಾಜ್ಯ ಸರ್ಕಾರದ ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ) ಅಡಿಯಲ್ಲಿ ಸ್ವಾಯತ್ತ ಸಂಸ್ಥೆಯಾದ ಕೆಎಸ್‌ಎನ್‌ಡಿಎಂಸಿ ತಾಂತ್ರಿಕ ನಿರ್ದೇಶಕರ ಹುದ್ದೆಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುತ್ತಿದೆ. ಸರ್ಕಾರಿ ವಲಯದಲ್ಲಿ ಕೆಲಸ ಮಾಡದ ಬಾಹ್ಯ ಅಭ್ಯರ್ಥಿಗಳಿಗೆ **ರೂ. 2.0–3.0 ಲಕ್ಷಗಳ** ವರೆಗೆ ಸಂಭಾವನೆ ಇರುತ್ತದೆ. ಅರ್ಹ ಆಂತರಿಕ ಅಭ್ಯರ್ಥಿಗಳಿಗೆ (ರಾಜ್ಯ/ಕೇಂದ್ರ ಸರ್ಕಾರ ಅಥವಾ ರಾಜ್ಯ/ಕೇಂದ್ರಸರ್ಕಾರಿ ಸಂಸ್ಥೆಗಳು/ವಿಶ್ವವಿದ್ಯಾಲಯಗಳಲ್ಲಿ ಸೇವೆ ಸಲ್ಲಿಸುತ್ತಿರುವವರು) ನಿಯೋಜನೆಯ ಆಧಾರದ ಮೇಲೆ ಅವರ ಅಸ್ತಿತ್ವದಲ್ಲಿರುವ ವೇತನ ಶ್ರೇಣಿಯ ಪ್ರಕಾರ ವೇತನ ಶ್ರೇಣಿಗಳನ್ನು ಕಾಪಾಡಲಾಗುತ್ತದೆ.
ಕೆಎಸ್‌ಎನ್‌ಡಿಎಂಸಿಯಲ್ಲಿ ತಾಂತ್ರಿಕ ನಿರ್ದೇಶಕರಾಗಿ ನೇಮಕಗೊಳ್ಳಲು ವಿವರವಾದ ಉಲ್ಲೇಖ ನಿಯಮಗಳು (ಟಿಓಆರ್), ಅರ್ಹತಾ ಮಾನದಂಡಗಳು ಮತ್ತು ಇತರೆ ಷರತ್ತುಗಳು ಕೆಎಸ್‌ಎನ್‌ಡಿಎಂಸಿ ವೆಬ್‌ಪೋರ್ಟಲ್ **www.ksndmc.org** ನಲ್ಲಿ ಲಭ್ಯವಿದೆ. ಅರ್ಜಿದಾರರು ಈ ಕೆಳಗಿನ ಟಿಪ್ಪಣಿಗಳನ್ನು ಗಮನಿಸುವುದು:
- ಅರ್ಜಿಗಳನ್ನು ಸಂಬಂಧಿತ ಪೂರಕ ದಾಖಲೆಗಳೊಂದಿಗೆ ದಿನಾಂಕ: **05.01.2026 ರ ಸಂಜೆ 5.00 ಗಂಟೆಯೊಳಗೆ** ಅಥವಾ ಅದಕ್ಕೂ ಮೊದಲು ನೋಂದಾಯಿತ ಅಂಚೆ/ಕೊರಿಯರ್ ಮೂಲಕ ಅಥವಾ ವೈಯಕ್ತಿಕವಾಗಿ ಸಲ್ಲಿಸಬಹುದು.
- ಅರ್ಜಿಗಳನ್ನು ನಿರ್ದೇಶಕರ ಕಛೇರಿ, **ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ, ಮೇಜರ್ ಸಂದೀಪ್ ಉನ್ನಿಕೃಷ್ಣನ್ ರಸ್ತೆ, ಅಟ್ಟೂರು ಲೇಔಟ್, ಯಲಹಂಕ, ಬೆಂಗಳೂರು–560064** ಈ ವಿಳಾಸಕ್ಕೆ ಕಳುಹಿಸತಕ್ಕದ್ದು.
- ಅಪೂರ್ಣ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ ಮತ್ತು ಯಾವುದೇ ಕಾರಣವನ್ನೂ ನೀಡದೆ ಯಾವುದೇ ಅರ್ಜಿಯನ್ನು ತಿರಸ್ಕರಿಸುವ ಹಕ್ಕನ್ನು ಕೆಎಸ್‌ಎನ್‌ಡಿಎಂಸಿ ಕಾಯ್ದಿರಿಸಿದೆ.
- ಅರ್ಹತೆ ಪಡೆದ ಅಭ್ಯರ್ಥಿಗಳನ್ನು ಪಟ್ಟಿ ಮಾಡಿ ಹುದ್ದೆಗೆ ಅಂತಿಮ ಆಯ್ಕೆಗೆ ವೈಯಕ್ತಿಕ ಸಂದರ್ಶನಕ್ಕೆ ಕರೆಯಲಾಗುತ್ತದೆ.
- ಹೆಚ್ಚಿನ ಸಂದೇಹಗಳಿದ್ದಲ್ಲಿ ಆಡಳಿತಾಧಿಕಾರಿಯವರ ಮೊಬೈಲ್ ಸಂಖ್ಯೆ **9611990357** ಗೆ ಕರೆಮಾಡಿ ಸಂಪರ್ಕಿಸಬಹುದು.

ಸಹಿ/– ನಿರ್ದೇಶಕರು, ಕೆಎಸ್‌ಎನ್‌ಡಿಎಂಸಿ

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಮಹಾತ್ಮರ ಸಂಕಟಗಳು ಮಹಾತ್ಮರಿಗೆ ಮಾತ್ರವೇ ಗೊತ್ತು.

–ಮಹಾತ್ಮ ಗಾಂಧಿ

ಸಂಪಾದಕೀಯ

ಡಿಜಿಟಲ್ ಅಪರಾಧಗಳ ಹೆಚ್ಚಳ ಸೈಬರ್ ಸುರಕ್ಷತೆಗೆ ಬೇಕು ಒತ್ತು

ಕೇಂದ್ರ ಸರ್ಕಾರ ಹೆಮ್ಮೆಯಿಂದ ಪ್ರತಿಪಾದಿಸುವ 'ಡಿಜಿಟಲ್ ಇಂಡಿಯಾ' ಪರಿಕಲ್ಪನೆಗೆ ವಿರೋಧಾಭಾಸದ ರೂಪದಲ್ಲಿ ಡಿಜಿಟಲ್ ಅಪರಾಧ ಕೃತ್ಯಗಳೂ ತೀವ್ರ ಗತಿಯಲ್ಲಿ ಹೆಚ್ಚುತ್ತಿದ್ದು, ಆ ವಂಚನೆಗಳ ಕೇಂದ್ರವಾಗಿ ಬೆಂಗಳೂರನ್ನು ಗುರ್ತಿಸಲಾಗುತ್ತಿದೆ. ಭಾರತದ ಸಿಲಿಕಾನ್ ವ್ಯಾಲಿ ಎಂದು ಪ್ರಸಿದ್ಧವಾದ ಬೆಂಗಳೂರು ಮಹಾನಗರದಲ್ಲಿ ಸೈಬರ್ ಅಪರಾಧ ಕೃತ್ಯಗಳಿಂದಾಗಿ ಪ್ರತಿ ದಿನವೂ ಸರಾಸರಿ ₹5.45 ಕೋಟಿ ರೂಪಾಯಿ ವಂಚನೆ ನಡೆಯುತ್ತಿದೆ ಎನ್ನುವ ಮಾಹಿತಿ ಆತಂಕ ಹುಟ್ಟಿಸುವಂತಹದ್ದು. ಸೈಬರ್ ಅಪರಾಧಗಳ ಬಗ್ಗೆ ಮಾಧ್ಯಮಗಳಲ್ಲಿ ಪ್ರತಿನಿತ್ಯ ವರದಿಗಳು ಪ್ರಕಟಗೊಳ್ಳುತ್ತಿವೆ. ಡಿಜಿಟಲ್ ಅಪರಾಧಗಳ ಬಗ್ಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹಮ್ಮಿಕೊಂಡಿರುವ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಅಣಕಿಸುವಂತೆ, ಡಿಜಿಟಲ್ ವಂಚನೆಗಳ ಪ್ರಮಾಣ ಏರುಗತಿಯಲ್ಲಿದೆ. ಈ ವರ್ಷದ ನವೆಂಬರ್ 15ರ ವೇಳೆಗೆ ಸೈಬರ್ ಅಪರಾಧಗಳಿಗೆ ಬಲಿಪಶು ಆಗಿರುವವರು ₹1,543 ಕೋಟಿ ಕಳೆದುಕೊಂಡಿದ್ದಾರೆ ಎಂದು ಗೃಹ ಸಚಿವ ಜಿ. ಪರಮೇಶ್ವರ ಅವರು ಬೆಳಗಾವಿಯಲ್ಲಿ ನಡೆಯುತ್ತಿರುವ ಅಧಿವೇಶನದಲ್ಲಿ ತಿಳಿಸಿದ್ದಾರೆ. 2024ರಲ್ಲಿ ವಂಚನೆಯ ಪ್ರಮಾಣ ₹1,995 ಕೋಟಿ ಇದ್ದುದನ್ನು ಗಮನಿಸಿದರೆ, ಎರಡು ವರ್ಷಗಳ ಅವಧಿಯಲ್ಲಿ ಬೆಂಗಳೂರು ಸೈಬರ್ ಅಪರಾಧಗಳ ನಗರವಾಗಿ ಕುಖ್ಯಾತಿ ಪಡೆಯುವ ಹಾದಿಯಲ್ಲಿ ದಾಪುಗಾಲು ಇಡುತ್ತಿರುವಂತಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆ (₹49.85 ಕೋಟಿ), ಮಂಗಳೂರು (₹33.78 ಕೋಟಿ), ಮೈಸೂರು (₹33.17 ಕೋಟಿ) ಹಾಗೂ ಚಿಕ್ಕಬಳ್ಳಾಪುರ (₹28.13 ಕೋಟಿ) ಜಿಲ್ಲೆಗಳಲ್ಲೂ ಪ್ರಸಕ್ತ ವರ್ಷ ದೊಡ್ಡ ಪ್ರಮಾಣದಲ್ಲಿ ಸೈಬರ್ ವಂಚನೆ ನಡೆದಿದೆ. ಗ್ರಾಮೀಣ ಪ್ರದೇಶಗಳಲ್ಲಿಯೂ ಸೈಬರ್ ವಂಚನೆಯ ಪ್ರಕರಣಗಳು ನಡೆಯುತ್ತಿದ್ದರೂ, ಬೆಂಗಳೂರಿನಲ್ಲಿ ನಡೆಯುತ್ತಿರುವ ಪ್ರಕರಣಗಳಲ್ಲಿ ಗಾಬರಿ ಹುಟ್ಟಿಸುವಷ್ಟು ದೊಡ್ಡ ಮೊತ್ತದ ಹಣವನ್ನು ವಂಚಕರು ದೋಚುತ್ತಿದ್ದಾರೆ.

ಭಾರತದ ಸಿಲಿಕಾನ್ ವ್ಯಾಲಿ ಹಿರಿಮೆಯ ಬೆಂಗಳೂರು ಡಿಜಿಟಲ್ ವಂಚನೆಗಳ ಕುಖ್ಯಾತಿಯನ್ನೂ ಪಡೆಯುತ್ತಿದೆ. ಡಿಜಿಟಲ್ ವಹಿವಾಟಿನ ವ್ಯಾಪಕತೆ ಅಪರಾಧ ಪ್ರಕರಣಗಳಿಗೆ ಅವಕಾಶ ಕಲ್ಪಿಸಿದೆ.

ಸೈಬರ್ ಅಪರಾಧಗಳ ಸ್ವರೂಪವೂ ನಿರಂತರವಾಗಿ ಬದಲಾಗುತ್ತಿದೆ. ಫಿಶಿಂಗ್, ಕಾರ್ಡ್ ಸ್ಕಿಮ್ಮಿಂಗ್, ಒಟಿಪಿ ದುರುಪಯೋಗ ರೂಪದ ಹೆಚ್ಚು ಪ್ರಚಲಿತ ಅಪರಾಧಗಳ ಜೊತೆಗೆ ಡಿಜಿಟಲ್ ಅರೆಸ್ಟ್ ಹಾಗೂ ಹೂಡಿಕೆಯ ಹೆಸರಿನ ವಂಚನೆಗಳು ಹೆಚ್ಚಾಗುತ್ತಿವೆ. ಪ್ರಾಧ್ಯಾಪಕರು, ವಿಜ್ಞಾನಿಗಳು, ವೈದ್ಯರು, ಸಾಫ್ಟ್‌ವೇರ್ ಎಂಜಿನಿಯರ್‌ಗಳು ಸೇರಿದಂತೆ ದೊಡ್ಡ ದೊಡ್ಡ ಹುದ್ದೆಗಳಲ್ಲಿ ಇರುವವರೂ ಡಿಜಿಟಲ್ ಅರೆಸ್ಟ್ ಜಾಲಕ್ಕೆ ಸಿಲುಕುತ್ತಿದ್ದಾರೆ. ಷೇರು ಮಾರುಕಟ್ಟೆಯಲ್ಲಿ ಹೆಚ್ಚಿನ ಲಾಭ ಗಳಿಸಿಕೊಡುವ ಆಮಿಷಕ್ಕೆ ಒಳಗಾಗಿ ಬೆಂಗಳೂರಿನ ಉದ್ಯಮಿಯೊಬ್ಬರು ಇತ್ತೀಚೆಗಷ್ಟೇ ₹8.3 ಕೋಟಿ ಕಳೆದುಕೊಂಡಿದ್ದಾರೆ. ಸಾಮಾಜಿಕ ಜಾಲತಾಣಗಳು, ಡೇಟಿಂಗ್ ಆ್ಯಪ್‌ಗಳ ಮೂಲಕ ಪರಿಚಯ ಮಾಡಿಕೊಂಡು, ಭಾವನಾತ್ಮಕ ನಂಟನ್ನೂ ಬೆಳೆಸಿಕೊಂಡು, ಭಾವಿ ಜೀವನ ಸಂಗಾತಿಯಂತೆ ವರ್ತಿಸುವ ಮೂಲಕ ವಂಚಿಸುವ ಪ್ರಕರಣಗಳೂ ನಡೆದಿವೆ. ಮಹಿಳೆಯರನ್ನು ಗುರಿಯಾಗಿಸಿಕೊಂಡು ನಡೆಯುವ ವಂಚನೆಗಳ ಪ್ರಮಾಣವೂ ಹೆಚ್ಚಾಗಿದೆ. ಡಿಜಿಟಲ್ ಅರೆಸ್ಟ್ ಸಂದರ್ಭದಲ್ಲಿ ಬಲಿಪಶುಗಳನ್ನು ಮಾನಸಿಕ ಒತ್ತಡಕ್ಕೆ ಒಳಪಡಿಸಿ ಹಣ ಲಪಟಾಯಿಸಲಾಗುತ್ತಿದೆ.

ಡಿಜಿಟಲ್ ವಂಚನೆಗಳು ಹೆಚ್ಚುತ್ತಿದ್ದರೂ, ಅವುಗಳನ್ನು ಪತ್ತೆಹಚ್ಚುವ ಹಾಗೂ ಅಪರಾಧಿಗಳನ್ನು ಕಾನೂನುಕ್ರಮಕ್ಕೆ ಒಳಪಡಿಸುವ ವ್ಯವಸ್ಥೆ ಸಮರ್ಥವಾಗಿ ಬೆಳೆಯದಿರುವುದು ದುರದೃಷ್ಟಕರ. ಸೈಬರ್ ಅಪರಾಧಗಳ ತನಿಖೆಗೆಂದು ಪ್ರತ್ಯೇಕ ವಿಭಾಗವೇ ಇದ್ದರೂ, ಫಲಿತಾಂಶ ಆಶಾದಾಯಕವಾಗಿಯೇನೂ ಇಲ್ಲ. 2025ರಲ್ಲಿ ಅಪರಾಧ ಪತ್ತೆ ಪ್ರಮಾಣ ಸುಧಾರಿಸಿದ್ದರೂ, ವಂಚಕರ ಪಾಲಾದ ಹಣವನ್ನು ಸಂತ್ರಸ್ತರಿಗೆ ಮರಳಿಸುವ ನಿಟ್ಟಿನಲ್ಲಿ ಹೆಚ್ಚಿನ ಫಲಶ್ರುತಿ ಕಂಡುಬರುತ್ತಿಲ್ಲ. ದೊಡ್ಡ ಮೊತ್ತದ ವಂಚನೆಗಳು ಸುದ್ದಿಯಾಗುತ್ತವೆ ಹಾಗೂ ಆ ಪ್ರಕರಣಗಳ ತನಿಖೆಯೂ ನಡೆಯುತ್ತದೆ. ಆದರೆ, ಸಣ್ಣ ಪುಟ್ಟ ಪ್ರಮಾಣದ ಪ್ರಕರಣಗಳು ದಾಖಲಾಗದೆಯೇ ಉಳಿಯುತ್ತಿವೆ. ಸೀಮಿತ ಸಂಪನ್ಮೂಲಗಳೊಂದಿಗೆ ಕರ್ತವ್ಯ ನಿರ್ವಹಿಸುತ್ತಿರುವ ಸೈಬರ್ ಪೊಲೀಸರು, ಕೆಲಸದ ಒತ್ತಡದಿಂದಾಗಿ ಹೈರಾಣಾಗುತ್ತಿದ್ದಾರೆ ಹಾಗೂ ಜನಸಾಮಾನ್ಯರ ಪ್ರಕರಣಗಳನ್ನು ಗಮನಿಸುವ ಸಮಯ ಮತ್ತು ಸಾವಧಾನ ಕಳೆದುಕೊಂಡಿದ್ದಾರೆ. ಡಿಜಿಟಲ್ ವಹಿವಾಟಿನಲ್ಲಿ ಹಿಂದಿರುಗಿ ಬಾರದಷ್ಟು ದೂರಕ್ಕೆ ಸಾಗಿರುವುದರಿಂದ, ಸೈಬರ್ ವಂಚನೆಗಳ ವಿರುದ್ಧ ಸುರಕ್ಷತೆ ರೂಪಿಸಿಕೊಳ್ಳುವುದಷ್ಟೇ ನಮಗೆ ಉಳಿದಿರುವ ದಾರಿಯಾಗಿದೆ. ಸೈಬರ್ ಪೊಲೀಸ್ ಠಾಣೆ ಹಾಗೂ ಸಿಬ್ಬಂದಿಯನ್ನು ಇನ್ನಷ್ಟು ಹೆಚ್ಚಿಸುವ ನಿಟ್ಟಿನಲ್ಲಿ ಸರ್ಕಾರ ಕಾರ್ಯತತ್ಪರ ಆಗಬೇಕಾಗಿದೆ. ಡಿಜಿಟಲ್ ಸುರಕ್ಷತೆಯ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಶಾಲಾಕಾಲೇಜುಗಳಲ್ಲಿ ನಡೆಸಬೇಕಾಗಿದೆ. ಸರ್ಕಾರ ಹಾಗೂ ಸಮಾಜದ ಪರಿಣಾಮಕಾರಿ ಸಹಯೋಗದಿಂದ ಮಾತ್ರ ಸೈಬರ್ ವಂಚನೆಗಳಿಗೆ ಕಡಿವಾಣ ಹಾಕುವುದು ಸಾಧ್ಯ.

ಚಾಟಿ

ಎಲ್ಲವೂ ಅಷ್ಟೇ...

ಪ್ರಸಿದ್ಧ ನಟಿಯೇ ಆಗಿರಲಿ, ಅವಳು ಹೆಣ್ಣು ಅಷ್ಟೇ. ಕೇರಳವೋ, ಲಿಬರೇಟೋ, ಸರ್ಕಾರವೋ, ನ್ಯಾಯಾಲಯವೋ– ಅದು ಗಂಡಿನ ಪರ ಅಷ್ಟೇ!

ದಯಾ ಗಂಗನಘಟ್ಟ, ಕಥೆಗಾರ್ತಿ, ಫೇಸ್‌ಬುಕ್‌ನಿಂದ

ಕಿಡಿನುಡಿ

ಬಿಜೆಪಿಯವರಿಗೆ ಯಾವ ಕಾರಣಕ್ಕೂ ಕರ್ನಾಟಕದ ಜನತೆ ಆಶೀರ್ವಾದ ಮಾಡುವುದಿಲ್ಲ. ಎರಡು ಬಾರಿ ಅಧಿಕಾರ ಮಾಡಿದ್ದಾರೆ, ಯಾವಾಗಲಾದರೂ ಜನರ ಆಶೀರ್ವಾದ ತೆಗೆದುಕೊಂಡು ಅಧಿಕಾರ ಮಾಡಿದ್ದಾರಾ?

ಸಿದ್ದರಾಮಯ್ಯ, ಮುಖ್ಯಮಂತ್ರಿ

25 ವರ್ಷಗಳ ಹಿಂದೆ

ಭಾನುವಾರ, 17-12-2000

• ಚಿತ್ರಮಂದಿರಗಳು ಖಾಲಿ, ಪ್ರದರ್ಶಕರು ಕಂಗಾಲು

ಬೆಂಗಳೂರು, ಡಿ. 16– ಕನ್ನಡೇತರ ಚಿತ್ರ ಪ್ರದರ್ಶಕರು ಹಾಗೂ ವಿತರಕರಿಗೆ ಈಗ 'ಸಂಕಷ್ಟ ಮಾಸ'. ಒಂದೆಡೆ ರಂಜಾನ್ ಹಬ್ಬ, ಇನ್ನೊಂದೆಡೆ ಅಯ್ಯಪ್ಪ ವ್ರತ. ಪ್ರೇಕ್ಷಕರಿಲ್ಲದೆ ಸಿನಿಮಾ ಮಂದಿರಗಳು ಖಾಲಿ ಹೊಡೆಯುತ್ತಿವೆ. ಸರಾಸರಿ ಕಲೆಕ್ಷನ್ ಶೇ 50ಕ್ಕೂ ಕಡಿಮೆಯಾಗಿದೆ. ಕನ್ನಡೇತರ ಚಿತ್ರಗಳಿಗೆ ಸರ್ಕಾರ ವಿಧಿಸಿರುವ ಶೇ 80ರಷ್ಟು ಮನರಂಜನಾ ತೆರಿಗೆ ಕೂಡ ಪ್ರೇಕ್ಷಕರ ನಿರುತ್ಸಾಹಕ್ಕೆ ಪ್ರಮುಖ ಕಾರಣ ಎನ್ನಲಾಗಿದೆ. ಮನರಂಜನಾ ತೆರಿಗೆ ಹೆಚ್ಚಿದಷ್ಟೂ ಅದನ್ನು ನೇರವಾಗಿ ಪ್ರೇಕ್ಷಕನ ಮೇಲೆ ಹೊರಿಸಲಾಗುತ್ತದೆ.

• 'ಸರ್ಕಾರದ ಆದ್ಯತೆ ರಾಷ್ಟ್ರೀಯ ಕಾರ್ಯಸೂಚಿಗೆ, ಅಯೋಧ್ಯೆಗಲ್ಲ'

ಹುಬ್ಬಳ್ಳಿ, ಡಿ. 16– ವಾಜಪೇಯಿ ನೇತೃತ್ವದ ಕೇಂದ್ರ ಸರ್ಕಾರದ ಪ್ರಥಮ ಆದ್ಯತೆ ಮೈತ್ರಿ ಪಕ್ಷಗಳು ಒಪ್ಪಿದ ರಾಷ್ಟ್ರೀಯ ಕಾರ್ಯಸೂಚಿಯಲ್ಲಿನ ಅಭಿವೃದ್ಧಿ ಕಾರ್ಯಕ್ರಮಗಳ ಜಾರಿಯೇ ಹೊರತು, ಅಯೋಧ್ಯಾ ಸೇರಿದಂತೆ ಬಿಜೆಪಿಗೆ ಪ್ರಿಯವಾದ ಯಾವುದೇ ವಿವಾದಾಸ್ಪದ ವಿಷಯಕ್ಕಲ್ಲ ಎಂದು ಗ್ರಾಮೀಣಾಭಿವೃದ್ಧಿ ಸಚಿವ ವೆಂಕಯ್ಯ ನಾಯ್ಡು ಇಂದು ಇಲ್ಲಿ ಹೇಳಿದರು.

75 ವರ್ಷಗಳ ಹಿಂದೆ

ಭಾನುವಾರ, 17-12-1950

• ಅಮೆರಿಕದಲ್ಲಿ 'ವಿಶೇಷ ಪರಿಸ್ಥಿತಿ' ಘೋಷಣೆ

ವಾಷಿಂಗ್ಟನ್, ಡಿ. 16– ಅಮೆರಿಕದ ಸಮಗ್ರ ಆರ್ಥಿಕ ಹಾಗೂ ಕೈಗಾರಿಕಾ ಸಾಮರ್ಥ್ಯವನ್ನು ರಾಷ್ಟ್ರ ರಕ್ಷಣೆಗೆ ಬಳಸಿಕೊಳ್ಳುವ ಮಹದ್ಯೋಜನೆಗಳನ್ನು ಅಮೆರಿಕಾಧ್ಯಕ್ಷ ಟ್ರೂಮನ್ ನೆನ್ನೆ ರಾತ್ರಿ ರೇಡಿಯೊ ಮೂಲಕ ರಾಷ್ಟ್ರಕ್ಕೆಲ್ಲ ಘೋಷಿಸಿದರು.

ಈ ಕ್ರಮಗಳ ಅನ್ವಯಕ್ಕೆ ಅನುಕೂಲಪಡಿಸುವ ಸಲುವಾಗಿ ರಾಷ್ಟ್ರದಲ್ಲಿ ವಿಶೇಷ ಪರಿಸ್ಥಿತಿಯೆಂದು ಟ್ರೂಮನ್ ಘೋಷಿಸಿದರು. ವಿಶ್ವವನ್ನೇ ಕಮ್ಯೂನಿಸಂ ಕಬಳಿಸದಂತೆ ಹೋರಾಡಲು ರಾಷ್ಟ್ರವು ತನ್ನ ಶಕ್ತಿಯನ್ನು ಸಂಘಟಿಸಬೇಕೆಂದು ಅವರು ಅಮೆರಿಕಕ್ಕೆ ಕರೆಯಿತ್ತರು.

• ನಿಷ್ಠಾವಂತ ಸೇವಕ: ಸರದಾರರ ಬಗ್ಗೆ ಲಂಡನ್ ಪ್ರಶಂಸೆ

ಲಂಡನ್, ಡಿ. 16– ವಿಖ್ಯಾತ ಬ್ರಿಟಿಷ್ ವೃತ್ತ ಪತ್ರಿಕೆಗಳು ಇಂದು ದಿವಂಗತ ವಲ್ಲಭಭಾಯಿ ಪಟೇಲ್ ಬಗ್ಗೆ ಸಂಪಾದಕೀಯ ಮತ್ತು ಪ್ರಮುಖ ಲೇಖನಗಳನ್ನು ಪ್ರಕಟಿಸಿವೆ. ಸರ್ದಾರರ ಸಂಘಟನಾ ಚಾತುರ್ಯ, ದಿಟ್ಟತನಗಳನ್ನು ಹೊಗಳಿರುವ ಈ ಪತ್ರಿಕೆಗಳು, ಆತ ಭಾರತದ ಮಹಾತ್ರಯರಲ್ಲಿ ಒಬ್ಬರಾಗಿದ್ದರೆಂದು ಎತ್ತಿ ಸೂಚಿಸಿವೆ.

ರೂಪಾಯಿ ವ್ಯಥೆ, ಡಾಲರ್ ಕಥೆ

ವಿಶ್ಲೇಷಣೆ

ವೇಣುಗೋಪಾಲ್ ಟಿ.ಎಸ್.

ಹಿಂದೊಮ್ಮೆ ರೂಪಾಯಿ ಕುಸಿತವನ್ನು ಅಸ್ಥಿರತೆಯ ರೂಪದಲ್ಲಿ ವಿಶ್ಲೇಷಿಸಿದ್ದವರು, ಈಗಿನ ತೀವ್ರ ಕುಸಿತವನ್ನು 'ಒಳ್ಳೆಯ ಲಕ್ಷಣ'ದ ರೂಪದಲ್ಲಿ ಕಾಣುತ್ತಿದ್ದಾರೆ. ರೂಪಾಯಿ ಕುಸಿತವನ್ನು ರಾಜಕೀಯ ವಿದ್ಯಮಾನವನ್ನಾಗಿ ನೋಡುವುದರ ಜೊತೆಗೆ, ಆರ್ಥಿಕ ದೃಷ್ಟಿಕೋನದಿಂದಲೂ ನೋಡಿದಾಗಷ್ಟೇ ಡಾಲರ್ ಎದುರು ರೂಪಾಯಿ ಕುಸಿತದ ಅಸಲಿ ಕಾರಣಗಳನ್ನು ಕಂಡುಕೊಳ್ಳಲು ಸಾಧ್ಯ.

ರೂಪಾಯಿ ಮೌಲ್ಯ ಕುಸಿಯುತ್ತಿರುವುದು ಇಂದು ನಿನ್ನೆಯ ವಿದ್ಯಮಾನವಲ್ಲ. ಕಳೆದ ನಾಲ್ಕು ದಶಕಗಳಿಂದಲೂ ಡಾಲರ್ ಎದುರು ರೂಪಾಯಿ ಮೌಲ್ಯ ಕುಸಿಯುತ್ತಲೇ ಇದೆ.

1980ರಲ್ಲಿ ಒಂದು ಡಾಲರಿಗೆ 12.37 ರೂಪಾಯಿ ಇತ್ತು. 1991ರಲ್ಲಿ ಸರ್ಕಾರದ ಉದ್ದೇಶಪೂರ್ವಕ ಕ್ರಮದಿಂದ ಅದು 22.74 ರೂಪಾಯಿಯಾಯಿತು. ನಂತರ ಡಾಟ್‌ಕಾಮ್ ಗುಳ್ಳೆ, ಜಾಗತಿಕ ಹಣಕಾಸು ಬಿಕ್ಕಟ್ಟು, ಕೋವಿಡ್ ಮೊದಲಾದ ಸಂಕಷ್ಟಗಳು ಎದುರಾದಾಗ ಹಾಗೂ ಕೆಲವೊಮ್ಮೆ ರೂಪಾಯಿ ಅಪಮೌಲ್ಯದಂತಹ ಕ್ರಮಗಳನ್ನು ಸರ್ಕಾರ ತೆಗೆದುಕೊಂಡಾಗ, ರೂಪಾಯಿ ಮೌಲ್ಯ ಕುಸಿದಿತ್ತು. ಆದರೆ, ಆಗ ಕುಸಿಯುವ ದರ ಶೇ 3ರ ಆಸುಪಾಸಿನಲ್ಲಿತ್ತು. ಈಗ ಅದು ಶೇ 6ರಷ್ಟಾಗಿದೆ. ಪ್ರಸ್ತುತ, ಒಂದು ಡಾಲರಿಗೆ ಬರೋಬ್ಬರಿ 91 ರೂಪಾಯಿ ತೆರಬೇಕಾಗಿದೆ.

ಹಿಂದೆ ರೂಪಾಯಿ ಮೌಲ್ಯ ಕುಸಿಯುತ್ತಿದ್ದಾಗ ಡಾಲರ್ ಮೌಲ್ಯ ಜಾಗತಿಕವಾಗಿ ಹೆಚ್ಚುತ್ತಿತ್ತು. ಈಗ ಯುರೊ, ಪೌಂಡ್ ಇತ್ಯಾದಿ ಕರೆನ್ಸಿಗಳ ಎದುರು ಡಾಲರ್ ಕುಸಿಯುತ್ತಿದೆ. ಅಷ್ಟೇ ಅಲ್ಲ, ಇತರ ಅಭಿವೃದ್ಧಿಶೀಲ ರಾಷ್ಟ್ರಗಳಾದ ಮಲೇಷ್ಯಾ, ಫಿಲಿಪ್ಪೀನ್ಸ್ ಹಾಗೂ ಥಾಯ್ಲೆಂಡ್ ದೇಶಗಳ ಕರೆನ್ಸಿಯ ಮೌಲ್ಯ ಹೆಚ್ಚುತ್ತಿದೆ. ಆದರೆ, ಭಾರತದ ರೂಪಾಯಿ ಮಾತ್ರ ಕುಸಿಯುತ್ತಿದೆ. ರೂಪಾಯಿ ಏಷ್ಯಾದಲ್ಲೇ ಅತ್ಯಂತ ದುಸ್ಥಿತಿಯಲ್ಲಿರುವ ಕರೆನ್ಸಿ ಎನಿಸಿಕೊಂಡಿದೆ. ಈ ಎಲ್ಲಾ ಕಾರಣಗಳಿಂದಾಗಿ ರೂಪಾಯಿ ಕುಸಿತ ಆತಂಕವನ್ನು ಮೂಡಿಸಿದೆ.

ರೂಪಾಯಿ ಮೌಲ್ಯ ಲಾಗಾಯ್ತಿನಿಂದಲೂ ರಾಜಕೀಯವಾಗಿ ಸೂಕ್ಷ್ಮ ವಿಷಯ. ಕಾಂಗ್ರೆಸ್ ಆಡಳಿತದಲ್ಲಿ ರೂಪಾಯಿ ಮೌಲ್ಯ ಕುಸಿದಾಗ, ನರೇಂದ್ರ ಮೋದಿಯವರು ಕಾಂಗ್ರೆಸ್ ಪಕ್ಷವನ್ನು 'ದೆಹಲಿ ಸರ್ಕಾರ ಹಾಗೂ ರೂಪಾಯಿಯ ನಡುವೆ, ಯಾವುದರ ಮೌಲ್ಯ ಹೆಚ್ಚು ತೀವ್ರವಾಗಿ ಕುಸಿಯುತ್ತಿದೆ ಎಂಬ ಸ್ಪರ್ಧೆ ನಡೆಯುತ್ತಿರುವಂತೆ ಕಾಣುತ್ತಿದೆ' ಎಂದು ಲೇವಡಿ ಮಾಡಿದ್ದರು. ನಾವು ಅಧಿಕಾರಕ್ಕೆ ಬಂದರೆ ಮತ್ತೆ ನಲವತ್ತು ರೂಪಾಯಿಗೆ ಡಾಲರ್ ಸಿಗುವಂತೆ ಮಾಡುತ್ತೇವೆ ಎಂದಿದ್ದರು. ಈಗ ಅವರೇ ಆಡಳಿತದಲ್ಲಿದ್ದಾರೆ. ಆದರೆ ರೂಪಾಯಿ ಮೌಲ್ಯ ಆಗಿನದ್ದಕ್ಕಿಂತ ದುಪ್ಪಟ್ಟು ವೇಗದಲ್ಲಿ ಕುಸಿಯುತ್ತಿದೆ.

ಮೋದಿ ಅವರ ವಾದ ಈಗ ಬದಲಾಗಿದೆ; ರೂಪಾಯಿ ಕುಸಿತ ಅವರಿಗೆ ಹಾಗೂ ಅವರ ಪರಿವಾರಕ್ಕೆ ಒಳ್ಳೆಯ ಲಕ್ಷಣವಾಗಿ ಕಾಣುತ್ತಿದೆ! ಇದರಿಂದ ರಫ್ತಿಗೆ ಅನುಕೂಲವಾಗುತ್ತದೆ; ಅನಿವಾಸಿ ಭಾರತೀಯರು ಇಲ್ಲಿಗೆ ಕಳುಹಿಸುವ ಡಾಲರಿಗೆ ಹೆಚ್ಚಿನ ಕಿಮ್ಮತ್ತು ಸಿಗುತ್ತದೆ; ರೂಪಾಯಿ ಮೌಲ್ಯ ಕುಸಿಯುತ್ತಿಲ್ಲ, ಬದಲಿಗೆ ಡಾಲರ್ ಮೌಲ್ಯ ಹೆಚ್ಚುತ್ತಿದೆ; ರೂಪಾಯಿ ತನ್ನ ಸ್ವಾಭಾವಿಕ ಮಟ್ಟವನ್ನು ಕಂಡುಕೊಳ್ಳುತ್ತಿದೆ, ಆತಂಕಕ್ಕೆ ಕಾರಣವಿಲ್ಲ... ಇತ್ಯಾದಿ ಹೇಳಿಕೆಗಳನ್ನು ಕೇಳುತ್ತಿದ್ದೇವೆ. ಈ ರಾಜಕೀಯ ಕಸರತ್ತುಗಳನ್ನು ಬದಿಗಿಟ್ಟು ರೂಪಾಯಿ ಮೌಲ್ಯದ ಕುಸಿತವನ್ನು ಆರ್ಥಿಕ ದೃಷ್ಟಿಕೋನದಿಂದ ಗಮನಿಸುವುದು ಅವಶ್ಯಕ.

ರೂಪಾಯಿ ಮೌಲ್ಯ ಕುಸಿಯುವುದಕ್ಕೆ ಹಲವು ಕಾರಣಗಳಿವೆ. ಮೂಲತಃ ರೂಪಾಯಿ ಕೂಡ ಒಂದು ಸರಕು. ಬೇಡಿಕೆ ಹೆಚ್ಚಿದರೆ ರೂಪಾಯಿಯ ಬೆಲೆಯೂ ಹೆಚ್ಚುತ್ತದೆ, ಬೇಡಿಕೆ ಇಳಿದರೆ ಮೌಲ್ಯ ಕುಸಿಯುತ್ತದೆ. ಸರಕುಗಳನ್ನು ಆಮದು ಮಾಡಿಕೊಂಡಾಗ ಅದಕ್ಕೆ ಡಾಲರಿನಲ್ಲಿ ಪಾವತಿಸಬೇಕು. ರೂಪಾಯಿ ಕೊಟ್ಟು ಡಾಲರನ್ನು ಕೊಳ್ಳುತ್ತೇವೆ. ಡಾಲರಿಗೆ ಬೇಡಿಕೆ ಹೆಚ್ಚುತ್ತದೆ. ಡಾಲರ್ ಮೌಲ್ಯ ಹೆಚ್ಚುತ್ತದೆ, ರೂಪಾಯಿ ಮೌಲ್ಯ ಕುಸಿಯುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ ರಫ್ತು ಹೆಚ್ಚಾದರೆ ರೂಪಾಯಿಗೆ ಬೇಡಿಕೆ ಹೆಚ್ಚುತ್ತದೆ, ಅದರ ಮೌಲ್ಯ ಹೆಚ್ಚಾಗುತ್ತದೆ.

ನಾವು ರಫ್ತು ಮಾಡುತ್ತಿರುವುದಕ್ಕಿಂತ ಹೆಚ್ಚು ಆಮದು ಮಾಡಿಕೊಳ್ಳುತ್ತಿರುವುದರಿಂದ, ಚಾಲ್ತಿ ಖಾತೆಯಲ್ಲಿನ ಕೊರತೆ ಹೆಚ್ಚುತ್ತಿದೆ. ಕಳೆದ ವರ್ಷ ರಫ್ತಿಗಿಂತ 41.7 ಶತಕೋಟಿ ಡಾಲರ್‌ನಷ್ಟು ಹೆಚ್ಚು ಆಮದು ಮಾಡಿಕೊಂಡಿದ್ದೇವೆ. ಈ ವರ್ಷದ ಮೊದಲ ತ್ರೈಮಾಸಿಕದಲ್ಲಿ ಆಮದು ಶೇ 48.1ರಷ್ಟು ಹೆಚ್ಚಾಗಿದ್ದು, ಚಾಲ್ತಿ ಖಾತೆಯ ಕೊರತೆ 9900 ಕೋಟಿ ಡಾಲರ್ ತಲಪಿದೆ. ಕೊರತೆ ಮೂರು ಪಟ್ಟು ಹೆಚ್ಚಿದೆ.

ನಾವು ಪೆಟ್ರೋಲ್, ಕಲ್ಲಿದ್ದಲು, ಚಿನ್ನ, ಬೆಳ್ಳಿ, ಹೀಗೆ ಹಲವು ಪದಾರ್ಥಗಳನ್ನು ಆಮದು ಮಾಡಿಕೊಳ್ಳುತ್ತಿದ್ದೇವೆ. ನಮ್ಮ ಅವಶ್ಯಕತೆಗೆ ಬೇಕಾದಷ್ಟು ಕಲ್ಲಿದ್ದಲನ್ನು ಉತ್ಪಾದಿಸುವುದಕ್ಕೆ ಸಾಧ್ಯವಿದ್ದರೂ, ಹೆಚ್ಚಿನ ಬೆಲೆ ತೆತ್ತು ಆಮದು ಮಾಡಿಕೊಳ್ಳುತ್ತಿದ್ದೇವೆ. ಚಿನ್ನ ಹಾಗೂ ಬೆಳ್ಳಿಯ ಆಮದು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಚಿನ್ನದ ಆಮದು ದುಪ್ಪಟ್ಟಾಗಿದೆ. ಜನರಿಗೆ ಚಿನ್ನದಲ್ಲಿ ಹಣ ತೊಡಗಿಸುವುದು ಹೆಚ್ಚು ಸುರಕ್ಷಿತವೆನಿಸಿದೆ. ಸ್ಟಾಕ್ ಮಾರುಕಟ್ಟೆಯಿಂದ ಹಣ ತೆಗೆದು ಚಿನ್ನದಲ್ಲಿ ಹೂಡುತ್ತಿದ್ದಾರೆ. ವ್ಯಾಪಾರದ ಕೊರತೆ ಹೆಚ್ಚಿದಷ್ಟೂ ಡಾಲರಿಗೆ ಬೇಡಿಕೆ ಹೆಚ್ಚುತ್ತದೆ, ರೂಪಾಯಿ ಮೌಲ್ಯ ಕುಸಿಯುತ್ತದೆ.

ವಿದೇಶಿ ಬಂಡವಾಳ ಸಾಕಷ್ಟು ಪ್ರಮಾಣದಲ್ಲಿ ಹರಿದು ಬರುತ್ತಿದ್ದರೆ ಚಾಲ್ತಿ ಖಾತೆಯ ಕೊರತೆಯನ್ನು ನಿಭಾಯಿಸಬಹುದಿತ್ತು. 2008ರ ನಂತರ ಭಾರತದಲ್ಲಿ ವಿದೇಶಿ ಬಂಡವಾಳದ ಹೂಡಿಕೆ ಹೆಚ್ಚಿತ್ತು. ಅಂದು ಅಮೆರಿಕದಂತಹ ದೇಶಗಳು ಬಡ್ಡಿದರವನ್ನು ಇಳಿಸಿದ್ದರಿಂದ ಅಗ್ಗದಲ್ಲಿ ಸಿಕ್ಕ ಡಾಲರನ್ನು ಹೂಡಿಕೆದಾರರು ಭಾರತದಂತಹ ದೇಶಗಳಲ್ಲಿ ಹೂಡಿದ್ದರು. ಆದರೆ, ಇತ್ತೀಚೆಗೆ ಹಣದುಬ್ಬರ ನಿಯಂತ್ರಿಸಲು ಅಮೆರಿಕದ ಫೆಡರಲ್ ಬ್ಯಾಂಕ್ ಬಡ್ಡಿದರವನ್ನು ಹೆಚ್ಚಿಸಿದೆ. ಅಮೆರಿಕದಲ್ಲೇ ಹೆಚ್ಚಿನ ಬಡ್ಡಿ ಸಿಗುತ್ತಿರುವುದರಿಂದ, ವಿದೇಶಿ ಹೂಡಿಕೆದಾರರು ಭಾರತದಿಂದ ಬಂಡವಾಳವನ್ನು ಹಿಂತೆಗೆದುಕೊಂಡು ಅಮೆರಿಕದಲ್ಲಿ ಹೂಡುತ್ತಿದ್ದಾರೆ. ಈ ವರ್ಷ ಸುಮಾರು 18 ಶತಕೋಟಿ ಡಾಲರ್‌ನಷ್ಟು ಹಣ ಹೊರಗೆ ಹೋಗಿದೆ. ಚೀನಾದ ಬದಲಿಗೆ ಭಾರತದಲ್ಲಿ ಹೂಡಿಕೆಯಾಗುತ್ತದೆ ಎನ್ನುವ ನಿರೀಕ್ಷೆಯಿತ್ತು. ಅದು ಹುಸಿಯಾಗಿದೆ. ಹೂಡಿಕೆ ಈಗ ಚೀನಾದತ್ತ ಸಾಗುತ್ತಿದೆ. ಹಿಂದೆಯೂ ರೂಪಾಯಿ ಕುಸಿದಾಗಲೆಲ್ಲ ವಿದೇಶಿ ಬಂಡವಾಳದ ಹೊರಹರಿವು ಹೆಚ್ಚಾಗಿತ್ತು. ಹಾಗಾಗಿ ಬಂಡವಾಳದ ಹೊರಹರಿವು ರೂಪಾಯಿ ಕುಸಿಯುವುದಕ್ಕೆ ಒಂದು ಮುಖ್ಯ ಕಾರಣ.

ಟ್ರಂಪ್ ಆರಂಭಿಸಿರುವ ಸುಂಕ ಸಮರದಿಂದ ಭಾರತದ ಸರಕುಗಳು ಅಮೆರಿಕದ ಗ್ರಾಹಕರಿಗೆ ದುಬಾರಿಯಾಗಲಿವೆ. ಇದರಿಂದ ಬೇಡಿಕೆ ಕುಸಿದು, ರಫ್ತುದಾರರ ಡಾಲರ್ ವರಮಾನ ಕಡಿಮೆ ಆಗುತ್ತಿದೆ. 2025ರ ಸೆಪ್ಟೆಂಬರ್‌ಗೆ ಹೋಲಿಸಿದರೆ ಅಕ್ಟೋಬರ್‌ನಲ್ಲಿ ಅಮೆರಿಕಕ್ಕೆ ಭಾರತದ ರಫ್ತು ಶೇ 12ರಷ್ಟು ಕಡಿಮೆಯಾಗಿದೆ. ಆದರೆ, ಬೇರೆ ದೇಶಗಳಿಗೆ ಹೋಲಿಸಿದರೆ ರಫ್ತಿಗಾಗಿ ಭಾರತ ಅಮೆರಿಕವನ್ನು ಕಡಿಮೆ ಅವಲಂಬಿಸಿದೆ. ಹಾಗಾಗಿ ರೂಪಾಯಿಯ ತೀವ್ರ ಕುಸಿತಕ್ಕೆ ಇದೊಂದೇ ಕಾರಣ ಎನ್ನಲಾಗದು.

ಕೆಲವರ ದೃಷ್ಟಿಯಲ್ಲಿ ಅಮೆರಿಕದೊಂದಿಗೆ ಒಪ್ಪಂದ ಸಾಧ್ಯವಾಗದೇ ಇರುವುದು ರೂಪಾಯಿ ಮೌಲ್ಯದ ಕುಸಿತಕ್ಕೆ ಕಾರಣ. ಬಹುತೇಕ ದೇಶಗಳು ಒಪ್ಪಂದ ಮಾಡಿಕೊಂಡಿವೆ. ಭಾರತಕ್ಕೆ ಮಾತ್ರ ಸಾಧ್ಯವಾಗಿಲ್ಲ. ಅನಿಶ್ಚಿತ ಪರಿಸ್ಥಿತಿ ಆರ್ಥಿಕತೆಗೆ ಒಳ್ಳೆಯದಲ್ಲ. ಇವೆಲ್ಲ ನಿಜ. ಆದರೆ, ಭಾರತದ ಹಿತಾಸಕ್ತಿಯನ್ನು ಬದಿಗೊತ್ತಿ ಒಪ್ಪಂದ ಮಾಡಿಕೊಳ್ಳುವುದು ಒಳ್ಳೆಯದಲ್ಲ.

'ಜನರ ನಿರೀಕ್ಷೆ'ಯೂ ಕುಸಿತದ ಪ್ರಕ್ರಿಯೆಯನ್ನು ತೀವ್ರಗೊಳಿಸುತ್ತದೆ. ರೂಪಾಯಿ ಮೌಲ್ಯ ಕುಸಿಯುತ್ತಿದ್ದಾಗ ರಫ್ತುದಾರರು, ಇನ್ನೂ ಕುಸಿಯಲಿ, ಹೆಚ್ಚು ರೂಪಾಯಿ ಸಿಗುತ್ತದೆ ಎಂಬ ನಿರೀಕ್ಷೆಯಲ್ಲಿ ರಫ್ತು ಮಾಡುವ ತೀರ್ಮಾನವನ್ನು ಮುಂದೂಡುತ್ತಾರೆ. ಆದರೆ ಆಮದುದಾರರು, ಇನ್ನೂ ಕುಸಿದರೆ ಹೆಚ್ಚು ಹಣ ಕೊಡಬೇಕಾಗುತ್ತದೆ ಎಂಬ ಆತಂಕದಲ್ಲಿ ತಕ್ಷಣವೇ ಆಮದು ಪ್ರಕ್ರಿಯೆಯನ್ನು ತ್ವರಿತಗೊಳಿಸುತ್ತಾರೆ. ಇದರಿಂದ ಡಾಲರಿಗೆ ಬೇಡಿಕೆ ಹೆಚ್ಚಿ ರೂಪಾಯಿ ಇನ್ನಷ್ಟು ಕುಸಿಯುತ್ತದೆ.

ರೂಪಾಯಿ ಕುಸಿತ ಮಿಶ್ರ ಪರಿಣಾಮ ಹೊಂದಿದೆ. ರಫ್ತುದಾರರಿಗೆ, ಅನಿವಾಸಿ ಭಾರತೀಯರಿಗೆ ಇದು ಲಾಭದಾಯಕ. ವಿದೇಶದಿಂದ ಭಾರತಕ್ಕೆ ಬರುವ ಹಣ ಹೆಚ್ಚಾಗಬಹುದು. ಆದರೆ, ಆಮದುದಾರರಿಗೆ ಮತ್ತು ಜನಸಾಮಾನ್ಯರಿಗೆ ಇದು ಹೊರೆಯಾಗುತ್ತದೆ. ಇಂಧನವನ್ನು ಭಾರತ ಬಹುತೇಕ ಆಮದು ಮಾಡಿಕೊಳ್ಳುತ್ತಿರುವುದರಿಂದ ಪೆಟ್ರೋಲ್, ಡೀಸೆಲ್ ದುಬಾರಿಯಾಗುತ್ತದೆ. ಇದರಿಂದ ತರಕಾರಿ, ಹಾಲು, ಗೊಬ್ಬರ ಸೇರಿದಂತೆ ನಿತ್ಯೋಪಯೋಗಿ ವಸ್ತುಗಳ ಬೆಲೆಯೇರುತ್ತದೆ. ವಿದೇಶದಲ್ಲಿ ವ್ಯಾಸಂಗ ಮಾಡುವುದು ದುಬಾರಿಯಾಗುತ್ತದೆ.

ರೂಪಾಯಿ ಮೌಲ್ಯ ಕುಸಿದಾಗಲೆಲ್ಲ ರಿಸರ್ವ್ ಬ್ಯಾಂಕ್ ಡಾಲರನ್ನು ಮಾರುಕಟ್ಟೆಯಲ್ಲಿ ಮಾರಿ ರೂಪಾಯಿ ಮೌಲ್ಯದಲ್ಲಿ ಸ್ಥಿರತೆಯನ್ನು ಕಾಪಾಡಿಕೊಳ್ಳಲು ಪ್ರಯತ್ನಿಸುತ್ತಿತ್ತು. ಇತ್ತೀಚೆಗೆ ಆರ್‌ಬಿಐ ತನ್ನ ನಿಲುವನ್ನು ಬದಲಿಸಿಕೊಂಡಂತೆ ತೋರುತ್ತದೆ. ರೂಪಾಯಿ ಮೌಲ್ಯವನ್ನು ಕಾಪಾಡಿಕೊಳ್ಳುವ ಬದಲು, ಅದಕ್ಕೆ ತನ್ನದೇ ಆದ 'ಸಹಜ ಮಟ್ಟ'ವನ್ನು ಕಂಡುಕೊಳ್ಳಲು ಬಿಡಲಾಗಿದೆ. ರೂಪಾಯಿ ಕುಸಿದರೆ ನಮ್ಮ ರಫ್ತು ಅಗ್ಗವಾಗಿ, ಟ್ರಂಪ್ ಸುಂಕದ ಹೊರೆಯನ್ನು ಸರಿತೂಗಿಸಿಕೊಳ್ಳುವುದಕ್ಕೆ ಅನುಕೂಲವಾಗಬಹುದೆಂಬ ಲೆಕ್ಕಾಚಾರವೂ ಇದರ ಹಿಂದಿರಬಹುದು. ಅಥವಾ ವಿದೇಶಿ ವಿನಿಮಯ ಮೀಸಲು ಕಮ್ಮಿಯಾಗಿ ತೊಂದರೆಯಾಗಬಹುದು ಅನ್ನುವ ಆತಂಕವೂ ಇರಬಹುದು.

ಡಾಲರ್ ಮಾರಿ ರೂಪಾಯಿ ಕುಸಿತ ತಡೆಯುವುದು ತಾತ್ಕಾಲಿಕ ಪರಿಹಾರವಷ್ಟೇ. ಅನವಶ್ಯಕ ಆಮದುಗಳಿಗೆ ಕಡಿವಾಣ ಹಾಕುವುದು, ರಫ್ತು ಮಾರುಕಟ್ಟೆಯನ್ನು ವೈವಿಧ್ಯಮಯಗೊಳಿಸುವುದು ಮತ್ತು ದೇಶೀಯ ಬೇಡಿಕೆಯನ್ನು ಹೆಚ್ಚಿಸುವುದು ದೀರ್ಘಕಾಲೀನ ಪರಿಹಾರಗಳಾಗಿವೆ. ರೂಪಾಯಿ ಮೌಲ್ಯವನ್ನು ಹಿಂದಿನ ಮಟ್ಟಕ್ಕೆ ಕೊಂಡೊಯ್ಯುವುದು ಕಷ್ಟವಾಗಬಹುದು. ಆದರೆ, ಇನ್ನಷ್ಟು ಕುಸಿಯುವುದನ್ನು ತಪ್ಪಿಸಬಹುದು. ಲಭ್ಯವಿರುವ ಸಂಪನ್ಮೂಲ ಮತ್ತು ಮಾನವಶಕ್ತಿ ಬಳಸಿಕೊಂಡು, ಬಹುಸಂಖ್ಯಾತರ ಏಳಿಗೆ ಸಾಧ್ಯವಾಗುವ ಸುಭದ್ರ ಆರ್ಥಿಕತೆಯನ್ನು ಕಟ್ಟುವುದಕ್ಕೆ ಸರ್ಕಾರ ಜರೂರಾಗಿ ಗಮನಕೊಡಬೇಕಾಗಿದೆ.

ವಾಚಕರ ವಾಣಿ

ಅನುದಾನ ಕಡಿತ; ಒಕ್ಕೂಟ ತತ್ತ್ವಕ್ಕೆ ಹಿನ್ನಡೆ

ಕೇಂದ್ರ ಸರ್ಕಾರ 'ಮನರೇಗಾ' ಯೋಜನೆಯ ಹೆಸರನ್ನು ಬದಲಾವಣೆ ಮಾಡುವುದಾದರೆ ಮಾಡಲಿ. ಆದರೆ ಅದರ ಅನುದಾನದ ಶೇ 40ರಷ್ಟನ್ನು ರಾಜ್ಯ ಸರ್ಕಾರಗಳ ಮೇಲೆ ಹೇರುತ್ತಿರುವುದು ಒಕ್ಕೂಟ ತತ್ತ್ವಕ್ಕೆ ಬಿದ್ದ ದೊಡ್ಡ ಪೆಟ್ಟು. ತೀವ್ರತರನಾದ ವಿತ್ತೀಯ ಬಿಕ್ಕಟ್ಟನ್ನು ಎದುರಿಸುತ್ತಿರುವ ಅನೇಕ ರಾಜ್ಯಗಳ ಹಣಕಾಸು ಸ್ಥಿತಿಯು ಇದರಿಂದ ಬಿಗಡಾಯಿಸುತ್ತದೆ. ಎನ್‌ಡಿಎ ಸರ್ಕಾರವು 2014ರಿಂದಲೂ 'ಮನರೇಗಾ'ದ ಬಗ್ಗೆ ಅಸಹಕಾರದ ಧೋರಣೆ ತಳೆಯುತ್ತಾ ಬಂದಿದೆ ಮತ್ತು ಅನುದಾನವನ್ನು ವರ್ಷದಿಂದ ವರ್ಷಕ್ಕೆ ಕಡಿತ ಮಾಡುತ್ತಾ ಬರುತ್ತಿದೆ. ಇದೀಗ ಅದನ್ನು ಅಪ್ರಸ್ತುತಗೊಳಿಸುವ ಕೆಲಸವನ್ನು ಮಾಡುತ್ತಿದೆ. ಒಕ್ಕೂಟ ತತ್ತ್ವಕ್ಕೆ ಮತ್ತು ಗ್ರಾಮೀಣ ಅಸಂಘಟಿತ ಕೂಲಿಕಾರರ ಹಿತಾಸಕ್ತಿಗೆ ವಿರುದ್ಧವಾದ ಕೇಂದ್ರ ಸರ್ಕಾರದ ಕ್ರಮವನ್ನು ತೀವ್ರವಾಗಿ ವಿರೋಧಿಸಬೇಕಾಗಿದೆ.

ಟಿ.ಆರ್. ಚಂದ್ರಶೇಖರ, ಬೆಂಗಳೂರು

ಕನ್ನಡ ಸಿನಿಮಾ: ಶೀರ್ಷಿಕೆಗಳಿಗೆ ಬರವೆ?

'ಕುಡುಕ ನನ್ಮಕ್ಳು' ಹೆಸರಿನ ಕನ್ನಡ ಸಿನಿಮಾ ಸೆಟ್ಟೇರಿದ ಬಗ್ಗೆ ವರದಿಯಾಗಿದೆ (ಪ್ರ.ವಾ., ಡಿ. 16). ಯಾವುದೇ ಒಂದು ಊರಿನ, ವ್ಯಕ್ತಿಯ, ಪುಸ್ತಕದ ಹಾಗೂ ಕಟ್ಟಡದ ಹೆಸರು ಕೇಳಲು ಹಿತವಾಗಿದ್ದರೆ, ಅದರ ಬಗ್ಗೆ ಅಕ್ಕರೆ ಹುಟ್ಟೀತು. ಕಿವಿಯಲ್ಲಿ ಕೇಳಿಸಿಕೊಳ್ಳುವುದಕ್ಕೆ ಮತ್ತು ಬೇರೆಯವರಿಗೆ ಹೇಳುವುದಕ್ಕೆ ಮುಜುಗರ ಆಗುವಂಥ ಹೆಸರನ್ನೋ, ಶೀರ್ಷಿಕೆಯನ್ನೋ ಇಟ್ಟರೆ, ಆ ಕಲಾಕೃತಿಯ ಬಗ್ಗೆ ಸದಭಿಪ್ರಾಯ ಮೂಡುವುದಾದರೂ ಹೇಗೆ?

ಇತ್ತೀಚೆಗೆ ಕನ್ನಡ ಸಿನಿಮಾಗಳಿಗೆ ಇಂಗ್ಲಿಷ್ ಶೀರ್ಷಿಕೆ ಇಡುವುದು ಖಯಾಲಿಯಾಗಿದೆ. ಕ್ಲಾಸ್ ಆಫ್ ಮೈಸೂರ್, ಫಸ್ಟ್ ಸ್ಯಾಲರಿ, ಡ್ರ್ಯಾಗನ್, ದಿ ಟಾಸ್ಕ್, ಮಾರ್ಕ್, ಐ ಆಮ್ ಗಾಡ್, ಫ್ಲರ್ಟ್, ರಿವಾಲ್ವರ್ ರೀಟಾ, ಡೆವಿಲ್, ಗ್ರೀನ್, ರೌಡಿ ಬಾಯ್ – ಹೀಗೆ ಹತ್ತಾರು ಸಿನಿಮಾಗಳ ಹೆಸರನ್ನು ಹೇಳಬಹುದು. ಅಲ್ಲೊಂದು ಇಲ್ಲೊಂದು ಕನ್ನಡ ಹೆಸರಿನ ಸಿನಿಮಾಗಳೂ ಬರುತ್ತಿವೆಯಾದರೂ ಅವುಗಳ ಹೆಸರು ಗಟ್ಟಿಯಾಗಿ ಹೇಳುವುದಕ್ಕೆ ಹಿಂಜರಿಕೆಯಾಗುತ್ತದೆ. ಕನ್ನಡದಲ್ಲಿ ಸೊಗಸಾದ ಶೀರ್ಷಿಕೆಗಳಿಗೆ ಬರವಿಲ್ಲ ಎಂಬುದು ಹಳೆ ಕನ್ನಡ ಸಿನಿಮಾಗಳ ಪಟ್ಟಿಯನ್ನು ನೋಡಿದ ಯಾರಿಗಾದರೂ ವೇದ್ಯವಾಗದಿರದು.

ಸಿ. ಚಿಕ್ಕತಿಮ್ಮಯ್ಯ, ಹಂದನಕೆರೆ

ಗಾಂಧಿ ತತ್ತ್ವ: ಮೂಲೆಗುಂಪು ತಂತ್ರ?

'ಮನರೇಗಾ' ಹೆಸರು ಬದಲಾವಣೆ ಮಾಡುವ ಕೇಂದ್ರ ಸರ್ಕಾರದ ಪ್ರಯತ್ನದ ಬಗೆಗಿನ ಸಂಪಾದಕೀಯ (ಪ್ರ.ವಾ., ಡಿ. 16) ಅರ್ಥಪೂರ್ಣವಾಗಿದೆ. ಯೋಜನೆಯಿಂದ ಗಾಂಧೀಜಿ ಹೆಸರನ್ನು ತೆಗೆಯುವ ಪ್ರಯತ್ನ ಆತಂಕಕಾರಿ ನಡವಳಿಕೆ. ಇದು ಗಾಂಧೀಜಿಯವರ ತತ್ತ್ವ ಸಿದ್ಧಾಂತಗಳನ್ನು ಮೂಲೆಗುಂಪು ಮಾಡುವ ಹುನ್ನಾರವೆ? ವಿದೇಶಗಳು ಗಾಂಧೀಜಿಯವರ ತತ್ತ್ವ ಸಿದ್ಧಾಂತಗಳನ್ನು ಒಪ್ಪಿರುವಾಗ, ನಮ್ಮ ಸರ್ಕಾರ ಅವರನ್ನು ನೇಪಥ್ಯಕ್ಕೆ ಸರಿಸಲು ಪ್ರಯತ್ನ ಮಾಡುತ್ತಿರುವುದು ಅಕ್ಷಮ್ಯ.

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮುತ್ತೂರು

ಮೆಸ್ಸಿ ಬಂದಾಯ್ತು... ಮಸಿ ತೊಳೆದಾಯ್ತು!

ದಾವಣಗೆರೆಯ ಗುಂಡಿ ವೃತ್ತದಲ್ಲಿ ಫುಟ್‌ಬಾಲ್ ಪ್ರತಿಕೃತಿಯನ್ನು ಇಡಲಾಗಿದೆ. ನಾನು ಕಂಡಂತೆ ದಾವಣಗೆರೆಯ ರಾಜಕೀಯ ಬಣ್ಣ ಬದಲಾದಂತೆ ಫುಟ್‌ಬಾಲ್ ಪ್ರತಿಕೃತಿಯ ಬಣ್ಣವೂ ಆಗಾಗ ಬದಲಾವಣೆ ಆಗುತ್ತಿದೆ. ಕಳೆದ ನಾಲ್ಕೈದು ವರ್ಷಗಳಿಂದ ವಾಹನಗಳ ಸಂಚಾರದಿಂದಾಗಿ ಕಪ್ಪು ಮಸಿ ಚೆಂಡಿನ ಪ್ರತಿಕೃತಿಯ ಮೇಲೆ ಅಲ್ಲಲ್ಲಿ ಕೂತು, ಚೆಂಡು ವಿರೂಪಗೊಂಡಿತ್ತು. ವಿಶ್ವದ ಖ್ಯಾತ ಫುಟ್‌ಬಾಲ್ ಆಟಗಾರ ಅರ್ಜೆಂಟೀನಾದ ಲಯೊನೆಲ್ ಮೆಸ್ಸಿ ಭಾರತದ ಪ್ರವಾಸಕ್ಕೆ ಬರುತ್ತಿದ್ದಂತೆ, ಫುಟ್‌ಬಾಲ್ ಭಾಗ್ಯವೂ ಬದಲಾಗಿದೆ; ಮಸಿ ತೊಳೆದುಕೊಂಡು ಆಕರ್ಷಕವಾಗಿದೆ. ಮೆಸ್ಸಿ... ಮೆಸ್ಸಿ... ಬಂದಾಯ್ತು... ನಮ್ಮೂರ ಫುಟ್ಬಾಲ್ ಮಸಿ ಶುಭ್ರವಾಯ್ತು!

ರಘುನಾಥರಾವ್ ತಾಪ್ಸೆ, ದಾವಣಗೆರೆ

ನೇಪಥ್ಯಕ್ಕೆ ಮಹಾತ್ಮ: ವಿಷಾದದ ಸಂಗತಿ

'ರಾಷ್ಟ್ರಕ್ಕಾಗಿ ಹುತಾತ್ಮರಾದವರಿಗೆ ಉಳಿಗಾಲವಿಲ್ಲ' ಎನ್ನುವುದು 'ಮನರೇಗಾ' ಯೋಜನೆ ಸಂದರ್ಭದಲ್ಲೂ ನಿಜವಾಗಿದೆ. 'ವಿಬಿ–ಜಿ ರಾಮ್ ಜಿ' ಯೋಜನೆ ಮೂಲಕ ಮಹಾತ್ಮಾರನ್ನು ಪಕ್ಕಕ್ಕೆ ಸರಿಸಲಾಗುತ್ತಿದೆ. ಇದು ಅತ್ಯಂತ ದುರದೃಷ್ಟಕರ ಹಾಗೂ ನೋವಿನ ಸಂಗತಿ.

ಪುಟ್ಟಮಾದಯ್ಯ ಎಚ್.ಎಂ., ಮೈಸೂರು

ಸಾಮಾನ್ಯ ಪ್ರಯಾಣಿಕರ ಲೆಕ್ಕಿಸೋರಾರು?

ವಾಯುಯಾನ ಕ್ಷೇತ್ರದಲ್ಲಿ ಇಂಡಿಗೋ ವಿಮಾನ ಸಂಸ್ಥೆ ಉಂಟುಮಾಡಿದ ಬಿಕ್ಕಟ್ಟು ಇನ್ನೂ ಪೂರ್ಣವಾಗಿ ಬಗೆಹರಿದಂತಿಲ್ಲ. ವಿಮಾನ ನಿಲ್ದಾಣಗಳಲ್ಲಿ ದೇಶದ ಕೆಲವೇ ಕೆಲವರು ಕಾಯುವಂತಾದುದು, ಮೂಲ ಸೌಕರ್ಯಗಳ ಕೊರತೆಯಿಂದ ಒದ್ದಾಡಿದ್ದು, ದೇಶದ ಗಮನಸೆಳೆವ ಸುದ್ದಿಯಾಯಿತು. ಆದರೆ, ಅಸಂಖ್ಯಾತ ಜನಸಾಮಾನ್ಯರು ಪ್ರತಿ ದಿನವೂ ತಡವಾಗಿ ಬರುವ ರೈಲು–ಬಸ್ಸುಗಳಲ್ಲಿ ಜಾಗ ಸಿಗದೆ ನರಳುತ್ತಾ ಪ್ರಯಾಣಿಸುತ್ತಲೇ ಇದ್ದಾರೆ. ಇಂತಹ ಬಡ ವರ್ಗದ ಜನರ ಬಗ್ಗೆ ಯಾಕೆ ಚರ್ಚೆಯಾಗುವುದಿಲ್ಲ?

ನಾಗಾರ್ಜುನ ಹೊಸಮನಿ, ಕಲಬುರಗಿ.

ಭಾಷೆ–ಚಿಂತನೆ ದೂರವಾದರೆ ಕತ್ತಲೇ ಗತಿ

ಪುರುಷೋತ್ತಮ ಬಿಳಿಮಲೆ ಅವರ 'ಸಾವಿನತ್ತ ಭಾಷೆ–ತತ್ತ್ವಶಾಸ್ತ್ರ?' ವಿಶ್ಲೇಷಣೆ (ಪ್ರ.ವಾ., ಡಿ. 16) ಚಿಂತನಾರ್ಹ. ಭಾಷೆ ಮತ್ತು ಚಿಂತನೆಯನ್ನು ಕಳೆದುಕೊಂಡರೆ ನಾವು ಮನುಷ್ಯರಾಗಿ ಉಳಿಯುವುದಾದರೂ ಹೇಗೆ? ಯಾಂತ್ರಿಕ ಜೀವನ ಯಾರಿಗೆ ಸಹನೀಯ? ಈ ಕುರಿತು ಜನ ಗಂಭೀರವಾಗಿ ಯೋಚಿಸಬೇಕಿದೆ. ಈ ದಿಸೆಯಲ್ಲಿ ನಮ್ಮ ಶಾಲೆ, ಕಾಲೇಜು, ವಿಶ್ವವಿದ್ಯಾಲಯಗಳು ಕಾರ್ಯ ತತ್ಪರವಾಗಬಲ್ಲವೆ?

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ

ಚುರುಮುರಿ

ತ್ಯಾಜ್ಯ ವ್ಯಾಜ್ಯ

• ಮಣ್ಣೆ ರಾಜು

ಸಾರ್ವಜನಿಕ ಸ್ಥಳದಲ್ಲಿ ಕಸ ಹಾಕುವವರ ಮನೆ ಬಾಗಿಲಲ್ಲಿ ಕಸ ಸುರಿಯುವ ಕಸದ ಹಬ್ಬ ಮಾಡಿದರೂ ತ್ಯಾಜ್ಯ ವ್ಯಾಜ್ಯಗಳು ನಿಂತಿಲ್ಲ. 'ರಾಜ್ಯಭಾರ ಮಾಡುವುದಕ್ಕಿಂಥ ತ್ಯಾಜ್ಯಭಾರ ಬಲು ಕಷ್ಟ' ಎಂಬುದು ಕಾರ್ಪೊರೇಷನ್ ಅಧಿಕಾರಿಯ ಅನುಭವ. ಅವರು, ಮತ್ತೊಂದು ತ್ಯಾಜ್ಯ ವ್ಯಾಜ್ಯ ಬಗೆಹರಿಸಲು ಬಂದಿದ್ದರು.

'ಸಾರ್, ಎದುರು ಮನೆಯವಳು ತನ್ನ ಮನೆ ಕಸವನ್ನು ನಿತ್ಯ ಖಾಲಿ ಸೈಟಿಗೆ ಹಾಕಿದ್ದಾಳೆ. ಕೇಳಿದರೆ ನನ್ನ ಮೇಲೇ ಕಸ ಸುರಿದು ಜಗಳಕ್ಕೆ ಬಂದಳು' ಎಂದು ನೈಟಿ ತುಂಬಾ ಕಸ ಅಂಟಿಕೊಂಡಿದ್ದ ಸುಮಿ ದೂರಿದಳು.

'ಸಾರ್ವಜನಿಕ ಸ್ಥಳದಲ್ಲಿ ಕಸ ಸುರಿಯಬಾರದು. ಮನೆಯ ಒಣ, ಹಸಿ ಕಸ ವಿಂಗಡಿಸಿ ಬಾಗಿಲಿಗೆ ಬರುವ ಕಾರ್ಪೊರೇಷನ್ ಗಾಡಿಗೆ ಕೊಡಬೇಕು' ಎಂದರು ಅಧಿಕಾರಿ.

'ಇವಳು ಮಗುವನ್ನು ರಸ್ತೆಬದಿ ಕೂರಿಸಿ ಗಲೀಜು ಮಾಡಿಸುತ್ತಾಳೆ. ಇವಳಿಗೂ ದಂಡ ವಿಧಿಸಿ' ಸುಮಿ ವಿರುದ್ಧ ವನಜ ದೂರಿದಳು.

'ಟಾಯ್ಲೆಟ್‌ನಲ್ಲಿ ಕೂರುವುದಿಲ್ಲ ಎಂದು ಪಾಪು ಹಟ ಮಾಡುತ್ತೆ, ಇನ್ನೇನು ಮಾಡಲಿ ಸಾರ್? ಯಾವ ಬೀದಿನಾಯಿಯೂ ಪಾಪು ಕಸವನ್ನು ಮೂಸಿಯೂ ನೋಡುವುದಿಲ್ಲ' ಸುಮಿ ಇರೋ ವಿಚಾರ ಹೇಳಿದಳು.

'ಸಾರ್, ಇವರು ದಿನಾ ನಾಯಿಯನ್ನು ವಾಕಿಂಗ್ ಕರೆತಂದು ರಸ್ತೆಯಲ್ಲಿ ಗಲೀಜು ಮಾಡಿಸುತ್ತಾರೆ. ಕೇಳಿದರೆ ನಮ್ಮ ಮೇಲೇ ನಾಯಿ ಛೂ ಬಿಡ್ತಾರೆ' ಗೋಪಾಲಿ ಹೇಳಿದ.

'ಮತ್ತೇನ್ರೀ ಮಾಡ್ಬೇಕು? ನಾಯಿಗಳಿಗೆ ಸರ್ಕಾರ ಸಾರ್ವಜನಿಕ ಶೌಚಾಲಯ ಕಟ್ಟಿಸಿಲ್ಲವಲ್ಲ' ಸೀನಪ್ಪ ರೇಗಿದ.

'ಅದೆಲ್ಲಾ ಗೊತ್ತಿಲ್ಲ ಕಣ್ರೀ, ಸಾರ್ವಜನಿಕ ಸ್ಥಳಗಳಲ್ಲಿ ಕಸ ಹಾಕಿದರೆ, ಗಲೀಜು ಮಾಡಿದರೆ ಕ್ರಮ ತೆಗೆದುಕೊಳ್ತೀವಿ' ಅಧಿಕಾರಿ ಖಡಕ್ಕಾಗಿ ಹೇಳಿದರು.

'ಸಾರ್, ನಾಯಿ ಕಸ, ಪಾಪು ಕಸದ ಪ್ರಕರಣವನ್ನು ಏನು ಮಾಡ್ತೀರಾ?'

'ಮೇಲಾಧಿಕಾರಿಗಳಿಗೆ ವರದಿ ಕೊಡ್ತೀವಿ' ಎಂದು ಸಿಟ್ಟಿನಿಂದ ಅಧಿಕಾರಿ ಹೊರಟರು.

ಸಂಗತ

'ಮುಟ್ಟಿನ ಬಡತನ'ದ ನಾಡಲ್ಲಿ ರಜೆಯ ಬೆಳ್ಳಿಗೆರೆ

ಉದ್ಯೋಗಸ್ಥ ಮಹಿಳೆಯರಿಗೆ ಮುಟ್ಟಿನ ರಜೆ ನೀಡಲು ಸರ್ಕಾರ ನೀತಿ ರೂಪಿಸಿದೆ. ಮೂಲ ಸೌಕರ್ಯಗಳನ್ನು ಒದಗಿಸದೆ ಹೋದರೆ ರಜೆಯ ಉದ್ದೇಶ ಈಡೇರದು.

• ಆಶಾ ಬಗ್ಗನಡು

'ಗೃಹಲಕ್ಷ್ಮಿ', 'ಶಕ್ತಿ' ಯೋಜನೆಗಳ ಮೂಲಕ ಮಹಿಳೆಯರ ಸಬಲೀಕರಣದ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಯನ್ನಿಟ್ಟಿದ್ದ ರಾಜ್ಯ ಸರ್ಕಾರ, 'ಮುಟ್ಟಿನ ರಜೆ'ಯನ್ನು ನೀಡುವ ಮೂಲಕ ಮತ್ತೊಂದು ಮಹಿಳಾಪರ ನಿರ್ಧಾರ ಕೈಗೊಂಡಿದೆ.

ಸರ್ಕಾರಿ ಮತ್ತು ಖಾಸಗಿ ವಲಯಗಳಲ್ಲಿನ ಉದ್ಯೋಗಸ್ಥ ಮಹಿಳೆಯರಿಗೆ ವೇತನ ಸಹಿತ ಮುಟ್ಟಿನ ರಜೆ ನೀಡುವ ಸರ್ಕಾರದ ನೀತಿಯ ಕುರಿತು ಬಹಳಷ್ಟು ಚರ್ಚೆಗಳು ನಡೆಯುತ್ತಿವೆ. ಚುಮುಚುಮು ಚಳಿಯಲ್ಲಿ ವಾಯುವಿಹಾರದಲ್ಲಿದ್ದ ಮಧ್ಯವಯಸ್ಕ ಪುರುಷರ ಗುಂಪಿನಲ್ಲಿಯೂ ಮುಟ್ಟಿನ ರಜೆ ಕುರಿತಾದ ಚರ್ಚೆ ನಡೆದುದನ್ನು ಗಮನಿಸಿರುವೆ. ಪರ–ವಿರೋಧ ಚರ್ಚೆಗಳ ನಂತರ ವ್ಯಕ್ತಿಯೊಬ್ಬರು, 'ಬಹಳ ಹಿಂದಿನಿಂದಲೂ ಮನೆಗಳಲ್ಲಿ ಋತುಚಕ್ರದ ಸಮಯ ಹೆಣ್ಣುಮಕ್ಕಳನ್ನು ದೈನಂದಿನ ಕೆಲಸಗಳಿಂದ ಹೊರಗಿಡುತ್ತಿರಲಿಲ್ಲವೇ... ರಜೆಯೂ ಹಾಗೆಯೇ... ಒಂದೆರಡು ದಿನಗಳಾದರೂ ಕೆಲಸ ಮಾಡುವ ಸ್ಥಳಗಳು ಸ್ವಚ್ಛ ಹಾಗೂ ಶುಭ್ರವಾಗಿರುತ್ತವೆ' ಎಂದು ಚರ್ಚೆಗೆ ಹೊಸ ಆಯಾಮ ನೀಡಿದ್ದನ್ನು ನೋಡಿ ಗಾಬರಿ ಆಯಿತು.

ಋತುಸ್ರಾವವೆಂಬ ಸ್ವಾಭಾವಿಕ ಜೈವಿಕ ಪ್ರಕ್ರಿಯೆಯನ್ನು ಮಹಿಳೆಯ ದೌರ್ಬಲ್ಯವೆಂದು ಭಾವಿಸುವ ಅಂದಿನ ಮತ್ತು ಇಂದಿನ ಸಮಾಜದಲ್ಲಿ, ಮುಟ್ಟಿನ ರಜೆಯೂ ಹೆಣ್ಣನ್ನು ಇನ್ನೊಂದು ರೀತಿಯಲ್ಲಿ ಅಸ್ಪೃಶ್ಯಳು ಮತ್ತು ಅಸಹಾಯಕಳನ್ನಾಗಿಸುವ ಅಪಾಯವನ್ನು ತಳ್ಳಿಹಾಕುವಂತಿಲ್ಲ.

ಹಿಂದೆಲ್ಲಾ ಗುಟ್ಟಿನಲ್ಲಿ ತೊಟ್ಟಿಕ್ಕುತ್ತಿದ್ದ ಮುಟ್ಟಿನ ಕಥೆಗಳು ಇಂದು ಗಟ್ಟಿಯಾಗಿ ಕೇಳುತ್ತಿವೆ. ಆದರೂ ಮುಟ್ಟಿನ ಗುಟ್ಟು ಕರಗುತ್ತಿಲ್ಲ. ಅನೇಕ ಸಮುದಾಯಗಳಲ್ಲಿ ಇಂದಿಗೂ ಮುಟ್ಟಿನ ಅನುಭವವು ಸಾಂಸ್ಕೃತಿಕ ನಿಷೇಧಗಳು ಮತ್ತು ತಾರತಮ್ಯದ ಸಾಮಾಜಿಕ ರೂಢಿಗಳಿಂದ ನಿರ್ಬಂಧಿಸಲ್ಪಟ್ಟಿದೆ. ಮುಟ್ಟನ್ನು ನಿಭಾಯಿಸಲು ಬೇಕಾದ ಸಾಮಾಜಿಕ, ಮಾನಸಿಕ ತಯಾರಿ ಇಲ್ಲದ ಕಾರಣದಿಂದಲೇ ಮುಟ್ಟನ್ನು ಒಂದು ರೀತಿ ಅಸಹ್ಯಕರವಾಗಿ ಸಮಾಜ ನೋಡಿದರೆ, ಹೆಣ್ಣುಮಕ್ಕಳು ಮುಟ್ಟನ್ನು ಹೊರೆ ಎಂದು ಭಾವಿಸುತ್ತಾ ಕೀಳರಿಮೆಯಿಂದ ನರಳುತ್ತಾರೆ. ಮುಟ್ಟಿನ ಸಂದರ್ಭದಲ್ಲಿ ಬಟ್ಟೆಯ ಕಲೆಗೆ ಹೆದರಿ ಸರಿಯಾಗಿ ಕೂರಲು, ನಿಲ್ಲಲು, ಸಮರ್ಥವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗದೆ ಕುಗ್ಗಿಹೋಗುತ್ತಾರೆ.

ಬಹುತೇಕ ಸಂದರ್ಭಗಳಲ್ಲಿ ಮುಟ್ಟನ್ನು ಕುರಿತಾದ ತಪ್ಪು ಕಲ್ಪನೆಗಳು ಹೆಣ್ಣುಮಕ್ಕಳನ್ನು ಅವಮಾನಿಸುವಂತೆ, ಬೆದರಿಸುವಂತೆ ಮತ್ತು ಲಿಂಗಾಧಾರಿತ ಹಿಂಸೆಯನ್ನು ಪ್ರೇರೇಪಿಸುವಂತೆ ಇರುತ್ತವೆ. ಅಂತಹ ಸಂದರ್ಭದಲ್ಲಿ ಮುಟ್ಟಿಗಾಗಿ ಮೀಸಲಿಡಲಾದ ರಜೆ ಎಷ್ಟು ವೈಜ್ಞಾನಿಕ, ವೈಚಾರಿಕ ಎಂಬುದನ್ನು ಸೂಕ್ಷ್ಮವಾಗಿ ಗ್ರಹಿಸಬೇಕಿದೆ.

ಮುಟ್ಟಿನ ರಜೆಯು ಮಹಿಳಾ ನೌಕರರ ಆರೋಗ್ಯ ಮತ್ತು ಕೆಲಸದ ಒತ್ತಡವನ್ನು ಕಡಿಮೆ ಮಾಡುವಲ್ಲಿ ಪ್ರಗತಿಪರ ಹೆಜ್ಜೆಯಾದರೂ, ಹೆಣ್ಣುಮಕ್ಕಳು ತಮ್ಮ ಪೂರ್ಣ ಸಾಮರ್ಥ್ಯವನ್ನು ತಲಪುವಲ್ಲಿ ಮುಟ್ಟಿನ ನೈರ್ಮಲ್ಯ ಪ್ರಮುಖ ಪಾತ್ರ ವಹಿಸುತ್ತದೆ. ಮುಟ್ಟಿನ ಆರೋಗ್ಯ ಮತ್ತು ಶುಚಿತ್ವದ ನಿರ್ವಹಣೆಯ ಕುರಿತ ಯುನಿಸೆಫ್ ವರದಿ ಪ್ರಕಾರ, ಪ್ರತಿ ತಿಂಗಳು ವಿಶ್ವದಾದ್ಯಂತ ಎರಡು ಶತಕೋಟಿಗೂ ಹೆಚ್ಚು ಹೆಣ್ಣುಮಕ್ಕಳು ಮುಟ್ಟಾಗುತ್ತಿದ್ದು– ಬಹುತೇಕರು 'ಮುಟ್ಟಿನ ಬಡತನ' ಎದುರಿಸುತ್ತಿದ್ದಾರೆ. ಮುಟ್ಟಿನ ಉತ್ಪನ್ನಗಳ ಹೆಚ್ಚಿನ ಬೆಲೆ, ನೀರು ಮತ್ತು ನೈರ್ಮಲ್ಯ ಸೌಲಭ್ಯಗಳ ಕೊರತೆಯು ಈ ಬಡತನಕ್ಕೆ ಕಾರಣವಾಗಿದ್ದು, ಇದರಿಂದಲೇ ಶಾಲಾ-ಕಾಲೇಜುಗಳಲ್ಲಿ ಅನೇಕ ವಿದ್ಯಾರ್ಥಿನಿಯರು ಗೈರಾಗುತ್ತಾರೆ. ಮುಟ್ಟಿನ ಬಡತನ ಲಿಂಗ ಅಸಮಾನತೆಗೆ ಕಾರಣವಾಗಿದೆ; ಮಹಿಳಾ ಸಬಲೀಕರಣದ ಹಾದಿಯಲ್ಲಿ ದೊಡ್ಡ ತೊಡಕಾಗಿದೆ.

ಸರ್ಕಾರ ಮುಟ್ಟಿನ ರಜೆಯ ಜೊತೆಗೆ ಹೆಣ್ಣುಮಕ್ಕಳು ಕೆಲಸ ಮಾಡುವ ಸ್ಥಳಗಳಲ್ಲಿ, ಶಾಲಾ–ಕಾಲೇಜುಗಳಲ್ಲಿ ಸ್ವಚ್ಛ ಶೌಚಾಲಯ, ನೀರು, ಸ್ಯಾನಿಟರಿ ಪ್ಯಾಡ್‌ಗಳ ವಿಲೇವಾರಿಗೆ ಅವಕಾಶ ಕಲ್ಪಿಸುವ ಕಟ್ಟುನಿಟ್ಟಿನ ಕಾನೂನುಗಳನ್ನು ತರಬೇಕಿದೆ. ಮರುಬಳಕೆಯ ಮುಟ್ಟಿನ ಉತ್ಪನ್ನಗಳನ್ನು ಶಾಲಾ–ಕಾಲೇಜು ಹಾಗೂ ಕೆಲಸದ ಸ್ಥಳಗಳಲ್ಲಿ ನೀಡುವುದರಿಂದ ಹೆಣ್ಣುಮಕ್ಕಳು ಘನತೆಯಿಂದ ಕಲಿಯಲು, ಸಮರ್ಥವಾಗಿ ಕೆಲಸ ನಿರ್ವಹಿಸಲು ಸಾಧ್ಯವಾಗುತ್ತದೆ. ಮುಟ್ಟಿನ ಆರೋಗ್ಯ ಮತ್ತು ನೈರ್ಮಲ್ಯ ನಿರ್ವಹಣೆಯು ಮಾನವ ಹಕ್ಕುಗಳು ಮತ್ತು ಘನತೆಯ ಮೂಲಭೂತ ವಿಷಯವಾಗಿದೆ.

ಮುಟ್ಟಿನ ಬಗೆಗೆ ಸಮಾಜದಲ್ಲಿ ಈಗಲೂ ಇರುವ ಅಜ್ಞಾನವನ್ನು ಹಾಗೂ ಮುಟ್ಟಿನ ಕುರಿತಾಗಿ ಹೆಣ್ಣುಮಕ್ಕಳ ಕೀಳರಿಮೆಗಳನ್ನು ಹೋಗಲಾಡಿಸಿ ವೈಜ್ಞಾನಿಕ ತಿಳಿವಳಿಕೆಯನ್ನು ಮೂಡಿಸಬೇಕಾಗಿದೆ. ಶಾಲೆ ಕಾಲೇಜುಗಳಲ್ಲಿ ಹುಡುಗರನ್ನು ಒಳಗೊಂಡ 'ಋತುಚಕ್ರದ ಶಿಕ್ಷಣ' ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ, ಮುಟ್ಟನ್ನು ಕುರಿತಾದ ಪೂರ್ವಗ್ರಹಗಳನ್ನು ತೊಡೆದುಹಾಕಲು ಪ್ರಯತ್ನಿಸಬೇಕಾಗಿದೆ.

ಭಾರತದಲ್ಲಿ ಮುಟ್ಟಿನ ರಜೆಯ ಸ್ವೀಕಾರವು ಸಾಮಾಜಿಕ, ಸಾಂಸ್ಕೃತಿಕ ಮತ್ತು ಸಾಂಸ್ಥಿಕ ಅಂಶಗಳ ಮೇಲೆ ಅವಲಂಬಿತ ಆಗಿದೆ. ತಿಂಗಳಿಗೊಂದು ಮುಟ್ಟಿನ ರಜೆಯ ಕಾರಣ ಔದ್ಯೋಗಿಕ ಸಮಯದಲ್ಲಿ ಉದ್ಯೋಗಿಗಳ ಸಂಖ್ಯೆ ಕ್ಷೀಣಿಸಲು ಕಾರಣವಾಗುತ್ತದಲ್ಲದೆ, ಸಮಾನ ಕೆಲಸ ಸಮಾನ ಅವಕಾಶಗಳಿಗೆ ಈ ರಜೆ ಅಡ್ಡಿಯಾಗುತ್ತದೆ ಎನ್ನಲಾಗುತ್ತಿದೆ.

ಹೆಣ್ಣು ಮಕ್ಕಳ ಮುಟ್ಟಿನ ರಜೆ ಕೌಟುಂಬಿಕವಾಗಿ ಬಳಕೆ ಆಗುವ ಸಾಧ್ಯತೆಗಳನ್ನೂ ತಳ್ಳಿಹಾಕುವಂತಿಲ್ಲ. ಮುಟ್ಟಿನ ರಜೆಗಳನ್ನು ಪಡೆಯಲು ಸಾಧ್ಯವಿಲ್ಲದ ಪರಿಸ್ಥಿತಿಗಳು ಎದುರಾದಲ್ಲಿ ಅಚ್ಚರಿಯೂ ಇಲ್ಲ. ಹಾಗಾಗಿಯೇ, ರಜಾನೀತಿಯನ್ನು ಅನುಷ್ಠಾನಗೊಳಿಸುವಲ್ಲಿಗೆ ಸರ್ಕಾರದ ಹೊಣೆಗಾರಿಕೆ ಮುಗಿಯುವುದಿಲ್ಲ. ಈ ನೀತಿಯು ಮುಟ್ಟಿನ ಮೂಲ ಸೌಕರ್ಯಗಳನ್ನು ಒಳಗೊಂಡಂತೆ, ಮುಟ್ಟನ್ನು ಗ್ರಹಿಸುವ ನಮ್ಮ ಸಮಾಜದ ಮನಃಸ್ಥಿತಿಯನ್ನು ಬದಲಾಯಿಸಬೇಕು; ಲಿಂಗ ಸಮಾನತೆಯೆಡೆಗಿನ ಮಹತ್ವದ ಹೆಜ್ಜೆಯಾಗಿ, ಆ ಮೂಲಕ ಮಹಿಳಾ ಸಬಲೀಕರಣಕ್ಕೆ ದಾರಿ ಮಾಡಿಕೊಡಬೇಕು. ಈ ನಿಟ್ಟಿನಲ್ಲೂ ಸರ್ಕಾರ ಯೋಚಿಸಬೇಕಾಗಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಶತಮಾನದ ವೈಮನಸ್ಸು ಸಂಘರ್ಷ ಬಿರುಸು

ಹಮಾಸ್–ಇಸ್ರೇಲ್ ಸಂಘರ್ಷ ಮತ್ತು ರಷ್ಯಾ–ಉಕ್ರೇನ್ ಯುದ್ಧದ ಬೆನ್ನಲ್ಲೇ ಈಗ ಮತ್ತೆರಡು ರಾಷ್ಟ್ರಗಳ ನಡುವೆ ಸಂಘರ್ಷ ತಲೆದೋರಿದೆ. ಥಾಯ್ಲೆಂಡ್–ಕಾಂಬೋಡಿಯಾ ಪರಸ್ಪರ ಕಾದಾಟಕ್ಕಿಳಿದಿದ್ದು, ಎರಡೂ ಕಡೆ ಸಾವು–ನೋವು ವರದಿಯಾಗಿವೆ. ವಾಸ್ತವವಾಗಿ ಈ ಎರಡು ದೇಶಗಳ ನಡುವಿನ ವೈಮನಸ್ಸಿಗೆ ಶತಮಾನದ ಇತಿಹಾಸವಿದೆ. ಹಾಗೆಯೇ ದೀರ್ಘಕಾಲದಿಂದಲೂ ಇವುಗಳ ನಡುವೆ ಕದನ ವಿರಾಮ ಜಾರಿಯಲ್ಲಿತ್ತು. ಆದರೆ, ಈ ವರ್ಷ ಪದೇ ಪದೇ ಕದನ ವಿರಾಮ ಉಲ್ಲಂಘನೆಯಾಗಿದ್ದು, ಪ್ರಸ್ತುತ ಯುದ್ಧದ ಸನ್ನಿವೇಶ ಸೃಷ್ಟಿಯಾಗಿದೆ

ಥಾಯ್ಲೆಂಡ್–ಕಾಂಬೋಡಿಯಾ ನಡುವೆ ಸೇನಾ ಸಮರ

ಪ್ರಜಾವಾಣಿ ವಾರ್ತೆ

ಆಗ್ನೇಯ ಏಷ್ಯಾದ ರಾಷ್ಟ್ರಗಳಾದ ಥಾಯ್ಲೆಂಡ್ ಮತ್ತು ಕಾಂಬೋಡಿಯಾ ಜಗತ್ತಿನಲ್ಲಿ ಅತ್ಯಂತ ಸ್ನೇಹದಿಂದಿರುವ ರಾಷ್ಟ್ರಗಳು ಎಂದು ಒಂದು ಕಾಲದಲ್ಲಿ ಹೆಸರಾಗಿದ್ದವು. ಶತಮಾನದ ವೈಮನಸ್ಸಿನ ಹೊರತಾಗಿಯೂ ಗಡಿಯಲ್ಲಿ ಶಾಂತಿ ನೆಲಸಿತ್ತು. 'ನಾವು ಅತಿ ಉದ್ದದ ಗಡಿ ಹಂಚಿಕೊಂಡಿದ್ದೇವೆ. ಜತೆಗೇ ಬದುಕಬೇಕು, ಜತೆಗೇ ಬೆಳೆಯಬೇಕು ಎನ್ನುವುದು ನಮಗೆ ಗೊತ್ತಿದೆ' ಎಂದು ಐದು ವರ್ಷಗಳ ಹಿಂದೆ ಎರಡೂ ರಾಷ್ಟ್ರಗಳು ಪುನರುಚ್ಚರಿಸಿದ್ದವು. ಆದರೆ, ಅವುಗಳ ಸ್ನೇಹದ ಮಾತುಗಳು ಹಿಂದೆ ಸರಿದಿದ್ದು, ಸಂಘರ್ಷದ ಮಾತುಗಳು ಮುನ್ನೆಲೆಗೆ ಬಂದಿವೆ.

ಈ ವರ್ಷದ ಜುಲೈನಲ್ಲಿ ಐದು ದಿನ ತೀವ್ರ ಸಂಘರ್ಷ ನಡೆದಿತ್ತು. ಚೀನಾ, ಅಮೆರಿಕ, ಮಲೇಷ್ಯಾದ ಪ್ರಯತ್ನದಿಂದಾಗಿ ನಂತರ ಕದನವಿರಾಮ ಘೋಷಿಸಲಾಗಿತ್ತು. ಅಕ್ಟೋಬರ್ ಕೊನೆಯವಾರ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಮಧ್ಯಸ್ಥಿಕೆಯಲ್ಲಿ ಕ್ವಾಲಾಲಂಪುರದಲ್ಲಿ ಎರಡೂ ರಾಷ್ಟ್ರಗಳು ಶಾಂತಿ ಒಪ್ಪಂದಕ್ಕೆ ಸಹಿ ಹಾಕಿದ್ದವು. ಅದಾಗಿ, ಒಂದೂವರೆ ತಿಂಗಳಲ್ಲಿ ಒಪ್ಪಂದ ಮುರಿದು ಬಿದ್ದಿದೆ. ಡಿ.8ರಿಂದ ಆರಂಭವಾಗಿರುವ ಸಂಘರ್ಷ ತೀವ್ರಸ್ವರೂಪ ಪಡೆಯುತ್ತಿದೆ.

ಕಾಂಬೋಡಿಯಾವು 1953ರವರೆಗೆ ಫ್ರಾನ್ಸ್‌ನ ವಶದಲ್ಲಿತ್ತು. ಫ್ರೆಂಚರ ವಸಾಹತುಶಾಹಿ ಆಡಳಿತದಲ್ಲೇ, 1907ರಲ್ಲಿ ಎರಡೂ ರಾಷ್ಟ್ರಗಳ ಗಡಿಯನ್ನು ಗುರುತಿಸಲಾಗಿತ್ತು. ಆದರೆ, ಥಾಯ್ಲೆಂಡ್ ಅದಕ್ಕೆ ಒಪ್ಪಿರಲಿಲ್ಲ. ಹೀಗಾಗಿ ಎರಡೂ ರಾಷ್ಟ್ರಗಳ ನಡುವೆ ಆಗಾಗ್ಗೆ ಗಡಿ ತಗಾದೆ ಹುಟ್ಟಿಕೊಳ್ಳುತ್ತಿತ್ತು.

ಅದು ತೀರಾ ವಿಕೋಪಕ್ಕೆ ಹೋಗುವುದಕ್ಕೆ ಎರಡೂ ರಾಷ್ಟ್ರಗಳು ಆಸ್ಪದ ನೀಡಿರಲಿಲ್ಲ. ಇತ್ತೀಚಿನ ವರ್ಷಗಳಲ್ಲಿ ಬದಲಾದ ರಾಜಕೀಯ ಸನ್ನಿವೇಶದಲ್ಲಿ ಉಭಯ ರಾಷ್ಟ್ರಗಳ ನಡುವಿನ ಬಿಕ್ಕಟ್ಟು ತೀವ್ರಸ್ವರೂಪ ಪಡೆದುಕೊಂಡಿದೆ. ಈ ವರ್ಷ ಅದು ಗಂಭೀರ ಸ್ಥಿತಿಗೆ ತಲುಪಿದೆ.

ಸಂಘರ್ಷದ ಹಾದಿ: ಮೇ 28ರಂದು 'ಎಮರಾಲ್ಡ್ ಟ್ರಯಾಂಗಲ್' ಎಂಬ ಪ್ರದೇಶದಲ್ಲಿ ಎರಡೂ ಸೇನೆಗಳ ನಡುವೆ ಸಂಘರ್ಷ ನಡೆದಿತ್ತು. ಆ ಪ್ರದೇಶದ ಒಡೆತನದ ಬಗ್ಗೆ ಎರಡೂ ರಾಷ್ಟ್ರಗಳು ಹಕ್ಕು ಸಾಧಿಸುತ್ತಿವೆ. ಸಂಘರ್ಷದಲ್ಲಿ ಕಾಂಬೋಡಿಯಾದ ಒಬ್ಬ ಸೈನಿಕ ಹತನಾಗಿದ್ದ. ಕೆರಳಿದ ಕಾಂಬೋಡಿಯಾ ಪ್ರತ್ಯುತ್ತರ ನೀಡುವುದರೊಂದಿಗೆ ಉದ್ವಿಗ್ನ ಪರಿಸ್ಥಿತಿ ಉಂಟಾಗಿತ್ತು.

ಎರಡೂ ದೇಶಗಳಲ್ಲಿನ ಆಂತರಿಕ ಒತ್ತಡದಿಂದ ಪರಿಸ್ಥಿತಿ ಬಿಗಡಾಯಿಸಿತ್ತು. ಥಾಯ್ಲೆಂಡ್ ಸೇನೆಯು ಗಡಿಯಲ್ಲಿನ ಚೆಕ್‌ಪೋಸ್ಟ್‌ಗಳನ್ನು ಹಿಡಿತಕ್ಕೆ ತೆಗೆದುಕೊಂಡಿತು ಮತ್ತು ವಿದ್ಯುತ್ ಪೂರೈಕೆಯನ್ನು, ಇಂಟರ್ನೆಟ್ ಅನ್ನು ಸ್ಥಗಿತಗೊಳಿಸುವ ಬೆದರಿಕೆ ಹಾಕಿತು. ಅದಕ್ಕೆ ಪ್ರತ್ಯುತ್ತರವಾಗಿ ಕಾಂಬೋಡಿಯಾವು ಥಾಯ್ ಟಿವಿ ಚಾನೆಲ್‌ಗಳು, ಸಿನಿಮಾಗಳು ಮತ್ತು ಥಾಯ್ಲೆಂಡ್‌ನಿಂದ ವಸ್ತುಗಳು ರಫ್ತಾಗದಂತೆ ನಿರ್ಬಂಧ ವಿಧಿಸಿತು. ಕಾಂಬೋಡಿಯಾ ಅಂತರರಾಷ್ಟ್ರೀಯ ನ್ಯಾಯಾಲಯಕ್ಕೆ ಪತ್ರವನ್ನೂ ಬರೆಯಿತು. ಥಾಯ್ಲೆಂಡ್ ದ್ವಿಪಕ್ಷೀಯ ಮಾತುಕತೆ ಮೂಲಕ ಮಾತ್ರವೇ ಗಡಿ ವಿವಾದ ಬಗೆಹರಿಸಿಕೊಳ್ಳಬೇಕು ಎನ್ನುವ ನಿಲುವಿಗೆ ಅಂಟಿಕೊಂಡಿತು.

ಜುಲೈನಲ್ಲಿ ಗಡಿಭಾಗದಲ್ಲಿ ಗಸ್ತು ತಿರುಗುತ್ತಿದ್ದ ಥಾಯ್ಲೆಂಡ್ ಸೈನಿಕನೊಬ್ಬ ನೆಲಬಾಂಬ್ ಸ್ಫೋಟಗೊಂಡು ಸಾವಿಗೀಡಾಗಿದ್ದ. ಇದಕ್ಕೆ ಕಾಂಬೋಡಿಯಾ ಕಾರಣ ಎಂದು ಥಾಯ್ಲೆಂಡ್ ಆರೋಪಿಸಿತ್ತು. ಈ ಘಟನೆ ತೀವ್ರ ಘರ್ಷಣೆಗೆ ಕಾರಣವಾಯಿತು. ಯುದ್ಧವಿಮಾನ, ಡ್ರೋನ್ ಸೇರಿದಂತೆ ಇನ್ನಿತರ ಶಸ್ತ್ರಾಸ್ತ್ರಗಳ ಸಹಿತ ನಡೆದ ಸಮರವು ಐದು ದಿನಗಳಲ್ಲಿ ತಾತ್ಕಾಲಿಕವಾಗಿ ಕೊನೆಗೊಂಡಿತ್ತು.

ಟ್ರಂಪ್ ಮಧ್ಯಸ್ಥಿಕೆಯಲ್ಲಿ ಅಕ್ಟೋಬರ್‌ನಲ್ಲಿ ನಡೆದ ಶಾಂತಿ ಒಪ್ಪಂದದ ನಂತರ ಪರಿಸ್ಥಿತಿ ತಿಳಿಯಾಗಬಹುದು ಎಂಬ ನಿರೀಕ್ಷೆ ನವೆಂಬರ್‌ನಲ್ಲಿ ಮತ್ತೊಂದು ನೆಲಬಾಂಬ್ ಸ್ಫೋಟಗೊಂಡಾಗ ಹುಸಿಯಾಯಿತು. ಆ ಘಟನೆಯಲ್ಲಿ ಥಾಯ್ಲೆಂಡ್‌ನ ಸೈನಿಕನೊಬ್ಬ ಗಾಯಗೊಂಡಿದ್ದ. ಡಿಸೆಂಬರ್ 8ರಂದು ಕಾಂಬೋಡಿಯಾ ಸೇನೆಯು ತನ್ನ ಸೈನಿಕನನ್ನು ಹತ್ಯೆ ಮಾಡಿದೆ ಎಂದು ಥಾಯ್ಲೆಂಡ್ ಆರೋಪಿಸಿದ ನಂತರ ಸಂಘರ್ಷ ತೀವ್ರಗೊಂಡಿದೆ. ಪ್ರಸ್ತುತ, ಕಾಂಬೋಡಿಯಾದ ಮೇಲೆ ಥಾಯ್ಲೆಂಡ್ ವಾಯುದಾಳಿಯನ್ನು ಮುಂದುವರಿಸುತ್ತಿದೆ. ಎರಡೂ ಕಡೆ ಸೈನಿಕರು, ನಾಗರಿಕರ ಸಾವುಗಳು ಸಂಭವಿಸಿವೆ. 32 ಜನರು ಮೃತಪಟ್ಟು, ಎಂಟು ಲಕ್ಷ ಜನರು ನಿರಾಶ್ರಿತರಾಗಿದ್ದಾರೆ. ಎರಡೂ ರಾಷ್ಟ್ರಗಳು ಪರಸ್ಪರರನ್ನು ಕದನ ವಿರಾಮ ಉಲ್ಲಂಘನೆಗೆ ಕಾರಣ ಎನ್ನುತ್ತಿವೆ. ಸಂಘರ್ಷವು ತೀವ್ರಗೊಳ್ಳುವ ಸೂಚನೆಗಳು ಕಾಣುತ್ತಿವೆ.

ಆಧಾರ: ಎಎಫ್‌ಪಿ, ಬಿಬಿಸಿ, ರಾಯಿಟರ್ಸ್, ಟೈಮ್, ದಿ ಗಾರ್ಡಿಯನ್

ಥಾಯ್ಲೆಂಡ್ ವಾಯುದಾಳಿ ನಡೆಸುತ್ತಿರುವುದರಿಂದ ಕಾಂಬೋಡಿಯಾದ ಸಿಯೆಮ್ ರೀಪ್ ಪ್ರಾಂತ್ಯದ ನಿವಾಸಿಗಳು ತಮ್ಮ ವಾಹನಗಳಲ್ಲಿ ಸುರಕ್ಷಿತ ಸ್ಥಳಗಳಿಗೆ ತೆರಳಿದರು —ಎಎಫ್‌ಪಿ ಚಿತ್ರ

817 ಕಿ.ಮೀ ಗಡಿಯ ಉದ್ದ

1907 ಗಡಿ ಗುರುತು ಮಾಡಿದ ವರ್ಷ

ಮುಂದೇನು?

ಡಿ.8ರಂದು ಆರಂಭಗೊಂಡಿರುವ ಸಂಘರ್ಷ ಮುಂದುವರಿಯುತ್ತಲೇ ಇದ್ದು, ಹಿಂದಿನಕ್ಕಿಂತಲೂ ಹೆಚ್ಚು ತೀವ್ರವಾಗಿದೆ. ಮೊದಲು ಕಾಂಬೋಡಿಯಾ ಕದನ ವಿರಾಮ ಘೋಷಿಸಬೇಕು ಎಂದು ಥಾಯ್ಲೆಂಡ್ ಪಟ್ಟು ಹಿಡಿದಿದೆ. ಇದರ ಬಗ್ಗೆ ಕಾಂಬೋಡಿಯಾ ಇನ್ನೂ ಪ್ರತಿಕ್ರಿಯಿಸಿಲ್ಲ. ಸದ್ಯಕ್ಕೆ ಘರ್ಷಣೆ ಕಡಿಮೆಯಾಗುವ ಲಕ್ಷಣ ಕಾಣಿಸುತ್ತಿಲ್ಲ. ಈ ಸಂಘರ್ಷದಲ್ಲಿ ತಾನು ಸಂತ್ರಸ್ತ ಎಂದು ಬಿಂಬಿಸಿಕೊಳ್ಳಲು ಕಾಂಬೋಡಿಯಾ ಯತ್ನಿಸುತ್ತಿದೆ ಎಂದು ಹೇಳಲಾಗುತ್ತಿದೆ. ಸೇನಾ ದೃಷ್ಟಿಯಿಂದ ಥಾಯ್ಲೆಂಡ್ ಹೆಚ್ಚು ಶಕ್ತಿಯನ್ನು ಹೊಂದಿದೆ.

ಮಲೇಷ್ಯಾ ಅಧ್ಯಕ್ಷತೆಯಲ್ಲಿ ಆಸಿಯಾನ್ ರಾಷ್ಟ್ರಗಳ ವಿದೇಶಾಂಗ ಸಚಿವರ ವಿಶೇಷ ಸಭೆ ಇದೇ 22ರಂದು ನಡೆಯಲಿದೆ. ಅಲ್ಲಿ ಈ ಸಂಘರ್ಷದ ಬಗ್ಗೆ ಚರ್ಚೆ ನಡೆಯುವ ನಿರೀಕ್ಷೆ ಇದೆ. ಎರಡೂ ರಾಷ್ಟ್ರಗಳ ನಡುವೆ ಕದನ ವಿರಾಮ ಘೋಷಿಸಲು ಆಸಿಯಾನ್ ಯತ್ನಿಸಲಿದೆ ಎನ್ನಲಾಗುತ್ತಿದೆ.

ಕಾಂಬೋಡಿಯಾದ ನಿರಾಶ್ರಿತರ ಶಿಬಿರವೊಂದರ ನೋಟ

48 ಜುಲೈ ಸಂಘರ್ಷದಲ್ಲಿ ಮೃತಪಟ್ಟ ಸೈನಿಕರು ಮತ್ತು ನಾಗರಿಕರು

3 ಲಕ್ಷ ಐದು ದಿನಗಳ ಘರ್ಷಣೆಯಲ್ಲಿ ನಿರಾಶ್ರಿತರಾದವರು

32 ಡಿ.8ರಿಂದ ನಡೆಯುತ್ತಿರುವ ಘರ್ಷಣೆಯಲ್ಲಿ ಮೃತಪಟ್ಟ ಸೈನಿಕರು ಮತ್ತು ಜನರು

8 ಲಕ್ಷ ವಾರದಲ್ಲಿ ನಿರಾಶ್ರಿತರಾದ ನಾಗರಿಕರು

ಗಡಿ ಒಪ್ಪದ ಥಾಯ್ಲೆಂಡ್

ಕಾಂಬೋಡಿಯಾವು ಫ್ರಾನ್ಸ್ ವಸಾಹತುಶಾಹಿ ಆಡಳಿತದಲ್ಲಿದ್ದಾಗ ಎರಡೂ ದೇಶಗಳ ನಡುವೆ ಗಡಿಯನ್ನು ಗುರುತಿಸಲಾಗಿತ್ತು. ಆಗ ಗುರುತಿಸಿರುವ 817 ಕಿ.ಮೀ ಉದ್ದದ ಗಡಿ ಸರಿ ಇಲ್ಲ ಎಂಬುದು ಥಾಯ್ಲೆಂಡ್‌ನ ವಾದ. ಅಂತರರಾಷ್ಟ್ರೀಯ ನ್ಯಾಯಾಲಯವು ಎರಡು ಬಾರಿ (1962 ಮತ್ತು 2013) ಕಾಂಬೋಡಿಯಾದ ಪರವಾಗಿ ತೀರ್ಪು ನೀಡಿದ್ದರೂ, ಥಾಯ್ಲೆಂಡ್ ಅದನ್ನು ಒಪ್ಪಿಲ್ಲ. ಈ ಕಾರಣಕ್ಕೆ 2008 ಮತ್ತು 2011ರ ನಡುವೆ ಹಲವು ಬಾರಿ ಸೇನಾ ಸಂಘರ್ಷ ನಡೆದಿತ್ತು.

ಸಂಘರ್ಷದ ಕೇಂದ್ರಬಿಂದು ದೇವಾಲಯ ಸಂಕೀರ್ಣ

ಎರಡೂ ದೇಶಗಳ ನಡುವಿನ ಸಂಘರ್ಷಕ್ಕೆ ಪ್ರಮುಖ ಕಾರಣ ಒಂದು ದೇವಾಲಯ ಮತ್ತು ಅದರ ಆಸ್ತಿ, ಗಡಿ ಭಾಗದಲ್ಲಿರುವ ಪ್ರಹ್ ವಿಹಿಯರ್ ದೇವಾಲಯದ ಸಂಕೀರ್ಣದ ಮಾಲೀಕತ್ವ ಯಾರಿಗೆ ಸೇರಬೇಕು ಎಂಬುದು. 11ನೇ ಶತಮಾನದಲ್ಲಿ ನಿರ್ಮಿಸಲಾಗಿರುವ, ಯುನೆಸ್ಕೊ ಪಾರಂಪರಿಕ ತಾಣ ಎಂಬ ಸ್ಥಾನಮಾನ ಪಡೆದಿರುವ ಈ ಶಿವನ ದೇವಾಲಯಗಳ ಸಂಕೀರ್ಣವು ತನ್ನದು ಎಂಬುದು ಥಾಯ್ಲೆಂಡ್ ವಾದ. ಆದರೆ, ಇದರ ನಿಯಂತ್ರಣವನ್ನು ಕಾಂಬೋಡಿಯಾ ಹೊಂದಿದೆ. ಅಂತರರಾಷ್ಟ್ರೀಯ ನ್ಯಾಯಾಲಯ ಕೂಡ ಈ ಸಂಕೀರ್ಣ ಹಾಗೂ ಸುತ್ತಮುತ್ತಲಿನ ಆಸ್ತಿ ಕಾಂಬೋಡಿಯಾಕ್ಕೆ ಸೇರಿದ್ದು ಎಂದು 1962ರಲ್ಲಿ ಮತ್ತು 2013ರಲ್ಲಿ ತೀರ್ಪು ನೀಡಿದೆ.

ದೇವಾಲಯ ಮತ್ತು ಅದರ ಆಸ್ತಿಯ ಮಾಲೀಕತ್ವಕ್ಕೆ ಸಂಬಂಧಿಸಿದ ಬಿಕ್ಕಟ್ಟು 1954ರಿಂದಲೂ ಇದ್ದರೂ, ಅದು ತೀವ್ರಸ್ವರೂಪ ಪಡೆದಿದ್ದು 2008ರ ನಂತರ. ಆ ದೇವಾಲಯಕ್ಕೆ ಪಾರಂಪರಿಕ ತಾಣ ಸ್ಥಾನ ನೀಡಬೇಕು ಎಂದು ಕಾಂಬೋಡಿಯಾ ಆಡಳಿತ ಯುನೆಸ್ಕೊಗೆ ಆ ವರ್ಷ ಮನವಿ ಮಾಡಿತ್ತು. ಅಂದಿನಿಂದಲೂ ಉಭಯ ದೇಶಗಳ ನಡುವಿನ ಗಡಿ ಭಾಗದಲ್ಲಿ ಉದ್ವಿಗ್ನತೆ ನೆಲಸಿದೆ.

ಕಾಂಬೋಡಿಯಾದಲ್ಲಿನ ಪುರಾತನ ದೇವಾಲಯಗಳ ಸಂರಕ್ಷಣೆಯಲ್ಲಿ ಭಾರತದ ಪುರಾತತ್ವ ಇಲಾಖೆಯೂ ತೊಡಗಿದೆ. ಪ್ರಹ್ ವಿಹಿಯರ್ ದೇವಾಲಯದ ಪುನರುಜ್ಜೀವನದಲ್ಲೂ ಭಾರತ ಪಾಲುದಾರ. ಆದರೆ, ಎರಡೂ ದೇಶಗಳ ನಡುವಿನ ಘರ್ಷಣೆಯು ಈ ದೇವಾಲಯವೂ ಸೇರಿದಂತೆ ಗಡಿ ಭಾಗದಲ್ಲಿರುವ ಪುರಾತನ ದೇವಸ್ಥಾನಗಳಿಗೂ ಹಾನಿಯಾಗುತ್ತಿದೆ. ಭಾರತವು ಕಳೆದ ವರ್ಷವೇ ಈ ಬಗ್ಗೆ ಕಳವಳ ವ್ಯಕ್ತಪಡಿಸಿ, ಎರಡೂ ದೇಶಗಳು ಮಾತುಕತೆಯ ಮೂಲಕ ಗಡಿ ವಿವಾದವನ್ನು ಬಗೆಹರಿಸಿಕೊಳ್ಳಬೇಕು ಎಂದು ಸಲಹೆ ನೀಡಿತ್ತು.

ರಣಾಂಗಣದಲ್ಲಿ ಚೀನಾ ಶಸ್ತ್ರಾಸ್ತ್ರಗಳ ಪ್ರಯೋಗ

ಪಹಲ್ಗಾಮ್ ಹತ್ಯಾಕಾಂಡಕ್ಕೆ ಪ್ರತೀಕಾರವಾಗಿ ಭಾರತವು ನಡೆಸಿದ 'ಆಪರೇಷನ್ ಸಿಂಧೂರ' ಕಾರ್ಯಾಚರಣೆಯ ವೇಳೆ ಪಾಕಿಸ್ತಾನವು ಚೀನಾದ ಶಸ್ತ್ರಾಸ್ತ್ರಗಳನ್ನು ಬಳಸಿತ್ತು. ಭಾರತದ ರಷ್ಯಾ ಮತ್ತು ಫ್ರಾನ್ಸ್ ನಿರ್ಮಿತ ಕ್ಷಿಪಣಿಗಳು ಮತ್ತು ರಫೇಲ್ ಯುದ್ಧವಿಮಾನ, ಎಸ್–400 ವಾಯು ರಕ್ಷಣಾ ವ್ಯವಸ್ಥೆಗಳಿಗೆ ವಿರುದ್ಧವಾಗಿ ಪಾಕಿಸ್ತಾನವು ಚೀನಾದಿಂದ ಆಮದು ಮಾಡಿಕೊಂಡಿದ್ದ ಅಸ್ತ್ರಗಳನ್ನು ಪ್ರಯೋಗಿಸಿತ್ತು.

ಈಗ ಮತ್ತೊಮ್ಮೆ ಚೀನಾದ ಶಸ್ತ್ರಾಸ್ತ್ರಗಳು ಪ್ರಯೋಗಕ್ಕೆ ಒಳಗಾಗುತ್ತಿವೆ. ಎರಡು ದಶಕಗಳಿಂದಲೂ ಚೀನಾ ಕಾಂಬೋಡಿಯಾಗೆ ಶಸ್ತ್ರಾಸ್ತ್ರಗಳನ್ನು ಪೂರೈಸುತ್ತಿದೆ. ಇನ್ನೊಂದೆಡೆ, ಥಾಯ್ಲೆಂಡ್ ಕೂಡ ಚೀನಾದಿಂದ ಶಸ್ತ್ರಾಸ್ತ್ರಗಳನ್ನು ಆಮದು ಮಾಡಿಕೊಳ್ಳುತ್ತಿದೆ. ತನ್ನ ಶಸ್ತ್ರಾಸ್ತ್ರಗಳ ಕಾರ್ಯಕ್ಷಮತೆ ಕಂಡುಕೊಳ್ಳಲು ಚೀನಾಗೆ ಉತ್ತಮ ಅವಕಾಶ ದೊರಕಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ದೂರವಾಣಿ ಕರೆ ಸೋರಿಕೆ, ಪ್ರಧಾನಿ ವಜಾ

ಜುಲೈನಲ್ಲಿ ಥಾಯ್ಲೆಂಡ್ ಮತ್ತು ಕಾಂಬೋಡಿಯಾ ನಡುವೆ ಸೇನಾ ಸಂಘರ್ಷ ನಡೆಯುತ್ತಿದ್ದ ಸಂದರ್ಭದಲ್ಲೇ ಆಗ ಥಾಯ್ಲೆಂಡ್ ಪ್ರಧಾನಿಯಾಗಿದ್ದ ಪ್ಯಾಂಟೋಗ್ಟರ್ನ್ ಶಿನವಾತ್ರ ಅವರು ಕಾಂಬೋಡಿಯಾದ ಮಾಜಿ ನಾಯಕ ಹುನ್ ಸೆನ್ ಅವರ ಜೊತೆ ದೂರವಾಣಿಯಲ್ಲಿ ಮಾತನಾಡಿದ್ದ ವಿವರ ಸೋರಿಕೆಯಾಗಿದ್ದು ಶಿನವಾತ್ರ ಅಧಿಕಾರಕ್ಕೆ ಕುತ್ತು ತಂದಿತ್ತು.

ದೂರವಾಣಿಯಲ್ಲಿ ಮಾತನಾಡುವಾಗ ಶಿನವಾತ್ರ ಅವರು ಹುನ್ ಸೆನ್ ಅವರನ್ನು 'ಅಂಕಲ್' ಎಂದು ಕರೆದಿದ್ದಲ್ಲದೇ, ಥಾಯ್ಲೆಂಡ್‌ನ ಸೇನೆಯನ್ನು ಟೀಕಿಸಿದ್ದರು. ಹುನ್ ಸೆನ್ ಅವರೇ ಈ ಕರೆಯ ವಿವರಗಳನ್ನು ಸೋರಿಕೆ ಮಾಡಿದ್ದರು. ಇದು ಥಾಯ್ಲೆಂಡ್‌ನಲ್ಲಿ ರಾಜಕೀಯ ಬಿರುಗಾಳಿಯನ್ನೇ ಸೃಷ್ಟಿಸಿತ್ತು. ಪ್ರಧಾನಿಯಾಗಿ ಪ್ಯಾಂಟೋಗ್ಟರ್ನ್ ಅವರು ನೈತಿಕತೆಯ ಗೆರೆಯನ್ನು ಉಲ್ಲಂಘಿಸಿದ್ದಾರೆ, ವಿರೋಧಿ ರಾಷ್ಟ್ರದ ನಾಯಕನೊಂದಿಗೆ ಸೇರಿ ದೇಶದ ಸೈನ್ಯವನ್ನು ಕಡೆಗಣಿಸಿದ್ದಾರೆ ಎಂಬ ಆರೋಪ ಕೇಳಿಬಂದಿತ್ತು. ಪ್ರಕರಣದ ವಿಚಾರಣೆ ನಡೆಸಿದ್ದ ಸಾಂವಿಧಾನಿಕ ನ್ಯಾಯಾಲಯವು ಶಿವವಾತ್ರ ಅವರನ್ನು ಪ್ರಧಾನಿ ಹುದ್ದೆಯಿಂದ ವಜಾ ಮಾಡುವಂತೆ ತೀರ್ಪು ನೀಡಿತ್ತು. ಶಿನವಾತ್ರ ರಾಜಕೀಯ ಮನೆತನಕ್ಕೆ ಸೇರಿದ ಪ್ಯಾಂಟೋಗ್ಟರ್ನ್ ಅಸಾಧಾರಣ ರೀತಿಯಲ್ಲಿ 2024ರಲ್ಲಿ ಅಧಿಕಾರಕ್ಕೇರಿದ್ದರು. ಆದರೆ, ಅನಿರೀಕ್ಷಿತವಾಗಿ ಅವರ ಅಧಿಕಾರ ಅಂತ್ಯ ಕಂಡಿತ್ತು.

ಪ್ಯಾಂಟೋಗ್ಟರ್ನ್ ಶಿನವಾತ್ರ

ರಾಷ್ಟ್ರೀಯ

ಮೆಸ್ಸಿ ಕಾರ್ಯಕ್ರಮದಲ್ಲಿ ಅವ್ಯವಸ್ಥೆ ಕ್ರೀಡಾ ಖಾತೆ ಜವಾಬ್ದಾರಿ ತೊರೆದ ಅರೂಪ್ ಬಿಸ್ವಾಸ್

ಕೋಲ್ಕತ್ತ (ಪಿಟಿಐ): ಫುಟ್‌ಬಾಲ್ ತಾರೆ ಲಿಯೊನೆಲ್ ಮೆಸ್ಸಿ ಕಾರ್ಯಕ್ರಮದ ವೇಳೆ ದಾಂದಲೆ ನಡೆದ ಪ್ರಕರಣಕ್ಕೆ ಸಂಬಂಧಿಸಿದಂತೆ ಟೀಕೆಗಳು ಹೆಚ್ಚಿದ ಬೆನ್ನಲ್ಲೇ, ಪಶ್ಚಿಮ ಬಂಗಾಳದ ಸಚಿವ ಅರೂಪ್ ಬಿಸ್ವಾಸ್ ಅವರು ಮಂಗಳವಾರ ಕ್ರೀಡಾ ಖಾತೆಯ ಜವಾಬ್ದಾರಿಯನ್ನು ತೊರೆದಿದ್ದಾರೆ.

ಕ್ರೀಡಾ ಖಾತೆಯ ಜವಾಬ್ದಾರಿಯಿಂದ ತಮ್ಮನ್ನು ಮುಕ್ತಗೊಳಿಸಬೇಕು ಎಂಬ ಅವರ ಮನವಿಯನ್ನು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅಂಗೀಕರಿಸಿದ್ದಾರೆ.

ಇದಕ್ಕೂ ಮುನ್ನ ಟಿಎಂಸಿ ವಕ್ತಾರ ಕುನಾಲ್ ಘೋಷ್ ಅವರು, ಬಿಸ್ವಾಸ್ ಅವರ ಪತ್ರದ ಪ್ರತಿಯನ್ನು ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡಿದ್ದರು. 'ನಿಷ್ಪಕ್ಷಪಾತ ತನಿಖೆಗಾಗಿ ಕ್ರೀಡಾ ಇಲಾಖೆಯ ಜವಾಬ್ದಾರಿಯಿಂದ ತಮಗೆ ಬಿಡುಗಡೆ ನೀಡಬೇಕು' ಎಂದು ಬಿಸ್ವಾಸ್ ಅವರು ಪತ್ರದಲ್ಲಿ ಕೋರಿದ್ದರು.

ಈ ಬಗ್ಗೆ ಪ್ರತಿಕ್ರಿಯಿಸಿರುವ ಮಮತಾ ಬ್ಯಾನರ್ಜಿ, 'ಕ್ರೀಡಾ ಸಚಿವರ ಉದ್ದೇಶ ಮತ್ತು ಭಾವನೆ ಅರ್ಥವಾಗುತ್ತದೆ. ತನಿಖೆ ಪೂರ್ಣಗೊಳ್ಳುವವರೆಗೆ ಮುಖ್ಯಮಂತ್ರಿಯವರೇ ಕ್ರೀಡಾ ಖಾತೆಯ ಉಸ್ತುವಾರಿಯಾಗಿರಲಿದ್ದಾರೆ' ಎಂದು ತಿಳಿಸಿದರು.

ಬಿಸ್ವಾಸ್ ಅವರು ಕ್ರೀಡೆ, ಯುವ ಜನ ಕಲ್ಯಾಣ ಮತ್ತು ಇಂಧನ ಖಾತೆಗಳ ಸಚಿವರಾಗಿದ್ದು, ಸದ್ಯ ಕ್ರೀಡಾ ಖಾತೆಯ ಜವಾಬ್ದಾರಿಯಿಂದ ಮಾತ್ರ ದೂರ ಸರಿದಿದ್ದಾರೆ.

'ಬಿಸ್ವಾಸ್ ಅವರ ನಿರ್ಧಾರ 'ಮೂರ್ಖತನದ್ದು'. ಕಲ್ಕತ್ತಾ ಹೈಕೋರ್ಟ್‌ನಲ್ಲಿ ಸಲ್ಲಿಕೆಯಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳಿಂದ (ಪಿಐಎಲ್) ಜನರ ಗಮನವನ್ನು ಬೇರೆಡೆ ಸೆಳೆಯುವ ತಂತ್ರ' ಎಂದು ಬಿಜೆಪಿ ನಾಯಕ ಸುವೇಂದು ಅಧಿಕಾರಿ ಆರೋಪಿಸಿದ್ದಾರೆ.

ಹಿರಿಯ ಅಧಿಕಾರಿಗಳಿಗೆ ನೋಟಿಸ್

ಪ್ರಕರಣಕ್ಕೆ ಸಂಬಂಧಿಸಿದಂತೆ ಪಶ್ಚಿಮ ಬಂಗಾಳ ಪೊಲೀಸ್ ಮಹಾನಿರ್ದೇಶಕ (ಡಿಜಿಪಿ) ಸೇರಿದಂತೆ ಹಿರಿಯ ಪೊಲೀಸ್ ಅಧಿಕಾರಿಗಳಿಗೆ ರಾಜ್ಯ ಸರ್ಕಾರ ಮಂಗಳವಾರ ಶೋಕಾಸ್ ನೋಟಿಸ್ ಜಾರಿ ಮಾಡಿದೆ.

ಬಿಧಾನ್ನಗರ ಉಪ ಪೊಲೀಸ್ ಕಮಿಷನರ್ ಅನೀಶ್ ಸರ್ಕಾರ್ ಅವರನ್ನು ಅಮಾನತು ಮಾಡಿ, ಅವರ ವಿರುದ್ಧ ಇಲಾಖಾ ತನಿಖೆಗೆ ಆದೇಶಿಸಲಾಗಿದೆ ಎಂದು ಮುಖ್ಯ ಕಾರ್ಯದರ್ಶಿ ಮನೋಜ್ ಪಂತ್ ಹೇಳಿಕೆ ಬಿಡುಗಡೆ ಮಾಡಿದ್ದಾರೆ.

ಡಿಜಿಪಿ ರಾಜೀವ್ ಕುಮಾರ್ ಅವರಿಗೆ ಶೋಕಾಸ್ ನೋಟಿಸ್ ನೀಡಿ, 24 ತಾಸಿನ ಒಳಗಾಗಿ ಪ್ರತಿಕ್ರಿಯೆ ನೀಡುವಂತೆ ಸೂಚಿಸಲಾಗಿದೆ. ಬಿಧಾನ್ನಗರ ಪೊಲೀಸ್ ಕಮಿಷನರ್ ಮುಕೇಶ್ ಕುಮಾರ್ ಅವರಿಗೂ ನೋಟಿಸ್ ನೀಡಲಾಗಿದೆ ಎಂದು ತಿಳಿಸಲಾಗಿದೆ.

ಡಿಸೆಂಬರ್ 13ರಂದು ನಡೆದ ಕಾರ್ಯಕ್ರಮದಲ್ಲಿ ಉಂಟಾದ ಅವ್ಯವಸ್ಥೆ ಕುರಿತು ತನಿಖೆಗೆ ರಚನೆಯಾಗಿದ್ದ ಸಮಿತಿಯ ಶಿಫಾರಸಿನ ಬಳಿಕ ಈ ಕ್ರಮ ಕೈಗೊಳ್ಳಲಾಗಿದೆ.

'ಪಿಯುಸಿ' ಇಲ್ಲದೆ ಇಂಧನವಿಲ್ಲ: ಸಿರ್ಸಾ

ನವದೆಹಲಿ (ಪಿಟಿಐ): ಮಾಲಿನ್ಯ ನಿಯಂತ್ರಣ (ಪಿಯುಸಿ) ಪ್ರಮಾಣಪತ್ರವಿಲ್ಲದ ವಾಹನಗಳಿಗೆ ಡಿಸೆಂಬರ್ 18ರಿಂದ ರಾಷ್ಟ್ರ ರಾಜಧಾನಿಯ ಪೆಟ್ರೋಲ್ ಪಂಪ್‌ಗಳಲ್ಲಿ ಇಂಧನ ತುಂಬಲು ಅವಕಾಶ ಇರುವುದಿಲ್ಲ ಎಂದು ದೆಹಲಿ ಪರಿಸರ ಸಚಿವ ಮಂಜಿಂದರ್ ಸಿಂಗ್ ಸಿರ್ಸಾ ಮಂಗಳವಾರ ಹೇಳಿದ್ದಾರೆ.

ಪಿಯುಸಿ ಮಾನದಂಡಗಳನ್ನು ಪಾಲಿಸಲು ವಾಹನ ಮಾಲೀಕರಿಗೆ ಒಂದು ದಿನದ ಕಾಲಾವಕಾಶ ನೀಡಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಪೆಟ್ರೋಲ್ ಪಂಪ್‌ಗಳಲ್ಲಿ ಅಳವಡಿಸಲಾದ ಕ್ಯಾಮೆರಾಗಳು ಸ್ವಯಂ ಚಾಲಿತವಾಗಿ ಪಿಯುಸಿ ಪ್ರಮಾಣಪತ್ರ ಇಲ್ಲದ ವಾಹನಗಳನ್ನು ಪತ್ತೆ ಹಚ್ಚಲಿವೆ. ಗುರುವಾರದಿಂದ ಅಂತಹ ವಾಹನಗಳಿಗೆ ಯಾವುದೇ ಗೊಂದಲವಿಲ್ಲದೆ ಇಂಧನ ನಿರಾಕರಿಸಲಾಗುತ್ತದೆ ಎಂದು ಸಿರ್ಸಾ ಹೇಳಿದ್ದಾರೆ.

'ಪಿಯುಸಿ ಪ್ರಮಾಣಪತ್ರಗಳನ್ನು ಹೊಂದಿರದ 8 ಲಕ್ಷಕ್ಕೂ ಹೆಚ್ಚು ವಾಹನ ಮಾಲೀಕರಿಗೆ ಈಗಾಗಲೆ ದಂಡ ವಿಧಿಸಲಾಗಿದೆ. ಗುರುವಾರದಿಂದ ಮತ್ತು ಮುಂದಿನ ಆದೇಶದವರೆಗೆ ದೆಹಲಿಯ ಹೊರಗಿನಿಂದ ಬರುವ ಬಿಎಸ್–6 ಮಾನದಂಡಗಳಿಗೆ ಅನುಗುಣವಾಗಿ ಸಿದ್ಧಪಡಿಸಲಾದ ವಾಹನಗಳಿಗೆ ಮಾತ್ರ ನಗರವನ್ನು ಪ್ರವೇಶಿಸಲು ಅವಕಾಶ ನೀಡಲಾಗುವುದು' ಎಂದು ಅವರು ತಿಳಿಸಿದ್ದಾರೆ.

ಬೆಲ್ಲದ ಕಟ್ಟೆಯೊಳಗೆ ಬೇವು

ವಾಸುದೇವ ನಾಡಿಗ್

ಬರೀ ದ್ವೇಷ, ಅಸೂಯೆ, ಸ್ವಾರ್ಥ, ಸಮಯಸಾಧಕತನ, ಲಾಭಕೋರ ಗುಣ... ಇವುಗಳಲ್ಲೇ ಬಿದ್ದು ನರಳಾಡುವ ಮಂದಿಗೆ ಆ ಸಂತ ಪಾಠ ಕಲಿಸಿದ್ದೇ ಹೀಗೆ. ಪಾಠ ಕಲಿತರೋ ಇಲ್ಲವೋ ಎರಡನೆಯ ಮಾತು. ಆದರೆ ಈ ದೃಷ್ಟಾಂತದ ಮೂಲಕ ಅವನಿಗೆ ಲೋಕಕ್ಕೆ ಒಂದು ಸತ್ಯವನ್ನು ಹೇಳಬೇಕಿತ್ತು.

ಹತ್ತು ಹನ್ನೆರಡು ಭಕ್ತ ಜನರು ತೀರ್ಥಕ್ಷೇತ್ರಗಳ ದರ್ಶನಕ್ಕಾಗಿ ಹೊರಡಲು ಅಣಿಯಾದರು. ಈ ಸಂತನನ್ನೂ ಜೊತೆಗೆ ಬರಲು ಪದೇ ಪದೇ ಕರೆದರು. ಆದರೆ ಈ ಸಂತ ಒಲ್ಲೆ ಅಂದ. ಇವರೆಲ್ಲರ ಪರಿಪರಿಯಾದ ಬೇಡಿಕೆಗೆ ಮಣಿಯದ ಸಂತ ಏನೋ ನೆಪ ಹೇಳಿ ಕೂತ. ಕೊನೆಗೆ ಒಂದು ದಪ್ಪ ಬೇವಿನ ಕಡ್ಡಿಯನ್ನು ತೆಗೆದುಕೊಂಡು ಬಂದು ಯಾತ್ರೆಗೆ ಹೊರಟ ಭಕ್ತ ಗಣಕ್ಕೆ ಕೊಡುತ್ತ, 'ಈ ಬೇವಿನ ಕಡ್ಡಿಯನ್ನೇ ನಾನು ಎಂದು ತಿಳಿದುಕೊಂಡು ನೀವು ಹೋದ ಕಡೆಯೆಲ್ಲ ಇದನ್ನು ಜೊತೆಗೆ ತೆಗೆದುಕೊಂಡು ಹೋಗಿ' ಎಂದನು. ಅವರೆಲ್ಲ ಬಹಳ ಖುಷಿ ಪಡುತ್ತಾ ಆ ಬೇವಿನ ಕಡ್ಡಿಯನ್ನೇ ಸಂತ ಎಂದು ಭಾವಿಸಿ ತಮ್ಮ ಜೊತೆಗೆ ತೀರ್ಥ ಕ್ಷೇತ್ರಕ್ಕೆ ತೆಗೆದುಕೊಂಡು ಹೊರಟರು. ಕಾಶಿ, ಗಯಾ, ಬದರಿ, ಕೇದಾರ, ಹರಿದ್ವಾರ ಎಂದೆಲ್ಲ ಸುತ್ತಾಡಿ ಹಲವು ದಿನಗಳ ನಂತರ ಹಿಂದಿರುಗಿ ಆಶ್ರಮದ ಆ ಸಂತನ ಬಳಿ ಬಂದು ಸಂತ ಕೊಟ್ಟಿದ್ದ ಬೇವಿನ ಕಡ್ಡಿಯನ್ನು ಹಿಂದಿರುಗಿಸಿದರು. ಅವರು ಜತನವಾಗಿ ಇಟ್ಟುಕೊಂಡು ವಾಪಸ್ ಕೊಟ್ಟ ಬೇವಿನ ಕಡ್ಡಿಯ ಬಗೆಗೆ ಸಂತನಿಗೆ ಅಚ್ಚರಿ.

ಹತ್ತಾರು ಭಕ್ತಗಣ ತೀರ್ಥಯಾತ್ರೆ ಮುಗಿಸಿ ಬಂದ ಸಡಗರದಲ್ಲಿ ಅಂದು ಆಶ್ರಮದಲ್ಲಿ ಅಕ್ಕಿ ಬೆಲ್ಲದ ಪಾಯಸವನ್ನೂ ಮಾಡಲಾಯಿತು. ಪಾಯಸ ಕುದಿಯುವಾಗ ಯಾರಿಗೂ ಗೊತ್ತಾಗದ ಹಾಗೆ ಸಂತನು ಆ ಬೇವಿನ ಕಡ್ಡಿಯನ್ನೂ ಅದರೊಳಗೆ ಹಾಕಿದ. ಎಲ್ಲರೂ ಊಟಕ್ಕೆ ಕುಳಿತಾಗ ಪಾಯಸವನ್ನು ಬಡಿಸಲಾಯಿತು. ಸಿಹಿಯಾಗಿರಬೇಕಿದ್ದ ಪಾಯಸದಲ್ಲಿ ಕಹಿ ಕಾಣಿಸಿ ಎಲ್ಲರಿಗೂ ದಿಗ್ಭ್ರಮೆ. ಕುದಿದ ಬೇವಿನ ಕಡ್ಡಿ ಬಿಟ್ಟುಕೊಟ್ಟ ಕಹಿ ಅದು.

ಏನೂ ಹೇಳದೆ ಸಂಜೆ ಆ ಸಂತ ಉಪನ್ಯಾಸಕ್ಕೆ ಕೂತ. 'ಸ್ನೇಹಿತರೆ ನೀವು ಹೋದೆಡೆಯೆಲ್ಲ ನಿಮ್ಮ ಜೊತೆಗೆ ಬಂದಿದ್ದ ಬೇವಿನ ಕಡ್ಡಿಯನ್ನು ಪಾಯಸದೊಳಗೆ ಕುದಿಯಲು ಬಿಟ್ಟಿದ್ದೆ. ಅದು ಅಷ್ಟು ಪಾವನ ಕ್ಷೇತ್ರಗಳಲ್ಲಿ ಓಡಾಡಿದ್ದರೂ ತನ್ನ ಒಳಗಿನ ಕಹಿಯನ್ನು ಕಳೆದುಕೊಂಡಿರಲಿಲ್ಲ. ಸಿಹಿಯಾಗಿ ಬದಲಾಗಿರಲಿಲ್ಲ. ಹಾಗೆಯೇ ನಾವೂ'. ನಿಜವಲ್ಲವೆ? ಮನಸಿನ ತುಂಬಾ ಕಲ್ಮಷವಿಟ್ಟುಕೊಂಡು ಎಷ್ಟು ಜಪಿಸಿದರೇನು? ತಪವ ಮಾಡಿದರೇನು? ಪೂಜಿಸಿದರೇನು? ಮೂಲಗುಣವು ಬದಲಾಗದೇ ಇದ್ದರೆ ಅದು ಬೇವಿನ ಗತಿಯೇ ಸರಿ.

ತನುವ ನೀರೊಳಗದ್ದಿ ಏನು ಫಲ ಎಂದು ಪುರಂದರರು ಹಾಡಿದರೆ, ಸಪ್ತಶೀಲಗಳ ಬಗ್ಗೆ ಬಸವಣ್ಣ ಬಾರಿ ಬಾರಿ ಎಚ್ಚರಿಸುತ್ತಾರೆ. ಇನ್ನು ದೇಶ ಸುತ್ತಾಡಿ ಬಂದ ಬೇವಿನ ಕಡ್ಡಿಯ ಪಾಡೇನು? ತನುವ ತೋಂಟವ ಮಾಡಿ, ಮನವ ಗುದ್ದಲಿ ಮಾಡಿ ಅಗೆದು ಬೆಳಕಿನ ಸಸಿಗಳ ಸಲಹಲು ತಿಳಿವಳಿಕೆ ಹೇಳಿದ ಅಲ್ಲಮ ಪ್ರಭುವಿನ ಚಿಂತನೆಗಳೂ ಅಂತರಂಗದ ಹಸನು ಕುರಿತಾಗಿಯೇ ಪರಿತಪಿಸುತ್ತವೆ. ನಿರ್ಮಲವಾದ ಮನಸುಗಳಿಗೆ ಯಾವ ನದಿ ದೇಗುಲಗಳ ಹಂಗಿರದ ಹಾದಿ ಕೈ ಬೀಸಿ ಕರೆಯುತ್ತಲೇ ಇದೆ.

ಪದಬಂಧ 6256

ವಿದ್ಯಾ ವಿನಯ್



ಎಡದಿಂದ ಬಲಕ್ಕೆ
2.ಹಾಲು ಮೊಸರು ಮಾರುವವನು (4)
4.ಕೊನೆಗೆ ಹಾರವನ್ನಿಟ್ಟು ಹೊಡೆಯುವಿಕೆ! (3)
5.ಉಳಿಕೆ ಅಥವಾ ಬಾಕಿ (2)
6.ಅಂಗನೆಯ ದೇಹ! (2)
7.ಮರವನ್ನು ಕತ್ತರಿಸುವ ಸಾಧನ (2)
9.ಪ್ರಗತಿಯಲ್ಲಿರುವ ನಕಲು! (2)
10.ವಿಜ್ಞಾನದಲ್ಲಿರುವ ಅರಿವು (2)
11.ನಮ್ಮ ಸುತ್ತಮುತ್ತಲಿನ ಪ್ರದೇಶ (4)
13.ಚರ್ಮದ ಊದುಚೀಲ (2)
14.ಶುನಕವಿಲ್ಲಿ ಉಲ್ಟಾ ಕಾಣುತ್ತಿದೆ (2)
15.ರಾಜನ ಸಭೆ (3)
16.ಕೊನೆಗೆ ಮತಿ ಇದ್ದರೂ ಅನಗತ್ಯ ಖರ್ಚು! (4)

ಮೇಲಿಂದ ಕೆಳಕ್ಕೆ
1.ಸತಿ ತೋರಿದ ಅನುಕಂಪ (5)
2.ಕಲ್ಲಿನ ಕೆಲಸ ಮಾಡುವವನು (4)
3.ಆನೆ ನಡಿಗೆಯಿದು (5)
8.ಉಲ್ಟಾಪಲ್ಟಾ ಬೀಸಿದ ಗಾಳಿ (3)
9.ಹೆರಿಗೆ ಮನೆಯಿದು (5)
10.ದಾಯಾದಿ ಜಗಳವಿದು (5)
12.ಯತಿಗೆ ಈ ರೀತಿ ಸೋಡಿ ಸಿಕ್ಕಿದೆ! (4)

6255ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ನಿಯಾಮಕ 3.ಮಹಜರು
5.ನವೀನ 6.ಹೂಬಿಸಿಲು
8.ವಿಷಯ 10.ಸುಶ್ರಾವ್ಯ
12.ಪಾದರಸ 15.ಸತ್ಕುಲ
16.ಸ್ವಾಭಿಮಾನ 17.ಕನ್ನಡಕ

ಮೇಲಿಂದ ಕೆಳಕ್ಕೆ:
1.ನಿದಾಹೂ 2.ಕನಲು
3.ಮನವಿ 4.ರುದ್ರ
7.ಬಿಸಿಮುಟ್ಟಸು 9.ಯಮಕಿಂಕರ
11.ವ್ಯಸನ 12.ಪಾಲಕ
13.ಸರೀಕ 14.ಹ್ರಸ್ವಾ

ಸುಡೊಕು 6640

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	6			9				8
1			8			5		2
		2		6				
		7			9	6		
4	2			3			5	9
6			7		8			
2		5	4		7	9		6
								5
9		6	3		5		4	1

6639 ಸುಡೊಕು

8	7	3	2	1	9	4	6	5
6	2	9	4	5	8	7	1	3
4	1	5	6	7	3	9	2	8
5	4	2	7	9	6	8	3	1
3	6	7	8	4	1	5	9	2
1	9	8	3	2	5	6	4	7
9	8	1	5	6	2	3	7	4
2	3	4	9	8	7	1	5	6
7	5	6	1	3	4	2	8	9

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

17 ಡಿಸೆಂಬರ್ 2025 ಬುಧವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಕೃಷ್ಣ ದ್ವಾದಶಿ ಗಂ. 23-58 ನಕ್ಷತ್ರ: ಸ್ವಾತಿ ಗಂ. 14-10 ಯೋಗ: ಅತಿಗಂಡ ಗಂ. 13-23 ಕರಣ: ಕೌಲವ ಗಂ. 10-39 ಧನು ಮಾಸದ 02 ನೇ ದಿನ. ಮಳೆ ನಕ್ಷತ್ರ : ಮೂಲ 1 ನೇ ಪಾದ. ರಾಹುಕಾಲ : ಮಧ್ಯಾಹ್ನ 12-00 - 01-30, ಸೂರ್ಯೋದಯ : 06-50 ಸೂರ್ಯಾಸ್ತ : 06-03, ಮುಸ್ಲಿಂ ದಿನಾಂಕ : 25 ಜುಮಾದುಸ್ಸಾನಿ, ಅದೃಷ್ಟ ಸಂಖ್ಯೆ : 2, 11

ಮೇಷ: ಕೆಲಸಗಾರರಲ್ಲಿ ಒಮ್ಮತಾಭಿಪ್ರಾಯ ಮೂಡಿಸಲು ಅನುಸರಿಸಿದ ಮಾರ್ಗ ಮೆಚ್ಚಿ ಮೇಲಧಿಕಾರಿಗಳಿಂದ ಪ್ರಶಂಸೆ ಪಡೆಯುವಿರಿ. ಮನೆ ಕಟ್ಟುವ ಬಗ್ಗೆ ಹಿರಿಯರ ಹಾಗೂ ಮನೆಯವರ ಅಭಿಪ್ರಾಯವನ್ನು ಸಂಗ್ರಹಿಸಿ.

ವೃಷಭ: ಶತ್ರುಗಳು ವಂಚನೆ ಮಾಡುವ ಸಲುವಾಗಿ ಮಿತ್ರರಾಗುವಂತೆ ನಟನೆ ಮಾಡಿಯಾರು. ಸ್ವಪ್ನದಲ್ಲಿ ಕೂಡಾ ಅಂಥವರ ಬಗ್ಗೆ ಜಾಗ್ರತರಾಗಿರಿ. ಧನಾಗಮನ ಬಹುಪಾಲು ಅನವಶ್ಯಕವಾಗಿ ವೆಚ್ಚವಾಗಲಿದೆ.

ಮಿಥುನ: ಗೃಹಿಣಿಯರು ಆಹಾರ ತಯಾರಿಕೆಯ ವಿಚಾರದಲ್ಲಿ ಉತ್ತಮ ಹೊಗಳಿಕೆಯ ಮಾತುಗಳನ್ನು ಎದುರು ನೋಡಬಹುದು. ಸಾಹಿತ್ಯ ವಲಯದಲ್ಲಿರುವವರಿಗೆ ಹೆಚ್ಚಿನ ಮನ್ನಣೆ ಸಿಗಲಿದೆ.

ಕರ್ಕಾಟಕ: ಕೆಲಸಗಳನ್ನು ಅಚ್ಚುಕಟ್ಟಾಗಿ ಮಾಡುವುದರಿಂದಾಗಿ ಇತರರ ಅವಲಂಬನೆ ಕಡಿಮೆಯಾಗುವುದು. ಹಲವು ದಿನಗಳ ನಂತರ ಹವ್ಯಾಸದ ಕೆಲಸವನ್ನು ಸಂತಸದಿಂದ ಮಾಡುವಿರಿ.

ಸಿಂಹ: ಸಹೋದರರಲ್ಲಿನ ಸ್ವತ್ತು ವಿಚಾರದಲ್ಲಿ ಬಂಧುಗಳು ನೆರವಿಗೆ ಬರಲಿದ್ದು, ತಂದೆಯವರ ಮಾತಿನಂತೆಯೇ ನಡೆಯಲು ಒಪ್ಪುವಿರಿ. ರಾಸಾಯನಿಕ ವಸ್ತುಗಳ ಮಾರಾಟದಿಂದ ಲಾಭ ಕಾಣುವಿರಿ. ಚಿಂತೆಗೊಳಗಾಗದಿರಿ.

ಕನ್ಯಾ: ಸಹೋದರನಲ್ಲಿ ಮತ್ತು ನೆರೆಹೊರೆಯವರೊಂದಿಗೆ ಸೌಹಾರ್ದದಿಂದ ವರ್ತಿಸುವುದರಿಂದ ಸಂಬಂಧಗಳು ಇನ್ನಷ್ಟು ಉತ್ತಮಗೊಳ್ಳುವುದು. ಗೆಳೆತನಕ್ಕೆ ಸಂಬಂಧಿಸಿದ ಗುಪ್ತ ವಿಚಾರ ಸೋರಿಕೆಯಾಗಬಹುದು.

ತುಲಾ: ವ್ಯವಹಾರಗಳ ವಿಷಯಕ್ಕೆ ಸಂಬಂಧಿಸಿದಂತೆ ಪಾಲುದಾರರೊಂದಿಗೆ ಜರೂರಿನಲ್ಲಿ ಚರ್ಚೆ ನಡೆಸಬೇಕಾದ ಪರಿಸ್ಥಿತಿ ಎದುರಾಗಲಿದೆ. ಸಣ್ಣ ಕೈಗಾರಿಕೋದ್ಯಮದವರಿಗೆ ಸರ್ಕಾರದಿಂದ ಸಹಕಾರ ದೊರೆಯಲಿದೆ.

ವೃಶ್ಚಿಕ: ವಿದ್ಯಾರ್ಥಿಗಳಿಗೆ ಓದು ಅಥವಾ ಉದ್ಯೋಗದ ಆಯ್ಕೆ ವಿಚಾರದಲ್ಲಿ ಸ್ನೇಹಿತರಿಂದ ಸಲಹೆ ದೊರೆಯಲಿದೆ. ನಿಮ್ಮ ನಡೆಯು ಮೇಲಧಿಕಾರಿ ಅಥವಾ ಪಾಲುದಾರರಿಗೆ ಇಷ್ಟವಾಗುವ ರೀತಿಯಲ್ಲಿ ಇರುವುದು ಉತ್ತಮ.

ಧನು: ಮನೆಯಲ್ಲಿ ದೂರದ ಸಂಬಂಧಿಕರೊಬ್ಬರ ಆಗಮನದಿಂದ ಸಡಗರ ಸೃಷ್ಟಿಸಲಿದೆ. ಸಾಂಸಾರಿಕ ವಿಷಯದಲ್ಲಿ ಹಿರಿಯರ ಮಾತು ಮೀರದಿರುವುದು ಲೇಸು. ಸರ್ಕಾರಿ ಉದ್ಯೋಗಸ್ಥರಿಗೆ ವರ್ಗಾವಣೆ ಸಂಭವವಿದೆ.

ಮಕರ: ಕೌಟುಂಬಿಕ ವಿಷಯಗಳತ್ತ, ಅದರಲ್ಲೂ ಮಡದಿಯ ಆರೋಗ್ಯದ ವಿಚಾರದಲ್ಲಿ ಗಮನಹರಿಸಬೇಕಾಗುವುದು. ಮಗನ ತಾಂತ್ರಿಕ ವಿದ್ಯಾಭ್ಯಾಸದಲ್ಲಿ ಪ್ರಗತಿ ಕಂಡು ಮನೆಯವರಿಗೆ ಸಂತಸವಾಗುವುದು.

ಕುಂಭ: ಆಸ್ತಿ ಕೊಳ್ಳುವುದರಲ್ಲಾಗಲೀ, ಮನೆ ಕಟ್ಟುವ ವಿಚಾರದಲ್ಲಿ ಅದೃಷ್ಟವು ಇರುತ್ತದೆ. ನಾಯಕತ್ವದ ಗುಣಗಳನ್ನು ಪ್ರದರ್ಶಿಸುವುದರಿಂದ ಲಾಭವಿದೆ. ಚಿನ್ನ ಮೊದಲಾದ ದುಬಾರಿ ಲೋಹಗಳಿಗೆ ಹಣ ವಿನಿಯೋಗ ಮಾಡುವಿರಿ.

ಮೀನ: ಮನೆಯ ಆಸ್ತಿಯ ವಿಷಯದಲ್ಲಿ ಅನುಭವಸ್ಥರಿಂದ ಬರುವ ಸಲಹೆ ಸೂಚನೆಗಳಿಗೆ ಗಮನ ನೀಡಿ. ವೃತ್ತಿಪರ ಸಾಧನೆಗಳಿಂದಾಗಿ ಸೂಕ್ತ ಸ್ಥಾನಮಾನ ತಾನಾಗಿಯೇ ಒದಗಿ ಬರಲಿದೆ. ಷೇರು ವ್ಯಾಪಾರ ಅದೃಷ್ಟದಾಯಕ.

ಗುಂಡಣ್ಣ



ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 26,027
ಇಂದಿನ ಅಂತ್ಯ: 25,860
ದಿನದ ಕನಿಷ್ಠ: 25,834
167

ಮೊಟ್ಟೆ ಧಾರಣೆ (ಎನ್‌ಇಸಿಸಿ)
ಬೆಂಗಳೂರು
100 ಕ್ಕೆ ₹690
12 ಕ್ಕೆ ₹96
ಮೈಸೂರು: 100 ಕ್ಕೆ ₹690

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹179.50
ಆರ್‌ಎಸ್‌ಎಸ್-5 ₹174.50
ಗುಡ್ ಲಾಟ್ ₹162.50

ರಾಮನಗರ ರೇಷ್ಮೆಗೂಡು
ಮಿಶ್ರತಳಿ(ಸಿ.ಬಿ) ₹565-766
ದ್ವಿತಳಿ (ಬಿ.ವಿ) ₹311-905

ಮುದ್ರೆಮನೆ ಕಾಫಿ
ಎಪಿ ₹27900
ಎಸಿ ₹15260
ಆರ್‌ಪಿ ₹18000
ಆರ್‌ಸಿ ₹9960

90.93ರ ಮಟ್ಟಕ್ಕೆ ರೂಪಾಯಿ ಮೌಲ್ಯ

ವ್ಯಾಪಾರ ಕೊರತೆಯು ಮೌಲ್ಯ ಇಳಿಕೆಗೆ ಕಾರಣ ಎಂದ ಕೇಂದ್ರ ಸರ್ಕಾರ

ಮುಂಬೈ (ಪಿಟಿಐ): ರೂಪಾಯಿಯ ಮೌಲ್ಯವು ಮಂಗಳವಾರದ ವಹಿವಾಟಿನಲ್ಲಿ ಅಮೆರಿಕದ ಡಾಲರ್ ಎದುರು 15 ಪೈಸೆಯಷ್ಟು ಕುಸಿದು ₹90.93 ಆಗಿದೆ.

ವ್ಯಾಪಾರ ಕೊರತೆ ಅಂತರ ಹೆಚ್ಚುತ್ತಿರುವುದು, ಭಾರತ ಮತ್ತು ಅಮೆರಿಕ ನಡುವಿನ ವ್ಯಾಪಾರ ಒಪ್ಪಂದದ ವಿಚಾರವಾಗಿ ನಡೆದಿರುವ ಬೆಳವಣಿಗೆಗಳು ರೂಪಾಯಿ ಮೌಲ್ಯ ಕುಸಿತಕ್ಕೆ ಕಾರಣಗಳು ಎಂದು ಕೇಂದ್ರ ಸರ್ಕಾರವು ರಾಜ್ಯಸಭೆಗೆ ತಿಳಿಸಿದೆ.

ಮಂಗಳವಾರದ ವಹಿವಾಟಿನ ನಡುವಿನಲ್ಲಿ ರೂಪಾಯಿಯು 36 ಪೈಸೆಯವರೆಗೆ ಕುಸಿದು, 91.14ರವರೆಗೆ ತಲುಪಿತ್ತು. ಆದರೆ ನಂತರ ತುಸು ಚೇತರಿಕೆ ಕಂಡುಕೊಂಡಿತು. ಕಳೆದ ಐದು ವಹಿವಾಟಿನ ದಿನಗಳಲ್ಲಿ ರೂಪಾಯಿ ಮೌಲ್ಯವು ಅಮೆರಿಕದ ಡಾಲರ್ ಎದುರು ಶೇ 1ರಷ್ಟು ಮೌಲ್ಯ ಕಳೆದುಕೊಂಡಿದೆ.

ಡಾಲರ್ ದುರ್ಬಲವಾಗಿದ್ದರೂ ಕಚ್ಚಾ ತೈಲದ ಬೆಲೆಯು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಡಿಮೆ ಆಗಿದ್ದರೂ ರೂಪಾಯಿ ಮೌಲ್ಯ ಕುಸಿತ ತಡೆಯಲು ಆಗಲಿಲ್ಲ ಎಂದು ವರ್ತಕರು ತಿಳಿಸಿದ್ದಾರೆ.

ರೂಪಾಯಿ ಮೌಲ್ಯ ಇಳಿಕೆಯ ವಿಚಾರ ರಾಜ್ಯಸಭೆಯಲ್ಲಿ ಮಂಗಳವಾರ ಪ್ರಸ್ತಾಪ ಆಯಿತು. ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಅವರು, 'ಈ ಹಣಕಾಸು ವರ್ಷದಲ್ಲಿ ರೂಪಾಯಿ ಮೌಲ್ಯದ ಮೇಲೆ ವ್ಯಾಪಾರ ಕೊರತೆ, ಅಮೆರಿಕ ಮತ್ತು ಭಾರತದ ನಡುವಿನ ವ್ಯಾಪಾರ ಒಪ್ಪಂದಕ್ಕೆ ಸಂಬಂಧಿಸಿದ ಮಾತುಕತೆಗಳು ಪ್ರಭಾವ ಬೀರಿವೆ' ಎಂದು ತಿಳಿಸಿದರು.

'ರೂಪಾಯಿ ಮೌಲ್ಯದ ಕುಸಿತವು ರಫ್ತು ವಲಯದ ಸ್ಪರ್ಧಾತ್ಮಕತೆಯನ್ನು ಹೆಚ್ಚು ಮಾಡುವ ಸಾಧ್ಯತೆ ಇದೆ. ಇದು ದೇಶದ ಅರ್ಥ ವ್ಯವಸ್ಥೆಯ ಮೇಲೆ ಪೂರಕ ಪರಿಣಾಮ ಉಂಟುಮಾಡುತ್ತದೆ. ಆದರೆ ಮೌಲ್ಯ ಕುಸಿತವು ಆಮದು ಮಾಡಿಕೊಂಡ ಸರಕುಗಳ ಬೆಲೆಯನ್ನು ಹೆಚ್ಚಿಸಬಹುದು. ರೂಪಾಯಿ ಮೌಲ್ಯ ಕುಸಿತದಿಂದಾಗಿ ದೇಶದ ಮಾರುಕಟ್ಟೆಯಲ್ಲಿನ ಬೆಲೆಗಳ ಮೇಲಿನ ಪರಿಣಾಮವು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿನ ಸರಕುಗಳ ಬೆಲೆ ಏರಿಕೆಯು ಎಷ್ಟರಮಟ್ಟಿಗೆ ದೇಶಿ ಮಾರುಕಟ್ಟೆಯ ಮೇಲೆ ವರ್ಗಾವಣೆ ಆಗುತ್ತದೆ ಎಂಬುದನ್ನು ಆಧರಿಸಿರಲಿದೆ' ಎಂದು ಅವರು ಹೇಳಿದರು.

ಈ ವರ್ಷದಲ್ಲಿ ಡಿಸೆಂಬರ್ 3ರವರೆಗೆ ರೂಪಾಯಿ ಮೌಲ್ಯವು ಶೇ 5.1ರಷ್ಟು ಇಳಿಕೆ ಕಂಡಿದೆ ಎಂದು ಚೌಧರಿ ಮಾಹಿತಿ ನೀಡಿದರು. 2017ರ ನಂತರದಲ್ಲಿ ರೂಪಾಯಿ ಮೌಲ್ಯವು ಅಮೆರಿಕದ ಡಾಲರ್ ಎದುರು ನಿರಂತರವಾಗಿ ಕುಸಿಯುತ್ತಿದೆ.

'ರೂಪಾಯಿಯ ಮೌಲ್ಯವನ್ನು ಮಾರುಕಟ್ಟೆ ತೀರ್ಮಾನಿಸುತ್ತದೆ. ವಿದೇಶಿ ವಿನಿಮಯ ಮಾರುಕಟ್ಟೆಯ ಮೇಲೆ ಆರ್‌ಬಿಐ ಕಾಲಕಾಲಕ್ಕೆ ನಿಗಾ ಇರಿಸುತ್ತದೆ, ಅನಿಶ್ಚಿತತೆ ಅತಿಯಾಗಿದ್ದರೆ ಮಧ್ಯಪ್ರವೇಶ ಮಾಡುತ್ತದೆ. ಡಾ;ರ್-ರೂಪಾಯಿ ವಿನಿಮಯ ದರದ ಮೇಲೆ ಪರಿಣಾಮ ಉಂಟುಮಾಡುವ ಸಂಗತಿಗಳ ಮೇಲೆ ನಿಗಾ ಇರಿಸುತ್ತದೆ' ಎಂದು ಸಚಿವರು ವಿವರಿಸಿದರು.

ಯಾವ ವರ್ಷದಲ್ಲಿ ಎಷ್ಟು ಕುಸಿತ?

ವರ್ಷ	ಕುಸಿತ	ವರ್ಷ	ಕುಸಿತ
2018	8.5%	2021	1.7%
2019	2.3%	2022	10.2%
2020	2.3%	2023	0.6%
		2024	2.8%

ಇನ್ನಷ್ಟು ಇಳಿಕೆ?

ರೂಪಾಯಿ ಮೌಲ್ಯವು ಅಮೆರಿಕದ ಡಾಲರ್ ಎದುರು ಇದೇ ತಿಂಗಳಲ್ಲಿ 92ರ ಮಟ್ಟಕ್ಕೆ ಕುಸಿಯುವ ಸಾಧ್ಯತೆ ಇದೆ ಎಂದು ಮಾರುಕಟ್ಟೆ ತಜ್ಞರು ಅಂದಾಜು ಮಾಡಿದ್ದಾರೆ.

ಶ್ರೀಗಂಧ ಮಂಡಳಿ ಸ್ಥಾಪನೆ: ಗೋಯಲ್‌ಗೆ ಮನವಿ

ನವದೆಹಲಿ: ಕರ್ನಾಟಕದಲ್ಲಿ ಶ್ರೀಗಂಧ ಬೆಳೆಗಾರರ ಹಿತರಕ್ಷಣೆಗೆ ಶ್ರೀಗಂಧ ಮಂಡಳಿ ಸ್ಥಾಪಿಸಬೇಕು ಎಂದು ಒತ್ತಾಯಿಸಿ ಬೆಂಗಳೂರು ಗ್ರಾಮಾಂತರ ಸಂಸದ ಡಾ.ಸಿ. ಎನ್.ಮಂಜುನಾಥ್ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕ ಸಚಿವ ಪೀಯೂಷ್ ಗೋಯಲ್ ಅವರಿಗೆ ಮನವಿ ಸಲ್ಲಿಸಿದರು.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ನಾಲ್ಕನೇ ವರ್ಷದ ಪುಣ್ಯಸ್ಮರಣೆ



ಶ್ರೀ ಬಿ. ಗಂಗಾಧರ್ ರವರು
ಜನನ: 30.06.1950 ● ಮರಣ: 17.12.2021
ಇಂತಿ: ಶ್ರೀಮತಿ ನಂಜಮ್ಮ ಹಾಗೂ ಕುಟುಂಬವರ್ಗದವರು

ಎಲ್‌ಐಸಿ ಹೂಡಿಕೆ ಟಾಟಾದಲ್ಲಿ ಹೆಚ್ಚು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ಜೀವ ವಿಮಾ ನಿಗಮವು (ಎಲ್‌ಐಸಿ) ಅತಿಹೆಚ್ಚು ಮೊತ್ತವನ್ನು ಹೂಡಿಕೆ ಮಾಡಿರುವುದು ಟಾಟಾ ಸಮೂಹದ ಕಂಪನಿಗಳಲ್ಲಿ.

ಎಲ್‌ಐಸಿಯಿಂದ ಅತಿಹೆಚ್ಚು ಹೂಡಿಕೆ ಆಕರ್ಷಿಸಿರುವ ಕಂಪನಿಗಳ ಪಟ್ಟಿಯಲ್ಲಿ ಎರಡನೆಯ ಸ್ಥಾನದಲ್ಲಿ ಎಚ್‌ಡಿಎಫ್‌ಸಿ ಬ್ಯಾಂಕ್ ಇದೆ. ಮೂರನೆಯ ಸ್ಥಾನದಲ್ಲಿ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಇದೆ.

ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಅವರು ಮಂಗಳವಾರ ರಾಜ್ಯಸಭೆಗೆ ನೀಡಿರುವ ಲಿಖಿತ ಉತ್ತರದಲ್ಲಿ ಈ ಮಾಹಿತಿ ಒದಗಿಸಿದ್ದಾರೆ. ಅದಾನಿ ಸಮೂಹದಲ್ಲಿ ಎಲ್‌ಐಸಿ ಒಟ್ಟು ₹47,633 ಕೋಟಿ ಹೂಡಿಕೆ ಮಾಡಿದೆ.

ಎಲ್‌ಐಸಿಯ ಹೂಡಿಕೆಯು ಒಟ್ಟು 35 ಕಂಪನಿಗಳಲ್ಲಿ ತಲಾ ₹5 ಸಾವಿರ ಕೋಟಿಗಿಂತ ಹೆಚ್ಚಿದೆ. ಈ 35 ಕಂಪನಿಗಳಲ್ಲಿ ಎಲ್‌ಐಸಿ ಹೂಡಿಕೆಯ ಒಟ್ಟು ಮೌಲ್ಯ ₹7.87 ಲಕ್ಷ ಕೋಟಿ. ಈ ಪೈಕಿ ಮೊದಲ ಐದು ಕಂಪನಿಗಳಲ್ಲಿನ ಹೂಡಿಕೆಯ ಮೌಲ್ಯವು ₹3.23 ಲಕ್ಷ ಕೋಟಿಯಷ್ಟಿದೆ.

ಎಲ್‌ಐಸಿಯು ಆಡಳಿತ ಮಂಡಳಿಯಿಂದ ಅನುಮೋದನೆ ಪಡೆದಿರುವ ಹೂಡಿಕೆ ನೀತಿಯನ್ನು ಪಾಲಿಸುತ್ತಿದೆ. ಕಂಪನಿಗಳ ಷೇರುಗಳು ಹಾಗೂ ಸಾಲಪತ್ರಗಳಲ್ಲಿ ಹೂಡಿಕೆ ಮಾಡುವ ವಿಚಾರವಾಗಿ ಸಿಇಒ ಮತ್ತು ಎಂ.ಡಿ., ವಿವಿಧ ಎಂ.ಡಿ.ಗಳು ಹಾಗೂ ಸ್ವತಂತ್ರ ನಿರ್ದೇಶಕರು ಇರುವ ಉಪ ಸಮಿತಿಯು ತೀರ್ಮಾನ ತೆಗೆದುಕೊಳ್ಳುತ್ತದೆ ಎಂದು ಸಚಿವರು ಉತ್ತರದಲ್ಲಿ ಹೇಳಿದ್ದಾರೆ.

ಪ್ರಮಾಣಿತ ಕಾರ್ಯ ವಿಧಾನ (ಎಸ್‌ಒಪಿ) ಅನುಸರಿಸಿ ಎಲ್ಲ ಹೂಡಿಕೆ ಕೆಲಸಗಳನ್ನು ಮಾಡಲಾಗುತ್ತದೆ. ಈ ಎಸ್‌ಒಪಿಯನ್ನು ಪ್ರತಿ ವರ್ಷ ಪರಿಶೀಲಿಸಲಾಗುತ್ತದೆ, ಅಗತ್ಯ ಕಂಡುಬಂದಾದ ಅದನ್ನು ಪರಿಷ್ಕರಿಸಲಾಗುತ್ತದೆ ಎಂದು ಹೇಳಿದ್ದಾರೆ.

ಎಲ್‌ಐಸಿ ಎಲ್ಲೆಲ್ಲಿ ಹೆಚ್ಚು ಹೂಡಿಕೆ ಮಾಡಿದೆ? (ಮೌಲ್ಯ ಕೋಟಿ ₹)

ಕಂಪನಿ	ಮೌಲ್ಯ
ಟಾಟಾ ಸಮೂಹ	₹88,404
ಎಚ್‌ಡಿಎಫ್‌ಸಿ	₹80,843
ರಿಲಯನ್ಸ್ ಇಂಡಸ್ಟ್ರೀಸ್	₹60,065
ಅದಾನಿ ಸಮೂಹ	₹47,633
ಎಸ್‌ಬಿಐ	₹46,621
ಎಲ್‌ಆ್ಯಂಡ್‌ಟಿ	₹40,276
ಯೂನಿಲಿವರ್	₹29,814
ಐಡಿಬಿಐ	₹29,134
ಮಹೀಂದ್ರ	₹26,337
ಆದಿತ್ಯ ಬಿರ್ಲಾ	₹26,156

ಅಡಿಕೆ ಧಾರಣೆ

ಚಿತ್ರದುರ್ಗ		ಸಿದ್ದಾಪುರ			
ಅಪಿ	54219-54629	ಬಿಳಿಗೋಟು	27389-36408	ರಾಶಿ	48299-57561
ಬೆಟ್ಟೆ	36649-37089	ಚಾಲಿ	40189-47569	**ಯಲ್ಲಾಪುರ**	
ಕೆಂಪುಗೋಟು	30600-31000	ಕೋಕ	22619-29312	ಆಪಿ	53199-69755
ರಾಶಿ	51739-54169	ಕೆಂಪುಗೋಟು	24589-33111	ಬಿಳಿಗೋಟು	13318-35009
ಚುರು	7000-7000	ರಾಶಿ	51899-56469	ಕೋಕ	12900-30799
ಸಾಗರ		ತಟ್ಟಿಬೆಟ್ಟೆ	34919-45699	ಹಳೆಚಾಲಿ	34609-48301
ಬಿಳಿಗೋಟು	24599-25006	**ಶಿರಸಿ**		ಹೊಸಚಾಲಿ	34299-40699
ಚಾಲಿ	36299-41399	ಬೆಟ್ಟೆ	36899-52089	ಕೆಂಪುಗೋಟು	14099-37619
ಕೋಕ	26989-26989	ಬಿಳಿಗೋಟು	21310-37718	ರಾಶಿ	50799-63369
ರಾಶಿ	54029-54029	ಚಾಲಿ	38509-48999	ತಟ್ಟಿಬೆಟ್ಟೆ	38010-52921
ಸಿಪ್ಪೆಗೋಟು	23699-23699	ಕೆಂಪುಗೋಟು	18311-38619		

ನಿರುದ್ಯೋಗ ಪ್ರಮಾಣ ಶೇ 4.7ಕ್ಕೆ ಇಳಿಕೆ

ನವದೆಹಲಿ (ಪಿಟಿಐ): 15 ವರ್ಷ, ಅದಕ್ಕಿಂತ ಹೆಚ್ಚಿನ ವಯಸ್ಸಿನವರ ನಿರುದ್ಯೋಗ ಪ್ರಮಾಣವು ನವೆಂಬರ್‌ನಲ್ಲಿ ಶೇಕಡ 4.7ಕ್ಕೆ ಇಳಿದಿದೆ. ಇದು ಅಕ್ಟೋಬರ್‌ನಲ್ಲಿ ಶೇ 5.2ರಷ್ಟು ಇತ್ತು.

ನವೆಂಬರ್‌ನ ನಿರುದ್ಯೋಗ ಪ್ರಮಾಣವು ಈ ವರ್ಷದ ಏಪ್ರಿಲ್ ನಂತರದ ಕನಿಷ್ಠ ಮಟ್ಟ ಎಂದು ಕೇಂದ್ರ ಸಾಂಖ್ಯಿಕ ಮತ್ತು ಯೋಜನಾ ಅನುಷ್ಠಾನ ಸಚಿವಾಲಯ ಹೇಳಿದೆ.

ನವೆಂಬರ್‌ನಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ನಿರುದ್ಯೋಗ ಪ್ರಮಾಣವು ಶೇ 3.9ಕ್ಕೆ ಇಳಿಕೆಯಾಗಿದೆ, ನಗರ ಪ್ರದೇಶಗಳಲ್ಲಿ ಇದು ಶೇ 6.5ಕ್ಕೆ ಇಳಿಕೆ ಕಂಡಿದೆ ಎಂದು ಸಚಿವಾಲಯ ಹೇಳಿದೆ.

ಕಾರ್ಮಿಕ ಮಾರುಕಟ್ಟೆಯು ಹೆಚ್ಚು ಬಲಗೊಳ್ಳುತ್ತಿರುವುದನ್ನು, ಗ್ರಾಮೀಣ ಪ್ರದೇಶಗಳಲ್ಲಿ ಪರಿಸ್ಥಿತಿ ಉತ್ತಮವಾಗಿರುವುದನ್ನು, ಮಹಿಳೆಯರ ಭಾಗವಹಿಸುವಿಕೆ ಹೆಚ್ಚುತ್ತಿರುವುದನ್ನು, ಗ್ರಾಮೀಣ ಪ್ರದೇಶಗಳಲ್ಲಿ ಪರಿಸ್ಥಿತಿಯು ನಿಧಾನವಾಗಿ ಸುಧಾರಿಸುತ್ತಿರುವುದನ್ನು ಅಂಕಿ-ಅಂಶಗಳು ತೋರಿಸುತ್ತಿವೆ ಎಂದು ಸಚಿವಾಲಯದ ಹೇಳಿಕೆಯು ತಿಳಿಸಿದೆ.

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಸಿ. ಕೆ. ಸತೀಶ್, ಮೈಸೂರು

● **ಪ್ರಶ್ನೆ: ನಾನು ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಸಹ ಶಿಕ್ಷಕನಾಗಿ ಕಾರ್ಯನಿರ್ವಹಿಸುತ್ತಿದ್ದು, ಭೋಗ್ಯಕ್ಕೆ ಮನೆ ಪಡೆದು ವಾಸವಾಗಿದ್ದೇನೆ. ನನಗೆ ಸ್ವಂತ ಮನೆ, ನಿವೇಶನ ಇಲ್ಲ. ನನ್ನ ವಯಸ್ಸು 54 ವರ್ಷ. ನನ್ನ ವೇತನ ಸುಮಾರು ₹93,000 ಆಗಿದ್ದು, ಇದರಲ್ಲಿ ವಿಮೆ, ಪಿ.ಎಫ್ ಹಾಗೂ ಇತರ ಎಲ್ಲ ಕಡಿತಗಳ ನಂತರ ನಿವ್ವಳ ವೇತನ ನನಗೆ ಲಭ್ಯವಾಗುತ್ತಿದೆ. ನಾನು ಸುಮಾರು ₹16 ಲಕ್ಷ ವೈಯಕ್ತಿಕ ಸಾಲ ಪಡೆದಿದ್ದು, ಇದರ ಬಾಕಿ ಮೊತ್ತ ₹12.54 ಲಕ್ಷ. ಈ ಸಾಲದ ತಿಂಗಳ ಕಂತು ₹26,500. ನನಗೆ ಕರ್ನಾಟಕ ಸರ್ಕಾರದ ವಿಮಾ ವಿಭಾಗದಿಂದ ಸುಮಾರು ₹7-8 ಲಕ್ಷ ಬರಲಿದೆ. ಇದಲ್ಲದೆ, ನನ್ನ ಬಳಿ ಯಾವುದೇ ಉಳಿತಾಯವಿಲ್ಲ. ನಾನು ಜುಲೈ 2031ರಲ್ಲಿ ನಿವೃತ್ತನಾಗಲಿದ್ದೇನೆ. ನನ್ನ ಪ್ರಶ್ನೆ ಏನೆಂದರೆ, ನಾನು ಎಷ್ಟು ಮೌಲ್ಯದ ಮನೆ ಕೊಳ್ಳಬಹುದು? ಮುಂದಿನ ಜೀವನಕ್ಕೆ ಯಾವ ರೀತಿಯ ಹಣಕಾಸು ವ್ಯವಸ್ಥೆ ಮಾಡಿಕೊಳ್ಳಬೇಕು?**

ಉತ್ತರ: ನೀವು ಮೊದಲ ಆದ್ಯತೆಯಾಗಿ ವೈಯಕ್ತಿಕ ಸಾಲ ಕಡಿಮೆ ಮಾಡುವುದು ಅಥವಾ ಅದನ್ನು ಸಂಪೂರ್ಣವಾಗಿ ಮರುಪಾವತಿ ಮಾಡುವುದು ಅತ್ಯಂತ ಸಮಂಜಸ ಕ್ರಮ. ವೈಯಕ್ತಿಕ ಸಾಲಗಳಿಗೆ ಸಾಮಾನ್ಯವಾಗಿ ಹೆಚ್ಚಿನ ಬಡ್ಡಿದರ ಅನ್ವಯವಾಗುತ್ತದೆ. ನೀವು ಕರ್ನಾಟಕ ಸರ್ಕಾರದ ವಿಮಾ ವಿಭಾಗದಿಂದ ಬರಲಿರುವ ₹7-8 ಲಕ್ಷ ಮೊತ್ತವನ್ನು ಅಗತ್ಯ ತುರ್ತು ಅವಶ್ಯಕತೆಗಳಿಲ್ಲದಿದ್ದಲ್ಲಿ ಸಾಲವನ್ನು ಭಾಗಶಃ ಅಥವಾ ಸಂಪೂರ್ಣವಾಗಿ ತೀರಿಸಲು ಬಳಸಿದರೆ, ಬಡ್ಡಿ ವೆಚ್ಚವನ್ನು ಗಮನಾರ್ಹವಾಗಿ ಕಡಿಮೆ ಮಾಡಬಹುದು. ಇದರಿಂದ ನಿಮ್ಮ ತಿಂಗಳ ಇಎಂಐ ಕಂತಿನ ಒತ್ತಡ ಕಡಿಮೆಯಾಗುತ್ತದೆ, ನಿವ್ವಳ ಆದಾಯದಲ್ಲಿ ಹೆಚ್ಚುವರಿ ಉಳಿತಾಯಕ್ಕೆ ಅವಕಾಶ ಸಿಗುತ್ತದೆ. ಸಾಲದ ಹೊರೆ ಕಡಿಮೆಯಾದ ನಂತರ ಗೃಹ ಖರೀದಿ ಕುರಿತು ಯೋಚಿಸುವುದು ಹೆಚ್ಚು ಸುರಕ್ಷಿತ ಹಾಗೂ ಸಮತೋಲನದ ನಿರ್ಧಾರ.

ಮುಂದಿನ ಹಂತವಾಗಿ, ತಿಂಗಳ ಆದಾಯದ ಕನಿಷ್ಠ ಶೇ 30ರಿಂದ ಶೇ 40ರವರೆಗೆ ಉಳಿತಾಯ ಮಾಡುವುದನ್ನು ಗುರಿಯಾಗಿಸಿ. ನಿಮ್ಮ ನಿವೃತ್ತಿಗೆ ಇನ್ನೂ ಸುಮಾರು ಆರು ವರ್ಷ ಇರುವುದರಿಂದ ಈ ಅವಧಿಯಲ್ಲಿ ಆರ್ಥಿಕ ವಿಚಾರದಲ್ಲಿ ಶಿಸ್ತು ಹಾಗೂ ಸೂಕ್ತ ಹೂಡಿಕೆಗಳ ಮೂಲಕ ಉತ್ತಮ ಮೊತ್ತ ಸಂಗ್ರಹಿಸಬಹುದು. ಉದಾಹರಣೆಗೆ, ತಿಂಗಳಿಗೆ ಸರಾಸರಿ ₹30,000 ಅಥವಾ ₹40,000 ಉಳಿತಾಯ ಮಾಡಿದರೆ, ಸರಳ ಹಾಗೂ ಸುರಕ್ಷಿತ ಹೂಡಿಕೆ ಮಾರ್ಗಗಳ ಮೂಲಕವೇ ನಿವೃತ್ತಿ ಸಮಯಕ್ಕೆ ₹22-30 ಲಕ್ಷದವರೆಗೆ ಒಗ್ಗೂಡಿಸಬಹುದು. ಇದರ ಮೇಲಿನ ಬಡ್ಡಿಯ ಲಾಭವೂ ಸಿಗುತ್ತದೆ. ಕುಟುಂಬದ ಜವಾಬ್ದಾರಿಗಳನ್ನು ಪರಿಗಣಿಸಿ, ಕೆಲವು ತಿಂಗಳಲ್ಲಿ ಇನ್ನೂ ಹೆಚ್ಚಿನ ಉಳಿತಾಯ ಸಾಧ್ಯವಾದರೆ ಅದನ್ನು ಹೂಡಿಕೆ ಮಾಡಬಹುದು.

ಹಣಕಾಸಿನ ವಿಚಾರವಾಗಿ ಸಂಪೂರ್ಣ ಸ್ಥಿರತೆ ಸಾಧಿಸಿದ ನಂತರ ಮನೆಯ ಖರೀದಿಯ ನಿರ್ಧಾರ ಕೈಗೊಳ್ಳುವುದು ಒಳಿತು. ನಿವೃತ್ತಿ ನಂತರದ ನಿಯಮಿತ ಆದಾಯ, ಪಿಂಚಣಿ, ಪಿ.ಎಫ್, ವಿಮಾ ಮೊತ್ತ ಹಾಗೂ ಸಂಗ್ರಹಿತ ಉಳಿತಾಯ- ಇವುಗಳನ್ನು ಒಟ್ಟಾಗಿ ಪರಿಗಣಿಸಿ ಮನೆ ಮೌಲ್ಯವನ್ನು ನಿರ್ಧರಿಸಬೇಕು. ಬ್ಯಾಂಕ್ ಸಾಲದ ಅಗತ್ಯ ಬಿದ್ದರೆ, ಆ ಸಂದರ್ಭದಲ್ಲಿ ನಿಮ್ಮ ಕುಟುಂಬದ ಸದಸ್ಯರನ್ನು ಆಧಾರಕ್ಕೆ ಪರಿಗಣಿಸಬೇಕಾಗಬಹುದು. ಅತಿಯಾಗಿ ಸಾಲ ಅವಲಂಬಿಸದೆ, ಅಗತ್ಯವಿದ್ದರೆ ಚಿಕ್ಕ ಮನೆ ಅಥವಾ ಕಡಿಮೆ ಮೌಲ್ಯದ ಆಸ್ತಿ ಆಯ್ಕೆ ಮಾಡುವುದು ದೀರ್ಘಕಾಲಿಕವಾಗಿ ನಿಮ್ಮ ನಿವೃತ್ತ ಬದುಕನ್ನು ನೆಮ್ಮದಿಯಿಂದ ಇರಿಸಲು ನೆರವಾಗುತ್ತದೆ. ಜೊತೆಗೆ ತುರ್ತು ನಿಧಿ, ಆರೋಗ್ಯ ವಿಮೆ ಸಮರ್ಪಕವಾಗಿರುವುದನ್ನು ಖಚಿತಪಡಿಸಿಕೊಳ್ಳಿ. ನಿವೃತ್ತಿ ನಂತರದ ವೆಚ್ಚಗಳಿಗಾಗಿ ಸ್ಪಷ್ಟ ಯೋಜನೆ ರೂಪಿಸಿ.

ಶಂಕರ್ ಎಸ್., ಕಾರವಾರ

● **ಪ್ರಶ್ನೆ: ನನ್ನ ಮಗ ಬೆಂಗಳೂರಿನ ಖಾಸಗಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದಾನೆ. ಆತನ ಸೇವಾ ಅವಧಿ ಸುಮಾರು ಐದು ವರ್ಷ ಆಗಿದ್ದು ಕಂಪನಿಯ ಆಡಳಿತ ವರ್ಗ ಆತನ ಸೇವೆಗೆ ಸಂಬಂಧಿಸಿ ಪ್ರೋತ್ಸಾಹಪೂರ್ವಕವಾಗಿ ಕಂಪನಿಯ ಕೆಲವು ಷೇರುಗಳನ್ನು ನೀಡುವುದಾಗಿ ತಿಳಿಸಿದೆ. ಇದರ ಮೌಲ್ಯ ಸುಮಾರು ₹10 ಲಕ್ಷ ಎಂದು ಕಂಪನಿಯವರು ಅಂದಾಜಿಸಿದ್ದಾರೆ. ಈ ಕಂಪನಿ ಯಾವುದೇ ಷೇರು ಮಾರುಕಟ್ಟೆಯಲ್ಲಿ ನೋಂದಾಯಿತ ಆಗದಿರುವುದರಿಂದ ಇದರ ಮೌಲ್ಯದಲ್ಲಿ ಏರಿಳಿತ ಆಗುವುದಿಲ್ಲವೇ? ಹಾಗೂ ಈ ಮೌಲ್ಯ ಮುಂದೆಯೂ ಇರುವುದೇ? ಅನಿವಾರ್ಯವಾದರೆ ಈ ಷೇರುಗಳನ್ನು ಇತರರಿಗೆ ಮಾರಾಟ ಮಾಡಿ ಹಣ ನಗದೀಕರಿಸುವ ಅವಕಾಶ ಇದೆಯೇ?**

ಉತ್ತರ: ನಿಮ್ಮ ಪ್ರಶ್ನೆ ಬಹಳ ಸಹಜವಾದದ್ದು. ಷೇರುಪೇಟೆಯಲ್ಲಿ ನೋಂದಾಯಿತವಾಗದ ಕಂಪನಿಯ ಷೇರುಗಳ ಬೆಲೆ ಪ್ರತಿದಿನ ಏರಿಳಿತ ಕಾಣುವುದಿಲ್ಲ. ಆದರೆ ಇದರ ಅರ್ಥ ಷೇರು ಮೌಲ್ಯ ಬದಲಾಗುವುದಿಲ್ಲ ಎಂದಲ್ಲ. ಇಂತಹ ಷೇರುಗಳ ಮೌಲ್ಯವು ಕಂಪನಿಯ ಲಾಭ, ವ್ಯವಹಾರ ವೃದ್ಧಿ ಹಾಗೂ ಭವಿಷ್ಯದ ಹಣಕಾಸು ಸ್ಥಿತಿಗತಿಯ ಸಾಧ್ಯತೆಗಳ ಆಧಾರದ ಮೇಲೆ ಕಾಲಕ್ರಮೇಣ ಏರಿಕೆ ಅಥವಾ ಇಳಿಕೆ ಆಗಬಹುದು. ಕಂಪನಿಯವರು ಹೇಳಿರುವ ₹10 ಲಕ್ಷ ಮೌಲ್ಯವು ಅಂದಾಜು ಮಾತ್ರವಾಗಿದ್ದು, ಮುಂದಿನ ದಿನಗಳಲ್ಲಿ ಅದು ಮೇಲಿನ ಅಂಶಗಳನ್ನು ಪರಿಗಣಿಸಿ ಹೆಚ್ಚಾಗಬಹುದು ಅಥವಾ ಕಡಿಮೆಯಾಗಬಹುದು.

ಷೇರುಪೇಟೆಯಲ್ಲಿ ನೋಂದಾಯಿತ ಆಗದ ಕಂಪನಿ ಷೇರುಗಳನ್ನು ಸಾಮಾನ್ಯವಾಗಿ ತಕ್ಷಣ ನಗದೀಕರಿಸಲು ಸಾಧ್ಯವಿಲ್ಲ. ಇವುಗಳಿಗೆ ಷೇರುಪೇಟೆ ಮೂಲಕ ತೆರೆದ ಮಾರುಕಟ್ಟೆ ಇಲ್ಲದ ಕಾರಣ, ಇಂತಹ ಷೇರುಗಳನ್ನು ಮಾರಾಟ ಮಾಡಲು ಕಂಪನಿಯ ಅನುಮತಿ, ಬೈ-ಬ್ಯಾಕ್ ಯೋಜನೆ ಅಥವಾ ಇತರ ಹೂಡಿಕೆದಾರರನ್ನು ಅರಸಬೇಕಾಗುತ್ತದೆ. ಮಾನ್ಯತೆ ಪಡೆದ ಕೆಲವು ಬ್ರೋಕರ್‌ಗಳು ಇಂತಹ ಕಂಪನಿಗಳ ಷೇರುಗಳನ್ನು ಮಾರುವ ಹಾಗೂ ಕೊಳ್ಳುವ ಗಿರಾಕಿಗಳನ್ನು ಹೊಂದಿಸಿಕೊಡುವ ವ್ಯವಹಾರ ಮಾಡುತ್ತಾರೆ. ಭವಿಷ್ಯದಲ್ಲಿ ಐಪಿಒ ಮೂಲಕ ಇಂತಹ ಷೇರುಗಳು ಷೇರುಪೇಟೆ ಪ್ರವೇಶಿಸಿದರೆ, ಈ ಷೇರುಗಳು ಹೆಚ್ಚಿನ ಮೌಲ್ಯ ಪಡೆಯುವ ಸಾಧ್ಯತೆ ಇರುತ್ತದೆ. ಆದ್ದರಿಂದ, ಇಂತಹ ಷೇರುಗಳನ್ನು ದೀರ್ಘಕಾಲದ ಹೂಡಿಕೆಯಾಗಿ ಪರಿಗಣಿಸುವುದು ಸೂಕ್ತ.

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

ಕೆನರಾ ಬ್ಯಾಂಕ್ ಬಡ್ಡಿ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಸ್ವಾಮ್ಯದ ಕೆನರಾ ಬ್ಯಾಂಕ್ ರೆಪೊ ಆಧಾರಿತ ಸಾಲದ ಮೇಲಿನ ಬಡ್ಡಿ ದರವನ್ನು ಶೇಕಡ 0.25ರಷ್ಟು ಕಡಿಮೆ ಮಾಡಿದೆ. ಈ ಸಾಲಗಳ ಬಡ್ಡಿ ದರವು ಶೇ 8.25ರಷ್ಟು ಇದ್ದಿದ್ದು ಈಗ ಶೇ 8ಕ್ಕೆ ಇಳಿದಿದೆ.

ಭಾರತೀಯ ರಿಸರ್ವ್ ಬ್ಯಾಂಕ್ ಈಚೆಗೆ ರೆಪೊ ದರವನ್ನು ಶೇ 0.25ರಷ್ಟು ತಗ್ಗಿಸಿದೆ. ರೆಪೊ ದರ ಇಳಿಕೆಯ ಪೂರ್ತಿ ಪ್ರಯೋಜನವನ್ನು ಕೆನರಾ ಬ್ಯಾಂಕ್ ತನ್ನ ಗ್ರಾಹಕರಿಗೆ ವರ್ಗಾವಣೆ ಮಾಡಿದೆ. ಪರಿಷ್ಕೃತ ದರವು ಡಿಸೆಂಬರ್ 12ರಿಂದಲೇ ಅನ್ವಯವಾಗುತ್ತವೆ ಎಂದೂ ಬ್ಯಾಂಕ್ ಹೇಳಿದೆ.

ಆಹಾರ ಉತ್ಪನ್ನಗಳ ಮಾರುಕಟ್ಟೆಗೆ ರಿಲಯನ್ಸ್ ಇಂಡಸ್ಟ್ರೀಸ್ ಪ್ರವೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ ಎಫ್‌ಎಂಸಿಜಿ ಅಂಗಸಂಸ್ಥೆ ರಿಲಯನ್ಸ್ ಕನ್ಸ್ಯೂಮರ್ ಪ್ರಾಡಕ್ಟ್ಸ್ ಲಿಮಿಟೆಡ್ (ಆರ್‌ಸಿಪಿಎಲ್) 75 ವರ್ಷಗಳಷ್ಟು ಹಳೆಯದಾದ ಎಸ್‌ಐಎಲ್ ಬ್ರ್ಯಾಂಡ್‌ಗೆ ಮರುಜೀವ ನೀಡಿದೆ. ಈ ಮೂಲಕ ಪ್ಯಾಕ್ ಮಾಡಲಾದ ಆಹಾರ ಉತ್ಪನ್ನಗಳ ಮಾರುಕಟ್ಟೆಯನ್ನು ಪ್ರವೇಶಿಸಿದೆ.

ಕಂಪನಿಯು ಎಸ್‌ಐಎಲ್ ಬ್ರ್ಯಾಂಡ್ ಅಡಿಯಲ್ಲಿ ನೂಡಲ್ಸ್, ಜಾಮ್, ಕೆಚಪ್, ಸಾಸ್‌ಅನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ ಎಂದು ಪ್ರಕಟಣೆ ತಿಳಿಸಿದೆ. ಮುಂದಿನ ದಿನಗಳಲ್ಲಿ ಹೆಚ್ಚು ಬೇಡಿಕೆ ಬರುವ, ಪ್ಯಾಕ್ ಮಾಡಲಾದ ಹೊಸ ಆಹಾರ ಉತ್ಪನ್ನಗಳನ್ನು ಮಾರುಕಟ್ಟೆಗೆ ತರಲು ಇದು ಬುನಾದಿಯಂತಿದೆ ಎಂದು ಹೇಳಿದೆ.

ಮುಂಬೈ ಧಾರಣೆ (ಶೇಂಗಾ)

16-12-2025	
ಜಾವಾ 70/80(ಹೊಸ)	10600-10700
ಜಾವಾ 80/90(ಹೊಸ)	9900-10000
ದಪ್ಪ ಮಧ್ಯಪ್ರದೇಶ (ಹೊಸ)	7600-7700
ದಪ್ಪ ಗುಜರಾತ್ (ಹೊಸ)	8900-9000
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1530 (1530)
ಒಂದು ವಾರದ ಡೆಲಿವರಿ	1525 (1525)
ಪಾಮ್ ವಾರದ ಡೆಲಿವರಿ	1243 (1248)
ಸೂರ್ಯಕಾಂತಿ ಎಣ್ಣೆ ಕಚ್ಚಾ	1420 (1430)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,31,800 (1,32,600)
ಬೆಳ್ಳಿ ಕೆ.ಜಿಗೆ	1,92,300 (1,93,400)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಮುಂಬೈ ಖಾದ್ಯ ತೈಲ
(ಆವರಣದಲ್ಲಿ ಕಳೆದ ವಹಿವಾಟಿನ ದರ)

(10 ಕೆ.ಜಿಗೆ)	
ಶೇಂಗಾ (ರಿಫೈನ್ಡ್)	₹1520 (1520)
ಸೋಯಾ (ರಿಫೈನ್ಡ್)	₹1280 (1280)
ಸೂರ್ಯಕಾಂತಿ (ರಿಫೈನ್ಡ್)	₹1490 (1490)
ಪಾಮೋಲಿನ್	₹1245 (1250)

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ತಕ್ಷಣ ಬೇಕಾಗಿದ್ದಾರೆ. TOYOTA, TVS,ಬ್ರಿಟಾನಿಯಾ,ಟಾಟಾಮೋಟಾರ್ಸ್ ಗಳಿಗೆ SSLC, PUC, Degree, ITI,Diplomaದವರು 18,600/ 60,000/ (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 7204995716

ಬೇಕಾಗಿದ್ದರೆ: ಪ್ರಖ್ಯಾತ ಕನ್ನಡ ವಾರಪತ್ರಿಕೆಗೆ ಕೇಂದ್ರ ಕಛೇರಿ ಬೆಂಗಳೂರುನಲ್ಲಿ ವರದಿಗಾರರ ಬೇಕಾಗಿದ್ದಾರೆ. ಹೊಸಬರಿಗೂ ಅವಕಾಶವಿದೆ ಮತ್ತು ಅನುಭವ ಇರುವವರಿಗೆ ಆದ್ಯತೆ ಕೊಡಲಾಗುವುದು. ಆಸಕ್ತರು : 08023588510, +91 9513892666, 8884452699.

ತನ್ಮಯಿ OIL Companyಗೆ PUC Degree Basic Tally Computer ಕಲಿತವರು ಕೆಲಸಕ್ಕೆ ಬೇಕಾಗಿದ್ದಾರೆ. ವೇತನ 16000 ರಿಂದ 20000 ಶೇಷಾದ್ರಿಪುರಂ ಬೆಂಗಳೂರು 9019626612.

Part-Time Jobs

ಕರ್ನಾಟಕದ್ಯಾಂತ ಕಂಪನಿಗಳಿಗೆ ಮನೆಯಿಂದಲೇ ಕೆಲಸಗಳಿಗೆ ಪುರುಷರಿಗೆ, ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ ಆದ್ಯತೆ. 19,000ರಿಂದ 25,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 9019593297, 8095133188.

Wanted

ರಾಜಾಜಿನಗರದಲ್ಲಿರುವ ಪ್ರೈವೇಟ್ ಲಿಮಿಟೆಡ್ ಕಂಪನಿಯ ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು 30 ವರ್ಷದೊಳಗಿನ ಯುವಕರು ಬೇಕಾಗಿದ್ದಾರೆ ಸಂಪರ್ಕಿಸಿ: 9108458798/ 9845579620

ಪ್ರವಾಸ

Travel

26.12.25 5ದಿನಗಳು ದೆಹಲಿ,ಆಗ್ರಾ,ಜೈಪುರ್, ಫತೇಪುರ್ ಶಿಕ್ರಿ,ಇತ್ಯಾದಿ 38000 16.01.26 ಮತ್ತು`02.02.26 ಮಾಘಮೇಳ ಪ್ರಯುಕ್ತ 6ದಿನಗಳು ವಿಮಾನದಲ್ಲಿ ಪ್ರಯಾಗ್‌ರಾಜ್, ಕಾಶಿ,ಗಯಾ,ಅಯೋಧ್ಯ`33000 20.02.26 11ದಿನಗಳು ನೇಪಾಳ ಮುಕ್ತಿನಾಥ ಇತ್ಯಾದಿ.48000 ''ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್'' 9739847429/ 9845560219

ಕಂಪನಿಗಳಿಗೆ ಆಫೀಸ್ ಗಳಿಗೆ ಬೇಕಾಗಿದ್ದಾರೆ. 7th,PUC, Degree ಡಿಪ್ಲೋಮೋದವರು ಯುವಕರು ಯುವತಿಯರಿಗೆ ಸಂಬಳ 20000, 45000 (ವಿದ್ಯಾರ್ಹತೆಹಿಲ್ಲದವರಿಗೂ) ವಸತಿಯೂಟವಿರುತ್ತದೆ. 9916788422.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವೇನಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

'ಜೋರ್ಡನ್ ಪ್ರವಾಸ ಫಲಪ್ರದ'

ಅಮ್ಮಾನ್ (ಪಿಟಿಐ): ದೊರೆ 2ನೇ ಅಬ್ದುಲ್ಲಾ ಅವರೊಂದಿಗೆ ನಡೆದ ಮಾತುಕತೆ, ನವೀಕರಿಸಬಹುದಾದ ಇಂಧನ, ಜಲ ನಿರ್ವಹಣೆ, ಡಿಜಿಟಲ್ ರೂಪಾಂತರ, ಸಾಂಸ್ಕೃತಿಕ ವಿನಿಮಯ ಮತ್ತು ಪಾರಂಪರಿಕ ಸಹಕಾರ ಸೇರಿದಂತೆ ಪ್ರಮುಖ ಕ್ಷೇತ್ರಗಳಲ್ಲಿ ಭಾರತ-ಜೋರ್ಡನ್ ಪಾಲುದಾರಿಕೆಯನ್ನು ಬಲಪಡಿಸಲಿದೆ ಎಂದು ಪ್ರಧಾನಿ ಮೋದಿ ಮಂಗಳವಾರ ಹೇಳಿದ್ದಾರೆ.

'ನನ್ನ ಜೋರ್ಡನ್ ಪ್ರವಾಸ ಫಲಪ್ರದವಾಗಿದೆ' ಎಂದು ಮೋದಿ ಹೇಳಿದ್ದಾರೆ.

ತಮ್ಮ ಎರಡು ದಿನಗಳ ಪ್ರವಾಸದ ಕೊನೆಯಲ್ಲಿ, ದೊರೆ 2ನೇ ಅಬ್ದುಲ್ಲಾ ಮತ್ತು ಜೋರ್ಡಾನ್ ಜನತೆಯ ಸ್ನೇಹಕ್ಕಾಗಿ ಧನ್ಯವಾದ ಸಲ್ಲಿಸಿದ್ದಾರೆ.

'ನಾವು ಒಟ್ಟಾಗಿ ಮಾಡಲಿರುವ ಸಾಧನೆಗಳು ನಮ್ಮ ಪ್ರಜೆಗಳಿಗೆ ಪ್ರಗತಿ ಮತ್ತು ಸಮೃದ್ಧಿಗೆ ಹೊಸ ದಾರಿಗಳನ್ನು ತೆರೆಯಲಿವೆ' ಎಂದು ಪ್ರಧಾನಿ ಮೋದಿ ಸಾಮಾಜಿಕ ಮಾಧ್ಯಮದಲ್ಲಿ ಹೇಳಿದ್ದಾರೆ.

ಮೋದಿ ಅವರು 2ನೇ ಅಬ್ದುಲ್ಲಾ ಅವರೊಂದಿಗೆ ಹುಸೇನಿಯಾ ಅರಮನೆಯಲ್ಲಿ ಸೋಮವಾರ ಸಭೆ ನಡೆಸಿದರು.

ಮಂಗಳವಾರ ಬಿಡುಗಡೆ ಮಾಡಿದ ಜಂಟಿ ಹೇಳಿಕೆಯಲ್ಲಿ, ಪರಸ್ಪರ ನಂಬಿಕೆ, ಸೌಹಾರ್ದತೆ ಮತ್ತು ಸದ್ಭಾವನೆಯಿಂದ ರೂಪಿಸಲ್ಪಟ್ಟ ತಮ್ಮ ದೇಶಗಳ ನಡುವಿನ ದೀರ್ಘ ಕಾಲದ ಸಂಬಂಧವನ್ನು ಉಭಯ ನಾಯಕರು ಶ್ಲಾಘಿಸಿದರು.

ಪ್ರಧಾನಿ ಮೋದಿ ಅವರನ್ನು ಜೋರ್ಡನ್ ರಾಜಕುಮಾರ ಅಲ್ ಹುಸೇನ್ ಬಿನ್ 2ನೇ ಅಬ್ದುಲ್ಲಾ ಅವರು ಬೀಳ್ಕೊಟ್ಟರು —ಪಿಟಿಐ ಚಿತ್ರ

ಇಥಿಯೋಪಿಯಾದತ್ತ ಪ್ರಧಾನಿ

ತಮ್ಮ ನಾಲ್ಕು ದಿನಗಳ ಮೂರು ರಾಷ್ಟ್ರಗಳ ಪ್ರವಾಸದ ಎರಡನೇ ಹಂತದಲ್ಲಿ ಮಂಗಳವಾರ ಪ್ರಧಾನಿ ಮೋದಿ ಜೋರ್ಡನ್‌ನಿಂದ ಇಥಿಯೋಪಿಯಾಗೆ ಪ್ರಯಾಣ ಬೆಳೆಸಿದ್ದಾರೆ. ಅವರನ್ನು ಜೋರ್ಡನ್ ರಾಜಕುಮಾರ ಅಲ್ ಹುಸೇನ್ ಬಿನ್ 2ನೇ ಅಬ್ದುಲ್ಲಾ ಅವರು ಕಾರಿನಲ್ಲಿ ವಿಮಾನ ನಿಲ್ದಾಣಕ್ಕೆ ಕರೆದೊಯ್ದು ವಿಶೇಷ ವಿದಾಯ ಹೇಳಿದರು.

ಇಥಿಯೋಪಿಯಾಗೆ ತಮ್ಮ ಮೊದಲ ಭೇಟಿಯಲ್ಲಿ ಪ್ರಧಾನಿ ಮೋದಿ ಅವರು ಸಂಸತ್ತಿನ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾತನಾಡಲಿದ್ದಾರೆ ಮತ್ತು 'ಪ್ರಜಾಪ್ರಭುತ್ವದ ತಾಯಿ'ಯಾಗಿ ಭಾರತದ ಪ್ರಯಾಣ ಮತ್ತು ಭಾರತ-ಇಥಿಯೋಪಿಯಾ ಪಾಲುದಾರಿಕೆಯು ಜಗತ್ತಿನ ದಕ್ಷಿಣಕ್ಕೆ ನೀಡಬಹುದಾದದ ಮೌಲ್ಯದ ಕುರಿತು ತಮ್ಮ ಚಿಂತನೆಗಳನ್ನು ಹಂಚಿಕೊಳ್ಳಲಿದ್ದಾರೆ.

ವಿಮೆ: ಶೇ100 ಎಫ್‌ಡಿಐಗೆ ಅಸ್ತು

ನವದೆಹಲಿ(ಪಿಟಿಐ): ವಿಮಾ ಕ್ಷೇತ್ರದಲ್ಲಿ ಶೇ 100ರಷ್ಟು ವಿದೇಶಿ ನೇರ ಹೂಡಿಕೆಗೆ (ಎಫ್‌ಡಿಐ) ಅವಕಾಶ ಕಲ್ಪಿಸುವ ಮಸೂದೆಯನ್ನು ಲೋಕಸಭೆಯಲ್ಲಿ ಮಂಗಳವಾರ ಅಂಗೀಕರಿಸಲಾಯಿತು.



ನಿರ್ಮಲಾ ಸೀತಾರಾಮನ್

'ಸಬ್‌ಕಾ ವಿಮಾ ಸಬ್‌ಕಿ ರಕ್ಷಾ(ವಿಮಾ ಕಾಯ್ದೆಗಳ ತಿದ್ದುಪಡಿ) ಮಸೂದೆ,2025' ಮಂಡಿಸಿ ಮಾತನಾಡಿದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್,'ಎಫ್‌ಡಿಐ ಹರಿವು ಹೆಚ್ಚಳಕ್ಕೆ ಅವಕಾಶ ಕಲ್ಪಿಸಿದಾಗ, ಹೆಚ್ಚು ವಿಮಾ ಕಂಪನಿಗಳು ಈ ಕ್ಷೇತ್ರ ಪ್ರವೇಶಿಸಲು ಸಾಧ್ಯವಾಗಲಿದೆ ಹಾಗೂ ಕೈಗೆಟುಕುವ ದರದಲ್ಲಿ ಎಲ್ಲರಿಗೂ ವಿಮಾ ಸೌಲಭ್ಯ ಸಿಗಲಿದೆ' ಎಂದು ಹೇಳಿದರು.

'ಈ ಕ್ಷೇತ್ರದಲ್ಲಿ ಏಕಸ್ವಾಮ್ಯ ಇದ್ದರೆ ನಮಗೆ ಹೆಚ್ಚು ಅನುಕೂಲ ಆಗುವುದಿಲ್ಲ. ಸ್ಪರ್ಧೆ ಹೆಚ್ಚಿದಷ್ಟೂ ಉತ್ತಮ ದರಕ್ಕೆ ವಿಮೆ ಸಿಗಲಿದೆ' ಎಂದೂ ಅವರು ಹೇಳಿದರು.

'ರಷ್ಯಾದ ಜತೆ ಶೀಘ್ರವೇ ಶಾಂತಿ ಒಪ್ಪಂದ'

ಕೀವ್ (ಎಪಿ): 'ಉಕ್ರೇನ್-ರಷ್ಯಾ ಯುದ್ಧವನ್ನು ಕೊನೆಗೊಳಿಸುವ ನಿಟ್ಟಿನಲ್ಲಿ ಶಾಂತಿ ಒಪ್ಪಂದಕ್ಕೆ ಸಂಬಂಧಿಸಿದಂತೆ ಅಮೆರಿಕದ ಅಧಿಕಾರಿಗಳ ಜತೆಗೆ ನಡೆಯುತ್ತಿರುವ ಮಾತುಕತೆ ಇನ್ನೇನು ಕೆಲವೇ ದಿನಗಳಲ್ಲಿ ಅಂತಿಮಗೊಳ್ಳಲಿದೆ. ಶಾಂತಿ ಒಪ್ಪಂದದ ಪ್ರಸ್ತಾವವನ್ನು ಶೀಘ್ರವೇ ರಷ್ಯಾದ ಎದುರು ಪ್ರಸ್ತುತಪಡಿಸಲಾಗುವುದು' ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಹೇಳಿದ್ದಾರೆ.

ವೊಲೊಡಿಮಿರ್ ಝೆಲೆನ್‌ಸ್ಕಿ

ಬರ್ಲಿನ್‌ನಲ್ಲಿ ಅಮೆರಿಕದ ಅಧಿಕಾರಿಗಳು ಹಾಗೂ ಐರೋಪ್ಯ ನಾಯಕರ ಜತೆಗೆ ಸೋಮವಾರ ನಡೆದ ಸಭೆಯ ಬಳಿಕ ಮಾಧ್ಯಮಗಳೊಂದಿಗೆ ಝೆಲೆನ್‌ಸ್ಕಿ ಮಾತನಾಡಿದರು.

'ಶಾಂತಿ ಒಪ್ಪಂದದ ಕರಡು ಕುರಿತು ಸಭೆಯಲ್ಲಿ ಚರ್ಚಿಸಲಾಗಿದೆ. ಇದು ಫಲಪ್ರದವೂ ಆಗಿದೆ. ರಷ್ಯಾ ಆಕ್ರಮಿತ ಉಕ್ರೇನ್ ಪ್ರದೇಶಗಳ ಸ್ಥಿತಿ ಕುರಿತ ವಿಚಾರ ಇನ್ನೂ ಬಗೆಹರಿದಿಲ್ಲ. ಈ ನಿಟ್ಟಿನಲ್ಲಿ ಪರಿಹಾರ ಕಂಡುಕೊಳ್ಳಲು ಅಧಿಕಾರಿಗಳು ಪ್ರಯತ್ನಿಸುತ್ತಿದ್ದಾರೆ' ಎಂದಿದ್ದಾರೆ.

ಅಲ್ಲದೇ, ಶೀಘ್ರವೇ ಪ್ರಸ್ತಾವದ ವಿಚಾರಗಳು ಅಂತಿಮಗೊಳ್ಳಲಿವೆ. ನಂತರದಲ್ಲಿ ಅಮೆರಿಕದ ರಾಯಭಾರಿಗಳು ಪ್ರಸ್ತಾವವನ್ನು ರಷ್ಯಾದ ಎದುರು ಪ್ರಸ್ತುತಪಡಿಸಲಿದ್ದಾರೆ. ಅಮೆರಿಕದಲ್ಲಿ ಮುಂದಿನ ವಾರಾಂತ್ಯದಲ್ಲಿ ಸಭೆ ನಡೆಸುವ ಸಾಧ್ಯತೆ ಇದೆ. ಅದಕ್ಕೂ ಮುನ್ನವೇ ಪ್ರಸ್ತಾವ ಅಂತಿಮಗೊಳ್ಳುವ ಸಾಧ್ಯತೆಗಳಿವೆ ಎಂದೂ ಮಾಹಿತಿ ನೀಡಿದ್ದಾರೆ.

ಪಾಕಿಸ್ತಾನದಲ್ಲಿ 5.2 ತೀವ್ರತೆಯ ಭೂಕಂಪ

ಕರಾಚಿ (ಪಿಟಿಐ): ಪಾಕಿಸ್ತಾನದ ಅತಿದೊಡ್ಡ ನಗರ ಕರಾಚಿ ಮತ್ತು ಬಲೂಚಿಸ್ತಾನ ಭಾಗದ ಕೆಲವು ಪ್ರದೇಶಗಳಲ್ಲಿ ಸೋಮವಾರ 5.2 ತೀವ್ರತೆಯ ಭೂಕಂಪ ಸಂಭವಿಸಿದೆ.

ಭೂಕಂಪದ ಕೇಂದ್ರವು ಬಲೂಚಿಸ್ತಾನದ ಸೋನ್ಮಿಯಾನಿ ಎಂದು ರಾಷ್ಟ್ರೀಯ ಭೂಕಂಪನ ಮಾನಿಟರಿಂಗ್ ಕೇಂದ್ರ ತಿಳಿಸಿದೆ.

ಯಾವುದೇ ಸಾವುನೋವು ಸಂಭವಿಸಿಲ್ಲ. ಯಾರಿಗೂ ಗಾಯಗಳೂ ಆಗಿಲ್ಲ ಎಂದು ವಿಪತ್ತು ನಿರ್ವಹಣಾ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಬಿಬಿಸಿ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡಿದ ಟ್ರಂಪ್

ವಾಷಿಂಗ್ಟನ್ (ಎಪಿ): ತಮ್ಮ ಭಾಷಣವನ್ನು ತಪ್ಪಾಗಿ ಅರ್ಥೈಸುವಂತೆ ವಿಡಿಯೊ ಎಡಿಟ್ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಬ್ರಿಟಿಷ್ ಬ್ರಾಡ್‌ಕಾಸ್ಟಿಂಗ್ ಕಾರ್ಪೊರೇಷನ್ (ಬಿಬಿಸಿ) ವಿರುದ್ಧ 10 ಶತಕೋಟಿ ಡಾಲರ್ (₹90,912 ಕೋಟಿಗೂ ಅಧಿಕ) ಪರಿಹಾರ ಕೋರಿ ಮೊಕದ್ದಮೆಯನ್ನು ಫ್ಲಾರಿಡಾದಲ್ಲಿ ಹೂಡಿದ್ದಾರೆ.

ಡೊನಾಲ್ಡ್ ಟ್ರಂಪ್

'2021ರ ಜ.6ರಂದು ತಮ್ಮ ಭಾಷಣವನ್ನು ಬಿಬಿಸಿ ತಪ್ಪಾಗಿ ಎಡಿಟ್ ಮಾಡಿತ್ತು. ಇದು ಕ್ಯಾಪಿಟಲ್ ಗಲಭೆಗೆ ಕುಮ್ಮಕ್ಕು ನೀಡಿತ್ತು' ಎಂದು ಆರೋಪಿಸಿದ್ದಾರೆ.

ಮೊಕದ್ದಮೆ ಸಂಬಂಧ ಅವರು ಸಲ್ಲಿಸಿರುವ 33 ಪುಟಗಳಲ್ಲಿ ಬಿಬಿಸಿಯು ಸುಳ್ಳು, ಮಾನಹಾನಿ, ಮೋಸ, ಅವಹೇಳನಗೊಳಿಸುವ, ಪ್ರಚೋದಿಸುವ ಮತ್ತು ದುರುದ್ದೇಶಪೂರಿತ ಚಿತ್ರಣವನ್ನು ಪ್ರಸಾರ ಮಾಡಿದೆ ಎಂದು ದೂರಿದ್ದಾರೆ. ಇದು 2024ರ ಅಮೆರಿಕ ಅಧ್ಯಕ್ಷೀಯ ಚುನಾವಣೆಯಲ್ಲಿ ಹಸ್ತಕ್ಷೇಪ ಮಾಡುವ ಮತ್ತು ಪ್ರಭಾವ ಬೀರುವ ಯತ್ನವಾಗಿದೆ ಎಂದೂ ಹೇಳಿದ್ದಾರೆ. ಈ ಕುರಿತು ಬಿಬಿಸಿ ತಕ್ಷಣದ ಪ್ರತಿಕ್ರಿಯೆ ನೀಡಿಲ್ಲ.

ಈ ಸಂಬಂಧ ಬಿಬಿಸಿ ಈಗಾಗಲೇ ಟ್ರಂಪ್ ಅವರಲ್ಲಿ ಕ್ಷಮೆಯಾಚಿಸಿದೆ. ಆದರೆ, ವಿಡಿಯೊದಿಂದ ಆಗಿರುವ ಹಾನಿಗೆ ಪರಿಹಾರ ನೀಡುವುದಿಲ್ಲ ಎಂದೂ ಹೇಳಿದೆ. ಈ ವಿವಾದ ಸಂಬಂಧ ಬಿಬಿಸಿ ಮುಖ್ಯಸ್ಥರಿಬ್ಬರು ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದರು.

ಆಸ್ಟ್ರೇಲಿಯಾದಲ್ಲಿ ಗುಂಡಿನ ದಾಳಿ ನಡೆಸಿದ್ದು ಭಾರತೀಯ

ಒಂದನೇ ಪುಟದಿಂದ...

ಆಸ್ಟ್ರೇಲಿಯಾ ಪೊಲೀಸರ ವಶದಲ್ಲಿರುವ ಸಾಜಿದ್ ಪುತ್ರ ನವೀದ್ ಸದ್ಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ಈತ ಒಮ್ಮೆಯೂ ಭಾರತಕ್ಕೆ ಭೇಟಿ ನೀಡಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ಬೋಂಡಿ ಬೀಚ್‌ನಲ್ಲಿ ನಡೆದ ಗುಂಡಿನ ದಾಳಿಯು 'ಇಸ್ಲಾಮಿಕ್ ಸ್ಟೇಟ್‌ನಿಂದ ಪ್ರೇರಿತವಾದ ಭಯೋತ್ಪಾದಕ ದಾಳಿ' ಎಂದು ಆಸ್ಟ್ರೇಲಿಯಾದ ಫೆಡರಲ್ ಪೊಲೀಸ್ ಕಮಿಷನರ್ ಕ್ರಿಸ್ಸಿ ಬ್ಯಾರೆಟ್ ಹೇಳಿದ್ದಾರೆ.

'ಐಎಸ್ ಪ್ರೇರಿತ ಉಗ್ರ ದಾಳಿ'

ಮೆಲ್ಬರ್ನ್ (ಎಪಿ): ಸಿಡ್ನಿಯ ಬೋಂಡಿ ಬೀಚ್‌ನ 'ಹನುಕ್ಕಾ ಯಹೂದಿ ಹಬ್ಬ'ದ ಪ್ರಾರಂಭೋತ್ಸವದಲ್ಲಿ ನಡೆದ ಗುಂಡಿನ ದಾಳಿಯು ಇಸ್ಲಾಮಿಕ್ ಸ್ಟೇಟ್ (ಐಎಸ್) ಭಯೋತ್ಪಾದಕ ಸಂಘಟನೆಯಿಂದ ಪ್ರೇರಣೆ ಪಡೆದ ಉಗ್ರ ದಾಳಿ ಎಂದು ಆಸ್ಟ್ರೇಲಿಯಾ ಫೆಡರಲ್ ಪೊಲೀಸ್ ಕಮಿಷನರ್ ಕ್ರಿಸ್ಸಿ ಬ್ಯಾರೆಟ್ ತಿಳಿಸಿದ್ದಾರೆ.

50 ವರ್ಷದ ದಾಳಿಕೋರ ಸಾಜಿದ್ ಅಕ್ರಮ್ ಪೊಲೀಸರು ನಡೆಸಿದ ಗುಂಡಿನ ದಾಳಿಗೆ ಬಲಿಯಾಗಿದ್ದಾನೆ. 24 ವರ್ಷದ ಅವರ ಮಗ ನವೀದ್ ಅಕ್ರಮ್ ದಾಳಿಯಲ್ಲಿ ತೀವ್ರವಾಗಿ ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

'ಇಸ್ಲಾಮಿಕ್ ಸ್ಟೇಟ್‌ನಿಂದ ಪ್ರೇರೇಪಣೆ ಪಡೆದಿದ್ದರು ಎಂದು ಶಂಕಿಸಲಾಗಿದೆ. ವಶಕ್ಕೆ ಪಡೆದಿರುವ ವಾಹನದಲ್ಲಿ ಐಎಸ್ ಧ್ವಜ ಪತ್ತೆಯಾಗಿದೆ' ಎಂದು ಪ್ರಧಾನಿ ಆಂಥೊನಿ ಅಲ್ಬನೀಸ್ ತಿಳಿಸಿದ್ದಾರೆ

ಗಾಯಾಳುಗಳಲ್ಲಿ ಮೂವರು ಭಾರತೀಯರು

ದಾಳಿಯಲ್ಲಿ ಗಾಯಗೊಂಡ 40 ಮಂದಿ ಪೈಕಿ ಮೂವರು ಭಾರತೀಯ ವಿದ್ಯಾರ್ಥಿಗಳಿದ್ದಾರೆ. ಈ ಪೈಕಿ ಇಬ್ಬರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು 'ಆಸ್ಟ್ರೇಲಿಯಾ ಟುಡೇ' ವರದಿ ಮಾಡಿದೆ.

ದಾಳಿಯಲ್ಲಿ ಗಾಯಗೊಂಡಿರುವ 25 ಜನರಿಗೆ ಆಸ್ಪತ್ರೆಗಳಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಈ ಪೈಕಿ 10 ಮಂದಿಯ ಆರೋಗ್ಯ ಸ್ಥಿತಿ ಗಂಭೀರವಾಗಿದೆ. ದಾಳಿಯಲ್ಲಿ 10 ವರ್ಷ ಮಗು ಸೇರಿದಂತೆ 15 ಮಂದಿ ಮೃತಪಟ್ಟಿದ್ದಾರೆ.

'ಭಯೋತ್ಪಾದನೆ ವಿರುದ್ಧ ಶೂನ್ಯ ಸಹಿಷ್ಣುತೆ'

ಜೆರುಸಲೇಮ್ (ಪಿಟಿಐ): ಸಿಡ್ನಿಯ ಬೋಂಡಿ ಬೀಚ್‌ನ 'ಹನುಕ್ಕಾ ಯಹೂದಿ ಹಬ್ಬ'ದ ವೇಳೆ ನಡೆದ ಭಯೋತ್ಪಾದಕ ದಾಳಿಯನ್ನು ಖಂಡಿಸಿದ ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್, 'ಭಾರತ ಮತ್ತು ಇಸ್ರೇಲ್ ಭಯೋತ್ಪಾದನೆ ವಿರುದ್ಧ ಶೂನ್ಯ ಸಹಿಷ್ಣುತೆ ನೀತಿಯನ್ನು ಹೊಂದಿವೆ' ಎಂದು ಹೇಳಿದರು.

ಎರಡು ದಿನಗಳ ಭೇಟಿಗಾಗಿ ಮಂಗಳವಾರ ಇಸ್ರೇಲ್‌ಗೆ ಭೇಟಿ ನೀಡಿದ ಜೈಶಂಕರ್ ಅಲ್ಲಿನ ವಿದೇಶಾಂಗ ವ್ಯವಹಾರಗಳ ಸಚಿವ ಗಿಡಿಯಾನ್ ಮೋಶೆ ಸಾರ್ ಅವರೊಂದಿಗೆ ಪತ್ರಿಕಾ ಗೋಷ್ಠಿಯಲ್ಲಿ ಈ ಹೇಳಿಕೆ ನೀಡಿದರು.

ಟ್ರೇಲರ್ ಬಿಡುಗಡೆ ಸಮಾರಂಭದಲ್ಲಿ ಬೆಂಗಳೂರು ನಗರ ಪೊಲೀಸ್ ಆಯುಕ್ತ ಸೀಮಾಂತ್‌ಕುಮಾರ್ ಸಿಂಗ್, ರಮೇಶ್ ರೆಡ್ಡಿ, ಉಪೇಂದ್ರ, ಶಿವರಾಜ್‌ಕುಮಾರ್, ಸುಧಾರಾಣಿ, ರಾಜ್ ಬಿ.ಶೆಟ್ಟಿ, ಪ್ರಮೋದ್ ಶೆಟ್ಟಿ, ಅರ್ಜುನ್ ಜನ್ಯ.

ಚೆಲುವೆಯ ನೋಟ ಚೆನ್ನ....

ವಯಸ್ಸು ಅರವತ್ತು ದಾಟಿದ್ದರೂ ನಟ ಶಿವರಾಜ್‌ಕುಮಾರ್ ಅವರ ಸಿನಿಮಾ ಪ್ರೀತಿ, ಭಿನ್ನ ಪಾತ್ರಗಳನ್ನು ನಿಭಾಯಿಸುವ ಹಪಹಪಿ ಇನ್ನೂ ಕಡಿಮೆಯಾಗಿಲ್ಲ ಎನ್ನುವಂತಿದೆ ‘45’ ಸಿನಿಮಾದ ಟ್ರೇಲರ್. ನೆರೆದಿದ್ದ ಸಾವಿರಾರು ಜನರ ಮುಂದೆ ನಟ ಉಪೇಂದ್ರ ‘ಚೆಲುವೆಯ ನೋಟ ಚೆನ್ನ..’ ಎಂದು ಹಾಡುತ್ತಾ ಶಿವರಾಜ್‌ಕುಮಾರ್ ಗಲ್ಲ ಸವರಿದಾಗ, ನಿರೂಪಕಿ ಅನುಶ್ರೀ ದೃಷ್ಟಿ ತೆಗೆದಾಗ, ಚಂದನವನದ ‘ಶಿವಣ್ಣ’ ಹೆಣ್ಣಿನಂತೆ ನಾಚಿನೀರಾದರು. ಈ ದೃಶ್ಯಗಳಿಗೆ ವೇದಿಕೆಯಾಗಿದ್ದು ಅರ್ಜುನ್ ಜನ್ಯ ನಿರ್ದೇಶನದ ‘45’ ಸಿನಿಮಾದ ಟ್ರೇಲರ್ ಬಿಡುಗಡೆ ಸಮಾರಂಭ.

ಬೆಂಗಳೂರಿನ ವಿದ್ಯಾಪೀಠದ ಬಳಿ ಇರುವ ಕೆಂಪೇಗೌಡ ಮೈದಾನದಲ್ಲಿ ಸೋಮವಾರ (ಡಿ.15) ರಾತ್ರಿ ನಡೆದ ಅದ್ದೂರಿಯಾದ ಟ್ರೇಲರ್ ಬಿಡುಗಡೆ ಸಮಾರಂಭದಲ್ಲಿ ‘45’ ಸಿನಿಮಾದ ತ್ರಿಮೂರ್ತಿಗಳಾದ ಶಿವರಾಜ್‌ಕುಮಾರ್, ಉಪೇಂದ್ರ ಹಾಗೂ ರಾಜ್ ಬಿ.ಶೆಟ್ಟಿ ಜೊತೆಗೂಡಿದ್ದರು. ಬೆಂಗಳೂರು, ಹುಬ್ಬಳ್ಳಿ, ಮೈಸೂರು, ತುಮಕೂರು ಹಾಗೂ ಉಡುಪಿ ಜಿಲ್ಲೆಗಳಲ್ಲಿ ಏಕಕಾಲದಲ್ಲಿ ಚಿತ್ರದ ಟ್ರೇಲರ್ ಬಿಡುಗಡೆಯಾಯಿತು.

₹1,000 ನೀಡಿದ ರಾಜ್

ನಟ ರಾಜ್ ಬಿ.ಶೆಟ್ಟಿ ತಮ್ಮ ನಿರ್ಮಾಣದ ‘ಸು ಫ್ರಮ್ ಸೋ’ ಸಿನಿಮಾದ ಗಳಿಕೆಯ ಮೊದಲ ಎರಡು ₹500ರ ನೋಟನ್ನು ನಿರ್ದೇಶಕ ಅರ್ಜುನ್ ಜನ್ಯ ಹಾಗೂ ನಿರ್ಮಾಪಕ ರಮೇಶ್ ರೆಡ್ಡಿ ಅವರಿಗೆ ನೀಡಿ ‘45’ ಸಿನಿಮಾ ಗಳಿಕೆಯಲ್ಲಿ ದಾಖಲೆ ಬರೆಯಲಿ ಎಂದು ಶುಭಕೋರಿದರು.

ಡಿ.25ಕ್ಕೆ ‘45’ ತೆರೆಗೆ

ಹಲವು ಸಿನಿಮಾಗಳಲ್ಲಿ ಬಗೆಬಗೆಯ ವೇಷ ಧರಿಸಿ ಮನರಂಜಿಸಿದ್ದ ಶಿವರಾಜ್‌ಕುಮಾರ್, ಕಾಲ್ಗೆಜ್ಜೆ ಹಾಕಿಕೊಂಡು ಹೆಣ್ಣಿನ ವೇಷದಲ್ಲಿ ‘45’ ಕ್ಲೈಮ್ಯಾಕ್ಸ್‌ನಲ್ಲಿ ಕಾಣಿಸಿಕೊಂಡಿದ್ದಾರೆ. ಬೃಹತ್ ಪರದೆಯಲ್ಲಿ ಈ ದೃಶ್ಯ ಕಂಡಾಗ, ಶಿವರಾಜ್‌ಕುಮಾರ್ ಸಿನಿಮಾಗಳಲ್ಲಿ ಮಚ್ಚು ಎತ್ತಿದಾಗಕ್ಕಿಂತಲೂ ಹೆಚ್ಚಿನ ಚಪ್ಪಾಳೆ, ಶಿಳ್ಳೆಗಳು ಕೇಳಿಬಂದವು. ಈ ಹಿಂದೆ ‘ಮಿಡಿದಶೃತಿ’, ‘ಅಣ್ಣಾವ್ರ ಮಕ್ಕಳು’ ಸಿನಿಮಾಗಳಲ್ಲಿ ಹೆಣ್ಣಿನ ವೇಷ ಹಾಕಿಕೊಂಡಿದ್ದ ಶಿವರಾಜ್‌ಕುಮಾರ್ ಹಲವು ವರ್ಷಗಳ ಬಳಿಕ ಭಿನ್ನವಾದ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ‘ಏನೀ ವೇಷ?’ ಎಂಬ ಪ್ರಶ್ನೆಗೆ ‘ಸದ್ಯ ಗುಟ್ಟು ಬಿಟ್ಟುಕೊಡುವುದಿಲ್ಲ, ಸಿನಿಮಾದಲ್ಲೇ’ ನೋಡಿ ಎಂದು ಉತ್ತರಿಸಿದ್ದಾರೆ.


ಶಿವರಾಜ್‌ಕುಮಾರ್

‘ನಿರ್ಮಾಪಕರ ಹಣ ಉಳಿತಾಯ’

‘ಸಂಗೀತ ನಿರ್ದೇಶಕನೊಬ್ಬ ಸಿನಿಮಾ ನಿರ್ದೇಶನ ಮಾಡುವುದೇ? ಎನ್ನುವ ಪ್ರಶ್ನೆ ಎಲ್ಲರಲ್ಲೂ ಇತ್ತು. ನಿರ್ಮಾಪಕರಾದ ರಮೇಶ್ ರೆಡ್ಡಿ ಅವರು ಕಷ್ಟಪಟ್ಟು ದುಡಿದ ಹಣವನ್ನು ಈ ಸಿನಿಮಾಗೆ ಹಾಕಿದ್ದಾರೆ. ಹೀಗಿರುವಾಗ ನಮಗಿಷ್ಟಬಂದಂತೆ ಅದನ್ನು ಖರ್ಚು ಮಾಡಲು ಸಾಧ್ಯವಿಲ್ಲ. ಹೀಗಾಗಿ ಅವರಿಗೆ ನಂಬಿಕೆ ಬರಿಸಬೇಕು ಎನ್ನುವ ದೃಷ್ಟಿಯಿಂದ ಗ್ರಾಫಿಕ್ಸ್ ಮೂಲಕ ಸಂಪೂರ್ಣ ಚಿತ್ರವನ್ನು ಮಾಡಿ ಅವರೆದುರು ಪ್ರಸ್ತುತಪಡಿಸಿದ್ದೆ. ಇದಕ್ಕೂ ಒಂದು ದೊಡ್ಡ ಬಜೆಟ್ ಆಗಿತ್ತು. ಅದನ್ನೂ ಅವರು ಕೊಟ್ಟರು. ಈ ರೀತಿಯ ಪೂರ್ವಯೋಜನೆ ಒಳ್ಳೆಯದು. ಇದರಿಂದ ನಿರ್ಮಾಪಕರಿಗೆ ದುಡ್ಡು ಉಳಿಯುತ್ತದೆ, ಸಿನಿಮಾಗಳೂ ಚೆನ್ನಾಗಿ ಆಗುತ್ತವೆ. ಈ ಸಿನಿಮಾ ಯಶಸ್ವಿಯಾದರೆ ಈ ಟ್ರೆಂಡ್ ಮುಂದುವರಿಯಲಿದೆ’ ಎಂದರು ನಿರ್ದೇಶಕ ಅರ್ಜುನ್ ಜನ್ಯ.

‘ಶಿವಣ್ಣನಿಗೆ ಅರ್ಪಣೆ’

‘ಶಿವಣ್ಣ, ಉಪೇಂದ್ರ ಹಾಗೂ ರಾಜ್ ಬಿ.ಶೆಟ್ಟಿ ಅವರ ಅಭಿಮಾನಿಯಾಗಿ ಅಭಿಮಾನವನ್ನಿಟ್ಟುಕೊಂಡು ‘45’ ಸಿನಿಮಾವನ್ನು ನಿರ್ದೇಶಿಸಿದ್ದೇನೆ. ಪ್ರತಿಯೊಂದು ಶಾಟ್ ಇಡುವಾಗಲೂ ಕಣ್ಣಿಂದ ಪ್ರತಿಯೊಬ್ಬರನ್ನೂ ಪ್ರೀತಿಸಿದ್ದೇನೆ. ಶಿವಣ್ಣ ಎಂದರೆ ನನಗೆ ಪ್ರಾಣ. ಇವತ್ತು ನಾನು ನಿರ್ದೇಶಕನಾಗಿ ಜನರ ಮುಂದೆ ನಿಂತಿದ್ದೇನೆ ಎಂದರೆ ಅದಕ್ಕೆ ಶಿವಣ್ಣ ಅವರೇ ಕಾರಣ. ಪೂರ್ಣ ಸಿನಿಮಾವನ್ನು ಅವರಿಗೇ ಅರ್ಪಿಸುತ್ತೇನೆ. ಅವರಿಲ್ಲದೇ ಇದ್ದಿದ್ದರೆ ಈ ಸಿನಿಮಾವನ್ನು ನಿರ್ದೇಶಿಸುತ್ತಲೇ ಇರಲಿಲ್ಲ. ಬೇರೆಯವರಿಗೆ ಕಥೆ ಕೊಟ್ಟುಬಿಡುತ್ತಿದ್ದೆ. ನನ್ನ ಜೊತೆ ಶಕ್ತಿಯಾಗಿ ಅವರು ನಿಂತು ಪ್ರೋತ್ಸಾಹಿಸಿದರು. ಶಿವಣ್ಣನನ್ನು ಎಷ್ಟೆಲ್ಲಾ ಅದ್ಭುತವಾಗಿ ತೋರಿಸಬಹುದೋ ಅಷ್ಟು ತೋರಿಸಿದ್ದೇನೆ. ಉಪೇಂದ್ರ ಅವರು ನಿರ್ದೇಶನದ ಚಕ್ರವರ್ತಿ. ಯಾರೂ ಅವರ ಅಭಿಮಾನಿಗಳಲ್ಲ ಎನ್ನಲು ಸಾಧ್ಯವೇ ಇಲ್ಲ. ಅವರು ಈ ಸಿನಿಮಾದ ಸ್ಟೈಲ್ ಐಕಾನ್. ರಾಜ್ ಬಿ.ಶೆಟ್ಟಿ ಅವರು ನಟನೆಯಲ್ಲಿ, ಬರವಣಿಗೆಯಲ್ಲಿ ತಮ್ಮ ಶಕ್ತಿ ಪ್ರದರ್ಶಿಸಿದವರು. ನನ್ನ ಜೊತೆ ಶಕ್ತಿಯಾಗಿ ನಿಂತವರು. ಅವರ ವ್ಯಕ್ತಿತ್ವ ಎಲ್ಲರಿಗೂ ಮಾದರಿ’ ಎಂದರು ಜನ್ಯ.

‘45’ ಎಂದರೆ 45 ದಿನ

‘ಇದು 45 ದಿನಗಳಲ್ಲಿ ನಡೆಯುವ ಕಥೆ ಹೀಗಾಗಿ ಈ ಶೀರ್ಷಿಕೆ. ಏನಕ್ಕೆ 45 ದಿನ? ಎನ್ನುವುದನ್ನು ಸಿನಿಮಾ ಉತ್ತರಿಸುತ್ತದೆ. ನಮ್ಮ ಪೀಳಿಗೆ ಬಹಳಷ್ಟು ವಿಚಾರಗಳನ್ನು ಮರೆತಿದೆ. ಇದನ್ನು ನೆನಪಿಸುವ ಎಳೆ ಕಥೆಯಲ್ಲಿದೆ. ಇಷ್ಟಪಟ್ಟು ಕೆಲಸ ಮಾಡಿದರೆ ಯಾವುದೂ ಕಷ್ಟವಿಲ್ಲ. ಹೀಗಾಗಿ ಸಂಗೀತ ನಿರ್ದೇಶನ ಅಥವಾ ಸಿನಿಮಾ ನಿರ್ದೇಶನ ಕಷ್ಟವೆನಿಸಲೇ ಇಲ್ಲ’ ಎನ್ನುತ್ತಾರೆ ಅರ್ಜುನ್ ಜನ್ಯ.

ಸಮಾರಂಭದಲ್ಲಿ ಬೃಹತ್ ಕ್ರೇನ್‌ನಲ್ಲಿ ನೇತುಹಾಕಿದ್ದ ಹೊಲೋಗ್ರಾಮ್ ಪರದೆ ಮೇಲೆಯೂ ಟೀಸರ್, ಟ್ರೇಲರ್ ನೋಡಿ ಜನ ಖುಷಿಪಟ್ಟರು. ಸುಧಾರಾಣಿ ಅವರು ಅತಿಥಿ ಪಾತ್ರದಲ್ಲಿ ಶಿವರಾಜ್‌ಕುಮಾರ್ ಅವರಿಗೆ ಜೋಡಿಯಾಗಿ ‘45’ ಸಿನಿಮಾದಲ್ಲಿ ನಟಿಸಿದ್ದಾರೆ. ನಟ ಪ್ರಮೋದ್ ಶೆಟ್ಟಿ, ರಾಜೇಂದ್ರನ್, ಕೌಸ್ತುಭ ಮಣಿ ಮತ್ತಿತರರು ತಾರಾಬಳಗದಲ್ಲಿದ್ದಾರೆ. ❖

> ಈ ಸಿನಿಮಾ ಸೆಟ್‌ಗೆ ಇಳಿಯುವ ಮುನ್ನವೇ ಆ್ಯನಿಮೇಷನ್‌ನಲ್ಲಿ ಇಡೀ ಸಿನಿಮಾ ನೋಡಿದ್ದೆವು. ‘45’ ಬಿಡುಗಡೆಯಾದ ಬಳಿಕ ಅರ್ಜುನ್ ಜನ್ಯ ಬೇರೆ ಹಂತಕ್ಕೇ ತಲುಪಲಿದ್ದಾರೆ. ‘ಚೆಲುವೆಯ..’ ಗೆಟಪ್‌ನಲ್ಲಿ ಕಾಣಿಸಿಕೊಂಡಿದ್ದೇನೆ. ಅದರ ಗುಟ್ಟು ಬಿಟ್ಟುಕೊಡುವುದಿಲ್ಲ. ಸಿನಿಮಾದಲ್ಲೇ ನೋಡಿ.
> –**ಶಿವರಾಜ್‌ಕುಮಾರ್**, ನಟ

> ಎಲ್ಲಾ ನಿರ್ಮಾಪಕರು ಹಣ ಹಾಕಿ ಸಿನಿಮಾ ಮಾಡಿದರೆ, ರಮೇಶ್ ರೆಡ್ಡಿ ಅವರು ಈ ಸಿನಿಮಾಗೆ ಹಣ ಸುರಿದಿದ್ದಾರೆ. ಗ್ರಾಫಿಕ್ಸ್, ಮೇಕಿಂಗ್ ಅದ್ಭುತವಾಗಿದೆ. ಕನ್ನಡ ಸಿನಿಮಾ ಉಳಿಯಬೇಕು ಎಂದರೆ ಇಂತಹ ನಿರ್ಮಾಪಕರು ಇರಬೇಕು. ಶಿವಣ್ಣನ ಸ್ನೇಹವನ್ನು ಉಳಿಸಿಕೊಂಡಿದ್ದೇನೆ ಎನ್ನುವುದೇ ಹೆಮ್ಮೆ. ರಾಜ್ ಬಿ.ಶೆಟ್ಟಿ ಇವತ್ತು ನಮ್ಮ ಚಿತ್ರರಂಗದ ಮೋಸ್ಟ್ ವಾಂಟೆಂಡ್ ಹೀರೋ. ಶಿವಣ್ಣ–ಸುಧಾರಾಣಿ ಜೋಡಿಯ ಕ್ರೇಜ್ ಜೋರಿತ್ತು. ಸುಧಾರಾಣಿಯವರಂಥ ಹುಡುಗಿ ಹುಡುಕುತ್ತಿದ್ದೆವು.
> –**ಉಪೇಂದ್ರ**, ನಟ

> ಕನ್ನಡ ಸಿನಿಮಾಗಳು ಗಡಿ ದಾಟಿ ಹೋಗಲ್ಲ ಎನ್ನುವ ಕೊರಗು ಇದೆ. ಪರಭಾಷಾ ಸಿನಿಮಾಗಳ ಹಾವಳಿ ಎನ್ನುತ್ತಲೇ ಇರುತ್ತೇವೆ. ನಾವೂ ಕೂಡಾ ಒಳ್ಳೆಯ ಸಿನಿಮಾಗಳನ್ನು ಮಾಡಿ ಹಾವಳಿ ಕೊಡುವವರಾಗಬೇಕು. ‘45’ ಸಿನಿಮಾ ಇಂತಹ ಸಿನಿಮಾ ಆಗಲಿದೆ ಎನ್ನುವ ಭರವಸೆ ಇದೆ. ಕನ್ನಡದ ಪ್ರೇಕ್ಷಕರು ಹೊಸತನಕ್ಕೆ ಹಪಹಪಿಸುತ್ತಿದ್ದಾರೆ. ಹೀಗಾಗಿ ಈ ಸಿನಿಮಾಗೊಂದು ಅವಕಾಶ ಕೊಡಿ. ಈ ಸಿನಿಮಾದಲ್ಲಿ ನಾನು ವಿದ್ಯಾರ್ಥಿಯಾಗಿದ್ದೆ. ನಾನು ಶಿವಣ್ಣ–ಉಪೇಂದ್ರ ಅವರ ಸಿನಿಮಾ, ಪೋಸ್ಟರ್ ನೋಡಿಕೊಂಡು ಇಲ್ಲಿಗೆ ಬಂದವನು, ಇಂದು ಅವರ ಜೊತೆ ತೆರೆಹಂಚಿಕೊಂಡಿದ್ದೇನೆ.
> –**ರಾಜ್ ಬಿ.ಶೆಟ್ಟಿ**, ನಟ

ಸೂರ್ಯ ‘46’ ಮುಕ್ತಾಯ


ಸೂರ್ಯ

ತಮಿಳು ನಟ ಸೂರ್ಯ ಅವರ ‘46’ನೇ ಚಿತ್ರದ ಚಿತ್ರೀಕರಣ ಇತ್ತೀಚೆಗಷ್ಟೇ ಮುಕ್ತಾಯಗೊಂಡಿದೆ. ವೆಂಕಿ ಅಟ್ಲೂರಿ ನಿರ್ದೇಶನದ ಚಿತ್ರದ ಶೀರ್ಷಿಕೆ ಇನ್ನಷ್ಟೇ ಘೋಷಣೆಯಾಗಬೇಕಿದೆ.

ವೆಂಕಿ ಅಟ್ಲೂರಿ ಈ ಹಿಂದೆ ದುಲ್ಕರ್ ಸಲ್ಮಾನ್ ನಟನೆಯ ‘ಲಕ್ಕಿ ಭಾಸ್ಕರ’ ಚಿತ್ರ ನಿರ್ದೇಶಿಸಿದ್ದರು. ಅದರ ಯಶಸ್ಸಿನ ಬೆನ್ನಲ್ಲೇ ಸೂರ್ಯ, ಅಟ್ಲೂರಿ ಜತೆ ಕೈಜೋಡಿಸಿ 2025ರ ಮೇ ತಿಂಗಳಲ್ಲಿ ಚಿತ್ರ ಸೆಟ್ಟೇರಿತ್ತು. ಮಲಯಾಳದ ಮಮಿತಾ ಬೈಜು ಈ ಚಿತ್ರದ ನಾಯಕಿ.

ನಾಗವಂಶಿ ಮತ್ತು ಸಾಯಿ ಸೌಜನ್ಯ ಸಿತಾರ ಎಂಟರ್‌ಟೈನ್‌ಮೆಂಟ್ಸ್ ಬ್ಯಾನರ್ ಅಡಿಯಲ್ಲಿ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ನಿಮಿಶ್ ರವಿ ಛಾಯಾಚಿತ್ರಗ್ರಹಣ, ಜಿ.ವಿ.ಪ್ರಕಾಶ್ ಸಂಗೀತ ಸಂಯೋಜನೆಯಿದ್ದು, ಚಿತ್ರದ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಪ್ರಾರಂಭಗೊಂಡಿವೆ. ❖

ನಿಶ್ವಿಕಾ, ಸುದೀಪ್

‘ಮಾರ್ಕ್’ ಹಾಡಿಗೆ ನಿಶ್ವಿಕಾ ಹೆಜ್ಜೆ

ಕಿಚ್ಚ ಸುದೀಪ್ ನಟನೆಯ ಬಹು ನಿರೀಕ್ಷಿತ ‘ಮಾರ್ಕ್’ ಚಿತ್ರದ ಮಸ್ತ್ ಮಲ್ಲೈಕಾ ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ವಿಜಯ್ ಕಾರ್ತಿಕೇಯ ನಿರ್ದೇಶನದ ಈ ಚಿತ್ರ ಡಿ.25ರಂದು ತೆರೆಗೆ ಬರಲಿದೆ.

ಈ ಹಾಡಿನಲ್ಲಿ ಕಿಚ್ಚ ಸುದೀಪ್ ಹಾಗೂ ನಿಶ್ವಿಕಾ ನಾಯ್ಡು ಹೆಜ್ಜೆ ಹಾಕಿದ್ದಾರೆ. ಮಲ್ಲೈಕಾ ಆಗಿ ನಿಶ್ವಿಕಾ ಕಾಣಿಸಿಕೊಂಡಿದ್ದಾರೆ. ಅನೂಪ್ ಭಂಡಾರಿ ಸಾಹಿತ್ಯವಿದೆ. ಸಾನ್ವಿ ಸುದೀಪ್ ಹಾಗೂ ನಕಾಶ್ ಅಜೀಜ್ ಹಾಡಿದ್ದಾರೆ. ಅಜನೀಶ್ ಲೋಕನಾಥ್ ಸಂಗೀತವಿದೆ.

ದೀಪ್ಶಿಕಾ, ನವೀನ್ ಚಂದ್ರ, ಗುರು ಸೋಮಸುಂದರಂ, ರೋಶಿನಿ ಪ್ರಕಾಶ್, ಗೋಪಾಲ್‌ಕೃಷ್ಣ ದೇಶಪಾಂಡೆ, ಮಹಾಂತೇಶ್ ಹಿರೇಮಠ್, ಡ್ರ್ಯಾಗನ್ ಮಂಜು, ಅರ್ಚನಾ ಕೊಟ್ಟಿಗೆ, ಯೋಗಿ ಬಾಬು, ಶೈನ್ ಟಾಮ್ ಚಾಕೋ ಚಿತ್ರದಲ್ಲಿದ್ದಾರೆ. ಸತ್ಯ ಜ್ಯೋತಿ ಫಿಲ್ಮ್ಸ್ ಹಾಗೂ ಕಿಚ್ಚ ಕ್ರಿಯೇಷನ್ ಬ್ಯಾನರ್‌ನಡಿ ಸಿನಿಮಾ ತಯಾರಾಗಿದೆ. ❖

ಚಿಟಿಕೆ ಸುದ್ದಿ

ವಂತಾರಾಕ್ಕೆ ಭೇಟಿ ನೀಡಿದ ಮೆಸ್ಸಿ

ಜಾಮನಗರ (ಪಿಟಿಐ): ಫುಟ್‌ಬಾಲ್ ಮಾಂತ್ರಿಕ ಲಯೊನೆಲ್ ಮೆಸ್ಸಿ ಅವರು ಮಂಗಳವಾರ ಇಲ್ಲಿನ ವನ್ಯಜೀವಿ ಆರೈಕೆ ಮತ್ತು ಸಂರಕ್ಷಣಾ ಕೇಂದ್ರವಾದ ವಂತಾರಾಕ್ಕೆ ಭೇಟಿ ನೀಡಿದರು.

ಅನಂತ್ ಅಂಬಾನಿ ಸ್ಥಾಪಿಸಿರುವ ಈ ಸಂರಕ್ಷಣಾ ಕೇಂದ್ರದ ಸಿಬ್ಬಂದಿ ಜೊತೆ ಒಡನಾಡಿದರು. ಮೆಸ್ಸಿ ಜೊತೆ ಇಂಟರ್‌ಮಯಾಮಿ ಕ್ಲಬ್‌ನ ಸಹ ಆಟಗಾರರಾದ ಲೂಯಿಸ್ ಸೊರೇಝ್ ಮತ್ತು ರಾಡ್ರಿಗೊ ಡಿ ಪಾಲ್ ಅವರೂ ಹಾಜರಿದ್ದರು. ಅವರನ್ನು ಜಾನಪದ ಸಂಗೀತ, ಸಾಂಪ್ರದಾಯಿಕ ರೀತಿ ಆರತಿ ಬೆಳಗಿ ಸ್ವಾಗತಿಸಲಾಯಿತು.

ಜಿಸಿಎಲ್: ಅಮೆರಿಕನ್ ಗ್ಯಾಂಬಿಟ್ಸ್‌ಗೆ ಜಯ

ಮುಂಬೈ (ಪಿಟಿಐ): ಕೊನೆಗಳಿಗೆಯಲ್ಲಿ ಪಡೆದ ಯಶಸ್ಸಿನಿಂದಾಗಿ ಫೈಯರ್ಸ್ ಅಮೆರಿಕನ್ ಗ್ಯಾಂಬಿಟ್ಸ್ ತಂಡ, ಗ್ಲೋಬಲ್ ಚೆಸ್ ಲೀಗ್ ಮೂರನೇ ಸುತ್ತಿನ ಪಂದ್ಯದಲ್ಲಿ ಹಾಲಿ ಚಾಂಪಿಯನ್ ತ್ರಿವೇಣಿ ಕಾಂಟಿನೆಂಟಲ್ ಕಿಂಗ್ಸ್ ತಂಡವನ್ನು ಮಂಗಳವಾರ 12–3 ರಿಂದ ಸೋಲಿಸಿತು.

ಟೆಕ್ ಮಹೀಂದ್ರ ಮತ್ತು ಫಿಡೆ ಜಂಟಿ ಉಪಕ್ರಮವಾಗಿರುವ ಈ ಲೀಗ್‌ನ ಇನ್ನೊಂದು ಪಂದ್ಯದಲ್ಲಿ ಗ್ಯಾಂಜೆಸ್ ಗ್ರ್ಯಾಂಡ್‌ಮಾಸ್ಟರ್ಸ್ ತಂಡವು ಪಿಬಿಜಿ ಅಲಾಸ್ಕನ್ ನೈಟ್ಸ್ ತಂಡದ ಮೇಲೆ ಅಧಿಕಾರಯುತ ಗೆಲುವು ಸಾಧಿಸಿತು. ಇದು ಗ್ಯಾಂಜೆಸ್ ತಂಡಕ್ಕೆ ಎರಡನೇ ಜಯ.

ಅಲ್ಪೈನ್ ಎಸ್‌ಜಿ ಪೈಪರ್ಸ್ ತಂಡ ದಿನದ ಕೊನೆಯಲ್ಲಿ 9–7 ರಿಂದ ಅಪ್‌ಗ್ರಾಡ್ ಮುಂಬಾ ಮಾಸ್ಟರ್ಸ್ ತಂಡವನ್ನು ಸೋಲಿಸಿ ಈ ಬಾರಿ ಮೊದಲ ಗೆಲುವು ದಾಖಲಿಸಿತು.

ವೈಭವ್ ಶರ್ಮಾಗೆ ಐದು ವಿಕೆಟ್

ಮೈಸೂರು: ಕರ್ನಾಟಕದ ವೈಭವ್ ಶರ್ಮಾ (64ಕ್ಕೆ 5) ಅವರ ಬೌಲಿಂಗ್ ದಾಳಿಗೆ ಸಿಲುಕಿದ ಮಹಾರಾಷ್ಟ್ರ ತಂಡ, ಮಂಗಳವಾರ ಇಲ್ಲಿ ಆರಂಭವಾದ ಕೂಚ್ ಬಿಹಾರ್ ಟ್ರೋಫಿ 19 ವರ್ಷದ ಒಳಗಿನವರ ಕ್ರಿಕೆಟ್ ಟೂರ್ನಿಯ ಲೀಗ್ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ 8 ವಿಕೆಟ್ ನಷ್ಟಕ್ಕೆ 258 ರನ್ ಗಳಿಸಿತು.

ಮಾನಸಗಂಗೋತ್ರಿಯ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಪಂದ್ಯದ ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಮಹಾರಾಷ್ಟ್ರಕ್ಕೆ ಆತಿಥೇಯ ತಂಡದ ವೈಭವ್ ಆಘಾತ ನೀಡಿದರು. ಸಂಕಷ್ಟದಲ್ಲಿದ್ದ ತಂಡಕ್ಕೆ ಅರ್ಕಮ್ ಸಯ್ಯದ್ (68), ಅನೀಶ್ ಜೋಶಿ (ಔಟಾಗದೇ 41) ಆಸರೆಯಾದರು. ಇಬ್ಬರೂ 8ನೇ ವಿಕೆಟ್‌ಗೆ 93 ರನ್ ಸೇರಿಸಿದರು.

ಸರಣಿ ಕೈವಶದತ್ತ ಭಾರತದ ಚಿತ್ತ

ಟಿ20 ಕ್ರಿಕೆಟ್ ನಾಲ್ಕನೇ ಪಂದ್ಯ ● ಸೂರ್ಯ, ಗಿಲ್‌ಗೆ ಲಯಕ್ಕೆ ಮರಳುವ ಸವಾಲು

ಲಖನೌ (ಪಿಟಿಐ): ಭಾರತ ತಂಡಕ್ಕೆ ದಕ್ಷಿಣ ಆಫ್ರಿಕಾ ಎದುರಿನ ಟಿ20 ಕ್ರಿಕೆಟ್ ಸರಣಿ ಜಯಿಸಲು ಈಗ ಉತ್ತಮ ಅವಕಾಶ ಒದಗಿಬಂದಿದೆ. ಆದರೆ ತಂಡದ ನಾಯಕ ಸೂರ್ಯಕುಮಾರ್ ಯಾದವ್ ಮತ್ತು ಉಪನಾಯಕ ಶುಭಮನ್ ಗಿಲ್ ಅವರ ಮೇಲಿನ ಒತ್ತಡ ಮಾತ್ರ ಕಡಿಮೆಯಾಗಿಲ್ಲ.

ಆತಿಥೇಯ ತಂಡವು ಐದು ಪಂದ್ಯಗಳ ಸರಣಿಯಲ್ಲಿ 2–1ರಿಂದ ಮುನ್ನಡೆಯಲ್ಲಿದೆ. ಬುಧವಾರ ಏಕನಾ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯದಲ್ಲಿ ಗೆದ್ದರೆ ಸರಣಿ ಕೈವಶವಾಗಲಿದೆ. ಆದರೆ ಸರಣಿ ಗೆಲುವಿನ ಆಸೆ ಜೀವಂತವಾಗಿ ಉಳಿಸಿಕೊಳ್ಳಲು ದಕ್ಷಿಣ ಆಫ್ರಿಕಾ ಕೂಡ ಈ ಪಂದ್ಯದಲ್ಲಿ ಜಯಿಸುವ ಒತ್ತಡದಲ್ಲಿದೆ.

ಇನ್ನೊಂದೆಡೆ ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್ ಅವರಿಗೆ ರನ್ ಗಳಿಸುವ ಒತ್ತಡ ಹೆಚ್ಚುತ್ತಿದೆ. ಅವರು ಸತತವಾಗಿ ವಿಫಲರಾಗಿದ್ದಾರೆ. ಈ ಋತುವಿನಲ್ಲಿ ಅವರು 15 ಸರಾಸರಿಯಲ್ಲಿ ರನ್ ಗಳಿಸಿದ್ದಾರೆ.

ಆರಂಭಿಕ ಬ್ಯಾಟರ್ ಶುಭಮನ್ ಗಿಲ್ ಕೂಡ ಲಯ ಕಂಡುಕೊಳ್ಳುತ್ತಿಲ್ಲ. ಇದು ತಂಡಕ್ಕೆ ದುಬಾರಿಯಾಗುತ್ತಿದೆ.

ದಕ್ಷಿಣ ಆಫ್ರಿಕಾ ತಂಡದ ನಾಯಕ ಏಡನ್ ಮರ್ಕರಂ

ಅಕ್ಷರ್ ಪಟೇಲ್ ಅನಾರೋಗ್ಯದ ಕಾರಣದಿಂದ ವಿಶ್ರಾಂತಿ ಪಡೆದಿದ್ದಾರೆ. ಅವರ ಸ್ಥಾನಕ್ಕೆ ಶಾಬಾಜ್ ಅಹಮದ್ ಅವಕಾಶ ಪಡೆದಿದ್ದಾರೆ. ಇದರಿಂದಾಗಿ ಕುಲದೀಪ್ ಯಾದವ್ ಅವರಿಗೆ ಮತ್ತಷ್ಟು ಅವಕಾಶಗಳು ಸಿಗಲಿವೆ.

ಧರ್ಮಶಾಲಾದ ಪಂದ್ಯದಲ್ಲಿ ಜಸ್‌ಪ್ರೀತ್ ಬೂಮ್ರಾ ವಿಶ್ರಾಂತಿ ಪಡೆದಿದ್ದರು. ಈ ಪಂದ್ಯಕ್ಕೆ ಅವರು ಮರಳುವ ಸಾಧ್ಯತೆ ಇದೆ. ಅರ್ಷದೀಪ್ ಸಿಂಗ್, ಹಾರ್ದಿಕ್ ಪಾಂಡ್ಯ ಮತ್ತು ಹರ್ಷಿತ್ ರಾಣಾ ಅವರು ತಮ್ಮ ಹೊಣೆಯನ್ನು ಅಮೋಘವಾಗಿ ನಿರ್ವಹಿಸಿದ್ದರು. ಪ್ರವಾಸಿ ತಂಡವನ್ನು ಸಾಧಾರಣ ಮೊತ್ತಕ್ಕೆ ಕಟ್ಟಿಹಾಕಿದ್ದರು. ಅದರಿಂದಾಗಿ ಭಾರತಕ್ಕೆ ಗೆಲುವಿನ ಹಾದಿ ಸುಲಭವಾಗಿತ್ತು.

ಅಭ್ಯಾಸದ ವೇಳೆ ಭಾರತ ತಂಡದ ಮುಖ್ಯ ಕೋಚ್ ಗೌತಮ್ ಗಂಭೀರ್ ಮತ್ತು ನಾಯಕ ಸೂರ್ಯಕುಮಾರ್ ಯಾದವ್ ಮಾತುಕತೆ ನಡೆಸಿದರು ಪಿಟಿಐ ಚಿತ್ರ

ದಕ್ಷಿಣ ಆಫ್ರಿಕಾ ತಂಡದಲ್ಲಿ ಉತ್ತಮ ಫಾರ್ಮ್‌ನಲ್ಲಿರುವ ಏಡನ್ ಮರ್ಕರಂ ಅವರನ್ನು ನಿಯಂತ್ರಿಸುವುದು ಆತಿಥೇಯ ಬೌಲರ್‌ಗಳಿಗೆ ಸವಾಲಾಗಲಿದೆ. ಕ್ವಿಂಟನ್ ಡಿ ಕಾಕ್, ಡೆವಾಲ್ಡ್ ಬ್ರೆವಿಸ್, ಟ್ರಿಸ್ಟನ್ ಸ್ಟಬ್ಸ್, ಡೇವಿಡ್ ಮಿಲ್ಲರ್ ಅವರು ದೊಡ್ಡ ಜೊತೆಯಾಟಗಳಲ್ಲಿ ಭಾಗಿಯಾಗದಂತೆ ತಡೆಯುವ ಸವಾಲು ಕೂಡ ಬೌಲರ್‌ಗಳಿಗೆ ಇದೆ.

ಮಾರ್ಕೊ ಯಾನ್ಸೆನ್, ಲುಥೊ ಸಿಪಾಮ್ಲಾ, ಲುಂಗಿ ಎನ್‌ಗಿಡಿ ಅವರು ಪರಿಣಾಮಕಾರಿ ದಾಳಿ ನಡೆಸಬಲ್ಲ ಬೌಲರ್‌ಗಳಾಗಿದ್ದಾರೆ. ಭಾರತದ ಬ್ಯಾಟರ್‌ಗಳಿಗೆ ಅವರು ಕಠಿಣ ಸವಾಲೊಡ್ಡಬಲ್ಲರು.

ಪಂದ್ಯ ಆರಂಭ: ರಾತ್ರಿ 7
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊಹಾಟ್‌ಸ್ಟಾರ್ ನೆಟ್‌ವರ್ಕ್

ಮುಷ್ತಾಕ್ ಅಲಿ ಕ್ರಿಕೆಟ್: ಫೈನಲ್‌ಗೆ ಜಾರ್ಖಂಡ್, ಹರಿಯಾಣ

ಅಂಬಿ (ಪುಣೆ), (ಪಿಟಿಐ): ಜಾರ್ಖಂಡ್ ತಂಡದವರು ಮಂಗಳವಾರ ನಡೆದ ಪಂದ್ಯದಲ್ಲಿ 9 ರನ್‌ಗಳಿಂದ ಆಂಧ್ರ ತಂಡಕ್ಕೆ ಸೋತರೂ, ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಯ ಸೂಪರ್ ಲೀಗ್ ಬಿ ಗುಂಪಿನಲ್ಲಿ ಅಗ್ರಸ್ಥಾನದೊಡನೆ ಫೈನಲ್ ತಲುಪಿದರು. ಜಾರ್ಖಂಡ್ ತಂಡ ಗುರುವಾರ ನಡೆಯುವ ಫೈನಲ್‌ನಲ್ಲಿ ಹರಿಯಾಣ ತಂಡವನ್ನು ಎದುರಿಸಲಿದೆ.

ಬ್ಯಾಟಿಂಗ್ ಮಾಡಲು ಕಳಿಸಲ್ಪಟ್ಟ ಆಂಧ್ರ 7 ವಿಕೆಟ್‌ಗೆ 203 ರನ್ ಗಳಿಸಿತು. ನಂತರ ಜಾರ್ಖಂಡ್ ಹೋರಾಟ ತೋರಿದರೂ 8 ವಿಕೆಟ್‌ಗೆ 194 ರನ್ ಗಳಿಸಲಷ್ಟೇ ಶಕ್ತವಾಯಿತು. 8 ಅಂಕ ಪಡೆದ ಜಾರ್ಖಂಡ್ +0.221 ನಿವ್ವಳ ರನ್ ದರದೊಡನೆ ಅಗ್ರಸ್ಥಾನ ಪಡೆಯಿತು. ಇಷ್ಟೇ ಅಂಕ ಪಡೆದ ಆಂಧ್ರದ ರನ್ ದರ –0.113 ಕಡಿಮೆಯಾಗಿತ್ತು.

ಫೈನಲ್‌ಗೆ ಹರಿಯಾಣ: ಹರಿಯಾಣ ತಂಡ ‘ಎ’ ಗುಂಪಿನ ತನ್ನ ಕೊನೆಯ ಪಂದ್ಯದಲ್ಲಿ ಹೈದರಾಬಾದ್ ಮೇಲೆ 124 ರನ್‌ಗಳ ಸುಲಭ ಗೆಲುವು ಸಾಧಿಸಿತು. ‘ಎ’ ಗುಂಪಿನಲ್ಲಿ ಹರಿಯಾಣ, ಹೈದರಾಬಾದ್ ಮತ್ತು ಮುಂಬೈ ತಂಡಗಳು ತಲಾ ಎಂಟು ಅಂಕ ಪಡೆದವು. ಆದರೆ ನೆಟ್ ರನ್ ರೇಟ್ ಆಧಾರದಲ್ಲಿ ಹರಿಯಾಣ ಫೈನಲ್ ತಲುಪಿತು.

ಸಂಕ್ಷಿಪ್ತ ಸ್ಕೋರು: 20 ಓವರುಗಳಲ್ಲಿ 7ಕ್ಕೆ 203 (ಶ್ರೀಕರ್ ಭರತ್ 35, ನಿತೀಶ್ ಕುಮಾರ್ ರೆಡ್ಡಿ 45; ರಾಜನ್‌ದೀಪ್ ಸಿಂಗ್ 35ಕ್ಕೆ2); ಜಾರ್ಖಂಡ್: 20 ಓವರುಗಳಲ್ಲಿ 8ಕ್ಕೆ 194 (ಇಶಾನ್ ಕಿಶನ್ 35, ವಿರಾಟ್ ಸಿಂಗ್ 77, ನಿತೀಶ್ ಕುಮಾರ್ ರೆಡ್ಡಿ 32ಕ್ಕೆ2, ಸೌರಭ್ ಕುಮಾರ್ 21ಕ್ಕೆ2).
ಹರಿಯಾಣ: 20 ಓವರುಗಳಲ್ಲಿ 7ಕ್ಕೆ 246 (ಅಂಕಿತ್ ಕುಮಾರ್ 57, ಸಮಂತ್ ಜಾಖಡ್ 60, ಪಾರ್ಥ್ ವ್ಯಾಸ್ 45; ತನಯ್ ತ್ಯಾಗರಾಜನ್ 43ಕ್ಕೆ2); ಹೈದರಾಬಾದ್: 16.1 ಓವರುಗಳಲ್ಲಿ 122 (ರಾಹುಲ್ ಬುದ್ಧಿ 37; ಅನ್ಶುಲ್ ಕಾಂಬೋಜ್ 16ಕ್ಕೆ2, ಅಮಿತ್ ರಾಣಾ 14ಕ್ಕೆ3, ಸಮಂತ್ ಜಾಖಡ್ 16ಕ್ಕೆ2).

19 ವರ್ಷದೊಳಗಿವನರ ಏಷ್ಯಾ ಕಪ್: ಭಾರತಕ್ಕೆ ಜಯ

ಅಭಿಗ್ಯಾನ್ ಕುಂದು ದಾಖಲೆಯ ದ್ವಿಶತಕ

ದುಬೆ (ಪಿಟಿಐ): ಅಭಿಗ್ಯಾನ್ ಕುಂದು (ಔಟಾಗದೇ 209) ಅವರ ದ್ವಿಶತಕ ಮತ್ತು ದೀಪೇಶ್ ದೇವೇಂದ್ರನ್ (22ಕ್ಕೆ5) ಅಮೋಘ ಬೌಲಿಂಗ್ ಬಲದಿಂದ ಭಾರತ 19 ವರ್ಷದೊಳಗಿನವರ ತಂಡವು ಇಲ್ಲಿ ನಡೆಯುತ್ತಿರುವ ಯೂತ್ ಏಷ್ಯಾ ಕಪ್ ಏಕದಿನ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಜಯಿಸಿತು.

ಮಂಗಳವಾರ ಮಲೇಷ್ಯಾ 19 ವರ್ಷದೊಳಗಿನವರ ತಂಡದ ಎದುರು ಭಾರತ ತಂಡವು 315 ರನ್‌ಗಳ ಬೃಹತ್ ಜಯ ಸಾಧಿಸಿತು. ಯೂತ್ ಏಕದಿನ ಕ್ರಿಕೆಟ್‌ನಲ್ಲಿ ಭಾರತವು ಎರಡನೇ ಅತಿ ದೊಡ್ಡ ಅಂತರದ ಜಯಸಾಧಿಸಿತು. 2022ರಲ್ಲಿ ಉಗಾಂಡ ಎದುರು 326 ರನ್‌ಗಳ ಜಯ ಸಾಧಿಸಿತ್ತು.

ಭಾರತ ತಂಡದ ಅಭಿಗ್ಯಾನ್ ಕುಂದು ಅವರು ಯೂತ್ ಏಕದಿನ ಮಾದರಿಯಲ್ಲಿ ದ್ವಿಶತಕ ಹೊಡೆದ ಮೊದಲ ಭಾರತೀಯ ಆಟಗಾರನಾದರು. ಅವರು 125 ಎಸೆತಗಳಲ್ಲಿ 17 ಬೌಂಡರಿ ಮತ್ತು 9 ಸಿಕ್ಸರ್‌ಗಳೊಂದಿಗೆ ದ್ವಿಶತಕ ದಾಖಲಿಸಿದರು. ಅವರ ಬ್ಯಾಟಿಂಗ್ ಬಲದಿಂದ ತಂಡವು ನಿಗದಿಯ ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 408 ರನ್ ಗಳಿಸಿತು.

ಅಭಿಗ್ಯಾನ್ ಕುಂದು ಎಕ್ಸ್ ಚಿತ್ರ

ಬಲಗೈ ಮಧ್ಯಮವೇಗಿ ದೀಪೇಶ್ ಅವರ ದಾಳಿಯ ಮುಂದೆ ಮಲೇಷ್ಯಾ ತಂಡವು 32.1 ಓವರ್‌ಗಳಲ್ಲಿ 93 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು.

ಸಂಕ್ಷಿಪ್ತ ಸ್ಕೋರು: ಭಾರತ 19 ವರ್ಷದೊಳಗಿನವರು: 50 ಓವರ್‌ಗಳಲ್ಲಿ 7ಕ್ಕೆ408 (ವೈಭವ್ ಸೂರ್ಯವಂಶಿ 50, ವೇದಾಂತ್ ತ್ರಿವೇದಿ 90, ಅಭಿಗ್ಯಾನ್ ಕುಂದು ಔಟಾಗದೇ 209, ಮೊಹಮ್ಮದ್ ಅಕ್ರಮ್ 89ಕ್ಕೆ5) ಮಲೇಷ್ಯಾ: 32.1 ಓವರ್‌ಗಳಲ್ಲಿ 93 (ಹಮ್ಜಾ ಪಾಂಗಿ 35, ದೀಪೇಶ್ ದೇವೇಂದ್ರನ್ 22ಕ್ಕೆ5, ಉದವ್ ಮೋಹನ್ 24ಕ್ಕೆ2) ಭಾರತ ತಂಡಕ್ಕೆ 315 ರನ್ ಜಯ.

ಬೆಂಗಳೂರಿನಲ್ಲಿ ವಿಶ್ವ ಟೆನಿಸ್ ಲೀಗ್ ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು (ಪಿಟಿಐ): ಅಮೆರಿಕ ಓಪನ್ ಮಾಜಿ ಚಾಂಪಿಯನ್ ಡೇನಿಯಲ್ ಮೆಡ್ವೆಡೇವ್ ಸೇರಿ ವಿಶ್ವದ ಕೆಲವು ಪ್ರಮುಖ ಟೆನಿಸ್ ತಾರೆಗಳ ಆಟವನ್ನು ಕಣ್ತುಂಬಿಕೊಳ್ಳಲು ಉದ್ಯಾನಗರಿಯ ಪ್ರೇಕ್ಷಕರಿಗೆ ಸುವರ್ಣಾವಕಾಶ ಒದಗಿದೆ. ನಾಲ್ಕನೇ ವಿಶ್ವ ಟೆನಿಸ್ ಲೀಗ್ ಬುಧವಾರ ಇಲ್ಲಿನ ಎಸ್.ಎಂ.ಕೃಷ್ಣ ಟೆನಿಸ್ ಕ್ರೀಡಾಂಗಣದಲ್ಲಿ ಆರಂಭವಾಗಲಿದ್ದು, ನಾಲ್ಕು ದಿನ ನಡೆಯಲಿದೆ.

ಭಾರತದಲ್ಲಿ ಮೊದಲ ಬಾರಿ ಈ ಲೀಗ್ ನಡೆಯುತ್ತಿದೆ. ಭಾರತದ ಅನುಭವಿ ಟೆನಿಸಿಗರೂ ಕಣದಲ್ಲಿದ್ದಾರೆ. ಸುಮಿತ್ ನಗಾಲ್, ದಕ್ಷಿಣೇಶ್ವರ ಸುರೇಶ್, ಅಂಕಿತಾ ರೈನಾ, ಸಹಜಾ ಯಮಲಪಲ್ಲಿ ಇವರಲ್ಲಿ ಪ್ರಮುಖರಾಗಿದ್ದು, ಇತರ ದೇಶಗಳ ತಾರೆಗಳ ಜೊತೆ ಆಡಲಿದ್ದಾರೆ. ಉದಯೋನ್ಮುಖ ಆಟಗಾರ್ತಿಯರಾದ ಶ್ರೀವಲ್ಲಿ ಭಮಿಡಿಪಾಟಿ, ಮಾಯಾ ರಾಜೇಶ್ವರನ್ ರೇವತಿ ಅವರೂ ಹೊಸ ಋತುವಿಗೆ ಪೂರ್ವಭಾವಿಯಾಗಿ ತಮ್ಮ ಆಟ ಹುರಿಗೊಳಿಸಲು ಪ್ರಯತ್ನಿಸಲಿದ್ದಾರೆ.

ವಿಶ್ವ ರ‍್ಯಾಂಕಿಂಗ್‌ನಲ್ಲಿ ಪ್ರಸ್ತುತ 13ನೇ ಕ್ರಮಾಂಕ ಪಡೆದಿರುವ ಮೆಡ್ವೆಡೇವ್ ಜೊತೆ, 23ನೇ ರ‍್ಯಾಂಕಿನ ಡೆನಿಸ್ ಶಪೊವಲೋವ್, 67ನೇ ಕ್ರಮಾಂಕದ ಗೇಲ್ ಮಾನ್ಫಿಲ್ಸ್, ಮುಂಗೋಪಕ್ಕೆ ಹೆಸರಾದ ಆಸ್ಟ್ರೇಲಿಯಾ ನಿಕ್ ಕಿರ್ಗಿಯೋಸ್ ಸಹ ಲೀಗ್‌ನಲ್ಲಿ ಆಡಲಿದ್ದಾರೆ. ಕಿರ್ಗಿಯೋಸ್ ಸದ್ಯ 652ನೇ ಸ್ಥಾನದಲ್ಲಿದ್ದಾರೆ. ಗಾಯದ ಕಾರಣ ಅವರು 2023 ಮತ್ತು 2024ರಲ್ಲಿ ಬಹುತೇಕ ಟೂರ್ನಿಗಳಲ್ಲಿ ಆಡಿರಲಿಲ್ಲ.

ಮುಂದಿನ ತಿಂಗಳು ನಡೆಯಲಿರುವ ಆಸ್ಟ್ರೇಲಿಯನ್ ಓಪನ್‌ಗೆ ಮೊದಲು ಅವರಿಗೆ ತಮ್ಮ ದೈಹಿಕ ಸಾಮರ್ಥ್ಯ ಪರೀಕ್ಷೆಗೂ ಈ ಲೀಗ್ ನೆರವಾಗಲಿದೆ. ಅವರು ತಮ್ಮ ಪೂರ್ಣ ಲಯಕ್ಕೆ ಮರಳಿದರೆ, ಉತ್ತಮ ಆಟ ವೀಕ್ಷಿಸಲು ಸಿಗಲಿದೆ.


ಮೆಡ್ವೆಡೇವ್

ಮಹಿಳೆಯರ ಪೈಕಿ 14ನೇ ಕ್ರಮಾಂಕದ ಎಲಿನಾ ಸ್ವಿಟೋಲಿನಾ, 25ನೇ ಕ್ರಮಾಂಕದ ಪೌಲಾ ಬಡೋಸಾ ಅವರು ಪ್ರಮುಖ ಆಕರ್ಷಣೆಯಾಗಲಿದ್ದಾರೆ. ಈ ವರ್ಷ ಅಮೆರಿಕ ಓಪನ್ ಅಂತಿಮ ನಾಲ್ಕರ ಸುತ್ತಿಗೆ ಮಾರ್ತಾ ತಲುಪಿದ್ದರು.

ಹೇಗಿರಲಿದೆ ಮಾದರಿ: ನಾಲ್ಕು ತಂಡಗಳು– ವಿ.ಬಿ.ರಿಯಾಲ್ಟಿ ಹಾಕ್ಸ್, ಗೇಮ್ ಚೇಂಜರ್ಸ್ ಫಾಲ್ಕನ್ಸ್, ಆಸಿ ಮಾವೆರಿಕ್ಸ್ ಕೈಟ್ಸ್ ಮತ್ತು ಎಒಎಸ್ ಈಗಲ್ಸ್– ಕಣದಲ್ಲಿರಲಿದ್ದು, ಪ್ರತಿ ತಂಡದಲ್ಲಿ ಇಬ್ಬರು ಆಟಗಾರರು ಮತ್ತು ಇಬ್ಬರು ಆಟಗಾರ್ತಿಯರು ಇರುತ್ತಾರೆ. ಹಾಕ್ಸ್ ಮತ್ತು ಕೈಟ್ಸ್ ನಡುವಣ ಪಂದ್ಯದೊಡನೆ ಲೀಗ್ ಆರಂಭವಾಗಲಿದೆ. ನಂತರ ಈಗಲ್ಸ್ ಮತ್ತು ಫಾಲ್ಕನ್ಸ್ ತಂಡಗಳು ಮುಖಾಮುಖಿಯಾಗಲಿವೆ.

ಈ ಟೂರ್ನಿಯು ರೌಂಡ್‌ರಾಬಿನ್ ಮಾದರಿಯಲ್ಲಿ ನಡೆಯಲಿದ್ದು, ಪ್ರತಿ ಪಂದ್ಯವು ನಾಲ್ಕು ಸೆಟ್‌ಗಳನ್ನು ಹೊಂದಿದೆ. ತಂಡಗಳು ಪಂದ್ಯದಲ್ಲಿ ಗೆಲ್ಲುವ ಪ್ರತಿಯೊಂದು ಗೇಮ್‌ಗೆ ಒಂದೊಂದು ಅಂಕ ನೀಡಲಾಗುವುದು. ನಾಲ್ಕನೇ ಸೆಟ್ ಗೆಲ್ಲುವ ತಂಡ ಹಿಂದೆಬಿದ್ದಲ್ಲಿ, ಪಂದ್ಯ ಮುಂದುವರಿಯಲಿದೆ. ನಾಲ್ಕು ಸೆಟ್‌ಗಳ ನಂತರ ಒಟ್ಟಾರೆ ಸ್ಕೋರ್ ಸಮನಾದಲ್ಲಿ 10 ಸೂಪರ್ ಶೂಟ್‌ಔಟ್ ಟೈಬ್ರೇಕ್ ಆಡಲಾಗುವುದು. ಲೀಗ್ ಹಂತದಲ್ಲಿ ಮೊದಲ ಎರಡು ಸ್ಥಾನ ಪಡೆಯುವ ತಂಡಗಳು ಶನಿವಾರ ಫೈನಲ್ ಆಡಲಿವೆ.

ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್ ಮತ್ತು ಫ್ಯಾನ್‌ಕೋಡ್ ಆ್ಯಪ್‌ನಲ್ಲಿ ಮಧ್ಯಾಹ್ನ 3ರಿಂದ ನೇರಪ್ರಸಾರ ಇರಲಿದೆ.

ವಿಶ್ವ ವಿಜೇತರಿಗೆ ಗೌರವ

ಐಸಿಸಿ ಮಹಿಳೆಯರ ಏಕದಿನ ಕ್ರಿಕೆಟ್ ವಿಶ್ವಕಪ್ ವಿಜೇತ ಭಾರತ ತಂಡದ ಆಟಗಾರ್ತಿಯರನ್ನು ಟಾಟಾ ಗ್ರೂಪ್ ವತಿಯಿಂದ ಮುಂಬೈನಲ್ಲಿ ಮಂಗಳವಾರ ಸನ್ಮಾನಿಸಲಾಯಿತು. ತಂಡದ ಪ್ರತಿ ಆಟಗಾರ್ತಿಯರಿಗೂ ಟಾಟಾ ಸಿಯೆರಾ ಕಾರನ್ನು ಕೊಡುಗೆಯಾಗಿ ನೀಡಲಾಯಿತು. ಟಾಟಾ ಸನ್ಸ್ ಮತ್ತು ಟಾಟಾ ಮೋಟರ್ಸ್ ಪ್ಯಾಸೆಂಜರ್ ಲಿಮಿಟೆಡ್‌ನ ಅಧ್ಯಕ್ಷ ಎನ್. ಚಂದ್ರಶೇಖರನ್, ವ್ಯವಸ್ಥಾಪಕ ನಿರ್ದೇಶಕ ಮತ್ತು ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಶೈಲೇಶ್ ಚಂದ್ರ ಇದ್ದರು

ಕೆಎಸ್‌ಸಿಎ ಆಡಳಿತ ಸಮಿತಿ ಪ್ರಥಮ ಸಭೆ: ಆಯ್ಕೆ ಸಮಿತಿಗೆ ಅಮಿತ್ ಮುಖ್ಯಸ್ಥ

ಕ್ರಿಕೆಟ್ ಸಲಹಾ ಸಮಿತಿಯಲ್ಲಿ ಕುಂಬ್ಳೆ, ಶ್ರೀನಾಥ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಮಾದರಿಯಲ್ಲಿಯೇ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯು ಐವರು ಸದಸ್ಯರ ಕ್ರಿಕೆಟ್ ಸಲಹಾ ಸಮಿತಿ (ಸಿಎಸಿ)ಯನ್ನು ನೇಮಕ ಮಾಡಿದೆ.

ಈ ಸಮಿತಿಯಲ್ಲಿ ಭಾರತ ತಂಡದ ಮಾಜಿ ಆಟಗಾರರಾದ ಅನಿಲ್ ಕುಂಬ್ಳೆ, ಜಾವಗಲ್ ಶ್ರೀನಾಥ್, ಸುನೀಲ್ ಜೋಶಿ, ವಿಜಯ್ ಭಾರದ್ವಾಜ್ ಮತ್ತು ಜಯಶ್ರೀ ದೊರೈಸ್ವಾಮಿ ಅವರಿದ್ದಾರೆ.

ಸಂಸ್ಥೆಯ ನೂತನ ಆಡಳಿತ ಸಮಿತಿಯ ಸಭೆಯು ಮಂಗಳವಾರ ನಡೆಯಿತು. ಇದರಲ್ಲಿ ಸೀನಿಯರ್ ಮತ್ತು ವಿವಿಧ ವಯೋಮಿತಿಯ ತಂಡಗಳ ಆಯ್ಕೆ ಸಮಿತಿಗಳನ್ನೂ ನೇಮಕ ಮಾಡಲಾಯಿತು.

ಪುರುಷರ ಸೀನಿಯರ್ ಮತ್ತು 23 ವರ್ಷದೊಳಗಿನವರ ಸಮಿತಿಯ ಮುಖ್ಯಸ್ಥರಾಗಿ ಕರ್ನಾಟಕ ತಂಡದ ಮಾಜಿ ಆಟಗಾರ ಅಮಿತ್ ವರ್ಮಾ ಅವರನ್ನು ನೇಮಕ ಮಾಡಲಾಯಿತು.

ಗಣೇಶ್ ಸತೀಶ್ ಮತ್ತು ಅಮಿತ್ ವರ್ಮಾ

23 ವರ್ಷದೊಳಗಿನವರ ತಂಡದ ತರಬೇತುದಾರರಾಗಿ ಗಣೇಶ್ ಸತೀಶ್ ಮತ್ತು ದೀಪಕ್ ಚೌಗುಲೆ ಅವರನ್ನು ನೇಮಕ ಮಾಡಲಾಯಿತು. ಇದಕ್ಕೂ ಮುನ್ನ ಸೋಮಶೇಖರ್ ಶಿರಗುಪ್ಪಿ ಮತ್ತು ಎಸ್.ಆರ್. ದೀಪು ಅವರು ಈ ಸ್ಥಾನಗಳಲ್ಲಿದ್ದರು. ಇದೇ ಸಂದರ್ಭದಲ್ಲಿ ವಿನಯ್ ಮೃತ್ಯುಂಜಯ ಅವರನ್ನು ಕೆಎಸ್‌ಸಿಎ ವಕ್ತಾರರನ್ನಾಗಿ ನೇಮಿಸಲಾಯಿತು.

‘ಮಹಿಳಾ ಆಯ್ಕೆ ಸಮಿತಿಯ ನೇಮಕದ ಕುರಿತು ಪರಿಶೀಲನೆ ನಡೆಸಲಾಗುತ್ತಿದೆ. ಶೀಘ್ರದಲ್ಲಿಯೇ ನಿರ್ಧಾರ ಕೈಗೊಳ್ಳಲಾಗುವುದು’ ಎಂದು ವಿನಯ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಮಿತಿ ಹೀಗಿವೆ: ಕ್ರಿಕೆಟ್ ಸಲಹಾ ಸಮಿತಿ: ಅನಿಲ್ ಕುಂಬ್ಳೆ, ಜಾವಗಲ್ ಶ್ರೀನಾಥ್, ಸುನಿಲ್ ಜೋಶಿ, ವಿಜಯ್ ಭಾರದ್ವಾಜ್, ಜಯಶ್ರೀ ದೊರೈಸ್ವಾಮಿ
ಪುರುಷರು: ಸೀನಿಯರ್ ಮತ್ತು 23 ವರ್ಷದೊಳಗಿನವರ ಆಯ್ಕೆ ಸಮಿತಿ: ಅಮಿತ್ ವರ್ಮಾ (ಮುಖ್ಯಸ್ಥ), ಎಸ್. ಪ್ರಕಾಶ್, ತೇಜಪಾಲ್ ಕೊಠಾರಿ, ಸುನಿಲ್ ರಾಜು.
ಜೂನಿಯರ್ ಸಮಿತಿಗಳು (19, 16 ಮತ್ತು 14 ವರ್ಷದವರು): ಜಿ.ಕೆ. ಅನಿಲ್ ಕುಮಾರ್ (ಮುಖ್ಯಸ್ಥ), ಸಿ. ರಾಘವೇಂದ್ರ, ಜಿ.ಎನ್. ಉಮೇಶ್, ಡಿ.ಎಸ್. ಅನಂತ್; **ಕೋಚ್(23 ವರ್ಷದೊಳಗಿನ ಪುರುಷರ ತಂಡ):** ಗಣೇಶ್ ಸತೀಶ್ ಮತ್ತು ದೀಪಕ್ ಚೌಗುಲೆ.

ಕೋಲ್ಕತ್ತಕ್ಕೆ ಗ್ರೀನ್; ಕಾಶ್ಮೀರದ ನಬಿಗೆ ಅದೃಷ್ಟ

ಐಪಿಎಲ್ ಮಿನಿ ಹರಾಜು • ಶ್ರೀಲಂಕಾದ ಪಥಿರಾಣಗೆ ₹18 ಕೋಟಿ • ಪ್ರಶಾಂತ್, ಕಾರ್ತಿಕ್‌ಗೆ ಬಂಪರ್ • ಆರ್‌ಸಿಬಿ ತಂಡಕ್ಕೆ ಮಂಗೇಶ್

ಅಬುಧಾಬಿ (ಪಿಟಿಐ): ಕೋಲ್ಕತ್ತ ನೈಟ್ ರೈಡರ್ಸ್ ತಂಡವು ಪ್ರತಿವರ್ಷದಂತೆ ಈ ಬಾರಿಯೂ ದೊಡ್ಡ ಮೊತ್ತವನ್ನು ನೀಡಿ ಆಟಗಾರರನ್ನು ಖರೀದಿಸುವ 'ಸಂಪ್ರದಾಯ' ಮುಂದುವರಿಸಿತು. ಈ ಸಲ ಆಸ್ಟ್ರೇಲಿಯಾ ಆಲ್‌ರೌಂಡರ್ ಕ್ಯಾಮರಾನ್ ಗ್ರೀನ್ ಅವರನ್ನು ತನ್ನ ತೆಕ್ಕೆಗೆಳೆದುಕೊಂಡಿತು.

ಮಂಗಳವಾರ ನಡೆದ ಐಪಿಎಲ್ ಆಟಗಾರರ ಮಿನಿ ಹರಾಜು ಪ್ರಕ್ರಿಯೆಯಲ್ಲಿ ಮೊದಲೇ ನಿರೀಕ್ಷಿಸಿದಂತೆ ಗ್ರೀನ್ ಅವರು ಅತ್ಯಧಿಕ ಮೊತ್ತ ಪಡೆದರು. ಅವರಿಗೆ ಕೋಲ್ಕತ್ತ ತಂಡವು ₹25.20 ಕೋಟಿ ನೀಡಿ ಖರೀದಿಸಿತು. ಶ್ರೀಲಂಕಾದ ವೇಗಿ ಮಥೀಶ ಪಥಿರಾಣ ಅವರನ್ನೂ ಕೆಕೆಆರ್ ತಂಡವು ₹18 ಕೋಟಿಗೆ ತನ್ನ ಬಳಗಕ್ಕೆ ಸೇರಿಸಿಕೊಂಡಿತು.

ಇಂಡಿಯನ್ ಪ್ರೀಮಿಯರ್ ಲೀಗ್

ಇನ್ನೊಂದೆಡೆ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಯಥಾಪ್ರಕಾರ ಅಚ್ಚರಿಯ ಆಯ್ಕೆ ಮಾಡಿಕೊಂಡಿತು. ಪ್ರತಿ ಸಲವೂ ಅನುಭವಿ ಆಟಗಾರರನ್ನು ಆಯ್ಕೆ ಮಾಡುತ್ತಿದ್ದ ತಂಡವು ಈ ಬಾರಿ ಉದಯೋನ್ಮುಖ ಪ್ರತಿಭೆಗಳಿಗೆ ಮಣೆ ಹಾಕಿತು. ಉತ್ತರಪ್ರದೇಶದ 20 ವರ್ಷದ ಎಡಗೈ ಸ್ಪಿನ್ನರ್ ಪ್ರಶಾಂತ್ ವೀರ್ ಮತ್ತು 19 ವರ್ಷದ ವಿಕೆಟ್‌ಕೀಪರ್–ಬ್ಯಾಟರ್, ರಾಜಸ್ಥಾನದ ಕಾರ್ತಿಕ್ ಶರ್ಮಾ ಅವರನ್ನು ಚೆನ್ನೈ ಖರೀದಿಸಿತು. ಟೂರ್ನಿಯ ಇತಿಹಾಸದಲ್ಲಿ ಅತಿ ದೊಡ್ಡ ಮೌಲ್ಯ ಪಡೆದ 'ಅನ್‌ಕ್ಯಾಪ್ಡ್' ಆಟಗಾರರೆಂಬ ಹೆಗ್ಗಳಿಕೆ ಇವರದ್ದಾಯಿತು. ಅವರ ಮೂಲಬೆಲೆಯು ₹30 ಲಕ್ಷ ನಿಗದಿ ಯಾಗಿತ್ತು.

ಜಮ್ಮು–ಕಾಶ್ಮೀರದ ವೇಗಿ ಅಕೀಬ್ ನಬಿ ದಾರ್ ಅವರು ಡೆಲ್ಲಿ ಕ್ಯಾಪಿಟಲ್ಸ್ (₹8.40 ಕೋಟಿ) ತಂಡಕ್ಕೆ ಸೇರ್ಪಡೆಯಾದರು. ಅವರ ಮೂಲಬೆಲೆ ₹30 ಲಕ್ಷವಾಗಿತ್ತು.

ಗ್ರೀನ್ ಅವರು ಆಸ್ಟ್ರೇಲಿಯದವರೇ ಆದ ಮಿಚೆಲ್ ಸ್ಟಾರ್ಕ್ (₹24.75 ಕೋಟಿ) ಅವರ ದಾಖಲೆಯನ್ನು ಮೀರಿನಿಂತರು. ಕೋಲ್ಕತ್ತ ಮತ್ತು ಚೆನ್ನೈ ಸೂಪರ್ ಕಿಂಗ್ಸ್ ತಂಡಗಳ ನಡುವೆ ಗ್ರೀನ್ ಅವರನ್ನು ಖರೀದಿಸಲು ತೀವ್ರ ಪೈಪೋಟಿ ನಡೆಯಿತು. ಕೊನೆಗೂ ಕೋಲ್ಕತ್ತ ಮೇಲುಗೈ ಸಾಧಿಸಿತು. ಐಪಿಎಲ್ ಗರಿಷ್ಠ ವೇತನ ನಿಯಮದ ಪ್ರಕಾರ ಗ್ರೀನ್ ಅವರಿಗೆ ಪ್ರಸಕ್ತ ಋತುವಿಗೆ ₹18 ಕೋಟಿ ಮಾತ್ರ ಸಂದಾಯವಾಗಲಿದೆ.

ಉಳಿದ ಹಣವು ಬಿಸಿಸಿಐ ಆಟಗಾರರ ಅಭಿವೃದ್ಧಿ ಕಾರ್ಯಕ್ರಮ ನಿಧಿಗೆ ಸೇರಲಿದೆ. ಗ್ರೀನ್ ಅವರು ಈ ಹಿಂದೆ ಮುಂಬೈ ಇಂಡಿಯನ್ಸ್ ಮತ್ತು ಆರ್‌ಸಿಬಿ ತಂಡಗಳಲ್ಲಿಯೂ ಆಡಿದ್ದರು. ಐಪಿಎಲ್‌ನಲ್ಲಿ ಅವರು 29 ಪಂದ್ಯಗಳಿಂದ 707 ರನ್ ಗಳಿಸಿದ್ದು, 16 ವಿಕೆಟ್ ಕೂಡ ಪಡೆದಿದ್ದಾರೆ.

ಕೋಲ್ಕತ್ತ ತಂಡವು ತನ್ನ ನಿಕಟಪೂರ್ವ ಆಟಗಾರ ವೆಂಕಟೇಶ್ ಅಯ್ಯರ್ ಅವರ ಖರೀದಿಗಾಗಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದೊಂದಿಗೆ ಪೈಪೋಟಿ ನಡೆಸಿತು. ಬೆಂಗಳೂರು ತಂಡವು ₹7 ಕೋಟಿಗೆ ಅಯ್ಯರ್ ಅವರನ್ನು ಖರೀದಿಸುವಲ್ಲಿ ಯಶಸ್ವಿಯಾಯಿತು. ನಂತರ ಡೆಲ್ಲಿ ಕ್ಯಾಪಿಟಲ್ಸ್ ಮತ್ತು ಲಖನೌ ಸೂಪರ್ ಜೈಂಟ್ಸ್ ತಂಡಗಳ ಸ್ಪರ್ಧೆಯನ್ನು ಮೀರಿ ನಿಂತ ಕೋಲ್ಕತ್ತ, ವೇಗಿ ಮಥೀಶ ಪಥಿರಾಣ ಅವರನ್ನು ಖರೀದಿಸಿತು.

ದಕ್ಷಿಣ ಆಫ್ರಿಕಾದ ಬ್ಯಾಟರ್ ಡೇವಿಡ್ ಮಿಲ್ಲರ್ (₹2 ಕೋಟಿ) ಮತ್ತು ಕ್ವಿಂಟನ್ ಡಿ ಕಾಕ್ (₹1 ಕೋಟಿ) ಅವರು ಕ್ರಮವಾಗಿ ಡೆಲ್ಲಿ ಕ್ಯಾಪಿಟಲ್ಸ್ ಮತ್ತು ಮುಂಬೈ ಇಂಡಿಯನ್ಸ್‌ಗೆ ಸೇರಿದರು.

ಬಿಡ್‌ನಲ್ಲಿ 246 ಭಾರತೀಯ ಮತ್ತು 113 ವಿದೇಶಿ ಆಟಗಾರರಿದ್ದರು. 10 ಫ್ರ್ಯಾಂಚೈಸಿಗಳು ಒಟ್ಟು 77 ಸ್ಥಾನಗಳಿಗಾಗಿ ಆಟಗಾರರನ್ನು ಖರೀದಿಸಿದವು. ಅದರಲ್ಲಿ 31 ವಿದೇಶಿ ಆಟಗಾರರಿಗೆ ಮೀಸಲಾಗಿದ್ದವು.

ಪ್ರಶಾಂತ್ ವೀರ್

ಕಾರ್ತಿಕ್ ಶರ್ಮಾ

ಪೂಂಜ, ದುಬೆಗೆ ಅವಕಾಶ

ಕರ್ನಾಟಕದ ಯಶರಾಜ್ ಪೂಂಜ, ಪ್ರವೀಣ ದುಬೆ ಅವರು ಐಪಿಎಲ್ ಮಿನಿ ಹರಾಜಿನಲ್ಲಿ ಕ್ರಮವಾಗಿ ರಾಜಸ್ಥಾನ ರಾಯಲ್ಸ್ ಮತ್ತು ಪಂಜಾಬ್ ಕಿಂಗ್ಸ್ ತಂಡಗಳ ಪಾಲಾದರು. ಅವರಿಬ್ಬರೂ ತಮ್ಮ ಮೂಲಬೆಲೆಗೆ (ತಲಾ ₹30 ಲಕ್ಷ) ತಂಡಗಳನ್ನು ಸೇರಿಕೊಂಡರು.

ಆದರೆ, ಮಯಂಕ್ ಅಗರವಾಲ್ ಸೇರಿ ರಾಜ್ಯದ ಹಲವು ಆಟಗಾರರು 'ಅನ್‌ಸೋಲ್ಡ್' ಆದರು. ಅಭಿನವ್ ಮನೋಹರ್, ವಿದ್ವತ್ ಕಾವೇರಪ್ಪ, ವಿದ್ಯಾಧರ ಪಾಟೀಲ, ಕೆ.ಸಿ. ಕಾರ್ಯಪ್ಪ, ಮನೋಜ್ ಭಾಂಡಗೆ, ಮನ್ವಂತ್ ಕುಮಾರ್, ಅಭಿಲಾಷ್ ಶೆಟ್ಟಿ, ಕೆ.ಎಲ್.ಶ್ರೀಜಿತ್ ಮುಂತಾದವರ ಖರೀದಿಗೆ ಫ್ರಾಂಚೈಸಿಗಳು ಆಸಕ್ತಿ ತೋರಲಿಲ್ಲ.

ಅಂಕಿ ಅಂಶಗಳು

359 ಮಿನಿ ಹರಾಜಿನಲ್ಲಿದ್ದ ಒಟ್ಟು ಆಟಗಾರರ ಸಂಖ್ಯೆ

₹215.45 ಕೋಟಿ ಹತ್ತು ಫ್ರಾಂಚೈಸಿಗಳು 77 ಆಟಗಾರರನ್ನು ಖರೀದಿಸಲು ವಿನಿಯೋಗಿಸಿದ ಮೊತ್ತ

ಕ್ಯಾಮರಾನ್ ಗ್ರೀನ್
ಅಕೀಬ್ ನಬಿ ದಾರ್
ವೆಂಕಟೇಶ್ ಅಯ್ಯರ್

ಐಪಿಎಲ್ ಮಿನಿ ಹರಾಜು: ಆಟಗಾರರು ಪಡೆದ ಮೌಲ್ಯ (₹ ಕೋಟಿಗಳಲ್ಲಿ)

ಆಟಗಾರ	ದೇಶ	ಮೂಲಬೆಲೆ	ಪಡೆದ ಮೌಲ್ಯ
ಕೋಲ್ಕತ್ತ ನೈಟ್ ರೈಡರ್ಸ್			
ಕ್ಯಾಮರಾನ್ ಗ್ರೀನ್	ಆಸ್ಟ್ರೇಲಿಯಾ	2.00	25.20
ಮಥೀಶ ಪಥಿರಾಣ	ಶ್ರೀಲಂಕಾ	2.00	18.00
ಮುಸ್ತಾಫಿಜುರ್	ಬಾಂಗ್ಲಾದೇಶ	2.00	9.20
ತೇಜಸ್ವಿ ಸಿಂಗ್	ಭಾರತ	0.30	3.00
ರಚಿನ್ ರವೀಂದ್ರ	ನ್ಯೂಜಿಲೆಂಡ್	2.00	2.00
ಫಿನ್ ಅಲೆನ್	ನ್ಯೂಜಿಲೆಂಡ್	2.00	2.00
ಟಿಮ್ ಸೀಫರ್ಟ್	ನ್ಯೂಜಿಲೆಂಡ್	1.50	1.50
ಆಕಾಶ್ ದೀಪ್	ಭಾರತ	1.00	1.00
ರಾಹುಲ್ ತ್ರಿಪಾಠಿ	ಭಾರತ	0.75	0.75
ದಕ್ಷ ಕಮ್ರಾ	ಭಾರತ	0.30	0.30
ಸಾರ್ಥಕ್ ರಂಜನ್	ಭಾರತ	0.30	0.30
ಪ್ರಶಾಂತ್ ಸೋಲಂಕಿ	ಭಾರತ	0.30	0.30
ಕಾರ್ತಿಕ್ ತ್ಯಾಗಿ	ಭಾರತ	0.30	0.30
ಚೆನ್ನೈ ಸೂಪರ್ ಕಿಂಗ್ಸ್			
ಕಾರ್ತಿಕ್ ಶರ್ಮಾ	ಭಾರತ	0.30	14.20
ಪ್ರಶಾಂತ್ ವೀರ್	ಭಾರತ	0.30	14.20
ರಾಹುಲ್ ಚಾಹರ್	ಭಾರತ	1.00	5.20
ಮ್ಯಾಟ್ ಹೆನ್ರಿ	ನ್ಯೂಜಿಲೆಂಡ್	2.00	2.00
ಅಕಿಲ್ ಹುಸೇನ್	ವೆಸ್ಟ್ ಇಂಡೀಸ್	2.00	2.00
ಮ್ಯಾಥ್ಯೂ ಶಾರ್ಟ್	ಆಸ್ಟ್ರೇಲಿಯಾ	1.50	1.50
ಝಾಕ್ ಫೌಲ್ಕ್ಸ್	ನ್ಯೂಜಿಲೆಂಡ್	0.75	0.75
ಸರ್ಫರಾಜ್ ಖಾನ್	ಭಾರತ	0.75	0.75
ಅಮನ್ ಖಾನ್	ಭಾರತ	0.30	0.40
ಸನ್‌ರೈಸರ್ಸ್ ಹೈದರಾಬಾದ್			
ಲಿವಿಂಗ್‌ಸ್ಟೋನ್	ಇಂಗ್ಲೆಂಡ್	2.00	13.00
ಜ್ಯಾಕ್ ಎಡ್ವರ್ಡ್ಸ್	ಆಸ್ಟ್ರೇಲಿಯಾ	0.50	3.00
ಸಲೀಲ್ ಅರೋರಾ	ಭಾರತ	0.30	1.50
ಶಿವಂ ಮಾವಿ	ಭಾರತ	0.75	0.75
ಕ್ರೇನ್ಸ್ ಫುಲೆಟ್ರಾ	ಭಾರತ	0.30	0.30
ಪ್ರಫುಲ್ ಹಿಂಜ್	ಭಾರತ	0.30	0.30
ಅಮಿತ್ ಕುಮಾರ್	ಭಾರತ	0.30	0.30
ಓಂಕಾರ್ ತರ್ಮಲೆ	ಭಾರತ	0.30	0.30
ಸಕೀಬ್ ಹುಸೇನ್	ಭಾರತ	0.30	0.30
ಶಿವಾಂಗ್ ಕುಮಾರ್	ಭಾರತ	0.30	0.30
ರಾಜಸ್ಥಾನ ರಾಯಲ್ಸ್			
ರವಿ ಬಿಷ್ಣೋಯಿ	ಭಾರತ	2.00	7.20
ಆ್ಯಡಂ ಮಿಲ್ನೆ	ನ್ಯೂಜಿಲೆಂಡ್	2.00	2.40
ರವಿ ಸಿಂಗ್	ಭಾರತ	0.30	0.95
ಸುಶಾಂತ್ ಮಿಶ್ರಾ	ಭಾರತ	0.30	0.90
ಕುಲದೀಪ್ ಸೇನ್	ಭಾರತ	0.75	0.75
ಬ್ರಿಜೇಶ್ ಶರ್ಮಾ	ಭಾರತ	0.30	0.30
ಅಮನ್ ರಾವ್	ಭಾರತ	0.30	0.30
ವಿಘ್ನೇಶ್ ಪುತ್ತೂರ್	ಭಾರತ	0.30	0.30
ಯಶ್‌ರಾಜ್ ಪೂಂಜ	ಭಾರತ	0.30	0.30
ರಾಯಲ್ ಚಾಲೆಂಜರ್ಸ್ ಬೆಂಗಳೂರು			
ವೆಂಕಟೇಶ್ ಅಯ್ಯರ್	ಭಾರತ	2.00	7.00
ಮಂಗೇಶ್ ಯಾದವ್	ಭಾರತ	0.30	5.20
ಜೇಕಬ್ ಡಫಿ	ನ್ಯೂಜಿಲೆಂಡ್	2.00	2.00
ಜೋರ್ಡನ್ ಕಾಕ್ಸ್	ಇಂಗ್ಲೆಂಡ್	0.75	0.75
ಕನಿಷ್ಕ್ ಚೌಹಾನ್	ಭಾರತ	0.30	0.30
ವಿಹಾನ್ ಮಲ್ಹೋತ್ರಾ	ಭಾರತ	0.30	0.30
ವಿಕ್ಕಿ ಓಸ್ವಾಲ್	ಭಾರತ	0.30	0.30
ಸಾತ್ವಿಕ್ ದೇಸ್ವಾಲ್	ಭಾರತ	0.30	0.30
ಡೆಲ್ಲಿ ಕ್ಯಾಪಿಟಲ್ಸ್			
ಅಕೀಬ್ ನಬಿ ದಾರ್	ಭಾರತ	0.30	8.40
ಪಥುಮ್ ನಿಸಾಂಕ	ಶ್ರೀಲಂಕಾ	0.75	4.00
ಕೈಲ್ ಜೇಮಿಸನ್	ನ್ಯೂಜಿಲೆಂಡ್	2.00	2.00
ಲುಂಗಿ ಎನ್‌ಗಿಡಿ	ದಕ್ಷಿಣ ಆಫ್ರಿಕಾ	2.00	2.00
ಬೆನ್ ಡಕೆಟ್	ಇಂಗ್ಲೆಂಡ್	2.00	2.00
ಡೇವಿಡ್ ಮಿಲ್ಲರ್	ದಕ್ಷಿಣ ಆಫ್ರಿಕಾ	2.00	2.00
ಪೃಥ್ವಿ ಶಾ	ಭಾರತ	0.75	0.75
ಸಾಹಿಲ್ ಪರಾಖ್	ಭಾರತ	0.30	0.30
ಲಖನೌ ಸೂಪರ್ ಜೈಂಟ್ಸ್			
ಜೋಶ್ ಇಂಗ್ಲಿಸ್	ಆಸ್ಟ್ರೇಲಿಯಾ	2.00	8.60
ಮುಕುಲ್ ಚೌಧರಿ	ಭಾರತ	0.30	2.60
ಅಕ್ಷತ್ ರಘುವಂಶಿ	ಭಾರತ	0.30	2.20
ಆನ್ರಿಚ್ ನಾಕಿಯಾ	ದಕ್ಷಿಣ ಆಫ್ರಿಕಾ	2.00	2.00
ವನಿಂದು ಹಸರಂಗ	ಶ್ರೀಲಂಕಾ	2.00	2.00
ನಮನ್ ತಿವಾರಿ	ಭಾರತ	0.30	1.00
ಗುಜರಾತ್ ಟೈಟನ್ಸ್			
ಜೇಸನ್ ಹೋಲ್ಡರ್	ವೆಸ್ಟ್ ಇಂಡೀಸ್	2.00	7.00
ಟಾಮ್ ಬ್ಯಾಂಟನ್	ಇಂಗ್ಲೆಂಡ್	2.00	2.00
ಅಶೋಕ್ ಶರ್ಮಾ	ಭಾರತ	0.30	0.90
ಲ್ಯೂಕ್ ವುಡ್	ಇಂಗ್ಲೆಂಡ್	0.75	0.75
ಪೃಥ್ವಿರಾಜ್ ಯರ್ರಾ	ಭಾರತ	0.30	0.30
ಮುಂಬೈ ಇಂಡಿಯನ್ಸ್			
ಕ್ವಿಂಟನ್ ಡಿ ಕಾಕ್	ದಕ್ಷಿಣ ಆಫ್ರಿಕಾ	1.00	1.00
ಮಯಂಕ್ ರಾವತ್	ಭಾರತ	0.30	0.30
ಅಥರ್ವ ಎ	ಭಾರತ	0.30	0.30
ಮೊಹಮ್ಮದ್ ಇಝ್ಹಾರ್	ಭಾರತ	0.30	0.30
ಡ್ಯಾನಿಶ್ ಮಾಲೆವಾರ್	ಭಾರತ	0.30	0.30
ಪಂಜಾಬ್ ಕಿಂಗ್ಸ್			
ಬೆನ್ ದ್ವಾರ್ಶುಯಿಸ್	ಆಸ್ಟ್ರೇಲಿಯಾ	1.00	4.40
ಕೂಪರ್ ಕನೋಲಿ	ಆಸ್ಟ್ರೇಲಿಯಾ	2.00	3.00
ವಿಶಾಲ್ ನಿಶಾದ್	ಭಾರತ	0.30	0.30
ಪ್ರವೀಣ್ ದುಬೆ	ಭಾರತ	0.30	0.30

ಮಾರ್ಚ್ 26ರಿಂದ ಐಪಿಎಲ್ ಟೂರ್ನಿ

ಮುಂಬೈ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್‌ನ 19ನೇ ಆವೃತ್ತಿಯು ಬರುವ ಮಾರ್ಚ್ 26 ರಿಂದ ಮೇ 3ರವರೆಗೆ ನಡೆಯಲಿದೆ.

ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ತನ್ನ ಪಂದ್ಯಗಳನ್ನು ತವರು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆಡುವುದೇ ಎಂಬುದನ್ನು ಕಾದು ನೋಡಬೇಕಾಗಿದೆ.

ಆರ್‌ಸಿಬಿ ತಂಡ ಮೊದಲ ಬಾರಿ ಚಾಂಪಿಯನ್ ಆದ ಮರುದಿನ (ಜೂನ್ 4ರಂದು) ಬೆಂಗಳೂರಿನಲ್ಲಿ ವಿಜಯೋತ್ಸವದ ವೇಳೆ ಕ್ರೀಡಾಂಗಣದ ಹೊರ ಆವರಣದಲ್ಲಿ ಕಾಲ್ತುಳಿತ ಸಂಭವಿಸಿ 11 ಮಂದಿ ಮೃತಪಟ್ಟಿದ್ದರು.

ಆರ್‌ಸಿಬಿ ತನ್ನ ಪಂದ್ಯಗಳನ್ನು ಇದುವರೆಗೆ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆಡುತ್ತ ಬಂದಿದೆ. ಸಂಪ್ರದಾಯದಂತೆ ಚಾಂಪಿಯನ್ ತಂಡವಾದ ಆರ್‌ಸಿಬಿ ಮೊದಲ ಪಂದ್ಯ ತವರಿನಲ್ಲಿ ಆಡಬೇಕಿದೆ. ಆದರೆ ಬಿಸಿಸಿಐ ಪೂರ್ಣಪ್ರಮಾಣದ ವೇಳಾಪಟ್ಟಿ ಪ್ರಕಟಿಸುವವರೆಗೆ ಈ ಬಗ್ಗೆ ಸ್ಪಷ್ಟತೆ ಸಿಗುವ ಸಾಧ್ಯತೆಯಿಲ್ಲ.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲೇ ಉದ್ಘಾಟನಾ ಪಂದ್ಯ: ಪ್ರಸಾದ್ ವಿಶ್ವಾಸ

ಮೈಸೂರು: 'ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿಯೇ ಐಪಿಎಲ್ ಉದ್ಘಾಟನಾ ಪಂದ್ಯ ನಡೆಸಲು ಸರ್ಕಾರ ಮೌಖಿಕ ಒಪ್ಪಿಗೆ ನೀಡಿದ್ದು, ಶೀಘ್ರದಲ್ಲಿಯೇ ಲಿಖಿತ ಅನುಮತಿ ದೊರೆಯುವ ವಿಶ್ವಾಸವಿದೆ' ಎಂದು ಕೆಎಸ್‌ಸಿಎ ಅಧ್ಯಕ್ಷ ವೆಂಕಟೇಶ್ ಪ್ರಸಾದ್ ತಿಳಿಸಿದರು.

ಇಲ್ಲಿನ ಮಾನಸ ಗಂಗೋತ್ರಿಯ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಬೆಳಗಾವಿ ವಿಧಾನಮಂಡಲ ಅಧಿವೇಶನದ ನಂತರ ಗೃಹ ಸಚಿವ ಜಿ.ಪರಮೇಶ್ವರ ಅವರೊಂದಿಗೆ ಈ ಬಗ್ಗೆ ಚರ್ಚಿಸುತ್ತೇವೆ' ಎಂದರು.

'ಆರ್‌ಸಿಬಿ ಕಳೆದ ಬಾರಿಯ ಚಾಂಪಿಯನ್ ಆಗಿರುವುದರಿಂದ ತವರು ನೆಲದಲ್ಲಿಯೇ ಉದ್ಘಾಟನಾ ಪಂದ್ಯ ನಡೆಯಬೇಕು. ಆರ್‌ಸಿಬಿ ಸಂಭ್ರಮಾಚರಣೆ ವೇಳೆ ಉಂಟಾದ ಕಾಲ್ತುಳಿತ ಪ್ರಕರಣದಿಂದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಅಂತರರಾಷ್ಟ್ರೀಯ ಹಾಗೂ ಐಪಿಎಲ್ ಪಂದ್ಯಗಳನ್ನು ಮತ್ತೆ ಆಯೋಜಿಸುವ ವಾತಾವರಣ ನಿರ್ಮಿಸುವುದು ಸುಲಭವಿರಲಿಲ್ಲ. ರಾಜ್ಯ ಸರ್ಕಾರದ ಬೆಂಬಲ ಅಗತ್ಯವಿತ್ತು. ಈ ಬಗ್ಗೆ ಬಿಸಿಸಿಐ ಜೊತೆಯೂ ಮಾತನಾಡಲಾಗಿದೆ' ಎಂದು ಹೇಳಿದರು.

'ವಿಜಯ್ ಹಜಾರೆ ಟ್ರೋಫಿ ಪಂದ್ಯಗಳಲ್ಲಿ ವಿರಾಟ್ ಕೊಹ್ಲಿ ಆಡಲಿದ್ದು, ಆಲೂರಿನ ಮೂರು ಕ್ರೀಡಾಂಗಣ ಹಾಗೂ ಚಿನ್ನಸ್ವಾಮಿಯಲ್ಲೂ ಪಂದ್ಯಗಳು ನಡೆಯಲಿವೆ. ಕೊಹ್ಲಿ ಎಲ್ಲಿ ಆಡಲಿದ್ದಾರೆ ಎಂಬುದು ಖಚಿತವಾಗಿಲ್ಲ' ಎಂದರು.

ವಿಶ್ವಾಸ
- ವೆರಿಫೈಡ್ ಕಾರ್ ಹಿಸ್ಟರಿ**
- @ 5000 ++ ಸರ್ವೀಸ್ ಸ್ಟೇಷನ್‌ಗಳಲ್ಲಿ 3 ಉಚಿತ** ಸರ್ವೀಸ್‌ಗಳನ್ನು ಪಡೆಯಿರಿ

ಗುಣಮಟ್ಟ
- 376 ಕ್ವಾಲಿಟಿ ಚೆಕ್ ಪಾಯಿಂಟ್ಸ್
- 1 ವರ್ಷದವರೆಗೆ ವಾರೆಂಟಿ**

App Store | Google play
True Value ಆ್ಯಪ್ ಅನ್ನು ಇಲ್ಲಿ ಡೌನ್‌ಲೋಡ್ ಮಾಡಿ.

ವಿಚಾರಣೆಗಾಗಿ, 1800 102 1800 ಗೆ ಕರೆ ಮಾಡಿ | www.marutisuzukitruevalue.com ಗೆ ಭೇಟಿ ನೀಡಿ

TRUE VALUE CERTIFIED

BANGALORE: ELECTRONIC CITY / CHANDAPURA, SURAKSHAA CAR CARE: 8884442360, 8884442301 | **HESARGHATTA / SUMMANAHALLI JUNCTION**, VARUN MOTORS: 9513979172, 9620833320 | **WHITEFIELD**, BIMAL AUTO: 9880699997, 9742271855 | **MYSORE ROAD / WHITEFIELD / UTTARAHALLI / KR PURAM / MAGADI ROAD / THANISANDRA**, KALYANI MOTORS: 9008099721, 9886353916, 9900026475, 9900023527, 9008555785, 9845087880 | **SARJAPUR**, PRATHAM MOTORS: 9686529082, 9632008765 | **YESHWANTPUR / GG PALYA**, RNS MOTORS: 7760989633, 9606933236 | **VIJAYANAGAR / BASAVESHWAR NAGAR / YELAHANKA / JP NAGAR**, MANDOVI MOTORS: 9686699756, 9686699757, 9980930227, 9880912413 | **MYSORE ROAD**, KATARIA AUTOMOBILES: 9742190214, 9742880444 | **HULIMAAVU**, SANVIT AUTOMOTIVES LLP. 9108427383 | **MADAVARA**, AVANISH AUTO LLP. 9108429127 | **BILEKAHALLI B G ROAD**, POPULAR VEHICLES AND SERVICES: 7349735780,9900507310 | **TUMKUR**, SAKETH AUTOMOBILES: 7625000706.

*ಕರಾರುಗಳು ಮತ್ತು ಷರತ್ತುಗಳು ಅನ್ವಯ. ವಿವರವಾದ ಕರಾರುಗಳು ಮತ್ತು ಷರತ್ತುಗಳಿಗಾಗಿ ಸಮೀಪದ ಡೀಲರ್‌ಶಿಪ್‌ಗೆ ಭೇಟಿ ನೀಡಿ. **True Value ವೆರಿಫೈಡ್ ಕಾರ್ ಹಿಸ್ಟರಿ ಮತ್ತು ವಾರೆಂಟಿ ಅನ್ವಯವಾಗುತ್ತದೆ. ಉಚಿತ ಸೇವೆಗಳು ಲೇಬರ್ ಶುಲ್ಕಗಳಿಗೆ ಮಾತ್ರ ಅನ್ವಯ. ಬಳಸಲಾದ ಚಿತ್ರಗಳು ಕೇವಲ ಪ್ರಾತಿನಿಧ್ಯಕ್ಕಾಗಿ ಮಾತ್ರ.